THE BOOK WAS DRENCHED

UNIVERSAL
LIBRARY
OU_202004
UNIVERSAL
LIBRARY

|| ಶ್ರೀ ||

ಕರ್ಣಾಟಕ

# ಸ್ಕಾಂದಮಹಾಪುರಾಣ

## (ಮಾಹೇಶ್ವರ ಖಂಡದ)

## ೧ನೆ ಕೇದಾರ ಖಂಡ

ಗ್ರಂಥಕರ್ತ:

ಎಂ. ಎಸ್. ಸುಬ್ರಹ್ಮಣ್ಯಶಾಸ್ತ್ರಿ

ಬೆಂಗಳೂರು ಸಿಟಿ

ಬಿ. ಬಿ. ಡಿ. ಪವರ್ ಪ್ರೆಸ್, ಅರಳೇಪೇಟೆ

೧೯೨೮

ಬೆಲೆ ೧-೮-೦.] [ಅಂಚೆವೆಚ್ಚ ಬೇರೆ.

# ಸಮರ್ಪಣೆ

CHECKED 1951
CHECKED 1955
1965

—o—

ಶ್ರೀ ರಾಜರಾಜೇಶ್ವರೀ ವರಪ್ರಸಾದಾಸಾಧಿತ ದಿಗಂತ ಕೀರ್ತಿ
ಸಂಪನ್ನರಾದ, ಅಭಿನವ ಕಾಳಿದಾಸ ವಂಶೋದ್ಭವರೂ,
ಪ್ರಸಿದ್ಧ ಕವಿಗಳೂ, ನನಗೆ ಜನ್ಮವನ್ನಿತ್ತವರೂ ಆದ
ಮೋಟಗಾನಹಳ್ಳಿ

**ವೇ॥ ಬ್ರಂ॥ ಶ್ರೀ॥ ಶಂಕರಶಾಸ್ತ್ರಿಗಳ**

ದಿವ್ಯ ಚರಣಕಮಲಗಳಲ್ಲಿ, ಈ ಕರ್ಣಾಟಕ ಸ್ಕಾಂದಮಹಾ
ಪುರಾಣದ ಪ್ರಥಮ ಪುಸ್ತಕವನ್ನು ಚಿರಋಣಿಯಾದ
ನಾನು ಭಕ್ತಿಪುರಸ್ಸರವಾಗಿ ಸಮರ್ಪಿಸಿರುವೆನು.

—:o:—

Checked 1989

# ಮುನ್ನುಡಿ.

ಪುರಾತನ ಕಾಲದಲ್ಲಿ ಪುರಾಣಗಳು ಪರಮಾರ್ಥದಾಯಕಗಳಾಗಿದ್ದವು. ಪ್ರತಿಯೊಬ್ಬ ಭಾರತೀಯನ ಪ್ರವರ್ತನೆಗೂ ಪುರಾಣಗಳೇ ಕಾರಣಗಳು. ತತ್ವತಃ ಪುರಾಣಗಳನ್ನು ವಿಮರ್ಶಿಸಿದರೆ ಐಹಿಕದಲ್ಲಿ ಮನುಷ್ಯನ ರೀತಿರಂಗಗಳು ಹೇಗಿರಬೇಕೆಂಬುದು ವ್ಯಕ್ತವಾಗುವುದು ಪರಲೋಕ, ಪರಮಾತ್ಮ, ಪುಣ್ಯ, ಪಾಪ, ಸ್ವರ್ಗ, ನರಕ ಇವು ಉಂಟೆಂದು ನಂಬುವ ಪ್ರತಿಯೊಬ್ಬ ಭಾರತೀಯನೂ, ಪುರಾಣಗಳನ್ನು ಪ್ರೀತಿಪುರಸ್ಸರವಾಗಿ ಕಾಣುವನು.

ನಮ್ಮ ಭರತಖಂಡದಲ್ಲಿ ಸಂಸ್ಕೃತ ಭಾಷೆಯು ಮಾತೃಭಾಷೆಯಾಗಿದ್ದ ಕಾಲದಲ್ಲಿ ಪುರಾಣಗಳನ್ನು ಸಮಸ್ತ ಜಾತೀಯರೂ ಆದರದಿಂದ ಓದಿ ಅರ್ಥಮಾಡಿಕೊಂಡು ಧರ್ಮಪರಾಯಣರಾಗುತ್ತಿದ್ದರು. ಆಗಿನ ಕಾಲದಲ್ಲಿ ವರ್ಣಾಶ್ರಮ ಧರ್ಮಗಳು ಅನುಷ್ಠಾನದಲ್ಲಿದ್ದವು. ಇತ್ತೀಚೆಗೆ ಆಂಗ್ಲವಾತಾವರಣಕ್ಕೆ ಸಿಕ್ಕಿ ಪಪಾತವಾಗಿರುವ ನಮ್ಮ ಭರತಖಂಡವು ಆರ್ಯಧರ್ಮಗಳೆಲ್ಲವನ್ನೂ ಮರೆತು ಹಿಂದಿನ ಕಥೆಯಿಂದಲೇ ತಮ್ಮ ಪೂರ್ವಕೀರ್ತಿಯನ್ನು ಉಳಿಸಿಕೊಂಡಿರುವುದು.

ಪ್ರಕೃತ ಮೇಲಿನ ಕಥೆಯನ್ನು ಹೇಳಲು ಕಾರಣವೇನೆಂದರೆ ಆಂಗ್ಲವಾತಾವರಣದಿಂದ ಸಂಸ್ಕೃತಭಾಷೆಯು ನಾಶವಾಗಿ, ಆ ಭಾಷೆಯಲ್ಲಿರುವ ಪುರಾಣಗಳು ಯಾರಿಗೂ ತಿಳಿಯದೇ ಇರುವುದರಿಂದ ಆರ್ಯಧರ್ಮಗಳೂ ಖಿಲವಾಗುತ್ತ ಬಂದಿರುವವು. ಈಚೆಗೆ ಎಂದರೆ ಕರ್ಣಾಟಕ ಭಾಷೆಯು ತಲೆಯೆತ್ತಿದ ಮೇಲೆ ಕನ್ನಡ ನಾಡಿನಲ್ಲಿ ಅನೇಕ ಮಹನೀಯರು ರಾಮಾಯಣ ಮಹಾಭಾರತಾದಿ ಗ್ರಂಥಗಳನ್ನು ಕನ್ನಡದಲ್ಲಿ ಬರೆದರು. ಆದರೆ ಮಹಾಪುರಾಣಗಳಲ್ಲಿ ಅನೇಕವುಗಳನ್ನು ಕನ್ನಡಿಸುವ ಪ್ರಯತ್ನವನ್ನು ಮಾಡಲಿಲ್ಲವು. ಆದುದರಿಂದ ಕೈಲಾದಷ್ಟು ಮಟ್ಟಿಗೆ ಕರ್ಣಾಟಕ ಭಾಷಾಸೇವೆಯನ್ನೂ, ದೇಶಸೇವೆಯನ್ನೂ ಮಾಡಬೇಕೆನಿಸಿ ಶಿವೋತ್ಕೃಷ್ಟತ್ವವನ್ನು ವಿವರಿಸುವ ಈ ಸ್ಕಾಂದಮಹಾಪುರಾಣವನ್ನು ಕರ್ಣಾಟಕ ಭಾಷೆಯಲ್ಲಿ ಬರೆಯಲುಪಕ್ರಮಿಸಿ ಈಶ್ವರೇಚ್ಛೆಯಿಂದ ಮುಗಿಸಿರುವೆನು. ಈ ಮಹಾಪುರಾಣದ ಮಹತ್ವವನ್ನು ಭಗವಾನ್ ವ್ಯಾಸರು ಇದೇ ಪುರಾಣದಲ್ಲಿಯೇ ಹೇಳಿರುವುದರಿಂದ ನಾನೇನೂ ಹೆಚ್ಚಾಗಿ ಹೇಳಬೇಕಾದುದಿಲ್ಲವು.

ಸ್ಕಾಂದಮಹಾಪುರಾಣವು ಅಗಾಧವಾದ ಸಾಗರವೆಂದು ಹೇಳಬಹುದು. ಇಂತಿರುವ ಪುರಾಣವನ್ನು ಒಂದೇ ಸಲ ಅಚ್ಚುಹಾಕಿಸಲು ಅನುಕೂಲವಿಲ್ಲದಿರುವುದಲ್ಲದೆ ಓದುವ ಮಹನೀಯರು ಒಂದೇಸಲ ತೆಗೆದುಕೊಳ್ಳಲು ಕಷ್ಟವೆಂದರಿತು ಇದನ್ನು ೧೨ ಭಾಗಗಳನ್ನಾಗಿ ಆಯಾ ಖಂಡಕ್ಕೆ ವಿಭಾಗಿಸಿರುವೆನು. ಪ್ರಕೃತ ಈಗ ಪ್ರಸಿದ್ಧಗೊಳಿಸಿರುವ ಸ್ಕಾಂದಮಹಾಪುರಾಣದ ಕೇದಾರಖಂಡವನ್ನು ವಾಚಕರು ಓದಿದಲ್ಲಿ ಜಗದೀಶ್ವರನ ಕೃಪೆಗೆ ಪಾತ್ರರಾಗುವರಲ್ಲದೆ ನನ್ನ ಶ್ರಮವನ್ನೂ ಸಾರ್ಥಕಗೊಳಿಸಿದಂತಾಗುವುದು.

ಎಂ. ಎಸ್. ಸುಬ್ರಹ್ಮಣ್ಯಶಾಸ್ತ್ರಿ.

ತಾ|| ೬-೯-೧೯೨೮.



ಪರ್ವತರಾಜಪುತ್ರಿ

ಓಂ

|| ಶ್ರೀಶಂಕರಃ ಶಂಕರಃ ||



# ಕರ್ಣಾಟಕ ಸ್ಕಾಂದಮಹಾಪುರಾಣವು

## ಅಧ್ಯಾಯ ೧

### ದಕ್ಷಬ್ರಹ್ಮನು ಶಿವದ್ವೇಷಿಯಾಗುವಿಕೆ

*ಯಸ್ಯಾಜ್ಞಯಾ ಜಗತ್ಸ್ರಷ್ಟಾ ವಿರಿಂಚಿಃ ಪಾಲಕೋ ಹರಿಃ |
ಸಂಹರ್ತಾ ಕಾಲರುದ್ರಾಖ್ಯೋ ನಮಸ್ತಸ್ಮೈ ಪಿನಾಕಿನೇ ||

ತೀರ್ಥಗಳಲ್ಲಿ ಉತ್ತಮ ತೀರ್ಥವಾಗಿಯೂ, ಕ್ಷೇತ್ರಗಳಲ್ಲಿ ಉತ್ತಮ ಕ್ಷೇತ್ರವಾಗಿಯೂ ಇರುವ ನೈಮಿಶಾರಣ್ಯವೆಂಬ ಕ್ಷೇತ್ರ

---

* ಅಷ್ಟಾದಶ ಪುರಾಣಗಳಲ್ಲಿಯೂ ಭಗವಾನ್ ವೇದವ್ಯಾಸರು ಲೋಕ ಶಂಕರನಾದ ಶಂಕರನ ಅನಂತಕಲ್ಯಾಣ ಗುಣಗಳನ್ನೂ, ಅಪಾರವಾದ ಮಹಿಮೆಗಳನ್ನೂ, ಆತನ ಭಕ್ತರ ಅಮಿತ ಮಹಿಮೆಗಳನ್ನೂ ಚೆನ್ನಾಗಿ ಚಿತ್ರಿಸಿರುವರು. ಈ ಮಹಾತ್ಮರು ಪ್ರತಿ ಪುರಾಣದ ಆದಿಯಲ್ಲಿಯೂ ಒಂದೊಂದು ಸ್ತುತಿಪರವಾದ ಶ್ಲೋಕವನ್ನು ಹೇಳಿರುವರು. ಆಯಾಪುರಾಣದ ಆದಿ ಶ್ಲೋಕವು ಆಯಾ ಪುರಾಣದ ವಿಶಿಷ್ಟ ಸಾರವನ್ನು ಒಳಗೊಂಡಿರುವುದಾಗಿರುವುದು. ಮಂಗಳಾತ್ಮಕವಾದ ಈ ಶ್ಲೋಕವು ಸ್ತುತಿಪರವಾಗಿ ಗ್ರಂಥಸಮಾಪ್ತಿಯು ನಿರ್ವಿಘ್ನವಾಗಲೋಸುಗ ಹೇಳಲ್ಪಟ್ಟಿರುವುದು.

ಬಂದನಂಟು. ಈ ನೈಮಿಶಾರಣ್ಯದಲ್ಲಿ ಮಹಾತಪೋಧನರೂ, ಆತ್ಮವಿಚಾರ ತತ್ಪರರೂ ಆದ ಶೌನಕಾದಿ ಮಹರ್ಷಿಗಳು ಬಹಳಕಾಲ ನಡೆಯುವಂತಹ ದೀರ್ಘಸತ್ರ ಯಾಗವನ್ನು ಮಾಡುತ್ತಿದ್ದರು. ಇವರ ದರ್ಶನಾರ್ಥಿಯಾಗಿ ಮಹಾಪ್ರಾಜ್ಞನೂ, ಶಿವಧರ್ಮಗಳನ್ನು ಚೆನ್ನಾಗಿ ತಿಳಿದವನೂ ಆದ ಸೂತಪುರಾಣೀಕನು ಬಂದನು. ಇಂತು ಬಂದ ಸೂತನನ್ನು ನೋಡಿ, ಶೌನಕಾದಿಗಳು ಅರ್ಘ್ಯಪಾದ್ಯಾದಿಗಳಿಂದ ಸತ್ಕರಿಸಿ ಅಪಾರವಾದ ಶಿವಮಹಿಮೆಯನ್ನು ಕೇಳಲು ಉಪಕ್ರಮಿಸಿದರು. 'ಎಲೈ ಪಾಜ್ಞನಾದ ಸೂತಪುರಾಣಿಕನೇ! ತುದಿಮೊದಲಿಲ್ಲದ ಪರಶಿವನ ಮಹಿಮೆಯನ್ನು ದಯವಿಟ್ಟು ತಿಳಿಸುವವನಾಗು. ಶಿವದೇವಾಲಯಗಳಲ್ಲಿ ಶುಭ್ರವಾಗಿ ಸಾರಿಸಿ, ರಂಗವಲ್ಲಿಗಳನ್ನಿಡುವುದರಿಂದ ಯಾವ ಫಲವುಂಟಾಗುವುದು? ಶಿವನ ಪ್ರೀತ್ಯರ್ಥವಾಗಿ ಶಿವಸಾನ್ನಿಧ್ಯದಲ್ಲಿ ಛತ್ರ,

---

ಅರ್ಥ—ಯಸ್ಯ-ಯಾವನ, ಆಜ್ಞಯಾ, ಅಪ್ಪಣೆಯಿಂದ, ವಿರಂಚಿಃ-ಬ್ರಹ್ಮನು, ಜಗತ್ಸ್ರಷ್ಟಾ - ಪ್ರಪಂಚದ ಸೃಷ್ಟಿಕರ್ತನಾಗಿರುವನೋ, ಹರಿಃ-ನಾರಾಯಣನು, ಪಾಲಕಃ-ಪಾಲನ ಕರ್ತನಾಗಿರುವನೊ, ಕಾಲರುದ್ರಾಖ್ಯಃ-ಕಾಲರುದ್ರನಾದ ಮಹೇಶ್ವರನು, ಸಂಹರ್ತಾ-ಲಯಕರ್ತನಾಗಿರುವನೋ, ತಸ್ಮೈ-ಆ, ಪಿನಾಕಿನೇ-ಪಿನಾಕಿಯಾದ ಪರಶಿವಮೂರ್ತಿಗೆ, ನಮಃ-ನಮಸ್ಕಾರವು.

ತಾತ್ಪರ್ಯ—ಯಾವನ ಆಜ್ಞೆಯಿಂದ ಬ್ರಹ್ಮನು ಸೃಷ್ಟಿಕರ್ತನಾಗಿರುವನೋ ಮತ್ತಾವನ ಆಜ್ಞೆಯಿಂದ ವಿಷ್ಣುವು ಪಾಲಕನಾಗಿರುವನೋ, ಇನ್ನಾವನ ಆಜ್ಞೆಯಿಂದ ರುದ್ರನು ಲಯಕರ್ತನಾಗಿರುವನೋ ಅಂತಹ ಪರಶಿವಮೂರ್ತಿಗೆ ನಮಸ್ಕಾರವು.

ಇಲ್ಲಿ ಶಿವೋತ್ಕೃಷ್ಟತ್ವವನ್ನು ಪ್ರತಿಪಾದಿಸಲು ಭಗವಾನ್ ವ್ಯಾಸರು ಈರೀತಿ ಬಣ್ಣಿಸಿರುವರು. ತ್ರಿಮೂರ್ತಿಗಳು ತ್ರಿಗುಣೋಪೇತರಾಗಿರುವರು. ರಜೋಗುಣದಿಂದ ಬ್ರಹ್ಮನೂ, ಸತ್ವಗುಣದಿಂದ ವಿಷ್ಣುವೂ, ತಮೋಗುಣದಿಂದ ರುದ್ರನೂ ಬೆಳಗುವರು. ಆದರೆ ಪರಮಪುರುಷನು ತ್ರಿಗುಣಾತೀತನು. ಆದುದರಿಂದ ಯಾವ ಪರಮಪುರುಷನಾದ ಪರಶಿವನಿಂದ ರಜೋಗುಣೋಪೇತನಾದ ಬ್ರಹ್ಮನೂ, ಸತ್ವಗುಣೋಪೇತನಾದ ವಿಷ್ಣುವೂ, ತಮೋಗುಣೋಪೇತನಾದ ರುದ್ರನೂ, ಬೆಳಗುತ್ತಿರುವರೋ ಅಂತಹ ಪರಶಿವಮೂರ್ತಿಗೆ ನಮಸ್ಕಾರವೆಂದು ಭಾವವು.

ಚಾಮರ, ಕನ್ನಡಿ, ವಸ್ತ್ರ, ಧಾರಾಗೃಹಗಳನ್ನರ್ಪಿಸುವುದರಿಂದೇನು ಫಲವು? ಶಿವನ ಪ್ರೀತ್ಯರ್ಥವಾಗಿ ಮಾಡುವ ದೀಪದಾನಗಳು, ಪೂಜೆ ಪುರಸ್ಕಾರಗಳು ಇವುಗಳಿಂದಾವ ಫಲವುಂಟಾಗುತ್ತದೆ? ಶಿವದೇವಾಲಯಗಳಲ್ಲಿ ಪೂಜೆ, ವೇದಾಧ್ಯಯನ, ಇತಿಹಾಸಪುರಾಣಾದಿಗಳ ಶ್ರವಣಗಳನ್ನು ಮಾಡಿಸುವುದರಿಂದೇನು ಫಲವು? ಇಷ್ಟೇ ಅಲ್ಲದೆ ಇವುಗಳನ್ನೆಲ್ಲ ಮಾಡುವ ಅಥವ ಮಾಡಿಸುವ ನರನಿಗೆ ಯಾವ ಫಲವುಂಟಾಗುವುದು? ಅಯ್ಯಾ! ಸೂತಪುರಾಣಿಕನೇ!! ಶಿವಪರನಾಗಿ, ಶಿವಮಹಿಮೆಯನ್ನು ತಿಳಿದವರಲ್ಲಿ ನಿನ್ನನ್ನು ಬಿಟ್ಟರೆ ಮತ್ತಾರೂ ಇಲ್ಲವು' ಎಂಬೀ ಪ್ರಕಾರ ಪ್ರಶ್ನೆಯಿಸಿಕೊಳ್ಳುತ್ತಿರುವ ಶೌನಕಾದಿಗಳನ್ನು ಕುರಿತು ವ್ಯಾಸಶಿಷ್ಯನಾದ ಸೂತನು ಉತ್ತಮೋತ್ತಮನಾಗಿರುವ, ಸಾಕ್ಷಾತ್ಪರಶಿವನ ಮಾಹಾತ್ಮ್ಯವನ್ನು ಹೇಳಲು ಉಪಕ್ರಮಿಸಿದನು. ಎಲೈ ಋಷಿಗಳಿರಾ! ಅಷ್ಟಾದಶ ಪುರಾಣಗಳಲ್ಲಿಯೂ, ಸ್ತುತಿಗೈಸಿಕೊಳ್ಳುತ್ತಿರುವ ಪರಮೇಶ್ವರನ ಅಪಾರವಾದ ಮಹಿಮೆಯನ್ನು ಹೇಳಲು ಯಾರಿಂದಲೂ ಶಕ್ಯವಲ್ಲವು. ಯಾವ ಮನುಜನು 'ಶಿವ' ಎಂಬ ದ್ವ್ಯಕ್ಷರ ಮಂತ್ರವನ್ನು ಅಹರ್ನಿಶವೂ ಜಪಿಸುತ್ತಾನೆಯೊ, ಆತನಿಗೆ, ಸ್ವರ್ಗವೂ, ಮೋಕ್ಷವೂ ಲಭಿಸುವುದು. ದಾತೃತ್ವದಲ್ಲಿ ಉದಾರಿಯೂ, ದೇವಾದಿದೇವತೆಗಳಿಗೆ ತಂದೆಯಂತೆಯೂ ಇರುವುದರಿಂದಲೇ ಪರಮೇಶ್ವರನು ಶ್ರೇಷ್ಠನೆಂದೆನಿಸಿಕೊಂಡಿರುವನು. ಮನುಷ್ಯಮಾತ್ರಕ್ಕಲ್ಲದೆ ಇಡೀ ಬ್ರಹ್ಮಾಂಡಕ್ಕೆ ಬೇಕಾದ ಧರ್ಮಾರ್ಥಕಾಮಮೋಕ್ಷಗಳನ್ನು ಕರುಣಿಸಿದ್ದರಿಂದ ಶಿವನು ಶರ್ವನೆಂದೆನಿಸಿಕೊಂಡನು. ಅಯ್ಯಾ ಋಷಿಗಳಿರಾ! ಯಾರು ಸದಾಶಿವನ ಧ್ಯಾನ, ಮನನ, ಭಜನ, – ಇತ್ಯಾದಿಗಳನ್ನು ಮಾಡುವರೋ ಅಂತಹ ಮನುಜರು ಧನ್ಯರು. ಯಾವ ಮನುಜರು ಸೃಷ್ಟಿಸ್ಥಿತಿ ಲಯಕರ್ತನಾದ ಪರಮೇಶ್ವರನನ್ನು ಬಿಟ್ಟು, ಸಂಸಾರ ಸಾಗರವನ್ನು ದಾಟಲಿಚ್ಛಿಸುವರೋ, ಅಂತಹ ಮೂಢಾತ್ಮರು ಶಿವದ್ವೇಷಿಗಳೆಂಬುದರಲ್ಲಿ ಲೇಶಮಾತ್ರವೂ ಸಂಶಯವಿಲ್ಲ. ಕೇಳಿರೈ! ಶಿವನ ಮಹಿಮೆಯನ್ನೇನೆಂದು ಹೇಳಲಿ ! ಅದ್ಭುತವಾದ ಕಾಲಕೂಟ ಮಹಾ ವಿಷವನ್ನು ಪಾನಮಾಡಿ ಜಗತ್ತ್ರಯವನ್ನುಳುಹಿ

ದನು. ದಕ್ಷಬ್ರಹ್ಮನ ಯಾಗ ಧ್ವಂಸವನ್ನು ಮಾಡಿ ದುಷ್ಟಶಿಕ್ಷಣೆಯನ್ನು ಮಾಡಿದನು. ಮಹಾಕಾಳನನ್ನು ಸುಟ್ಟು ರಾಜಶ್ರೇಷ್ಠನನ್ನು ಸಂರಕ್ಷಿಸಿದನು' ಎಂಬೀ ಪ್ರಕಾರವಾಗಿ ನುಡಿಯುತ್ತಲಿರುವ ಸೂತನನ್ನು ಕುರಿತು, ಶೌನಕಾದಿಗಳು ಹೇಳುತ್ತಾರೆ. 'ಮಹಾತ್ಮನೇ ! ಪರಶಿವಮೂರ್ತಿಯು ಕಾಲಕೂಟ ಮಹಾವಿಷವನ್ನು ಪಾನಮಾಡಿದುದು ಹೇಗೆ? ಮಹಾಕಾಳನನ್ನು ಸುಟ್ಟು ರಾಜಶ್ರೇಷ್ಠನನ್ನು ಸಂರಕ್ಷಿಸಿದುದು ಹೇಗೆ? ರಾಜಶ್ರೇಷ್ಠನಾರು ? ದಕ್ಷಬ್ರಹ್ಮನ ಯಾಗವನ್ನು ಧ್ವಂಸಮಾಡಿದುದು ಹೇಗೆ ? – ಎಂಬೀ ವಿಚಾರವನ್ನು ಕೇಳಲು ಅತಿ ಕುತೂಹಲವುಳ್ಳವರಾಗಿರುವೆವು. ದಯವಿಟ್ಟು ಹೇಳುವವನಾಗು' ಎಂದು ಬೆಸಗೊಳ್ಳಲು ಸೂತನು ಹೇಳಲುಪಕ್ರಮಿಸಿದನು.

ಪೂರ್ವಕಾಲದಲ್ಲಿ ಬ್ರಹ್ಮಪುತ್ರನಾದ ದಕ್ಷಬ್ರಹ್ಮನು ತಂದೆಯ ಅನುಮತಿಗೆ ಒಳಪಟ್ಟು ತನ್ನ ಮಕ್ಕಳಲ್ಲಿ ಒಬ್ಬಳಾದ ದಾಕ್ಷಾಯಣಿಯನ್ನು ಸಾಕ್ಷಾತ್ಪರಶಿವನಿಗೆ ಕೊಟ್ಟು ವಿವಾಹಮಾಡಿದನು. ಈ ದಕ್ಷಬ್ರಹ್ಮನು ಒಂದಾನೊಂದುದಿನ ನೈಮಿಶಾರಣ್ಯಕ್ಕೆ ಬಂದನು. ಅಲ್ಲಿಯಾದರೋ ಋಷಿಗಳಿಂದಲೂ, ದೇವಾದಿದೇವತೆಗಳಿಂದಲೂ, ಶಿವಗಣಗಳಿಂದಲೂ, ಅರ್ಘ್ಯಪಾದ್ಯಾದಿಗಳಿಂದ ಸತ್ಕರಿಸಲ್ಪಟ್ಟನು. ಆದರೆ ಋಷಿಪುಂಗವರ ಮಧ್ಯದಲ್ಲಿ ಸುಖಾಸೀನನಾದ ಪರಶಿವನು ತನ್ನ ಮಾವನಾದ ದಕ್ಷಬ್ರಹ್ಮನನ್ನು ಸತ್ಕರಿಸಲು ಎದ್ದು ನಿಲ್ಲಲಿಲ್ಲ. ಪರಶಿವನು ತನ್ನನ್ನು ವಂದಿಸದಿರುವುದನ್ನು ಕಂಡ ದಕ್ಷಬ್ರಹ್ಮನು ಅತಿಯಾಗಿ ಕೋಪಗೊಂಡನು. ಆ ಕೋಪಾವೇಶದಲ್ಲಿಯೇ ಅಲ್ಲಿದ್ದವರನ್ನು ಕುರಿತು 'ಎಲ್ಲೆಲ್ಲಿಯೂ, ಎಲ್ಲಾ ಕಡೆಗಳಲ್ಲಿಯೂ ದೇವಾದಿದೇವತೆಗಳೂ, ರಾಕ್ಷಸರೂ, ಬ್ರಾಹ್ಮಣರೂ ಅತಿನಮ್ರತೆಯಿಂದ ನನ್ನನ್ನು ನಮಸ್ಕರಿಸುವರು. ಇಂತಿರುವಲ್ಲಿ, ಪ್ರೇತಗಳಿಂದಲೂ, ಪಿಶಾಚಗಳಿಂದಲೂ ಕೂಡಿದವನಾಗಿ ಶ್ಮಶಾನದಲ್ಲಿ ವಾಸಮಾಡುವ ಈ ಪರಶಿವನೇಕೆ ನನಗೆ ನಮಸ್ಕಾರಮಾಡಲಿಲ್ಲ? ಯಾವ ಪಾಪಿ

ಯಾದರೆ, ಯಾವ ದುಷ್ಟನಾದರೆ, ಯಾವ ಪಾಷಂಡಿಯಾದರೆ ಬ್ರಾಹ್ಮ
ಣನನ್ನು ಕಂಡು ವಂದಿಸುವದಿಲ್ಲವೋ ಅಂತಹನು ನಮ್ಮಂತಹ ಸಾಧು
ಗಳಿಂದ ತ್ಯಜಿಸಲ್ಪಡತಕ್ಕವನು; ಕೊಲ್ಲಲ್ಪಡತಕ್ಕವನು. ಆದುದರಿಂದ
ನಾನು ಈ ಶಿವನನ್ನು ಶಪಿಸಲುದ್ಯುಕ್ತನಾಗಿರುವೆನು. ಇದಿಗೋ! ಈ
ರುದ್ರನು ಯಾವ ಕಾರಣದಿಂದ ವರ್ಣಾತೀತನೂ ವರ್ಣಪರನೂ ಆಗಿ
ರುವನೋ, ಹಾಗೆಯೇ ಯಜ್ಞಬಾಹ್ಯನೂ ಆಗಲಿ' ಎಂದನು.
ದಕ್ಷನ ನುಡಿಗಳನ್ನು ಕೇಳಿ ನಂದಿಯು ಅತಿಯಾಗಿ ಕೋಪಗೊಂಡು
ಅವನನ್ನು ಕುರಿತು 'ಎಲೈ ದಕ್ಷಬ್ರಹ್ಮನೇ ! ನಮ್ಮ ಸ್ವಾಮಿಯಾದ
ಜಗದೀಶ್ವರನು ಯಜ್ಞಬಾಹ್ಯನಾದುದು ಹೇಗೆ ? ಯಾರ ಸ್ಮರಣೆ
ಯಿಂದಲೇ ಎಲ್ಲ ಯಜ್ಞಾದಿಗಳೂ ಸಫಲಗಳಾಗುತ್ತವೆಯೋ,
ಅಂತಹ ನಮ್ಮ ಸ್ವಾಮಿಯು ನಿನ್ನಿಂದ ಹೇಗೆ ಶಪಿಸಲ್ಪಟ್ಟನು? ಎಲೆವೊ
ದುಷ್ಟನಾದ ದಕ್ಷನೇ! ಯಾರ ನಾಮೋಚ್ಚಾರಣದಿಂದಲೇ ಎಲ್ಲ ದಾನ
ಗಳೂ, ಎಲ್ಲ ಪೂಜೆಗಳೂ, ಎಲ್ಲ ಧರ್ಮಗಳೂ, ಸಫಲವಾಗು
ವವೋ ಅಂತಹ ಪರಶಿವನನ್ನು ಹೇಗೆ ಶಪಿಸಿದೆ ? ಕೇವಲ ಆ ನಿನ್ನ
ಬ್ರಹ್ಮಚಾಪಲ್ಯದಿಂದ ಸಮಸ್ತ ಬ್ರಹ್ಮಾಂಡವನ್ನೂ ಸಂರಕ್ಷಿಸುವ
ಶಂಕರನನ್ನು ಶಪಿಸಿರುವೆಯಾ ?' ಎಂದು ಗದರಿಸಿದನು. ನಂದಿಯ
ಮಾತುಗಳನ್ನು ಕೇಳಿ ದಕ್ಷಬ್ರಹ್ಮನು ಕೋಪದಿಂದ ಅವನನ್ನು
ಕುರಿತು 'ಎಲೆವೋ ! ದುರಾತ್ಮನಾದ ನಂದಿಯೇ !! ಇದಿಗೋ
ನಾನೀಗ ನಿನ್ನನ್ನೂ ಶಿವಗಣಗಳನ್ನೂ ಶಪಿಸುತ್ತೇನೆ. ಶಿವಕಿಂ
ಕರರಾದ ನೀವೆಲ್ಲರೂ ಸದಾಕಾಲದಲ್ಲಿಯೂ ವೇದ ಬಹಿಷ್ಕೃತ
ರಾಗಿರಿ. ವೇದಮಾರ್ಗ ನಿರುತರಾದ ನಮ್ಮಂತಹ ಬ್ರಾಹ್ಮಣರಿಂದ
ಯಾವಾಗ ಶಪಿಸಲ್ಪಟ್ಟಿರೋ ಆಗಲೇ ಮಹರ್ಷಿಗಳಿಂದಲೂ ತ್ಯಜಿಸಲ್ಪ
ಡತಕ್ಕವರೇ ಸರಿ. ಇದಲ್ಲದೆ ನೀವು ಶಿಷ್ಟಾಚಾರಗಳಿಂದ ಬಹಿಷ್ಕೃ
ತರಾಗಿಯೂ, ಮೂರ್ಖವಾದಿಗಳಾಗಿಯೂ, ಕಾಪಾಲಿಗಳಾಗಿಯೂ,
ಹೆಂಡಕುಡುಕರಾಗಿಯೂ, ಯಮಸ್ವರೂಪರಾಗಿಯೂ ಇರತಕ್ಕದ್ದು'
ಎಂದನು. ಆಗ ನಂದಿಯು ಅತಿಯಾಗಿ ಕೋಪಗೊಂಡು, ಆ ದಕ್ಷಬ್ರ
ಹ್ಮನನ್ನೂ ಬ್ರಾಹ್ಮಣರನ್ನೂ ಶಪಿಸಲಾರಂಭಿಸಿದನು.

'ಎಲೆವೋ ದಕ್ಷಬ್ರಹ್ಮನೇ! ನಿಷ್ಪ್ರಯೋಜನವಾಗಿ, ಸಾಧುಗಳಾಗಿಯೂ ಶಿವಕಿಂಕರರಾಗಿಯೂ ಇರುವ ನಮ್ಮನ್ನು ಆ ನಿನ್ನ ಬ್ರಹ್ಮಚಾಪಲ್ಯದಿಂದ ಶಪಿಸಿದೆಯಷ್ಟೆ! ನಾನು ನಿನಗೂ ಬ್ರಾಹ್ಮಣರಿಗೂ ಶಾಪವನ್ನು ಕೊಡುವೆನು. ಬ್ರಾಹ್ಮಣರಾದ ನೀವೆಲ್ಲರೂ ವೇದವಾದಗಳಲ್ಲಿ ನಿರುತರಾಗಿಯೂ, ನಮ್ಮನ್ನು ಬಿಟ್ಟರೆ ಮತ್ತಾರೂ ಇಲ್ಲವೆಂಬ ಅಹಂಕಾರದಿಂದ ಪೊಳ್ಳುವಾದಗಳನ್ನು ಮಾಡುವವರಾಗಿಯೂ, ಆಗುವಿರಲ್ಲದೆ ಕಾಮಾತ್ಮರೂ, ಸ್ವರ್ಗಾಭಿಲಾಷೆಯುಳ್ಳವರೂ, ವೈದಿಕಧರ್ಮವನ್ನು ಪುರಸ್ಕರಿಸಿ ಶೂದ್ರರನ್ನು ಆಶ್ರಯಿಸುವವರೂ, ಯಾವಾಗಲೂ ದಾನಗಳನ್ನು ಹಿಡಿಯುವುದರಲ್ಲಿ ನಿಶ್ರೀಮರೂ ದರಿದ್ರರೂ ಆಗಿರಿ. ಎಲೆವೋ ದಕ್ಷನೇ! ಕೆಲಬ್ರಾಹ್ಮಣರು ಬ್ರಹ್ಮರಾಕ್ಷಸರಾಗುವರು' ಎಂದು ಶಪಿಸಲು ಸರ್ವಲೋಕ ಶರಣ್ಯನಾದ ಶಂಕರನು ನಂದಿಯನ್ನು ಸಂತೈಸಲೋಸುಗ ಮೃದುಮಧುರವಾಗಿಯೂ ವಿವೇಕಯುಕ್ತವಾಗಿಯೂ ಇರುವ ಮಾತುಗಳನ್ನಾಡಿದನು. 'ಎಲೈ ನಂದಿಯೇ! ಯಾವಾಗಲೇ ಆಗಲಿ, ಬ್ರಾಹ್ಮಣರಮೇಲೆ ಕೋಪಮಾಡಬಾರದು. ವೇದವಾದನಿರುತರಾದ ಬ್ರಾಹ್ಮಣರು ಎಲ್ಲರಿಗೂ ಗುರುಗಳು. ಇವರು ಯಾವ ವೇದವಿಷಯಿಕ ವಾದಗಳನ್ನು ಮಾಡುತ್ತಾರೆಯೋ ಅವೇ ಮಂತ್ರಮಯವಾಗಿರುವುವು; ಅನೇಕ ಸೂಕ್ತಗಳಿಂದ ಕೂಡಿರುವುವು; ಈ ಸೂಕ್ತಗಳಲ್ಲಾದರೋ ಎಲ್ಲ ದೇಹಿಗಳ ಆತ್ಮವೂ ಪ್ರತಿಷ್ಠಿಸಲ್ಪಟ್ಟಿರುವುದು. ನಾನೇ ಆತ್ಮನಾಗಿರುವುದರಿಂದ ಆತ್ಮವಿತ್ತುಗಳು ಬ್ರಾಹ್ಮಣರನ್ನು ನಿಂದಿಸಬಾರದು. ಆತ್ಮನೇ ನಾನಾಗಿರುವುದರಿಂದ ನಾನು ಬೇರೆಯಲ್ಲ. ನೈಜವಾದ ಬ್ರಾಹ್ಮಣನು ಬೇರೆಯಲ್ಲ. ಇವನು ಯಾರು? ನಾನು ಯಾರು? ನೀನು ಯಾರು? ಎಂಬುದನ್ನರಿಯದೆ ಏತಕ್ಕಾಗಿ ಈ ದಕ್ಷಬ್ರಹ್ಮನನ್ನೂ ಬ್ರಾಹ್ಮಣರನ್ನೂ ಶಪಿಸಿದೆ? ಆದುದರಿಂದ ಎಲೈ ಮಹಾಬುದ್ಧಿಶಾಲಿಯಾದ ನಂದಿಯೇ! ಪ್ರಾಪಂಚಿಕ ವ್ಯವಹಾರಗಳನ್ನೂ ಭೇದಭಾವವನ್ನೂ ತೊರೆದು ತತ್ವಜ್ಞಾನದಕಡೆ ಮನದೆರೆದು, ಕೋಪವನ್ನು ಬಿಟ್ಟು ಶಾಂತನಾಗಿ ವಿವೇಕವನ್ನು ಹೊಂದು' ಎಂಬೀಪ್ರಕಾರವಾಗಿ ನಂದಿಯು ಶಿವನಿಂದ ವಿವೇಕವನ್ನು

ಹೊಂದಿ ಸಾಕ್ಷಾತ್ಪರಶಿವನೊಡನೆ ಸೇರಿ ಪರಮಾನಂದಭರಿತನಾದನು. ಇತ್ತ ದಕ್ಷಬ್ರಹ್ಮನು ಋಷಿಗಳು ಸಂತೈಸಿದರೂ ಕೋಪವನ್ನು ಬಿಡದೆ ತನ್ನ ಸ್ಥಾನಕ್ಕೆ ತೆರಳಿದನು. ಇಷ್ಟೇಯಲ್ಲದೆ ಆ ದಕ್ಷನು ಪರಮ ಪವಿತ್ರವಾದ ಭಕ್ತಿಯನ್ನು ತ್ಯಜಿಸಿ ದೇವದೇವನಾದ ಸದಾನಂದ ಮೂರ್ತಿಯಾದ ಶಿವನನ್ನು ನಿಂದಿಸಿ ಪರಾಧಮನಾದನೇ ಹೊರತು ಶಾಂತನಾಗಲಿಲ್ಲವು. ಅದು ಅಲ್ಲದೆ ದಕ್ಷಬ್ರಹ್ಮನು ಶಂಕರನ ಉಪ ದೇಶಕ್ಕೆ ಕಿವಿಗೊಡಲಿಲ್ಲವು. ಋಷಿಗಳ ಬುದ್ಧಿಯ ಮಾತುಗಳಿಗೆ ಮೊದಲೇ ಕಿವುಡನಾದನು. ಆದುದರಿಂದಲೇ ಅಹಂಕಾರ ಪಿಶಾಚಿ ಯಿಂದ ಗ್ರಸ್ತನಾಗಿಯೂ ಅರಿಷಡ್ವರ್ಗಗಳ ಸೇವಕನಾಗಿಯೂ, ಅತತ್ವ ಜ್ಞನಾಗಿಯೂ ಇರುವ ದಕ್ಷಬ್ರಹ್ಮನು ಕೋಪದ ಕಿಡಿಗಳನ್ನು ಕಕ್ಕುತ್ತಾ ಹಿಂತಿರುಗಿದನು.

# ಅಧ್ಯಾಯ ೨

## ದಕ್ಷಬ್ರಹ್ಮನ ಯಾಗಸಮಾರಂಭ

ಸೂತಪುರಾಣಿಕನು ಹೇಳುತ್ತಾನೆ:—ಅಯ್ಯಾ ಋಷಿಗಳಿರಾ! ಕೇಳಿರಿ; ಒಂದಾನೊಂದು ಕಾಲದಲ್ಲಿ ಶಿವದ್ವೇಷಿಯಾದ ದಕ್ಷಬ್ರಹ್ಮನು ಕನಖಲವೆಂಬ ಕ್ಷೇತ್ರದಲ್ಲಿ ಮಹತ್ತರವಾದ ಯಾಗವನ್ನು ಮಾಡಲುಪ ಕ್ರಮಿಸಿದನು. ದೀಕ್ಷಿತನಾದ ದಕ್ಷನು ವಸಿಷ್ಠ, ಅತ್ರಿ, ಅಗಸ್ತ್ಯರೇ ಮೊದಲಾದ ಋಷಿಪುಂಗವರನ್ನೂ, ಇಂದ್ರಾದಿದೇವತೆಗಳನ್ನೂ ಆಹ್ವಾನಿಸಿದನು. ಯಕ್ಷ, ಗರುಡ, ಗಂಧರ್ವ, ಕಿನ್ನರ, ಅಪ್ಸರರು ಈ ಯಾಗ

ಸವಾರಂಭಕ್ಕೆ ಕರೆಯಲ್ಪಟ್ಟರು. ಸತ್ಯಲೋಕದೊಡೆಯನಾದ ಬ್ರಹ್ಮನೂ, ವೈಕುಂಠಪತಿಯಾದ ವಿಷ್ಣುವೂ, ಕೇವಲ ಬ್ರಾಹ್ಮಣ ಜನ್ಮದಲ್ಲಿ ಜನಿಸಿದ ದುರಾತ್ಮನಾದ ದಕ್ಷಬ್ರಹ್ಮನು ಮಾಡುವ ಯಾಗಕ್ಕಾಗಿ ಬಂದು ಸೇರಿದರು. ಋಷಿಗಳೂ, ಇಂದ್ರಾದಿದೇವತೆಗಳೂ, ಬ್ರಹ್ಮ ವಿಷ್ಣುಗಳೂ, ಅಂದವಾಗಿರುವ ಭವನಗಳಲ್ಲಿ ತಂಗಿಸಲ್ಪಟ್ಟರು. ಯಜ್ಞದಲ್ಲಿ ಭೃಗುವೇ ಮೊದಲಾದ ಋಷಿಗಳು ಋತ್ವಿಕರಾದರು. ದೀಕ್ಷಾಬದ್ಧನಾದ ದಕ್ಷನು ತನ್ನ ಸತಿಯಿಂದಲೂ ಬ್ರಾಹ್ಮಣರಿಂದಲೂ ಋಷಿಗಳಿಂದಲೂ ಕೂಡಿ ಮಂಗಳಸ್ನಾನವನ್ನಾಚರಿಸಿ ಬಹಳವಾಗಿ ಬೆಳಗಿದನು.

ಆಗ ಯಾಗಮಂಟಪದಲ್ಲಿ ಕುಳಿತಿದ್ದ ದಧೀಚಿಮಹರ್ಷಿಯು ಚಿಂತಾನ್ವಿತನಾಗಿ ದಕ್ಷಬ್ರಹ್ಮನನ್ನು ಕುರಿತು 'ಎಲೈ ದಕ್ಷನೇ ! ಈ ಯಾಗಮಂಟಪವು ದೇವತೆಗಳಿಂದಲೂ ಋಷಿಗಳಿಂದಲೂ ವಿಷ್ಣು ಬ್ರಹ್ಮಾದಿಗಳಿಂದಲೂ ತುಂಬಿರುವುದು. ಆದರೆ ಮಹಾಮಹಿಮನಾದ ಪರಶಿವನು ಬಾರದಿರುವುದರಿಂದ ಇದು ಶೋಭಿಸುತ್ತಿಲ್ಲ. ಯಾವನಿಂದ ಎಲ್ಲ ಮಂಗಳಗಳು ಹುಟ್ಟುತ್ತವೆಯೋ, ಅಂತಹ ಶಂಭುವೇ ಕಾಣುವುದಿಲ್ಲವಲ್ಲ! ಇದೇನಾಶ್ಚರ್ಯವು? ಅಯ್ಯಾ ದಕ್ಷಬ್ರಹ್ಮನೇ ! ಕೇಳು; ಆ ಶಂಕರನ ಸ್ಮರಣಮಾತ್ರದಿಂದಲೇ ಎಲ್ಲ ಅಮಂಗಳಗಳೂ ಮಂಗಳಗಳಾಗಿ ಪರಿಣಮಿಸುತ್ತವೆ. ಆದುದರಿಂದ ನೀನು ಈಗಲೇ ಇಂದ್ರಾದಿದೇವತೆಗಳಿಂದಲೂ ವಿಷ್ಣು ಬ್ರಹ್ಮಾದಿಗಳಿಂದಲೂ ಕೂಡಿದವನಾಗಿ ಮಹದೇವನನ್ನು ಕರತರಲೇ ಬೇಕು. ಆತನಿಲ್ಲಿಗೆ ಬಂದರೆ ಎಲ್ಲವೂ ಪವಿತ್ರವಾಗುವುದು' ಎಂದನು. ಇಂತು ನುಡಿದ ದಧೀಚಿಮುನಿಯ ಮಾತುಗಳನ್ನು ಕೇಳಿ ದುರುಳನಾದ ದಕ್ಷನು ಅಪಹಾಸ್ಯಮಾಡಿಕೊಂಡು ನಗುತ್ತಾ 'ಎಲೈ ದಧೀಚಿಯೇ! ಸನಾತನಧರ್ಮವು ಎಲ್ಲಿರುವುದೋ ಅಲ್ಲಿ ವಿಷ್ಣುವೇ ಅಧಿಪತಿಯು. ಚತುರ್ವೇದಗಳೂ, ಯಜ್ಞಾದಿ ಕರ್ಮಗಳೂ, ವಿಷ್ಣುವಿನಿಂದಲೇ ಪ್ರತಿಷ್ಠಿಸಲ್ಪಟ್ಟಿರುವುವು. ಅಂತಹ ವಿಷ್ಣುವೇ ಇಲ್ಲಿ ಬಂದಿರುವನು. ಲೋಕಪಿತಾಮಹನಾದ ಬ್ರಹ್ಮನು

ಚತುರ್ವೇದಗಳಿಂದಲೂ, ಬಗೆಬಗೆಯಾದ ಆಗಮಗಳಿಂದಲೂ ಕೂಡಿ ಬಂದಿರುವನು. ಅಲ್ಲದೆ ಇಂದ್ರನು ದೇವತೆಗಳಿಂದ ಸಮೇತನಾಗಿ ಬಂದಿರುವನು. ಪಾಪರಹಿತರಾದ ನಿಮ್ಮಂತಹ ಋಷಿಪುಂಗವರೆಲ್ಲರೂ ಬಂದಿರುವಿರಿ. ಯಾರು ಯಾರು ಯಜ್ಞಾಹ್ವಾನಕ್ಕೆ ಅರ್ಹರೋ ಅವರೆಲ್ಲರೂ ಕರೆಯಿಸಲ್ಪಟ್ಟಿರುವರು. ಹೀಗಿರುವಲ್ಲಿ ಆ ಬಡ ರುದ್ರನಿಂದ ನನಗಾಗಬೇಕಾದುದೇನಿರುವುದು. ಅಯ್ಯೋ! ಈ ಬ್ರಹ್ಮನ ಮಾತಿಗೆ ಮರುಳಾಗಿ ಆ ಅಶಿವನಿಗೆ ನನ್ನ ಮಗಳನ್ನು ಕೊಟ್ಟೆನಲ್ಲಾ! ಅಯ್ಯಾ ಬ್ರಾಹ್ಮಣರಿರಾ! ಈ ಶಿವನು ಕುಲಹೀನನು! ಸಂಹಾರಪ್ರಿಯನು! ಭೂತಪ್ರೇತಪಿಶಾಚಗಳಿಗೆ ಒಡೆಯನು! ದುರತಿಕ್ರಮನು! ಸ್ವಪ್ರಶಂಸಾಪರನು! ಮೂಢನೂ, ಹೊಟ್ಟೆಕಿಚ್ಚಿನವನೂ, ನಿಸ್ತ್ರಬ್ಧನೂ ಆಗಿರುವನು! ಈ ಶ್ರೇಷ್ಠವಾದ ಯಾಗಕ್ಕೆ ಬರಲರ್ಹನಲ್ಲ. ಎಲೈ ದಧೀಚಿಯೆ! ನೀನು ಹೇಗೆತಾನೆ ಶಿವನನ್ನು ಕರೆಯೆಂದು ಹೇಳಿದೆ? ಇನ್ನೊಮ್ಮೆ ಹೇಳಬೇಡ; ಸುಮ್ಮನಿರು. ನೀವೆಲ್ಲರೂ ನಾನು ಆರಂಭಿಸಿರುವ ಯಾಗವನ್ನು ಸಫಲಗೊಳಿಸಿರಿ' ಎಂದು ಹೇಳಿದನು. ದಕ್ಷನ ಮಾತನ್ನು ಕೇಳಿದ ದಧೀಚಿಯು ಅಲ್ಲಿದ್ದವರನ್ನೆಲ್ಲರನ್ನೂ ಕುರಿತು 'ಮಹಾತ್ಮನಾದ ಶಿವನನ್ನು ನಿರಾಕರಿಸಿ ಬಂದಿರುವ ನಿಮ್ಮೆಲ್ಲರಿಗೂ ಅತಿಕಷ್ಟಕರವಾದ ವಿಪತ್ತು ಸಂಭವಿಸುವುದೆಂಬುದರಲ್ಲಿ ಸಂಶಯವಿಲ್ಲ. ಇದನ್ನು ಚೆನ್ನಾಗಿ ತಿಳಿಯಿರಿ' ಎಂದು ಹೇಳಿ ಯಜ್ಞವಾಟದಿಂದ ಹೊರಟು ತನ್ನ ಆಶ್ರಮಕ್ಕೆ ತೆರಳಿದನು. ಅತ್ತ ದಧೀಚಿಯು ಹೊರಟುಹೋಗಲು ಇತ್ತ ದಕ್ಷನು ಎಲ್ಲರನ್ನೂ ಕುರಿತು ನಸುನಗುತ್ತಾ 'ಶಿವಪ್ರಿಯನಾಗಿಯೂ ವೀರನಾಗಿಯೂ ಇರುವ ಆ ದಧೀಚಿಯೆಂಬ ಹೆಸರುಳ್ಳ ಅನಾಮಧೇಯನು ಹೊರಟುಹೋದನು. ದುರಾಚಾರಿಗಳಾಗಿಯೂ, ವೇದಬಾಹಿರರಾಗಿಯೂ ಇರುವ ಶಿವಾನುಯಾಯಿಗಳೆಲ್ಲರೂ ಬಿಡಲ್ಪಟ್ಟವರೇ ಸರಿ. ನೀವು ವೇದವಾದವ್ರತಿಗಳೂ, ಶ್ರೇಷ್ಠರೂ, ಪೂಜನೀಯರೂ, ಆಗಿರುವಿರಿ. ವಿಷ್ಣುವೇ ಮೊದಲಾದ ನೀವೆಲ್ಲರೂ ಈಗ ನನ್ನಿಂದ ಉಪಕ್ರಮವಾಗಿರುವ ಯಾಗವನ್ನು ಸಫಲಗೊಳಿಸಬೇಕು' ಎಂದು

ಸುಡಿದನು. ಬಳಿಕ ಅಲ್ಲಿದ್ದ ಮಹರ್ಷಿಗಳೆಲ್ಲರೂ ದೈವಿಕವಾದ ಮಹಾ ಯಾಗವನ್ನು ಪಕ್ರಮಿಸಿದರು.

ಇತ್ತ ಗಂಧಮಾದನಪರ್ವತದಲ್ಲಿ ದಾಕ್ಷಾಯಣಿಯು ಸಖಿಯರೊಡನೆ ವಿನೋದವಾಗಿ ಚಂಡಾಟವನ್ನಾಡುತ್ತಿದ್ದಳು. ಆ ಸಮಯದಲ್ಲಿ ಚಂದ್ರನು ತನ್ನ ಸತಿಯಾದ ರೋಹಿಣಿಯೊಡನೆ ದಿವ್ಯವಾದ ವಿಮಾನದಲ್ಲಿ ಕುಳಿತು ಎಲ್ಲಿಗೋ ಹೋಗುತ್ತಿದ್ದನು. ದಾಕ್ಷಾಯಣಿಯು ಚಂದ್ರನು ಹೋಗುತ್ತಿರುವುದನ್ನು ನೋಡಿ ಸಖಿಯಾದ ವಿಜಯೆಯನ್ನು ಕರೆದು 'ವಿಜಯೆ! ಚಂದ್ರನು ಎಲ್ಲಿಗೆ ಹೋಗುತ್ತಿರುವನೆಂಬುದನ್ನು ವಿಚಾರಿಸು.' ಎಂದಳು. ವಿಜಯೆಯು ಚಂದ್ರನಿಂದ ದಕ್ಷಬ್ರಹ್ಮನು ಮಾಡುತ್ತಿರುವ ಯಾಗಸಮಾಚಾರವನ್ನು ತಿಳಿದು ದಾಕ್ಷಾಯಣಿಯೊಡನೆ ಹೇಳಿದಳು. ದಾಕ್ಷಾಯಣಿಯು ತನ್ನ ತಂದೆಯು ತನ್ನನ್ನೇಕೆ ಕರೆಯಲಿಲ್ಲವೆಂಬುದನ್ನು ಚಿಂತಿಸುತ್ತಾ, ಸಖೀಜನರನ್ನಲ್ಲಿಯೇ ಬಿಟ್ಟು ತನ್ನ ಪತಿಯಾದ ಶಂಕರನಸಿದ್ದೆಡೆಗೆ ಬಂದಳು. ಸದಾಶಿವನ ಸಭೆಯಲ್ಲಿಯಾದರೋ, ಶಂಕರನು ಅನೇಕಶಿವಗಣಗಳಿಂದೊಡಗೂಡಿ ಮಹಾನಂದದಿಂದಿದ್ದನು. ಜಟೆಗಳನ್ನು ಧರಿಸುಯಿಸ್ಸುಕೊಂಡು, ರುದ್ರಾಕ್ಷಮಾಲಾಭೂಷಿತರಾಗಿಯೂ, ಜಿತೇಂದ್ರಿಯರಾಗಿಯೂ, ರಾಗದ್ವೇಷಾದಿಗಳನ್ನು ತೊರೆದವರಾಗಿಯೂ, ಇರುವ ಚಂಡಮುಂಡಾದಿ ಶಿವಾನುಯಾಯಿಗಳು ಆ ಶಿವಸಭೆಯಲ್ಲಿ ಕಂಗೊಳಿಸುತ್ತಿದ್ದರು. ಮತ್ತಾ ಸಭೆಯು ಬಾಣಾಸುರ, ನಂದಿ, ಭೃಂಗಿಯೇ ಮೊದಲಾದ ತಪಸ್ವಿಗಳಿಂದಲೂ, ಮಹಾಕಾಲ, ಮಹಾಚಂಡ, ಮಹಾಮುಂಡ, ಮಹಾಶಿರರೇಮೊದಲಾದ ಗಣಾಧೀಶರಿಂದಲೂ ಕೂಡಿ ಮೆರೆಯುತ್ತಿದ್ದಿತು. ಇಷ್ಟೆಯಲ್ಲದೆ, ನೋಡಲು ಭಯವನ್ನುಂಟುಮಾಡುವ ವಕ್ರಲೋಚನರಿಂದಲೂ ಕಬಂಧರಿಂದಲೂ, ಭುಜಹೀನರಿಂದಲೂ, ಕೂಡಿದ ಆ ಶಿವನ ಸಭೆಯು ಗಭೀರವಾಗಿದ್ದಿತು. ಸಭೆಯಲ್ಲಿ ಶಂಕರನು ಪರಮಾದ್ಭುತವಾದ ಪೀಠದಲ್ಲಿ ಕುಳಿತು ಯೋಗನಿದ್ರೆಯನ್ನನುಭವಿಸುತ್ತಿರಲು, ದಾಕ್ಷಾಯಣಿಯು ಹತ್ತಿರಕ್ಕೆ ಹೋಗಿ ಅತಿಶಯವಾದ ಪ್ರೀತಿಯಿಂದ ಆತನ ತೊಡೆಯ

ಮೇಲೆ ಕುಳಿತುಕೊಂಡಳು. ಆಗ ಶಂಕರನು ಪ್ರೀತಿಪುರಸ್ಸರವಾಗಿ 'ಪ್ರಿಯೇ! ಇದೇನು ಸಂಭ್ರಮದಿಂದ ಬಂದಿರುವೆ? ನೀನು ಬಂದ ಕಾರ್ಯವೇನು? ಜಾಗ್ರತೆಯಾಗಿ ಹೇಳು' ಎಂದು ಕೇಳಿದನು. ಆಗ ದಾಕ್ಷಾಯಣಿಯು ಶಂಕರನನ್ನು ಕುರಿತಿಂತೆಂದಳು. 'ನಾಥಾ! ನಮ್ಮ ತಂದೆಯಾದ ದಕ್ಷಬ್ರಹ್ಮನು ಯಜ್ಞವನ್ನು ಮಾಡುತ್ತಿರುವನಂತೆ. ಅದು ನಿನಗೆ ರುಚಿಸಲಿಲ್ಲವೋ? ಪ್ರೀತಿಯನ್ನು ಹೆಚ್ಚಿಸುವ ಕಾರ್ಯದಲ್ಲಿ ಬಂಧುಗಳೂ, ಸ್ನೇಹಿತರೂ ಸಂತೋಷದಿಂದ ಸೇರಬೇಕಲ್ಲವೇ? ಇದನ್ನು ತಿಳಿದ ನೀನು ನಮ್ಮ ತಂದೆಯ ಯಾಗಮಂಟಪಕ್ಕೆ ಹೋಗುವದು ಧರ್ಮವಲ್ಲವೇ? ನಮ್ಮ ತಂದೆಯಾದರೋ, ಎಲ್ಲರಿಗೂ ಹಿತಕರವಾದ ಯಾಗವನ್ನು ಮಾಡುತ್ತಿರುವನು. ನಿನ್ನನ್ನು ನನ್ನ ತಂದೆಯು ಕರೆಯಲು ಮರೆತಿರಬಹುದು. ಅದರೂ ಚಿಂತೆಯಿಲ್ಲ. ಕರೆಯದಿದ್ದರೂ ನೀನು ಯಾಗಮಂಟಪಕ್ಕೆ ಹೋಗತಕ್ಕದ್ದು ನಿನ್ನ ಧರ್ಮವು. ನಾನೂ ನಿನ್ನೊಡನೆ ಬರುವೆನು. ದೇವಪಿತೃಕಾರ್ಯಕ್ಕೆ ಕರೆಯದೆಯೇ ಹೋಗಬೇಕಲ್ಲವೇ?'

ಎಂಬೀ ಪ್ರಕಾರವಾಗಿ ನುಡಿದ ದಾಕ್ಷಾಯಣಿಯ ಮಾತುಗಳನ್ನು ಕೇಳಿ ಶಂಕರನು ನಸುನಗುತ್ತಾ ಅವಳನ್ನು ಕುರಿತಿಂತೆಂದನು. 'ಎಲೌ ಸಾಧ್ವೀಮಣಿಯೇ! ನೀನು ನಿಮ್ಮ ತಂದೆಯ ಯಜ್ಞಶಾಲೆಗೆ ಹೋಗುವುದು ಯುಕ್ತವಲ್ಲ. ಆ ಯಾಗಕ್ಕೆ ಯಾರುಯಾರು ಅರ್ಹರೊ ಅಂತಹ ಸುರರೂ, ಕಿನ್ನರರೂ ಹೋಗಿರುವರು. ಕೇಳು; ಕರೆಯದೆಯೇ ಯಾರು ಪರರ ಮನೆಗೆ ಹೋಗುತ್ತಾರೆಯೋ, ಅಂತಹರು ಸಹಿಸಲಸಾಧ್ಯವಾದ ಅವಮಾನವನ್ನು ಹೊಂದುವರು. ಎಲೌ ಮಂಗಳಾಂಗಿಯೇ! ದೇವೇಂದ್ರನಾದರೇನು? ಕರಿಸಿಕೊಳ್ಳದೆ ಪರರ ಮನೆಗೆ ಹೋದಲ್ಲಿ ಅವನೂ ಮರಣಕ್ಕಿಂತ ಹೆಚ್ಚಾದ ಅವಮಾನವನ್ನು ಹೊಂದುವನು. ಅನಾಹೂತನಾದ ಮನುಷ್ಯನು ಪರಮಂದಿರವನ್ನು ಪ್ರವೇಶಿಸಿದರೆ ಹುಲ್ಲುಕಡ್ಡಿಗಿಂತಲೂ ಕಡಿಮೆಯಾಗುತ್ತಾನೆ. ಇದನ್ನು ಚೆನ್ನಾಗಿ ತಿಳಿ. ಪ್ರಿಯೇ! ಆದುದರಿಂದ ನೀನು ನಿನ್ನ ತಂದೆಯ

ಮನೆಗೆ ಹೋಗುವುದು ಯುಕ್ತವಲ್ಲ' ಲೋಕಶಂಕರನಾದ ಶಂಕರನು ಇಂತು ನುಡಿಯಲು, ಮಾತುಗಳನ್ನಾಡುವದರಲ್ಲಿ ಚತುರೆಯಾದ ದಾಕ್ಷಾಯಣಿಯು 'ನಾಥ! ಲೋಕದಲ್ಲಿ ಯಜ್ಞವೆಂಬುದು ಸತ್ಯವಾಗಿದ್ದರೆ, ಆ ಯಜ್ಞಸ್ವರೂಪನು ನೀನಲ್ಲದೆ, ಬೇರೊಬ್ಬರಲ್ಲ. ಇಂತಹ ನಿನ್ನನ್ನು ದುಷ್ಟಬುದ್ಧಿಯಾದ ನಮ್ಮ ತಂದೆಯು ಏಕೆ ಕರೆಯಲಿಲ್ಲವೆಂಬುದನ್ನು ತಿಳಿಯಲು ನಾನಲ್ಲಿಗೆ ಹೋಗುವೆನು. ದೇವ! ದಯವಿಟ್ಟು ನನಗೆ ಅನುಜ್ಞೆಯನ್ನು ಕೊಡು' ಎಂದಳು. ಆಗಲಾ ಸರ್ವಾಂತರ್ಯಾಮಿಯಾದ ಪರಶಿವನು ಆ ದಾಕ್ಷಾಯಣಿಯನ್ನು ಕುರಿತು 'ದೇವಿ! ಈ ನಂದಿಯನ್ನೇ ವಾಹನವನ್ನಾಗಿ ಮಾಡಿಕೊಂಡು ಈ ಗಣಗಳಿಂದ ಸಮೇತಳಾಗಿ ನಿಮ್ಮ ತಂದೆಯ ಮನೆಗೆ ಜಾಗ್ರತೆಯಾಗಿ ಹೋಗು' ಎಂದನು. ಮಹೇಶನ ವದನಾರವಿಂದದಿಂದ ಮಾತುಗಳು ಹೊರಡುವಲ್ಲಿಯೇ ಅರವತ್ತು ಸಾವಿರ ಶಿವಗಣಗಳು ಸಿದ್ಧರಾದರು. ಇವರಿಂದ ಕೂಡಿದ ದಾಕ್ಷಾಯಣಿಯು ತಂದೆಯ ಮನೆಗೆ ಹೋಗಲು ಸಿದ್ಧಳಾದಳು. ಆಗಲಾ ಪರಶಿವನು ತನ್ನ ಸತಿಗೆ ನಾನಾವಿಧವಾದ ಆಭರಣಗಳನ್ನೂ, ಭೂಷಣಾಂಬರಗಳನ್ನೂ, ಕೊಟ್ಟುಕಳುಹಿದನು. ಅತ್ತ ದಾಕ್ಷಾಯಣಿಯು ತೆರಳಿದ ಬಳಿಕ ಪರಶಿವನು ತಂದೆಯಿಂದಪಮಾನಿತಳಾಗುವ ದಾಕ್ಷಾಯಣಿಯು ಮರಳಿ ಹಿಂತಿರುಗಿಬರುವುದಿಲ್ಲವೆಂದು ಚಿಂತಿಸುತ್ತಾ ತನ್ನ ಸ್ಥಾನವಾದ ಕೈಲಾಸಕ್ಕೆ ಹೊರಟುಹೋದನು.

# ಅಧ್ಯಾಯ ೩.

## ದಾಕ್ಷಾಯಣಿಯ ಅಗ್ನಿಪ್ರವೇಶ

ಎಲೈ ಶೌನಕಾದಿಗಳಿರಾ! ಕೇಳಿರಿ. ಪರಶಿವನ ಅನುಜ್ಞೆಯನ್ನು ಪಡೆದ ದಾಕ್ಷಾಯಣೀದೇವಿಯು, ನಂದಿ, ಭೃಂಗಿ ಮುಂತಾದ ಶಿವ

ಗಣಗಳಿಂದ ಕೂಡಿದವಳಾಗಿ, ಅನೇಕ ಪರಿವಾರಗಳಿಂದಲೂ, ದೇವತೆಗಳಿಂದಲೂ, ನಾನಾವಿಧಗಳಾದ ಆಶ್ಚರ್ಯಗಳಿಂದಲೂ ಕೂಡಿರುವ ತನ್ನ ತಂದೆಯಾದ ದಕ್ಷಬ್ರಹ್ಮನ ಯಾಗಮಂಟಪಕ್ಕೆ ಬಂದಳು. ದಾಕ್ಷಾಯಣಿಯು ಬಂದೊಡನೆಯೇ ದೇವತೆಗಳೂ, ಋಷಿಗಳೂ ಎದ್ದು ಸತ್ಕರಿಸಿದರು. ಬಳಿಕ ದೇವಿಯು ಸ್ನೇಹಿತರಿಂದಲೂ, ಬಂಧುಗಳಿಂದಲೂ, ಕೂಡಿ ಯಾಗವನ್ನು ಮಾಡುತ್ತಿದ್ದ ದಕ್ಷಬ್ರಹ್ಮನನ್ನೂ, ತನ್ನ ತಾಯಿಯನ್ನೂ ನೋಡಿ ಸಪ್ರೀತಿಯಿಂದ ನಮಸ್ಕರಿಸಿದಳು. ಇಂತು ತಂದೆತಾಯಿಗಳನ್ನು ವಂದಿಸಿದ ಶೋಭನೆಯಾದ ಶಿವಸತಿಯು ತಂದೆಯನ್ನು ಕುರಿತು ಇಂತೆಂದಳು. 'ಎಲೈ ತಂದೆಯೇ! ಯಾವನು ಪರಮ ಮಂಗಳಸ್ವರೂಪನಾಗಿರುವನೋ, ಯಾವನಿಂದ ಈ ಚರಾಚರವೆಲ್ಲ ಪವಿತ್ರತವಾಗಿದೆಯೋ, ಅಂತಹ ನನ್ನ ಪತಿಯಾದ ಶಂಕರನನ್ನು ಏಕೆ ಕರೆಯಲಿಲ್ಲ? ಯಜ್ಞಸ್ವರೂಪನೂ, ಯಜ್ಞಾಂಗನೂ, ಯಜ್ಞದಕ್ಷಿಣಾರೂಪನೂ, ಯಜ್ಞನೇತೃಗಳಲ್ಲಿ ಶ್ರೇಷ್ಠನೂ ಆದ ನನ್ನ ಸ್ವಾಮಿಯನ್ನು ಕರೆಯಿಸದಿರಲು ಕಾರಣವೇನು? ಮಂತ್ರಪೂರಿತವಾದ ದ್ರವ್ಯ, ಹವ್ಯಕವ್ಯಗಳು ಯಾರಮಯವಾಗಿರುವವೋ, ಅಂತಹ ನನ್ನ ಸ್ವಾಮಿಯನ್ನಗಲಿದರೆ, ಸರ್ವವೂ ಅಪವಿತ್ರವಾಗಿ ಪರಿಣಮಿಸುತ್ತದೆ. ತಂದೆಯೇ! ನನ್ನ ಪತಿಯಾದ ಶಂಭುವನ್ನು ಬಿಟ್ಟು ಯಜ್ಞವು ಹೇಗೆ ನಡೆಯುವುದು? ಶಂಕರನ ಅನಾಗಮನವನ್ನು ತಿಳಿದು ಈ ಬ್ರಾಹ್ಮಣರು ಹೇಗೆ ಬಂದರು? ಎಲೈ, ಭೃಗುವೇ! ಅತ್ರಿಯೇ! ವಸಿಷ್ಠನೇ! ನೀವುಗಳು ಈ ಯಾಗಮಂಟಪಕ್ಕೆ ಹೇಗೆ ಬಂದಿರುವಿರಿ? ಮಹದೇವನ ಮಹಿಮೆಯನ್ನು ನೀವು ಕಾಣಿರಾ? ಎಲೈ ವಿಷ್ಣುವೇ! ನೀನು ಶಂಕರನನ್ನು ಚೆನ್ನಾಗಿ ತಿಳಿದಿದ್ದರೂ ಇಲ್ಲಿಗೆ ಹೇಗೆ ಬಂದೆ? ಎಲೈ ಬ್ರಹ್ಮನೇ! ನೀನೇನು ಪರಶಿವನ ಪ್ರಭಾವವನ್ನರಿಯೆಯಾ? ಹಿಂದೆ ನೀನು ನನ್ನ ಪತಿಯಾದ ಶಿವನೊಡನೆ ಹುರುಡಿಸಿ ಚತುರ್ಮುಖನಾಗಿ ಅವಮಾನ ಪಟ್ಟಿದ್ದನ್ನು ಮರೆತುಬಿಟ್ಟೆಯಾ? ಅಂತಹ ಮಹಾಮಹಿಮನಾದ ಪರಶಿವನನ್ನು ಬಿಟ್ಟು ನೀವುಗಳೆಲ್ಲರೂ ಈ ದಕ್ಷಬ್ರಹ್ಮನ ಯಾಗಶಾಲೆಗೆ

ಹೇಗೆ ಬಂದಿರುವಿರಿ? ಎಲೈ ಋಷಿಗಳಿರಾ! ಹಿಂದೆ ದಾರುವನದಲ್ಲಿ ಸ್ವಾಮಿಯಾದ ಶಂಕರನು ಭಿಕ್ಷಾಟನೆಯನ್ನು ಮಾಡುತ್ತಿರಲು ನೀವು ಗಳೆಲ್ಲರೂ, ಆತನನ್ನು ಶಪಿಸಿದಿರಿ. ಆದರೂ ಆತನ ಒಂದು ಅಂಶವೇ ಈ ಚರಾಚರಾತ್ಮಕವಾದ ಜಗತ್ತನ್ನು ಆವರಿಸಿತು. ಆ ಕ್ಷಣದಲ್ಲಿಯೇ ಜಗತ್ತೆಲ್ಲವೂ ಲಿಂಗಮಯವಾಗಲಿಲ್ಲವೇ? ಆಗ ಈ ದೇವತೆಗಳೂ ನೀವೂ ಯಾವುದರಿಂದ ಲಯಕಾರ್ಯವಾಗುವುದೋ, ಅಂತಹ ಲಿಂಗವಿದೆಂದು ಉಸರಲಿಲ್ಲವೇ? ಇವುಗಳನ್ನೂ ಮರೆತಿರುವಿರಾ? ದೇವಾದಿದೇವನಾದ ವೇದಾಂತವೇದ್ಯನಾದ ಪರಶಿವನನ್ನು ನಿಮ್ಮಿಂದ ತಿಳಿಯಲು ಆಗು ವುದೇ ಇಲ್ಲವು.'

ಇಂತೆಂದು ನುಡಿದ ದಾಕ್ಷಾಯಣಿಯ ಮಾತನ್ನು ಕೇಳಿ, ದಕ್ಷ ಬ್ರಹ್ಮನು ಅತಿಯಾಗಿ ಕೋಪಗೊಂಡು ಹೀಗೆಂದನು 'ಎಲೌ ಮಗಳೇ! ಏತಕ್ಕೆ ಬಹಳವಾಗಿ ಹೇಳಿ ನಿನ್ನ ಬಾಯನ್ನು ನೋಯಿಸಿ ಕೊಳ್ಳುವೆ? ಪ್ರಕೃತದಲ್ಲಿ ನಿನ್ನಿಂದಾಗಬೇಕಾದ ಕಾರ್ಯವೇನೂ ಇಲ್ಲ. ಇದ್ದರೆ ಇರು! ಹೋದರೆ ಹೋಗು! ಏತಕ್ಕಾಗಿ ಬಂದೆ? ನಿನ್ನನ್ನಾರು ಕರೆಸಿದವರು? ಆ ನಿನ್ನ ಪತಿಯಾದ ರುದ್ರನು ಅಮಂಗಳಕರನು. ಕುಲಗೇಡಿಯು! ವೇದಬಾಹಿರನು! ಅಲ್ಲದೆ ಭೂತಪ್ರೇತಪಿಶಾಚಾದಿ ಗಳಿಗೆ ಒಡೆಯನು! ಅದರಿಂದಲೇ ಅವನನ್ನಿಲ್ಲಿಗೆ ಕರೆಯಲಿಲ್ಲ. ಅಯ್ಯೋ ಮಗಳೇ! ಪಾಪಿಷ್ಠನಾದ ನಾನು ಈ ಬ್ರಹ್ಮನ ಮಾತಿಗೆ ಮರುಳಾಗಿ ನಿನ್ನನ್ನು ಆ ರುದ್ರನಿಗೆ ಕೊಟ್ಟು ನಿನ್ನ ಜೀವಿತವನ್ನೇ ಹಾಳುಮಾಡಿದೆನು! ಆದರೂ ಚಿಂತೆಯಿಲ್ಲವು. ಪ್ರಾಣವನ್ನಾ ದರೂ ಬಿಟ್ಟು ಆ ಶಿವನ ಸಹವಾಸದಿಂದ ದೂರವಾಗಿ ಸುಖವನ್ನು ಹೊಂದು.' ಎಂದು ಹೇಳಿದ ದಕ್ಷನ ಮಾತನ್ನು ಕೇಳಿ, ಕಿವಿಗಳನ್ನು ಮುಚ್ಚಿಕೊಂಡು, ಶಿವನಾಮಗಳನ್ನುಚ್ಚರಿಸುತ್ತಾ ಚಿಂತಿಸಿದಳೆಂತೆನೆ, 'ಅಹಹ! ಇದೆಂತಹ ಪರುಷವಾದ ನುಡಿಯು? ಶಿವನಿಂದಾಪರವಾದ ನುಡಿಯನ್ನು ಕೇಳಿದ ನಾನದೆಂತಹ ಪಾಪಿಷ್ಠಳೋ ಕಾಣೆನಲ್ಲಾ! ಅಯ್ಯೋ! ಇನ್ನು ನಾನು ಕೈಲಾಸಕ್ಕೆ ಹಿಂತಿರುಗುವುದು ಹೇಗೆ?

ಶಂಕರನನ್ನು ನೋಡಿದರೆ ಏನೆಂದು ಹೇಳಲಿ! ಅಯ್ಯೋ! ಆತನ ಮಾತು ಗಳನ್ನು ನಿರಾಕರಿಸಿ, ಈ ಶಿವದ್ವೇಷಿಯಾದ ತಂದೆಯೆಂದೆನಿಸಿಕೊಂಡಿ ರುವ ದಕ್ಷನ ಯಾಗಶಾಲೆಗೆ ಬಂದು ಅವಮಾನಿತಳಾದೆನಲ್ಲಾ! ಯಾರು ಶಿವನನ್ನು ನಿಂದಿಸುತ್ತಾರೆಯೋ, ಯಾರು ಶಿವನಿಂದೆ ಯನ್ನು ಕೇಳುತ್ತಾರೆಯೋ, ಅವರಿಬ್ಬರೂ ಆಚಂದ್ರಾರ್ಕವಾದ ನರಕ ಕೂಪದಲ್ಲಿ ಬೀಳುವರಲ್ಲಾ! ಈಗ ನಾನೂ ಶಿವನಿಂದೆಯನ್ನು ಕೇಳಿ ಮಹಾಪಾಪಿಷ್ಠಯಾದೆನಲ್ಲಾ! ಇದಕ್ಕೆ ಯಾವ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳಲಿ? ಶಿವಶಿವಾ!! ನಿನ್ನ ಮಾತುಗಳನ್ನು ಮೀರಿದುದಕ್ಕೆ ತಕ್ಕ ಶಿಕ್ಷೆಯಾಯಿತು. ದೇವಾ! ಈ ಮಂದಭಾಗಿನಿಯು ಪವಿತ್ರಳಾಗು ವುದು ಹೇಗೆ? ಈ ದುಃಖವನ್ನು ಹೇಗೆ ಸಹಿಸಲಿ?' ಎಂದು ಚಿಂತಿಸುತ್ತಾ ಶಿವನಾಮಗಳನ್ನು ಭಕ್ತಿಯಿಂದ ಭಜಿಸುತ್ತಾ ದಕ್ಷಬ್ರಹ್ಮನು ಮಾಡಿದ ಅವಮಾನವನ್ನು ತಾಳಲಾರದೆ ಮುಂದೆಯೇ ಉರಿಯುತ್ತಿದ್ದ ಯಜ್ಞ ಕುಂಡದಲ್ಲಿ ಧುಮುಕಿದಳು. ದಾಕ್ಷಾಯಣಿಯು ಯಜ್ಞಕುಂಡದಲ್ಲಿ ಬಿದ್ದೊಡನೆಯೇ ಅಷ್ಟದಿಕ್ಕುಗಳೂ ಹಾಹಾಕಾರದಿಂದ ತುಂಬಿಹೋ ದವು. ತಮ್ಮ ಒಡತಿಯು ದಗ್ಧಳಾದುದನ್ನು ನೋಡಿ, ಶಿವ ಗಣಗಳೆಲ್ಲವೂ ಭಯಂಕರವಾದ ಕೃತ್ಯಗಳನ್ನು ಮಾಡತೊಡಗಿದವು. ತಮ್ಮ ತಲೆಗಳನ್ನು ತಾವೇ ಕತ್ತರಿಸಿಕೊಂಡರು. ಕೆಲವರು ಶಸ್ತ್ರಗ ಳಿಂದ ತಮ್ಮ ತಲೆಗಳನ್ನು ತಾವೇ ತರಿದುಕೊಂಡು ಯಜ್ಞಕುಂಡದಲ್ಲಿ ಹಾಕಿ ತಾವೂ ಬಿದ್ದು ದಗ್ಧವಾದರು. ಇನ್ನು ಕೆಲವರು ಭಯಂಕರ ವಾಗಿ ಘರ್ಜಿಸುತ್ತ ತಮ್ಮ ದೇಹಗಳನ್ನು ಛೇದಿಸಿಕೊಂಡರು. ಈ ರೀತಿಯಾಗಿ ಶಿವಗಣಗಳೆಲ್ಲವೂ ದಾಕ್ಷಾಯಣಿಯೊಡನೆ ನಾಶವಾಗಿ ಹೋದವು. ಅದುವರೆಗೂ ಸುಮ್ಮನೆ ಕುಳಿತಿದ್ದ ಋಷಿಗಳೂ, ಇಂದ್ರಾದಿ ದೇವತೆಗಳೂ, ಮರುದ್ಗಣಗಳೂ, ಅಷ್ಟದಿಕ್ಪಾಲಕರೂ ವಿಷ್ಣುವನ್ನು ಶರಣುಹೊಕ್ಕರು. ದುರಾತ್ಮನಾಗಿಯೂ, ಬ್ರಹ್ಮಬಂಧುವಾಗಿಯೂ ಇರುವ ದಕ್ಷಬ್ರಹ್ಮನ ಯಾಗವು ಈರೀತಿಯಾಗಿ ಪರಿಣಮಿಸಲು ಋಷಿ ಗಳೆಲ್ಲರೂ ಬಹಳವಾಗಿ ಭಯಗೊಂಡರು.

ಎಲೈ ಋಷಿಗಳಿರಾ! ಈ ಮಧ್ಯದಲ್ಲಿ ಮಹಾತ್ಮನಾದ ನಾರದ ಮುನಿಯು ದಕ್ಷಬ್ರಹ್ಮನ ಯಾಗವೃತ್ತಾಂತವೆಲ್ಲವನ್ನೂ ತಿಳಿದು. ಕೈಲಾಸಪರ್ವತವನ್ನು ಸೇರಿ, ಪರಶಿವನಲ್ಲಿಗೆ ಬಂದು 'ಎಲೈ ಪರಶಿವನೇ! ಭೂಲೋಕದಲ್ಲಿ ಕನಖಲಕ್ಷೇತ್ರದಲ್ಲಿ ಅತಿವಿಚಿತ್ರ ಒಂದು ನಡೆಯಿತು. ದಕ್ಷಬ್ರಹ್ಮನು ದಾಕ್ಷಾಯಣಿಯನ್ನೂ ನಿನ್ನನ್ನೂ ಬಹಳವಾಗಿ ನಿಂದಿಸಿದನು. ಆ ಸಾಧ್ವೀಮಣಿಯು, ಪತಿನಿಂದೆಯನ್ನು ಕೇಳಲಾರದೆ, ನಿನ್ನನ್ನೇ ಭಜಿಸುತ್ತಾ, ಯಜ್ಞಕುಂಡದಲ್ಲಿ ಬಿದ್ದು ಪ್ರಾಣತ್ಯಾಗಮಾಡಿದಳು. ಯಾಗವೇನೋ ನಡೆಯುತ್ತಿರುವುದು.' ಎಂದು ಹೇಳಿದನು. ನಾರದನ ಮಾತುಗಳನ್ನು ಕೇಳಿದೊಡನೆಯೇ, ಪರಶಿವನು ಪರಮ ಕ್ರುದ್ಧನಾಗಿ, ಸಿಂಹಾಸನದಿಂದ ಜೀಳುವನೋ ಎಂಬಂತೆ ಭಯಂಕರವಾಗಿ ತನ್ನ ಜಟೆಗಳನ್ನು ಕೈಲಾಸಶಿಖರದ ಮೇಲೆತ್ತಿ ಬಡಿದನು. ಜಟಾತಾಡನಮಾತ್ರದಿಂದಲೇ ಮಹಾಭಯಂಕರನಾದ ವೀರಭದ್ರನು ಜನಿಸಿದನು. ಈ ವೀರಭದ್ರನೊಡನೆ ಭೂತಕೋಟಿಗಳಿಂದಾವೃತಳಾದ ಮಹಾಕಾಳಿಯುದ್ಭವಿಸಿದಳು. ಆ ಪ್ರಳಯಕೋಪದಿಂದ ಶಿವನು ಒಂದು ಸಲ ನಿಟ್ಟುಸಿರನ್ನು ಬಿಟ್ಟೊಡನೆಯೇ, ನೂರು ಜ್ವರಗಳೂ ಹದಿಮೂರು ಸನ್ನಿಪಾತಗಳೂ ಹುಟ್ಟಿದವು. ಬಳಿಕ ಶಿವನ ಜಟಾತಾಡನದಿಂದ ಹುಟ್ಟಿದ ವೀರಭದ್ರನು ಶಂಕರನನ್ನು ಕುರಿತು 'ದೇವ! ನಾನು ಮಾಡಬೇಕಾದುದೇನು? ಜಾಗ್ರತೆಯಾಗಿ ಅಪ್ಪಣೆಕೊಡು' ಎಂದು ಕೇಳಲು, ಪರಶಿವನು ದಕ್ಷನ ಯಾಗವನ್ನು ನಾಶಮಾಡುವಂತೆ ಆಜ್ಞಾಪಿಸಿದನು. ಶಿವನ ಆಜ್ಞೆಯನ್ನು ಶಿರಸಾ ವಹಿಸಿದ ವೀರಭದ್ರನು, ಕಾಳಿ, ಕಾಕಾಳಿಗಳಿಂದಲೂ, ಭೂತಗಣಗಳಿಂದಲೂ ಜ್ವರಗಳಿಂದಲೂ, ಸನ್ನಿಪಾತಜ್ವರಗಳಿಂದಲೂ ಸಹಿತನಾಗಿ, ದಕ್ಷಪ್ರಜಾಪತಿಯ ಯಾಗಶಾಲೆಗೆ ಹೊರಟನು. ಆಗ ಅನೇಕ ದುರ್ನಿಮಿತ್ತಗಳುಂಟಾದವು. ಗಾಳಿಯು ಸಕ್ಕರೆಯಿಂದ ಮಿಶ್ರವಾಗಿ ವಕ್ರವಕ್ರವಾಗಿ ಬೀಸತೊಡಗಿತು. ಪರ್ಜನ್ಯದೇವತೆಯು ರಕ್ತಮಳೆಯನ್ನು ಸುರಿಸಲಾರಂಭಿಸಿತು. ಸಾವಿರಾರು ಉಲ್ಕಾಪಾತಗಳು

ಬೀಳಲಾರಂಭಿಸಿದವು. ಈ ದುರ್ನಿಮಿತ್ತಗಳನ್ನು ನೋಡಿದ ದೇವತೆಗಳು ಅತಿಯಾಗಿ ಭಯಗೊಂಡರು. ದಕ್ಷಬ್ರಹ್ಮನಾದರೋ, ಗಡಗಡನೆ ನಡಗುತ್ತಾ ಮಹಾನುಭಾವನಾಗಿಯೂ ವೇದಾಂತವೇದ್ಯನಾಗಿಯೂ ಇರುವ ವಿಷ್ಣುವನ್ನು ಮರೆಹೊಕ್ಕು ಪ್ರಾರ್ಥಿಸುವನೆಂತೆನೆ. 'ಎಲೈ ವಿಷ್ಣುವೇ ! ಕಾಪಾಡು ಕಾಪಾಡು ! ನೀನೆಯಲ್ಲವೆ ನನಗೆ ಗುರುವು! ಯಜ್ಞ ಸ್ವರೂಪನೂ ನೀನೆಯಲ್ಲವೆ ! ಈ ಮಹಾಭಯದಿಂದ ನನ್ನನ್ನು ಪಾರುಗಾಣಿಸು' ಎಂದು ಬೇಡಿಕೊಂಡ ದಕ್ಷಬ್ರಹ್ಮನನ್ನು ಕುರಿತು ವಿಷ್ಣುವು ಹೇಳುತ್ತಾನೆ. ಎಲೈ ದಕ್ಷಬ್ರಹ್ಮನೇ ! ನಿನ್ನನ್ನು ಕಾಪಾಡುವುದು ನನ್ನ ಕರ್ತವ್ಯವೆಂಬುದರಲ್ಲಿ ಲೇಶಮಾತ್ರವೂ ಸಂಶಯವಿಲ್ಲ. ಆದರೆ ಧರ್ಮಾಧರ್ಮವನ್ನರಿಯದೆ ಎಂತಹ ಅಕಾರ್ಯವನ್ನು ಮಾಡಿರುವೆ ? ಅಯ್ಯಾ ! ದಕ್ಷಬ್ರಹ್ಮನೇ ! ಯಾವಕಾರ್ಯವೇ ಆಗಲಿ, ಫಲಕಾರಿಯಾಗುವುದೂ, ನಿಷ್ಫಲವಾಗಿ ಪರಿಣಮಿಸುವುದೂ ಆ ಪರಶಿವನಿಂದಲೇ ಅಲ್ಲವೇ ! ಕೇಳು ! ಎಲ್ಲಿ ಪೂಜನೀಯರು ತಿರಸ್ಕಾರವನ್ನು ಹೊಂದುತ್ತಾರೆಯೋ, ಎಲ್ಲಿ ಅಪೂಜ್ಯರು ಸನ್ಮಾನವನ್ನು ಹೊಂದುತ್ತಾರೆಯೋ ಆ ಸ್ಥಳದಲ್ಲಿ ದುರ್ಭಿಕ್ಷ, ಮರಣ, ಭಯ ಇವು ಮೂರೂ ಸಂಭವಿಸುತ್ತವೆ. ಎಲೆವೋ ದಕ್ಷನೇ! ಪರಮೇಶ್ವರನನ್ನು ಅಲ್ಲಗಳೆದುದರಿಂದ ಈ ವಿಧವಾದ ಮಹಾ ಭಯವುಂಟಾಗಿರುವುದು. ಆದುದರಿಂದ ಏನಾದರೂ ಆಗಲಿ, ನೀನು ಈಶ್ವರನನ್ನಾರಾಧಿಸಲೇಬೇಕು. ಎಲೈ ದುಷ್ಟಬುದ್ಧಿಯುಳ್ಳ ದಕ್ಷನೇ ! ನಿನ್ನ ದುರ್ನಡತೆಯಿಂದ ನಾವು ನಿನಗೆ ಸಹಾಯಮಾಡಲು ಸಮರ್ಥರಾಗಿಲ್ಲವು. ಇದನ್ನು ಚನ್ನಾಗಿ ತಿಳಿ.' ಎಂದು ನುಡಿದ ವಿಷ್ಣುವಿನ ಮಾತುಗಳನ್ನು ಕೇಳಿ ದಕ್ಷಬ್ರಹ್ಮನು ಮುಖಗೆಟ್ಟವನಾಗಿ ಚಿಂತಿಸುತ್ತಾ ಮೌನವಾಗಿ ಕುಳಿತುಬಿಟ್ಟನು.

ಇತ್ತ ವೀರಭದ್ರನಾದರೋ, ರುದ್ರಮೂರ್ತಿಯ ಆಜ್ಞಾನುಸಾರವಾಗಿ, ಕಾಳಿ, ಕಾತ್ಯಾಯನೀ, ಮುಂಡಮರ್ದಿನಿಯಾದ ಚಾಮುಂಡೀ, ಭದ್ರಕಾಳಿ, ಆತುರಳಾದ ವೈಷ್ಣವಿಯೇ ಮೊದಲಾ

ದವರಿಂದಲೂ, ಅದ್ಭುತವಾದ ಭೂತಗಣಗಳಿಂದಲೂ, ದಕ್ಷನ ಯಜ್ಞ ಶಾಲೆಯ ಒಳಿಗೆ ಬಂದನು. ಶಾಕಿನೀ ಡಾಕಿನೀ ಗಣಗಳೂ, ಭೂತ ಪ್ರಮಥ ಗುಹ್ಯಕ ಗಣಗಳೂ, ಅರುವತ್ತನಾಲ್ಕು ಯೋಗಿನೀಚಕ್ರ ಗಳೂ, ಆ ವೀರಭದ್ರನನ್ನು ಅನುಸರಿಸಿ ಹೊರಟವು. ರುದ್ರ ಸ್ವರೂಪಿಗಳಾಗಿಯೂ, ಐದು ಮುಖಗಳುಳ್ಳವರೂ, ವಿಷಕಂಠರೂ, ಶಸ್ತ್ರ ಪಾಣಿಗಳೂ ಛತ್ರ ಚಾಮರಗಳಿಂದ ಕೂಡಿದವರೂ, ಹತ್ತು ಭುಜಗಳುಳ್ಳವರೂ, ಮುಕ್ಕಣ್ಣರೂ, ಜಟೆಗಳನ್ನು ಧರಿಸಿದವರೂ, ಅರ್ಧ ಚಂದ್ರಧಾರಿಗಳಾಗಿಯೂ, ವೃಷಭಾ ರೂಢರಾಗಿಯೂ ಇರುವ ಸಾವಿರಾರು ಶಿವಾನುಯಾಯಿಗಳು ಆ ವೀರಭದ್ರನ ಮುಂಗಡೆ ಹೊರಟರು. ಮಹಾತ್ಮನಾಗಿಯೂ ರುದ್ರ ಸ್ವರೂಪನಾಗಿಯೂ ಇರುವ ವೀರಭದ್ರನು, ಈ ಮಹಾ ಸೈನ್ಯದಿಂದ ಕೂಡಿ ದಕ್ಷಬ್ರ ಹ್ಮನ ಯಜ್ಞಶಾಲೆಯ ಒಳಿಗೆ ಬಂದನು. ಆಗಲಾ ಶಿವಸೈನಿಕರು, ರಣ ಭೇರಿಯನ್ನು ಬಾರಿಸಿ, ಶಂಖ, ಪಟಹ, ಕೊಂಬು, ತುತ್ತೂರಿ ಇವೇ ಮೊದಲಾದ ವಾದ್ಯಧ್ವನಿಗಳನ್ನು ಮಾಡಿದರು. ಅನಂತರದಲ್ಲಿ ಮಹಾ ಪರಾಕ್ರಮಶಾಲಿಯಾದ ವೀರಭದ್ರನು ಸೈನ್ಯದ ಮುಂದೆ ಬಂದು ಅತಿ ಭಯಂಕರವಾಗಿ ಹುಂಕರಿಸಿದನು. ಈ ಹುಂಕಾರದಿಂದ ಭೂಮಿಯು ಗಡಗಡನೆ ನಡಗಿತು. ದಕ್ಷಯಜ್ಞ ವಿನಾಶಕರವಾದ ಈ ಶಿವಸೇನೆಯು ಬರುತ್ತಿರಲು, ಆಕಾಶವೆಲ್ಲವೂ ಧೂಳಿನಿಂದ ಆವ ರಿಸಲ್ಪಟ್ಟಿತು. ಅಷ್ಟ ದಿಕ್ಕುಗಳಲ್ಲಿಯೂ ಕತ್ತಲು ಕವಿಯಿತು. ಸಪ್ತ ದ್ವೀಪಗಳೂ, ಕುಲಪರ್ವತಗಳೂ ಬಿರಿದವು. ಈ ಪ್ರಕಾರವಾಗಿ ಬರುತ್ತಿರುವ ,ಘೋರವಾದ ಸೈನ್ಯ ಸಾಗರವನ್ನು ನೋಡಿ ದೇವ ದಾನವರೆಲ್ಲರೂ ಬಹಳವಾಗಿ ಭಯಗೊಂಡರು. ಕೆಲವರು ಭೂಮಿ ಗಿಳಿದರು; ಮತ್ತೆ ಕೆಲವರು ಗಗನಕ್ಕೆ ಹಾರಿದರು; ಇನ್ನು ಕೆಲ ವರು ದಿಕ್ಕು ದಿಕ್ಕುಗಳಿಗೂ ಓಡಿದರು. ಶೂರರಾಗಿಯೂ, ರುದ್ರ ಸ್ವರೂಪರಾಗಿಯೂ ಇರುವ ಶಿವ ಸೈನಿಕರನ್ನು ನೋಡಿ ಭಯ ಗೊಂಡ ಇಂದ್ರಾದಿಗಳು ಹಿಂದೋಡಲುದ್ಯುಕ್ತರಾದರು. ಇಂದ್ರನು

ಐರಾವತವನ್ನೇರಿಕೊಂಡನು. ಚಂದ್ರನು ಮೃಗಾರೂಢನಾದನು. ಯಮನು ಮಹಿಷವನ್ನೇರಿಕೊಂಡು ಸಿದ್ಧವಾದನು; ಕುಬೇರನು ಪುಷ್ಪಕ ವಿಮಾನದಲ್ಲಿ ಕುಳಿತನು; ಅಗ್ನಿಯು ಭಸ್ತ್ರಾರೂಢನಾದನು; ನಿರುತಿಯು ಪ್ರೇತವನ್ನು ಹತ್ತಿಕೊಂಡನು; ಹೀಗೆಯೇ ಸಿದ್ಧ ಚಾರಣ ಗಂಧರ್ವರೆಲ್ಲರೂ ತಮ್ಮತಮ್ಮ ವಾಹನಗಳನ್ನೇರಿಕೊಂಡು ಹೊರಡಲು ಸಿದ್ಧವಾದರು. ಇದೆಲ್ಲವನ್ನೂ ನೋಡುತ್ತಿದ್ದ ದಕ್ಷ ಬ್ರಹ್ಮನು ಕಣ್ಣೀರನ್ನು ಸುರಿಸುತ್ತಾ, ಎಲ್ಲರನ್ನೂ ನಮಸ್ಕರಿಸಿ ಬೇಡಿದನದೆಂತೆನೆ.

''ಎಲೈ ದೇವತೆಗಳಿರಾ! ನಿಮ್ಮ ಬಲದಿಂದಲೇ ಅಲ್ಲವೆ, ನಾನು ಈ ಮಹತ್ತರವಾದ ಯಾಗವನ್ನು ಪಕ್ರಮಿಸಿದ್ದು? ಎಲ್ಲಾ ಕರ್ಮಗಳಿಗೂ ಧರ್ಮಗಳಿಗೂ ನೀವೆಯಲ್ಲವೆ ಸಾಕ್ಷಿಗಳು? ಎಲೈ ವಿಷ್ಣುವೆ! ನೀನು ಯಜ್ಞ ಪರಿಪಾಲಕನಲ್ಲವೆ? ಧರ್ಮವೂ ವೇದ ಗರ್ಭನೂ, ಬ್ರಾಹ್ಮ ಣ್ಯವನ್ನುಳಿಸುವವನೂ ನೀನೇ ಅಲ್ಲವೆ? ಆದ್ದರಿಂದ ಮರೆಹೊಕ್ಕಿರುವ ನನ್ನನ್ನು ಕಾಪಾಡು' ಎಂದು ಬೇಡಿಕೊಂಡನು. ಮಧುಸೂದನನು ದಕ್ಷಬ್ರಹ್ಮನನ್ನು ಕುರಿತು ಹೇಳುತ್ತಾನೆ. 'ಅಯ್ಯಾ ದಕ್ಷಬ್ರಹ್ಮನೇ ಧರ್ಮ ಪರಿಪಾಲನೆಯಲ್ಲಿ ನಾನು ಟೊಂಕ ಕಟ್ಟಿ ನಿಂತಿರುವುದು ಸತ್ಯವು. ಆದರೆ ಇಲ್ಲಿ ಆ ಧರ್ಮಕ್ಕೇ ಲೋಪಬಂದಿರುವುದು. ಹೀಗಿರುವಲ್ಲಿ ನಾನು ಹೇಗೆ ತಾನೆ ನಿನ್ನನ್ನು ಕಾಪಾಡಲಿ. ಎಲೈ ದುಷ್ಟ ಬುದ್ಧಿಯೆ! ಹಿಂದೆ ನೀನು ನೈಮಿಶಾರಣ್ಯದಲ್ಲಿ ಸಾಕ್ಷಾತ್ಪರ ಶಿವನನ್ನು ತಿರಸ್ಕಾರ ಮಾಡಲಿಲ್ಲವೆ? ಅದನ್ನು ಮರೆತು ಬಿಟ್ಟೆಯಾ? ಎಲೆವೊ ಮೂಢನೆ! ಯಜ್ಞ ರೂಪನಾಗಿಯೂ, ಮಂಗಳಕರನಾ ಗಿಯೂ ಇರುವ ಸದಾಶಿವನು ನಿನ್ನಿಂದ ಯಜ್ಞ ಬಾಹಿರನಾಗಿ ಎಣಿಸಲ್ಪಟ್ಟನಲ್ಲವೆ? ಲೋಕದಲ್ಲಿ ರುದ್ರ ಕೋಪವನ್ನು ಸಹಿಸಲು ಯಾರಿಂದ ಶಕ್ಯವು? ಅಂತಹ ಪ್ರಳಯ ರುದ್ರನ ಕೋಪಾನಲಕ್ಕೆ ಈಡಾಗಿರುವ ನಿನ್ನನ್ನು ಕಾಪಾಡುವ ಸಮರ್ಥರು ಯಾರೂ ಇಲ್ಲವು. ಇದನ್ನು ಚೆನ್ನಾಗಿ ತಿಳಿ. ಎಲೆವೋ! ದುಷ್ಟಬುದ್ಧಿಯೇ!! ಇದು

ಒಳ್ಳೆಯ ಕೆಲಸ, ಇದು ಕೆಟ್ಟ ಕೆಲಸ, ಇದು ಸಾಧ್ಯವಾದ ಕೆಲಸ, ಇದು ಅಸಾಧ್ಯವಾದ ಕೆಲಸ ಎಂಬುದನ್ನು ಆಲೋಚಿಸದೆಯೇ ಇರುವೆಯಲ್ಲಾ! ಕೇಳು ಎಲ್ಲಾ ಕೆಲಸಗಳೂ ಸಾಧ್ಯವಾಗುವುದಿಲ್ಲ. ಪ್ರಪಂಚದಲ್ಲಿ ನಡೆಯುವ ಪ್ರತಿಯೊಂದು ಕರ್ಮವೂ ಈಶ್ವರ ಮಯ ವಾದುದು. ಯಾವ ಕರ್ಮವೇ ಆಗಲಿ ಈಶ್ವರನ ಕಟಾಕ್ಷವಿಲ್ಲ ದಿದ್ದರೆ ಫಲಕಾರಿಯಾಗುವುದಿಲ್ಲ. ಯಾವನಾದರೆ, ಸಾಕ್ಷಾತ್ಪರಶಿವನ ಭಕ್ತನಾಗಿಯೂ, ಯಾವಾಗಲೂ ಶಿವನಲ್ಲಿಡಲ್ಪಟ್ಟ ಮನಸ್ಸುಳ್ಳವ ನಾಗಿಯೂ, ಕರ್ಮಗಳನ್ನಾಚರಿಸುತ್ತಾನೆಯೋ, ಅಂತಹನು ಈಶ್ವ ರನ ಕಟಾಕ್ಷಕ್ಕೆ ಪಾತ್ರನಾಗಿ ತಾನು ಮಾಡಿದ ಕರ್ಮಕ್ಕೆ ತಕ್ಕ ಫಲವನ್ನು ಹೊಂದುತ್ತಾನೆ. ಹಾಗಿಲ್ಲದೆ ಶಿವದ್ವೇಷಿಯಾಗಿ ಕರ್ಮ ವನ್ನೇ ಆಶ್ರಯ ಮಾಡಿಕೊಂಡು, ಕರ್ಮಾಚರಣೆಯನ್ನು ಮಾಡುವ ನರನು, ಕೋಟ್ಯಂತರ ಜನ್ಮಗಳನ್ನೆತ್ತಿ, ಜನ್ಮಜನ್ಮದಲ್ಲಿಯೂ ಕರ್ಮ ಮಯವಾದ ಪಾಶದಿಂದ ಬದ್ಧನಾಗಿ, ಬಹು ಕಷ್ಟವಾದ ನರಕ ವನ್ನು ಅನುಭವಿಸುತ್ತಾನೆ.' ಎಂದನು.

---

# ಅಧ್ಯಾಯ ೪.

## ವಿಷ್ಣುವು ವೀರಭದ್ರನೊಡನೆ ಯುದ್ಧಮಾಡಿ ಸೋಲುವುದು.

ಮಹಾ ವಿಷ್ಣುವಿನ ವಾಕ್ಯಗಳನ್ನು ಕೇಳಿದ ದಕ್ಷಬ್ರಹ್ಮನು ಅವನನ್ನು ಕುರಿತು 'ಎಲೈ ಮಧುಸೂದನನೇ! ವೇದಗಳಿಗೆಲ್ಲಾ ವ್ಯತಿರಿಕ್ತವಾಗಿ ನುಡಿಯುತ್ತಿರುವೆಯಲ್ಲಾ! ವೇದ ಸಂಬಂಧ ವಾದ ಕರ್ಮಗಳನ್ನು ಬಿಟ್ಟು ಮನುಷ್ಯನು ಹೇಗೆ ತಾನೇ ಈಶ್ವರತ್ವವನ್ನು ಹೊಂದುತ್ತಾನೆ? ಯಾರಿಂದ ಧರ್ಮವು ಪ್ರತಿ ಷ್ಠಿತವಾಯಿತೆಂಬುದನ್ನು ತಿಳಿಸುವವನಾಗು' ಎಂದು ನುಡಿದ ದಕ್ಷ

ಬ್ರಹ್ಮನನ್ನು ಕುರಿತು ಮಹಾತ್ಮನಾದ ವಿಷ್ಣುವು 'ಅಯ್ಯಾ! ದಕ್ಷಬ್ರಹ್ಮನೇ! ಚತುರ್ವಿಧಗಳಾದ ವೇದಗಳು ಸತ್ವರಜಸ್ತಮೋ ಗುಣಗಳಿಗೆ ವಿಷಯೀಭೂತಗಳಾದವುಗಳೇ ಹೊರತು ಮತ್ತೆ ಬೇರೆಯಲ್ಲ. ಹೀಗಿರುವಲ್ಲಿ ಈ ವೇದೋಕ್ತವಾದ ಕರ್ಮಗಳು ತ್ರಿಗುಣಾತೀತನಾದ ಈಶ್ವರನನ್ನು ಬಿಟ್ಟು ಹೇಗೆ ತಾನೇ ಸಫಲಗಳಾಗುವವು! ಹಾಗೆ ಈಶ್ವರನನ್ನು ತ್ಯಜಿಸಿ ಆಚರಿಸುವ ಕರ್ಮಗಳು ವೈದಿಕವಾಗಿದ್ದರೂ ಫಲಕಾರಿಗಳಾಗುವುದಿಲ್ಲ. ಆದುದರಿಂದ, ಎಲೈ ದಕ್ಷಪ್ರಜಾಪತಿಯೇ! ನೀನು ಸರ್ವಪ್ರಯತ್ನದಿಂದಲೂ ಈಶ್ವರನಲ್ಲಿ ಶರಣಾಗತಿಯನ್ನು ಹೊಂದು. ನಿನಗೆ ಮಂಗಳವಾಗುವುದು'' ಎಂದು ಹೇಳುತ್ತಿರುವಲ್ಲಿಯೇ, ರುದ್ರನಿಂದ ಪ್ರೇರಿತನಾದ ಸೈನ್ಯಸಾಗರವು ಬಂದೇಬಿಟ್ಟಿತು.

ಇಂತು ಬಂದ ಸೈನ್ಯಸಾಗರವನ್ನು ನೋಡಿ ಇಂದ್ರನು ವಿಷ್ಣುವನ್ನು ಕುರಿತು ನಗುತ್ತಾ, ವೀರಭದ್ರನೊಡನೆ ಯುದ್ಧ ಮಾಡಲು ಮನವುಳ್ಳವನಾದನು. ಇಂದ್ರನು ಯುದ್ಧಸನ್ನದ್ಧನಾಗಲು ದೇವತೆಗಳೆಲ್ಲರೂ ಅವನನ್ನು ಹಿಂಬಾಲಿಸಿದರು. ಆಗ ದೇವತೆಗಳಿಗೂ, ಶಿವಗಣಗಳಿಗೂ ಮಹತ್ತರವಾದ ಯುದ್ಧವು ಆರಂಭವಾಯಿತು. ದೇವತೆಗಳೂ, ಶಿವಗಣಗಳೂ, ಬಾಣ, ತೋಮರ, ತ್ರಿಶೂಲಾದ್ಯಾಯುಧಗಳಿಂದ ಒಬ್ಬರನ್ನೊಬ್ಬರು ಹೊಡೆಯಲಾರಂಭಿಸಿದರು. ಆ ಸಮಯದಲ್ಲಿ, ರಣಭೇರಿಯ ಧ್ವನಿಯೂ, ಶಂಖ ಪಟಹಾದಿ ವಾದ್ಯಗಳ ಧ್ವನಿಯೂ ದಿಗಂತರಗಳನ್ನು ವ್ಯಾಪಿಸುತ್ತಿದ್ದಿತು. ಈ ರಣನಾದದಿಂದ ದೇವತೆಗಳೆಲ್ಲರೂ ಉಬ್ಬಿ, ಅಷ್ಟದಿಕ್ಪಾಲಕರಿಂದ ಕೂಡಿಕೊಂಡು, ಶಿವಕಿಂಕರರನ್ನು ಹೊಡೆದರು. ಈ ಯುದ್ಧದಲ್ಲಿ ಕೆಲವು ಶಿವಗಣಗಳು ಖಡ್ಗದ ಪೆಟ್ಟನ್ನು ಸಹಿಸಲಾರದೆ ಪರಲೋಕ ಯಾತ್ರೆಯನ್ನು ಮಾಡಿದರು. ಮತ್ತೆ ಕೆಲವರು ಗದೆಗಳಿಂದ ನುಚ್ಚುನುಚ್ಚಾಗಿ ಮಾಡಲ್ಪಟ್ಟರು. ಈ ರೀತಿ ಸಾವಿರಾರು ಶಿವಗಣಗಳು ಇಂದ್ರಾದಿ ಲೋಕಪಾಲಕರಿಂದ ಸೋಲಿಸಲ್ಪಟ್ಟು ಪಲಾಯನ

ಗೈದರು. ಭೃಗು ಮಹರ್ಷಿಯು ದೇವತೆಗಳಿಗೂ, ದೀಕ್ಷಿತನಾದ ದಕ್ಷಬ್ರಹ್ಮನಿಗೂ ಸಂತೋಷವನ್ನುಂಟುಮಾಡಲೋಸುಗ ತನ್ನ ಮಂತ್ರಬಲದಿಂದ ಶಿವಕಿಂಕರರೆಲ್ಲರೂ ದಿಕ್ಕುಪಾಲಾಗಿ ಚದುರಿಹೋಗುವಂತೆ ಮಾಡಿದನು. ಆಗ ದೇವತೆಗಳು ಜಯವನ್ನು ಪಡೆದವರಾದರು. ಬಳಿಕ ವೀರಭದ್ರನು ತನ್ನ ಕಡೆಯವರ ಪರಾಜಯವನ್ನು ನೋಡಿ ಅತಿಯಾಗಿ ಕೋಪಗೊಂಡು, ಭೂತ ಪ್ರೇತ ಪಿಶಾಚಗಳನ್ನು ಹಿಂದು ಮಾಡಿಕೊಂಡು, ವೃಷಭಾರೂಢರನ್ನು ಮುಂದು ಮಾಡಿಕೊಂಡು, ತೀಕ್ಷ್ಣವಾದ ತ್ರಿಶೂಲದಿಂದ ದೇವತೆಗಳನ್ನೂ ಯಕ್ಷರನ್ನೂ, ರಾಕ್ಷಸರನ್ನೂ ಬಲವಾಗಿ ಹೊಡೆದನು. ಈ ಹೊಡೆತದಿಂದ ಕೆಲವರು ಎರಡು ಹೋಳುಗಳಾದರು. ಮತ್ತೆ ಕೆಲವರು ನುಚ್ಚುನುಚ್ಚಾದರು. ಇನ್ನು ಕೆಲವರು ರಕ್ತಪ್ರವಾಹದಲ್ಲಿ ಜ್ಞಾನವಿಲ್ಲದೆ ಹೊರಳಾಡುತ್ತಿದ್ದರು. ಸಾವಿರಾರು ಮಂದಿ ದೇವತೆಗಳು ಆ ಶೂಲಾಯುಧದ ಪೆಟ್ಟಿನಿಂದ ಭಿನ್ನಭಿನ್ನವಾದರು. ಅನೇಕರು ಅಸ್ಥಿಮಾತ್ರಾವಶಿಷ್ಟರಾದರು. ಕಳೆದುಳಿದಿದ್ದ ದೇವತೆಗಳೆಲ್ಲರೂ ಒಬ್ಬರನ್ನೊಬ್ಬರು ತಪ್ಪಿಕೊಂಡು ಪಲಾಯನ ಪರಾಯಣರಾಗಿ ಅಮರಾವತಿಯನ್ನು ಸೇರಿದರು. ಅನಂತರದಲ್ಲಿ ದೇವೇಂದ್ರನೂ, ಅಷ್ಟದಿಕ್ಪಾಲಕರೂ, ಬೃಹಸ್ಪತಿಯ ಬಳಿಗೆ ಬಂದು, ತಮಗೆ ಜಯವಾಗುವುದೋ ಇಲ್ಲವೋ ಎಂದು ಕೇಳಿದರು.

ದೇವತೆಗಳ ಬಿನ್ನಪವನ್ನು ಕೇಳಿದ ಬೃಹಸ್ಪತಿಯು ದೇವೇಂದ್ರನನ್ನು ಕುರಿತು 'ಅಯ್ಯಾ ಇಂದ್ರನೇ! ಹಿಂದೆ ಆ ಮಹಾವಿಷ್ಣುವು ಹೇಗೆ ಹೇಳಿದನೋ ಹಾಗೆಯೇ ಪರಿಣಮಿಸಿರುವುದು. ಕೇಳು, ಫಲರೂಪವಾದ ಕರ್ಮಗಳಿಗೆ ಈಶ್ವರನೇ ಕರ್ತೃವಾಗಿರುವನು. ಮನುಷ್ಯನು ಆ ಕರ್ತೃವನ್ನೇ ಭಜಿಸಬೇಕಲ್ಲದೆ, ಅನ್ಯರನ್ನು ಭಜಿಸಿದರೆ ಏನು ಫಲವಾದೀತು? ಈಶ್ವರನನ್ನು ಬಿಟ್ಟು ಯಾವ ಮಂತ್ರತಂತ್ರಗಳೇ ಆಗಲಿ, ಔಷಧಿಗಳೇ ಆಗಲಿ, ಕರ್ಮಗಳೇ ಆಗಲಿ, ಕೊನೆಗೆ ವೇದಗಳೇ ಆಗಲಿ ಇಲ್ಲವೇ ಇಲ್ಲವು. ಅಂಥ ಈಶ್ವರನನ್ನು ಮನು

ಷ್ಯನು, ಅನನ್ಯವಾದ ಭಕ್ತಿಯಿಂದಲೂ, ಜ್ಞಾನದಿಂದಲೂ ಭಜಿಸಿ, ಸ್ತುತಿಸಿ ಸಂತೋಷಪಡಿಸಿ ನೋಡಬೇಕಲ್ಲದೆ ಮತ್ತೆ ಬೇರೆ ವಿಧದಿಂದ ನೋಡಲಾಗುವುದಿಲ್ಲ. ಈಗ ದಕ್ಷನಾದರೋ ಶಿವನಿಗೆ ದ್ವೇಷಿಯಾಗಿರುವನು, ಆ ಶಿವದ್ವೇಷಿಯ ಪಕ್ಷವನ್ನು ನೀವು ವಹಿಸಿರುವಿರಿ. ಎಲೈ ಇಂದ್ರನೇ! ಸುಖ ದುಃಖಾತ್ಮಕವಾದ ಈ ಪ್ರಪಂಚವು ಆ ಪರಶಿವನಿಂದಲೇ ಆಗಿರುವುದು. ಹೆಚ್ಚೇನು ಹೇಳಲಿ! ನೀವು ನನ್ನನ್ನು ಕೇಳಿದ್ದರಿಂದ ಹೇಳುವೆನು. ಕೇಳು, ನೀನು ಚಪಲ ಬುದ್ಧಿಯುಳ್ಳವನು. ಶುದ್ಧ ಹುಡುಗರಂತೆ ಬಾಲ ಚೇಷ್ಟೆಗಳನ್ನು ಮಾಡುವವನು. ನಿನಗೆ ಸ್ವಲ್ಪವೂ ಬುದ್ಧಿಯಿಲ್ಲ. ಯುಕ್ತಾಯುಕ್ತ ವಿವೇಚನೆಯು ಎಳ್ಳಷ್ಟಾದರೂ ಇಲ್ಲ. ಇದು ಮಾಡತಕ್ಕಕಾರ್ಯ, ಇದು ಅಕಾರ್ಯವೆಂಬುದನ್ನೇ ತಿಳಿಯದೆ ಮನಸ್ಸು ಬಂದ ಹಾಗೆ ಕುಣಿದಾಡುವೆ. ಈ ಶಿವಕಿಂಕರರಾದರೋ ಶಿವಕೋಪ ಸಂಭೂತರು, ಮಹಾ ಪರಾಕ್ರಮ ಶಾಲಿಗಳು. ನಿಮ್ಮೆಲ್ಲರನ್ನೂ ಸುಳಿವಿಲ್ಲದೆ ನಾಶ ಮಾಡುವರು. ಇದನ್ನು ಚೆನ್ನಾಗಿ ತಿಳಿ. ಎಲೆವೋ ಇಂದ್ರನೇ ! ನೀನು ಈ ಅಷ್ಟದಿಕ್ಪಾಲಕರಿಂದ ಕೂಡಿಕೊಂಡು ಶಿವಕಿಂಕರರನ್ನು ಜಯಿಸಲು ಸಮರ್ಥನಾಗಿರುವೆಯಾ? ಯೋಚಿಸು, ನೀನೇ ನಾಶವಾಗುವೆ. ಇದನ್ನು ಚೆನ್ನಾಗಿ ತಿಳಿಯುವವನಾಗು' ಎಂದು ನುಡಿದನು. ಬೃಹಸ್ಪತಿಯ ಮಾತುಗಳನ್ನು ಕೇಳಿ ದೇವತೆಗಳೆಲ್ಲರೂ ಅತಿ ಚಿಂತಾನ್ವಿತರಾದರು. ಆಗಲಾ ವೀರಭದ್ರನು ಭಯಂಕರವಾಗಿ ಘರ್ಜಿಸುತ್ತಾ ಇಂದ್ರಾದಿ ದೇವತೆಗಳನ್ನು ಕುರಿತು "ಎಲೆವೋ ಇಂದ್ರನೇ! ನೀನು ಕೇವಲ ಬಾಲಕನಂತೆ, ಈ ಅಷ್ಟದಿಕ್ಪಾಲಕರೊಡಗೂಡಿ ಈ ದುರಾತ್ಮನಾದ ದಕ್ಷನ ಪಕ್ಷವನ್ನವಲಂಬಿಸಿ ನನ್ನೊಡನೆ ಯುದ್ಧ ಮಾಡಲು ಬಂದಿರುವಿಯಲ್ಲವೆ? ಇದಿಕೋ! ನಿಮ್ಮೆಲ್ಲರಿಗೂ ಅರ್ಹವಾದ ಆಹುತಿಯನ್ನು ಕೊಡುವೆನು ತೆಗೆದುಕೊಳ್ಳಿರಿ" ಎಂದು ಹೇಳಿ ಹರಿತವಾದ ಬಾಣಗಳ ಮಳೆಯನ್ನು ಸುರಿಸಿದನು. ಈ ಬಾಣಗಳ ಹೊಡೆತವನ್ನು ತಾಳಲಾರದೆ ದೇವೇಂದ್ರನೇ ಮೊದಲಾದ ದೇವತೆಗಳೆಲ್ಲರೂ

ದಿಕ್ಕು ದಿಕ್ಕಿಗೂ ಓಡಿ ಹೋದರು. ಇಂದ್ರಾದಿ ದೇವತೆಗಳು ಹೊರಟುಹೋಗಲು ವೀರನಾದ ವೀರಭದ್ರನು ಸಮಸ್ತ ಶಿವಗಣಗಳಿಂದೊಡಗೂಡಿದವನಾಗಿ ಆ ದುರಾತ್ಮನಾದ ದಕ್ಷಬ್ರಹ್ಮನ ಯಜ್ಞಶಾಲೆಗೆ ಬಂದನು. ಆಗ ಯಜ್ಞಶಾಲೆಯಲ್ಲಿದ್ದ ಋಷಿಗಳೆಲ್ಲರೂ ಮಹಾ ವಿಷ್ಣುವನ್ನು ಕುರಿತು 'ಎಲೈ ಯಜ್ಞ ಸ್ವರೂಪಿಯಾದ ಮಹಾ ವಿಷ್ಣುವೇ! ಈ ದಕ್ಷನ ಯಾಗವನ್ನು ಸಂರಕ್ಷಿಸು ದಯೆ ತೋರು!' ಎಂದು ಬೇಡಿಕೊಂಡರು. ಇಂತು ಪ್ರಾರ್ಥಿಸಿದ ಋಷಿಗಳ ಮಾತುಗಳನ್ನು ಕೇಳಿ ಆಧ್ಯಾತ್ಮ ದೀಪಕನಾದ ಜನಾರ್ದನನು ಪರಾಕ್ರಮ ಶಾಲಿಯಾದ ವೀರಭದ್ರನೊಡನೆ ಯುದ್ಧಮಾಡಲು ಸಿದ್ಧನಾದನು. ಆಗತಾ ವೀರಭದ್ರನು ಮಧುಸೂದನನನ್ನು ಕುರಿತು 'ಎಲೈ ಮಹಾತ್ಮನಾದ ಮಧುಸೂದನನೇ! ದುರಾತ್ಮನಾದ ಈ ದಕ್ಷಬ್ರಹ್ಮನ ಯಾಗಶಾಲೆಗೆ ನೀನು ಹೇಗೆ ತಾನೆ ಬಂದೆ? ಇದು ನಿನಗೆ ಸೂಕ್ತವಾಗಿ ತೋರುವುದೆ? ಎಲೈ ವಿಷ್ಣುವೇ! ನೀನು ಹೇಗೊ ಶಿವನೂ ಹಾಗೆಯೇ ಅಲ್ಲವೆ? ಆದರೂ ಯಜ್ಞಭೋಕ್ತೃವೂ, ಯಜ್ಞಸ್ವರೂಪನೂ, ಯಜ್ಞಕರ್ತೃವೂ, ಪೂಜನೀಯನೂ ಆದ ಪರಶಿವನ ದ್ವೇಷಿಯೆನಿಸಿದ ಈ ದುಷ್ಟದಕ್ಷನ ಯಜ್ಞಶಾಲೆಗೆ ನೀನು ಬಂದಿರುವುದನ್ನು ನೋಡಿದರೆ ನನಗೆ ಬಹಳ ಆಶ್ಚರ್ಯವಾಗುವುದು. ನೀನು ಶಿವದ್ವೇಷಿಯಲ್ಲಿ ಪಕ್ಷಪಾತವನ್ನೂ, ಶಿವನಲ್ಲಿ ಭೇದಬುದ್ಧಿಯನ್ನೂ ತೋರಿಸಿರುವೆಯಾದುದರಿಂದ ನಿನ್ನೊಡನೆ ಯುದ್ಧಮಾಡಲು ಇಷ್ಟವುಳ್ಳವನಾಗಿರುತ್ತೇನೆ. ಎಂದು ನುಡಿದನು. ಬುದ್ಧಿಶಾಲಿಯಾದ ವೀರಭದ್ರನ ನುಡಿಗಳನ್ನು ಕೇಳಿ ವಿಷ್ಣುವು, 'ಎಲೈ ವೀರಭದ್ರನೆ! ನೀನು ರುದ್ರ ತೇಜಸ್ಸಿನಿಂದ ಹುಟ್ಟಿರುವೆಯಲ್ಲದೆ, ಮಹಾ ಬುದ್ಧಿಶಾಲಿಯಾಗಿಯೂ, ಪವಿತ್ರನಾಗಿಯೂ ಇರುವೆ. ಎಲೈ ವೀರನೇ! ಈ ದಕ್ಷಬ್ರಹ್ಮನು ಯಜ್ಞಕ್ಕಾಗಿ ನನ್ನನ್ನನೇಕ ಸಲ ಪ್ರಾರ್ಥಿಸಿದನು. ಈಶ್ವರನು ಹೇಗೆ ಭಕ್ತಪರಾಧೀನನೋ, ನಾನೂ ಹಾಗೆಯೇ ಎಂಬುದರಲ್ಲಿ ಸಂಶಯವಿಲ್ಲ. ಭಕ್ತಪರಾಧೀನನಾದ ನಾನು, ಭಕ್ತನಾದ ದಕ್ಷಬ್ರಹ್ಮನ ಪ್ರಾರ್ಥನೆಗೊಳ

ಪಟ್ಟು ಇಲ್ಲಿಗೆ ಬಂದಿರುವೆನೇ ಹೊರತು ಮತ್ತೆ ಬೇರೆಯಲ್ಲ. ಈಗ ನೀನು ನನ್ನನ್ನಾದರೂ ಸೋಲಿಸು. ನಾನು ನಿನ್ನನ್ನಾದರೂ ಸೋಲಿಸುವೆನು, ಎಂದು ಹೇಳಿದನು. ಆಗಲಾ ವೀರಭದ್ರನು ನಸುನಗುತ್ತ ವಿಷ್ಣುವನ್ನು ನಮಸ್ಕರಿಸಿ, 'ಎಲೈ ದೇವದೇವನಾದ ಜನಾರ್ದನನೇ! ನನಗೆ ನೀನೂ ಶಂಕರನೂ ಒಂದೆ. ಶಿವಕಿಂಕರರಾದ ನಾವೆಲ್ಲರೂ ನಿನಗೂ ಸೇವಕರಾಗಿರುವೆವು. ಹೀಗಿರುವಲ್ಲಿ ನಿನ್ನೊಡನೆ ಯುದ್ಧ ಮಾಡುವುದು ಹೇಗೆ?' ಎನಲು ವಿಷ್ಣುವು 'ಎಲೈ! ವೀರಭದ್ರನೇ! ನಿಸ್ಸಂದೇಹವಾಗಿ ನನ್ನೊಡನೆ ಯುದ್ಧಮಾಡು. ನಿನ್ನ ಬಾಣಗಳಿಂದ ತುಂಬಿದ ದೇಹವುಳ್ಳ ನಾನು ನನ್ನ ವಾಸಸ್ಥಾನವಾದ ವೈಕುಂಠಕ್ಕೆ ತೆರಳುವೆನು' ಎಂದನು.

ಇಂತು ನುಡಿದ ಗೋವಿಂದನ ಮಾತುಗಳನ್ನು ಕೇಳಿ, ವೀರಭದ್ರನು ಹಾಗೆಯೇ ಆಗಲೆಂದು ಸಿಂಹನಾದವನ್ನು ಮಾಡುತ್ತ ತೀಕ್ಷ್ಣವಾದ ಬಾಣಗಳನ್ನು ಪ್ರಯೋಗಿಸಲು ಸಿದ್ಧನಾದನು. ಪರಮಾತ್ಮನಾದ ಮಹಾ ವಿಷ್ಣುವೂ, ಅದ್ಭುತವಾದ ಶಂಖಧ್ವನಿಯನ್ನು ಮಾಡಿದನು. ವಿಷ್ಣುವಿನ ಶಂಖನಾದವನ್ನು ಕೇಳಿ, ದಿಕ್ಕುದಿಕ್ಕುಗಳಿಗೂ ಓಡಿಹೋಗಿದ್ದ ಇಂದ್ರಾದಿದೇವತೆಗಳು ಯುದ್ಧರಂಗಕ್ಕೆ ಬಂದು ವ್ಯೂಹವನ್ನು ಕಟ್ಟಿದರು. ಆಗ ಇಂದ್ರನಿಗೂ, ನಂದಿಗೂ ಘೋರ ಯುದ್ಧವು ನಡೆಯಿತು. ನಂದಿಯು ಶೂಲಾಯುಧದಿಂದ ಇಂದ್ರನ ಸ್ತನಪ್ರದೇಶದಲ್ಲಿ ಹೊಡೆದನು. ಇಂದ್ರನೂ, ವಜ್ರಾಯುಧದಿಂದ ನಂದಿಯ ತಲೆಯನ್ನೊಡೆದನು. ಬಳಿಕ ಭೃಂಗಿಯು ವಾಯುವಿನೊಡನೆಯೂ, ಯಮನೊಡನೆ ಮಹಾಕಾಲನೂ, ಕುಬೇರನೊಡನೆ ಮುಂಡನೂ, ನೈರುತಿಯೊಡನೆ ಚಂಡನೂ ಘೋರ ಯುದ್ಧವನ್ನು ಮಾಡಿದರು. ಯೋಗಿನೀ ಚಕ್ರಗಳಿಗೆ ನಾಯಕನಾದ ಭೈರವನು ಶಾಕಿನಿ ಢಾಕಿನೀ ಗಣಗಳಿಂದಲೂ, ಭೂತಪ್ರಮಥ ಗಣಗಳಿಂದಲೂ ಕೂಡಿ ಆ ದೇವತೆಗಳನ್ನು ಸೀಳಿ ರಕ್ತಪಾನವನ್ನು ಮಾಡುತ್ತಲೂ, ಭಯಂಕರವಾಗಿ ಕೂಗುತ್ತಲೂ ಇದ್ದನು. ಆಗ ಇಂದ್ರನು ಈ ಅದ್ಭುತವನ್ನು

ಕಂಡು ಬಹಳವಾಗಿ ಕೋಪಗೊಂಡು, ನಂದಿಯೊಡನೆ ಯುದ್ಧ ಮಾಡುವುದನ್ನು ಬಿಟ್ಟು ವೀರಭದ್ರನಲ್ಲಿಗೆ ಒಂದು ತೀಕ್ಷ್ಣವಾದ ಬಾಣಗಳನ್ನೆಸೆದನು. ವೀರಭದ್ರನೂ ವಿಷ್ಣುವಿನೊಡನೆ ಯುದ್ಧವನ್ನು ಸಾಕುಮಾಡಿ ದೇವೇಂದ್ರನ ಮೇಲೆ ಬಾಣದ ಮಳೆಯನ್ನು ಸುರಿಸಲಾರಂಭಿಸಿದನು. ಆಗ ವೀರಭದ್ರನಿಗೂ ಇಂದ್ರನಿಗೂ, ಬುಧಾಂಗಾರಕರ ಯುದ್ಧದಂತೆ ಘೋರವಾದ ಯುದ್ಧವು ನಡೆಯಿತು. ಇಂದ್ರನು ರುದ್ರಕೋಪಸಂಭೂತನಾದ ವೀರಭದ್ರನನ್ನು ವಜ್ರಾಯುಧದಿಂದ ಬಲವಾಗಿ ಹೊಡೆದನು. ವೀರಭದ್ರನು ವಜ್ರಾಯುಧದ ಪೆಟ್ಟನ್ನು ತಪ್ಪಿಸಿಕೊಂಡು, ಆ ಇಂದ್ರನ ದೇಹವನ್ನು ಅನೇಕ ಬಾಣಗಳಿಂದ ತುಂಬಿಸಿದನು. ಇಂದ್ರನು ಆ ಬಾಣಗಳನ್ನೆಲ್ಲ ಖಂಡಿಸಿ ಮತ್ತೊಮ್ಮೆ ವಜ್ರಾಯುಧದಿಂದ ವೀರಭದ್ರನನ್ನು ತನ್ನ ಬಲವನ್ನೆಲ್ಲಾ ಬಿಟ್ಟು ಹೊಡೆದನು. ಆಗ ಮಹಾ ಕೋಪಿಷ್ಠನಾದ ವೀರಭದ್ರನು, ಆನೆಯಿಂದಲೂ, ವಜ್ರಾಯುಧದಿಂದಲೂ ಕೂಡಿದ ಇಂದ್ರನನ್ನು ನುಂಗಲು ಬಂದನು. ಆ ಸಮಯದಲ್ಲಿ ನೋಡುತ್ತಿದ್ದ ದೇವತೆಗಳೆಲ್ಲರೂ ಹಾಹಾಕಾರ ಮಾಡಿದರು. ದಿಗಂತರಗಳೆಲ್ಲವೂ ಈ ಹಾಹಾಕಾರದಿಂದ ತುಂಬಿದವು. ಈ ರೀತಿ ವೀರಭದ್ರನು ಇಂದ್ರನನ್ನು ಕೊಲ್ಲಲೋಸುಗ ಬರುತ್ತಿರುವುದನ್ನು ನೋಡಿದ ವಿಷ್ಣುವು, ಜಾಗ್ರತೆಯಾಗಿ ವೀರಭದ್ರನ ಮುಂದೆ ಬಂದು ನಿಂತನು. ವೀರಭದ್ರನಿಗೂ ವಿಷ್ಣುವಿಗೂ ಘೋರವಾದ ಯುದ್ಧವು ನಡೆಯಿತು. ವಿಷ್ಣುವು ಇಂದ್ರನನ್ನು ಹಿಂದುಹಾಕಿಕೊಂಡು ವೀರಭದ್ರನಮೇಲೆ ನಾನಾವಿಧವಾದ ಶಸ್ತ್ರಾಸ್ತ್ರಗಳನ್ನು ಪ್ರಯೋಗಿಸಿದನು. ವೀರಭದ್ರನು ಅವುಗಳನ್ನು ಕತ್ತರಿಸುತ್ತಿದ್ದನು. ಇತ್ತ ಯುದ್ಧವಿಶಾರದನಾದ ಇಂದ್ರನು ನಂದಿಯೊಡನೆ ದ್ವಂದ್ವಯುದ್ಧವನ್ನು ಮಾಡಲುಪಕ್ರಮಿಸಿದನು. ಆಗ ದೇವತೆಗಳೆಲ್ಲರೂ ಪ್ರಮಥಗಣಗಳೊಡನೆ ದ್ವಂದ್ವಯುದ್ಧ ಮಾಡಿದರು. ದೇವತೆಗಳು ದ್ವಂದ್ವ ಯುದ್ಧದಲ್ಲಿ ಪ್ರಮಥಗಣಗಳನ್ನೆಲ್ಲಾ ಸೋಲಿಸಿ ದಿಕ್ಕು ದಿಕ್ಕುಗಳಿಗೆ ಓಡಿಸಿದರು. ಪ್ರಮಥಗಣಗಳು ಪರಾಙ್ಮುಖರಾದುದನ್ನು ನೋಡಿದ ಸನ್ನಿಪಾತಾದಿ

ವ್ಯಾಧಿಗಳೆಲ್ಲವೂ ದೇವತೆಗಳನ್ನು ಮುತ್ತಿದವು. ವ್ಯಾಧಿಗಳ ಹಿಂಸೆಯನ್ನು ತಡೆಯಲಾರದೆ ದೇವತೆಗಳೆಲ್ಲರೂ ಪಲಾಯನಪರಾಯಣರಾದರು. ಬಳಿಕ ದೇವತೆಗಳು ಅಶ್ವಿನೀದೇವತೆಗಳನ್ನು ಕರೆದು ವ್ಯಾಧಿನಿವಾರಣೆಯನ್ನು ಮಾಡಿಕೊಂಡರು. ವ್ಯಾಧಿಗಳಿಂದ ಮುಕ್ತರಾದ ದೇವತೆಗಳು ಮರಳಿ ಯುದ್ಧರಂಗಕ್ಕೆ ಬಂದು ನಲವತ್ತೆಂಟು ಯೋಗಿನೀ ಚಕ್ರಗಳನ್ನು ಓಡಿಸಿ, ಮಹಾ ಭೈರವನನ್ನು ಬಹಳವಾಗಿ ಪೀಡಿಸಿದರು. ಆಗ ವೀರಭದ್ರನ ಸೈನ್ಯವು ನಾಶವಾಯಿತು. ನಾಶವಾದ ಸೈನ್ಯವನ್ನು ನೋಡಿದ ವೀರಭದ್ರನು ಕೋಪದಿಂದ ತೆರಳಿ, ವಿಷ್ಣುವನ್ನು ಕುರಿತು "ಎಲೈ ವಿಷ್ಣುವೇ ! ನೀನು ಶೂರನು. ದೇವತೆಗಳನ್ನು ಸಂರಕ್ಷಿಸುವವನು. ಹಾಗಿದ್ದಲ್ಲಿ ನನ್ನೊಡನೆ ಈಗ ಸರಿಯಾಗಿ ನಿಂತು ಯುದ್ಧಮಾಡು.' ಎಂದು ಹೇಳಿ ತೀಕ್ಷ್ಣವಾದ ಬಾಣವೃಷ್ಟಿಯನ್ನು ಸುರಿಸಿದನು. ವಿಷ್ಣುವು ಅದೆಲ್ಲವನ್ನೂ ಖಂಡಿಸಿ ತನ್ನ ಚಕ್ರವನ್ನು ವೀರನಾದ ವೀರಭದ್ರನಮೇಲೆ ಪ್ರಯೋಗಿಸಿದನು. ಅತ್ಯುಗ್ರವಾಗಿ ಬರುತ್ತಿರುವ ಚಕ್ರವನ್ನು ನೋಡಿದ ವೀರಭದ್ರನು ಅದನ್ನು ಲೀಲೆಯಿಂದ ಹಿಡಿದುಕೊಂಡನು. ಆಗ ವಿಷ್ಣುವು ಆ ಚಕ್ರವನ್ನು ಉಪಾಯವಾಗಿ ಕಸೆದುಕೊಂಡು ತನ್ನ ಘನವಾದ ವೈಕುಂಠಕ್ಕೆ ಹೊರಟುಹೋದನು. ಇಂತು ಅಸುರರಿಂದ ಜಯಿಸಲಸದಳನಾದ ವಿಷ್ಣುವು ಶಿವಕೋಪಸಂಭೂತನಾದ ವೀರಭದ್ರನಿಗೆ ಸೋತುಹೋದನು.

++++++

# ಅಧ್ಯಾಯ ೫.

## ದಕ್ಷ ಸಂಹಾರ ಮತ್ತು ಪುನರುಜ್ಜೀವನ.

ವಿಷ್ಣುವು ಸೋತು ಹೊರಟುಹೋಗಲು, ಶಿವಗಣಗಳು ಯಜ್ಞದಿಂದಲೇ ಹೊಟ್ಟೆ ಹೊರೆದುಕೊಳ್ಳುತ್ತಿರುವ ದೇವತೆಗಳನ್ನೆಲ್ಲಾ ಕ್ಷಣ

ಪಾತ್ರದಲ್ಲಿಯೇ, ಸೋಲಿಸಿ ಓಡಿಸಿದರು. ದಕ್ಷನಿಗೆ ಬೆಂಬಲವನ್ನು ಕೊಡುತ್ತಿದ್ದ ಭೃಗುಮಹರ್ಷಿಯನ್ನು ಸದೆಬಡಿದು ಅವನ ಗಡ್ಡವನ್ನು ತಿರುವಿದರು; ಬ್ರಾಹ್ಮಣರೆಲ್ಲರನ್ನೂ ಹೊಡೆದೋಡಿಸಿದರು; ಪೂಷಾ ಮತ್ತು ಸ್ವಧಾ ದೇವತೆಗಳನ್ನೂ, ಋಷಿಗಳನ್ನೂ ಅಸಹ್ಯವಾಗಿ ಅಣಕಿಸಿದರು; ಅನೇಕ ಶಿವಗಣಗಳು ಆ ದುರುಳ ದಕ್ಷನು ಮಾಡುತ್ತಿದ್ದ ಯಜ್ಞಕುಂಡದಲ್ಲಿ ಅಮೇಧ್ಯಾದಿ ಅಸಹ್ಯ ಪದಾರ್ಥಗಳನ್ನು ಸುರಿದು ಅಪವಿತ್ರವನ್ನಾಗಿ ಮಾಡಿದರು. ಆಗ ದಕ್ಷಬ್ರಹ್ಮನು ಇದೆಲ್ಲವನ್ನೂ ನೋಡಿ ಮಹಾ ಭಯದಿಂದ, ಒಳಗೆಹೋಗಿ ಅವಿತುಕೊಂಡಿದ್ದನು. ಇದನ್ನರಿತು ವೀರಭದ್ರನು ಅವನ ಕಪಾಳವನ್ನು ಹಿಡಿದೆಳೆದುಕೊಂಡುಬಂದು ತೀಕ್ಷ್ಣವಾದ ಖಡ್ಗದಿಂದ ಅವನ ತಲೆಯನ್ನು ಕತ್ತರಿಸಿದನು. ಹಾಗೆ ಕತ್ತರಿಸಿದರೂ ಕೆಳಗೆಬೀಳದೇ ಇರುವುದನ್ನು ನೋಡಿ, ಬಲಶಾಲಿಯಾದ ವೀರಭದ್ರನು ಕಾಲುಗಳನ್ನು ಆ ದುಷ್ಟದಕ್ಷನ ಟೊಂಕದಮೇಲೆ ಅಮುಕಿಕೊಂಡು, ಎರಡು ಕೈಗಳಿಂದಲೂ ಅವನ ತಲೆಯನ್ನು ಬಲಾತ್ಕಾರವಾಗಿ ತಿರುವಿ ತೆಗೆದನು. ಬಳಿಕ ಆ ದುರಾತ್ಮನ ತಲೆಯನ್ನು ಯಜ್ಞಕುಂಡದಲ್ಲಿಹಾಕಿ ಚೆನ್ನಾಗಿ ಸುಟ್ಟುಬಿಟ್ಟನು. ಆಗ ಅಲ್ಲಿದ್ದ ಋಷಿಗಳೂ, ಪಿತೃದೇವತೆಗಳೂ ಶಿವಗಣಗಳಿಂದ ಪೀಡಿತರಾಗಿ ಓಡಿಹೋದರು. ನಕ್ಷತ್ರಗಳೂ ಚಂದ್ರನೂ ಈ ಕೃತ್ಯಗಳನ್ನು ನೋಡಿ ಗಡಗಡನೆ ನಡುಗಿದರು. ಬ್ರಹ್ಮನಾದರೋ ಪುತ್ರಶೋಕದಿಂದ ಶಾಂತಿಯಿಲ್ಲದೆ ಸತ್ಯಲೋಕಕ್ಕೆ ತೆರಳಿದನು. ಬಳಿಕ ತನ್ನ ಮಗನನ್ನುಳುಹಲು ಏನುಮಾಡಬೇಕೆಂದು ಬಹಳವಾಗಿ ಚಿಂತಿಸಿದ ಬ್ರಹ್ಮನು, ಪರಶಿವನಲ್ಲಿ ಪ್ರಾರ್ಥಿಸಲು ಮನಸ್ಸುಮಾಡಿದನು. ಅನಂತರದಲ್ಲಿ ಸಕಲರಾದದೇವತೆಗಳಿಂದ ಸಮೇತನಾಗಿ ವೇದಾಂತಗೋಚರನಾದ ಪರಶಿವಮೂರ್ತಿಯನ್ನು ನೋಡಿ, ಶೀಘ್ರವಾಗಿ ಆತನ ಪಾದಕಮಲಗಳಿಗೆರಗಿ, ಕ್ಷಮಾಪಣೆಯನ್ನು ಕೇಳಿಕೊಂಡು ಸ್ತುತಿಸಲಾರಂಭಿಸಿದನದೆಂತೆನೆ:

'ಎಲೈ ಪರಶಿವನೇ ! ಪರಬ್ರಹ್ಮಸ್ವರೂಪನೂ, ಶಾಂತನೂ, ರುದ್ರನೂ ಆದನಿನಗೆ ನಮಸ್ಕಾರವು. ದೇವಾ ! ಈ ಬ್ರಹ್ಮಾಂಡವನ್ನು

ಸೃಜಿಸುವ ನನ್ನನ್ನೂ ನೀನೆಯಲ್ಲವೆ ಸೃಜಿಸಿದ್ದು ! ಪ್ರಪಿತಾಮಹನೂ, ದಾತೃವೂ ನೀನೆಯಲ್ಲವೆ? ದೇವಾ ! ನೀಲಕಂಠನಾಗಿಯೂ, ವೇದಸ್ವ ರೂಪನಾಗಿಯೂ, ವಿಶ್ವವೇ ನೀನಾಗಿಯೂ, ಆದಿಕಾರಣನಾಗಿರು ವವನೂ ನೀನೆ! ಪ್ರಪಂಚಕ್ಕೆ ಆನಂದದಾತನೂ ನೀನೆ ! ನೀನೆ ಅನಾಥ ರಕ್ಷಕನು ! ಓಂಕಾರವೂ, ವಷಟ್ಕಾರವೂ ನೀನೆ! ಯಜ್ಞವೂ, ಯಜ್ಞ ಕರ್ಮಸ್ವರೂಪನೂ, ಯಜ್ಞಪ್ರವರ್ತಕನೂ ನೀನೆ ! ಯಜ್ಞಪರಿಪಾ ಲಕನೂ, ಯಜ್ಞಭೋಕ್ತೃವೂ ನೀನೆ ! ಅಂತಹ ನಿನಗೆ ಅನಂತ ವಂದ ನೆಗಳು ! ದೇವ !! ಸಕಲ ಚರಾಚರ ಪ್ರಾಣಿಗಳ ಶರಣ್ಯನೂ ನೀನೇ ಆಗಿರುವೆ ! ಎಲೈ ಪ್ರಭುವೇ !! ಪುತ್ರಶೋಕದಿಂದ ಸಂತಪ್ತನಾಗಿರು ವೆನು ! ನಿನ್ನನ್ನು ಬಿಟ್ಟರೆ ನನಗೆ ಮತ್ತಾರೂ ರಕ್ಷಕರಿಲ್ಲವು. ಕಾಪಾಡು ಕಾಪಾಡು !!' ಎಂದು ಬಹಳವಾಗಿ ಪ್ರಾರ್ಥಿಸಿದ ಬ್ರಹ್ಮನನ್ನು ಕುರಿ ತು ಶಂಕರನು ನುಡಿದನು. 'ಎಲೈ ಬ್ರಹ್ಮನೇ ! ದಕ್ಷಬ್ರಹ್ಮನ ಯಾಗ ಧ್ವಂಸವನ್ನು ಮಾಡಿದವನು ನಾನಲ್ಲ. ಇದನ್ನು ಚೆನ್ನಾಗಿತಿಳಿ. ತಾನು ಮಾಡಿದ ಅಕಾರ್ಯದಿಂದಲೇ ದಕ್ಷನು ಹತನಾದನೇ ಹೊರತು ಮತ್ತೆ ಬೇರೆಯಲ್ಲ. ಯಾವಾಗಲೇ ಆಗಲಿ ಇತರರಿಗೆ ದುಃಖವನ್ನುಂಟುಮಾ ಡುವಂತಹ ಕೆಲಸವನ್ನು ಮಾಡಬಾರದು. ಹಾಗೆಮಾಡಿದಲ್ಲಿ ಕ್ಲೇಶ ವನ್ನನುಭವಿಸಿದವನ ಚಿತ್ತವು ಎಷ್ಟು ತವಕಪಡುವುದೋ, ಅಂತಹ ಕೆಲಸವನ್ನು ಮಾಡಿದವನು ಅಷ್ಟೇ ತವಕವನ್ನು ಅನುಭವಿಸುತ್ತಾ ನೆಂಬುದರಲ್ಲಿ ಸಂಶಯವಿಲ್ಲ.' ಎಂದುಹೇಳಿ ಲೋಕಶರಣ್ಯನಾದ ಶಂ ಕರನು ಬ್ರಹ್ಮಾದಿದೇವತೆಗಳಿಂದ ಕೂಡಿದವನಾಗಿ ಆ ದುರುಳ ದಕ್ಷನ ಯಾಗ ಮಂಟಪಕ್ಕೆ ಬಂದನು. ಅಲ್ಲಿಯಾದರೋ, ಮಹಾ ಬುದ್ಧಿ ಶಾಲಿಯಾದ ಭೃಗುಮಹರ್ಷಿಯೂ, ಸ್ವಾಹಾ, ಸ್ವಧಾ, ಪೂಷಾದೇವ ತೆಗಳು ವೀರಭದ್ರನಿಂದ ಘಾತಿಸಲ್ಪಟ್ಟು ಕೊರಗುತ್ತಿದ್ದರು. ಪಿತೃ ದೇವತೆಗಳೂ ಮರಗುತ್ತಿದ್ದರು. ಅನೇಕ ದೇವತೆಗಳು ಸತ್ತುಬಿದ್ದಿ ದ್ದರು. ಇವನ್ನೆಲ್ಲವನ್ನೂನೋಡಿ ಶಂಕರನು ಅತಿಯಾಗಿ ಕರುಣೆಗೊಂ ಡನು. ಬಳಿಕ ವೀರಭದ್ರನು ಶಂಕರನನ್ನು ವಂದಿಸಿ ಮುಂದೆನಿಂತನು. ಶಂಭುವು ವೀರಭದ್ರನನ್ನು ಕುರಿತು 'ಎಲೈ ವೀರಭದ್ರನೇ ! ದುಷ್ಕೃ

ತ್ಯವನ್ನು ಮಾಡಿದವನ ಪರಿಣಾಮವಿದು. ಚಿಂತೆಯಿಲ್ಲ. ಯಾವನು ಅನಾಚಾರವನ್ನಾಚರಿಸಿದನೋ ಆ ದಕ್ಷಬ್ರಹ್ಮನನ್ನು ಇಲ್ಲಿ ಕರೆದುಕೊಂಡುಬಾ'' ಎಂದು ಹೇಳಲು ವೀರಭದ್ರನು ಆ ದಕ್ಷನ ಕಬಂಧವನ್ನು ತಂದು ಶಂಕರನಮುಂದೆ ಹಾಕಿದನು. ಶಂಕರನು ದಕ್ಷನ ಕಬಂಧವನ್ನು ನೋಡಿ 'ಈ ದುರಾತ್ಮನ ತಲೆಯನ್ನಾರು ತೆಗೆದುಕೊಂಡುಹೋದರು? ಅದನ್ನೀಗಲೆ ತೆಗೆದುಕೊಂಡುಬನ್ನಿರಿ. ಇವನು ದುಷ್ಟನಾದರೂ ಕುಟಿಲಬುದ್ಧಿಯುಳ್ಳವನಾದರೂ ಇವನಿಗೆ ಪ್ರಾಣದಾನಮಾಡುವೆನು' ಎಂದನು. ಆಗಲಾ ವೀರಭದ್ರನು ಮುಂದೆ ಬಂದು ಶಂಕರನನ್ನು ವಂದಿಸಿ 'ದೇವಾ! ನಾನು ಈ ದುರುಳನ ತಲೆಯನ್ನು ಆಗಲೇ ದಹನಮಾಡಿದೆನು. ಈಗ ಯಾಗಪಶುವಿನತಲೆಯೊಂದುಳಿದಿರುವುದು'. ಎಂದು ನುಡಿಯಲು ಶಂಕರನು ಆ ಆಡಿನತಲೆಯನ್ನು ದಕ್ಷನ ಕಬಂಧದಮೇಲಿಟ್ಟು ಪ್ರಾಣವನ್ನು ತುಂಬಿದನು. ಆಗ ದಕ್ಷನು ಶಂಕರನ ಪ್ರಸಾದದಿಂದ ಜೀವಿತವನ್ನು ಹೊಂದಿದನು. ಬಳಿಕ ದಕ್ಷಬ್ರಹ್ಮನು ಶಂಕರನನ್ನು ನೋಡಿ, ಅತಿಯಾಗಿ ಲಜ್ಜೆಗೊಂಡು, ಸಾಷ್ಟಾಂಗ ದಂಡಪ್ರಣಾಮವನ್ನು ಮಾಡಿ ಸ್ತುತಿಸಲಾರಂಭಿಸಿದನು. 'ದೇವದೇವನಾಗಿಯೂ, ಶಾಶ್ವತನಾಗಿಯೂ, ವರಪ್ರದಾತನಾಗಿಯೂ ಇರುವ ಶಂಕರನೇ! ನಿನಗೆ ನಮಸ್ಕಾರವು. ದೇವಾ! ನೀನೇ ವಿಶ್ವರೂಪನು! ಜಗದ್ವಂದ್ಯನು! ಪರಬ್ರಹ್ಮ ಮೂರ್ತಿಯೂ, ಆತ್ಮಸ್ವರೂಪನೂ ನೀನೆ! ನೀನೇ ವಿಶ್ವೇಶ್ವರನು! ಅನಂತನೂ, ಅನಂತಕೋಟಿ ಬ್ರಹ್ಮಾಂಡನಾಯಕನೂ ನೀನೆ! ನಿನಗೆ ಅನಂತವಂದನೆಗಳು.' ಎಂದು ಸ್ತುತಿಸಿದ ದಕ್ಷನನ್ನು ನೋಡಿ ಶಂಕರನು ನಸುನಗುತ್ತಾ ನುಡಿದನು. 'ಎಲೈ ದಕ್ಷಬ್ರಹ್ಮನೇ! ಕೇಳು ಈ ಪ್ರಪಂಚದಲ್ಲಿ, ''ರೋಗಿ, ಜಿಜ್ಞಾಸಿ ಧನಾಭಿಲಾಷಿ ಮತ್ತು ಜ್ಞಾನಿ'' ಎಂಬೀನಾಲ್ವರೂ ನನ್ನನ್ನು ಭಜಿಸುವರು. ಇವರಲ್ಲಿ ಜ್ಞಾನಿಯೇ ನನಗೆ ಹಿತಕರನು. ಜ್ಞಾನವನ್ನು ಬಿಟ್ಟು ನನ್ನನ್ನು ಹೊಂದಲು ಯಾರಿಂದಲೂ ಆಗಲಾರದು. ಬುದ್ಧಿಹೀನರು ಜ್ಞಾನವನ್ನು ತೊರೆದು ನನ್ನನ್ನು ಸೇರಲು ಯತ್ನಿಸುತ್ತಾರೆ. ಇದು ಅಸಾಧ್ಯವೇಸರಿ. ಎಲೈ ದಕ್ಷಬ್ರಹ್ಮನೇ! ನೀನು ಕೇವಲ ಕರ್ಮಗ

ಳನ್ನಾಚರಿಸುವುದರಿಂದ ಭವಸಾಗರವನ್ನು ದಾಟಲಿಚ್ಛಿಸುವೆ. ಇದು ಶುದ್ಧತಪ್ಪು. ಕೇಳು, ವೇದಗಳಿಂದಾಗಲಿ, ದಾನಗಳಿಂದಾಗಲಿ, ಯಜ್ಞಗಳಿಂದಾಗಲಿ; ಅಥವಾ ತಪಸ್ಸಿನಿಂದಲೇ ಆಗಲಿ ನರನು ನನ್ನನ್ನು ಹೊಂದಲಾಗುವುದಿಲ್ಲ. ಆದುದರಿಂದ ನೀನು ಕೇವಲ ಜ್ಞಾನಪರನಾಗಿ ಕರ್ಮವನ್ನಾಚರಿಸು. ಅದರಿಂದ ನಿನಗೆ ಮಂಗಳವುಂಟಾಗುವುದು.'' ಎಂದನು. ಎಲೈ ಋಷಿಗಳಿರಾ! ದಕ್ಷನಿಗೆ ಶಂಕರನೀರೀತಿ ಉಪದೇಶಮಾಡಿ ಕೈಲಾಸಕ್ಕೆ ತೆರಳಿದನು. ಬಳಿಕ ಬ್ರಹ್ಮನು ಭೃಗುವೇಮೊದಲಾದ ಋಷಿಗಳೆಲ್ಲರಿಗೂ ಜ್ಞಾನಮಾರ್ಗವನ್ನುಪದೇಶಿಸಿ ಸತ್ಯಲೋಕಕ್ಕೆ ತೆರಳಿದನು. ದಕ್ಷಬ್ರಹ್ಮನಾದರೋ ಶಿವನ ಉಪದೇಶಮಾತ್ರದಿಂದಲೇ ಅಪಾರವಾದ ಜ್ಞಾನವನ್ನುಹೊಂದಿ ಶಂಕರನನ್ನು ಕುರಿತು ಮಹತ್ತರವಾದ ತಪಸ್ಸನ್ನಾಚರಿಸಿದನು.

ಕೇಳಿರೈ ಋಷಿಗಳಿರಾ! ಶಿವನನ್ನು ಪೂಜಿಸಿದನರನಿಗೆ ಪುನರ್ಜನ್ಮವೇ ಇರುವುದಿಲ್ಲ. ಶಿವದೇವಾಲಯಗಳಲ್ಲಿ ಶುಭ್ರವಾಗಿ ಸಾರಿಸಿದ ಮನುಷ್ಯನು ಕೈಲಾಸವನ್ನು ಸೇರಿ, ಜಗತ್ಪೂಜ್ಯನಾಗುವನು. ಯಾವ ನರನು ಶಿವಪ್ರೀತ್ಯರ್ಥವಾಗಿ ಕನ್ನಡಿಯನ್ನರ್ಪಿಸುವನೋ ಅಂತಹವನು ಶಿವಗಣಗಳಲ್ಲಿ ಪ್ರಮುಖನೆನಿಸುವನು. ಯಾವನಾದರೇ ಚಾಮರಗಳನ್ನು ಶಿವದೇವಾಲಯಗಳಲ್ಲರ್ಪಿಸುವನೋ, ಅಂತಹವನು ಮೂರು ಲೋಕಗಳಲ್ಲಿಯೂ ಚಾಮರಗಳಿಂದ ಬೀಸಿಸಿಕೊಳ್ಳುತ್ತಾನೆ. ಶಿವದೇವಾಲಯಗಳಲ್ಲಿ ದೀಪದಾನವನ್ನು ಮಾಡಿದವನು ಮೂರುಲೋಕಗಳನ್ನೂ ಬೆಳಗುವಂತಹ ತೇಜಸ್ವಿಯಾಗುವನು. ಧೂಪವನ್ನು ಸಮರ್ಪಿಸಿದವನು ಯಶಸ್ವಿಯಾಗಿ ಎರಡುಕುಲಗಳನ್ನುದ್ಧರಿಸುವನು. ಪರಶಿವನಿಗೆ ಭಕ್ತಿಯಿಂದ ನೈವೇದ್ಯವನ್ನರ್ಪಿಸಿದವನು ಅನೇಕ ಯಾಗಫಲಗಳನ್ನನುಭವಿಸುವನು. ಯಾರಾದರೆ ಜೀರ್ಣವಾದ ಶಿವಾಲಯವನ್ನು ಉದ್ಧರಿಸುತ್ತಾರೆಯೋ, ಅವರು ಈಫಲಗಳ ಎರಡರಷ್ಟು ಫಲಗಳನ್ನು ಹೊಂದುತ್ತಾರೆಂಬುದರಲ್ಲಿ ಸಂಶಯವಿಲ್ಲ; ಯಾರಾದರೆ ನೂತನವಾದ ಶಿವದೇವಾಲಯಗಳನ್ನು ಇಟ್ಟಿಗೆಗಳಿಂದಾಗಲಿ, ಕಲ್ಲುಗಳಿಂದಾಗಲಿಕಟ್ಟಿ

ಸುವರೋ, ಅಂತಹವರು ಎದುವರೆವಿಗೂ ಆ ದೇವಾಲಯಗಳು ಶುಭ್ರವಾಗಿರುತ್ತವೆಯೋ ಅದುವರೆಗೆ ಸ್ವರ್ಗವನ್ನನುಭವಿಸುವರು. ಯಾರಾದರೆ ಶಿವದೇವಾಲಯಗಳನ್ನು ಸುಣ್ಣದಿಂದ ತೊಳೆಯುವರೋ ಅಂತಹವರು, ತಾವೇ ಮಾಡಲಿ, ಅಥವಾ ಅನ್ಯರಿಂದ ಮಾಡಿಸಲಿ, ಸದ್ಗತಿಯನ್ನು ಹೊಂದುತ್ತಾರೆಂಬುದರಲ್ಲಿ ಸಂಶಯವಿಲ್ಲವು. ಯಾರಾದರೆ ಶಿವಾಲಯಗಳಲ್ಲಿ ಹಿತವಾದ ಶಬ್ದವನ್ನು ಕೊಡುವ ಘಂಟೆಯನ್ನು ಶಿವಪ್ರೀತ್ಯರ್ಥವಾಗಿ ಕಟ್ಟಿಸುವರೋ ಅಂತಹವರು ಮೂರುಲೋಕಗಳಲ್ಲಿಯೂ ತೇಜಸ್ವಿಗಳಾಗಿ ಸುಖವನ್ನು ಹೊಂದುವರು. ಯಾವನಾದರೆ ಶಿವಮೂರ್ತಿಯನ್ನು ದಿನಕ್ಕೆ ಒಂದು ಸಲವಾಗಲಿ, ಎರಡುಸಲವಾಗಲಿ, ಮೂರುಸಲವಾಗಲಿ ದರ್ಶನಮಾಡುತ್ತಾನೆಯೋ ಅಂತಹನು, ದರಿದ್ರನಾಗಿರಲಿ, ಧನವಂತನಾಗಿರಲಿ, ಸುಖದುಃಖಗಳಿಂದ ಬಿಡಲ್ಪಟ್ಟು ಕುಲಕೋಟಿಯನ್ನುದ್ಧರಿಸಿ ನಿತ್ಯ ಸುಖವನ್ನು ಪಡೆಯುವನು. ಇದಕ್ಕೊಂದುದಾಹರಣೆಯುಂಟು. ಹಿಂದೆ ಐಂದ್ರದ್ಯುಮ್ನನಿಗೂ, ಯಮನಿಗೂ ಸಂವಾದವಾಯಿತು. ಆಗ ಈ ವಿಷಯವು ವಿಮರ್ಶಿಸಲ್ಪಟ್ಟಿತು, ಕೇಳಿರಿ!

## ಇಂದ್ರಸೇನನ ಕಥೆ.

ಕೃತಯುಗದಲ್ಲಿ ಪ್ರತಿಷ್ಠಾನಗರದಲ್ಲಿ ದೊರೆಯಾದ ಇಂದ್ರಸೇನನೆಂಬೊಬ್ಬ ರಾಜನಿದ್ದನು. ಇವನು ಯಾವಾಗಲೂ ಬೇಟೆಯಾಡುವುದರಲ್ಲಿ ಆಸಕ್ತನಾಗಿದ್ದನು. ಬ್ರಹ್ಮದ್ವೇಷಿಯೂ, ಕ್ರೂರಿಯೂ ಆದ ಈ ಇಂದ್ರಸೇನನು ಎಲ್ಲರಿಗೂ ಭಯಂಕರನಾಗಿದ್ದನು. ಅನ್ಯರ ಪ್ರಾಣಗಳನ್ನು ಸುಲಿಯುವುದರಿಂದ ತನ್ನ ಪ್ರಾಣವನ್ನುಳುಹಿಕೊಳ್ಳುವವನೂ, ಪರಸ್ತ್ರೀ ಲಂಪಟನೂ, ಪರದ್ರವ್ಯಾಪಹಾರಿಯೂ, ಬ್ರಾಹ್ಮಣರನ್ನು ಘಾತಿಸುವುದರಲ್ಲಿ ಲೋಲುಪ್ತನೂ, ಹೆಂಡ ಕುಡುಕನೂ, ಸುವರ್ಣ ತಸ್ಕರನೂ, ಗುರುಪತ್ನೀಗಾಮಿಯೂ, ಭ್ರಷ್ಟನೂ ಆದ ಈ ಇಂದ್ರಸೇನನು ಬಹಳಕಾಲ ರಾಜ್ಯವನ್ನಾಳುತ್ತಿದ್ದನು. ಈ ರಾಜನಿಗೆ ತಕ್ಕ ಪರಿವಾರ ದೇವತೆಗಳಿದ್ದರು. ಇವರೆಲ್ಲರೂ ತಮ್ಮೊಡೆಯನು ಮಾಡುವ

ದುಶ್ಚೇಷ್ಟೆಗಳಿಗೆ ಸಹಾಯಭೂತರಾಗಿದ್ದರು. ಹೀಗಿರಲು ಇಂದ್ರಸೇನನು ದೈವವಶದಿಂದ ಮರಣವನ್ನು ಹೊಂದಿದನು. ಇಂದ್ರಸೇನನು ಮೃತಿಯನ್ನೈದಲು ಪಾಪಿಷ್ಠನಾದುದರಿಂದ ಯಮಕಿಂಕರರು ಇವನನ್ನು ಯಮನಲ್ಲಿಗೆ ಕರೆದೊಯ್ದರು. ಯಮನು ಈತನನ್ನು ಕಂಡೊಡನೆಯೆ, ಎದ್ದುನಿಂದು ಪರಶಿವನನ್ನು ವಂದಿಸಿ ತನ್ನ ಸೇವಕರನ್ನು ದಂಡಿಸಿದನು. ಬಳಿಕ ಧರ್ಮಿಷ್ಠನಾದ ಯಮಧರ್ಮನು ಇಂದ್ರಸೇನನನ್ನು ಕುರಿತು 'ಎಲೈ ಶಿವಭಕ್ತಶ್ರೇಷ್ಠನೇ! ನೀನು ಈ ನರಕದರ್ಶನವನ್ನೂ ಮಾಡಲರ್ಹನಲ್ಲ. ನೀನು ಮಹಾ ಪುಣ್ಯಶಾಲಿಯು. ಹೋಗು; ಹೋಗಿ, ಎದುವರೆವಿಗೂ ಸೂರ್ಯ ಚಂದ್ರರಿರುವರೋ, ಪಂಚಭೂತಗಳೂ ಸ್ವರ್ಗವೂ ಎದುವರೆವಿಗೂ ಇರುವವೋ ಅದುವರೆವಿಗೂ ಪುಣ್ಯೋತಮವಾದ ಲೋಕಗಳನ್ನನುಭವಿಸು.' ಎಂದನು. ಯಮನ ಮಾತುಗಳನ್ನು ಕೇಳಿ ಇಂದ್ರಸೇನನು 'ಅಯ್ಯಾ ಯಮಧರ್ಮನೇ! ಶಿವನಾರೆಂಬುದನ್ನು ನಾನರಿಯೆ. ಯಾವಾಗಲೂ ಬೇಟೆಯಾಡುವುದರಲ್ಲಾಸಕ್ತನಾಗಿದ್ದೆನು.' ಎಂದು ಹೇಳಿದನು. ಆಗ ಯಮನು 'ಅಯ್ಯಾ ರಾಜನೇ! ನೀನು ಯಾವಾಗಲೂ ಆ ಹರ ಪ್ರ ಹರಯೆಂಬ ಮಾತುಗಳನ್ನಾಡುತ್ತಲಿದ್ದೆ. ನೀನು ಆ ಕರ್ಮ ವಿಪಾಕದ ದೆಸೆಯಿಂದ ಪಾಪವಿಮುಕ್ತನಾದೆ. ಆದುದರಿಂದ ನೀನು ಕೈಲಾಸದಲ್ಲಿರುವ ಶಂಕರನ ಬಳಿಗೆ ಹೊರಡು' ಎಂದು ನುಡಿದನು. ಯಮನಿಂತು ನುಡಿಯುತ್ತಿರುವುದರಲ್ಲಿಯೇ, ಶಿವಸ್ವರೂಪಿಗಳಾದ ಶಿವಕಿಂಕರರು ಬಂದರು. ಶಿವಕಿಂಕರರನ್ನು ಯಮನು ಅರ್ಘ್ಯ ಪಾದ್ಯಾದಿಗಳಿಂದ ಸತ್ಕರಿಸಿದನು. ಆಗ ಶಿವಕಿಂಕರರು ಯಮನನ್ನು ಕುರಿತು 'ಅಯ್ಯಾ ಯಮನೇ! ಶಿವಭಕ್ತನಾದ ಈ ರಾಜಶ್ರೇಷ್ಠನು ನಿನ್ನ ಕಿಂಕರರಿಂದ ಹೇಗೆ ಒಯ್ಯಲ್ಪಟ್ಟನು?' ಎಂದಾಕ್ಷೇಪಿಸಿದರು. ಬಳಿಕ ಶಿವಕಿಂಕರರೆಲ್ಲರೂ ಇಂದ್ರಸೇನನನ್ನು ಶಿವನಿದ್ದೆಡೆಗೆ ಕರೆದುಕೊಂಡು ಹೋದರು. ಶಂಕರನಾದರೋ ಇಂದ್ರಸೇನನನ್ನು ಕಂಡು ಅತ್ಯಾದರದಿಂದ ಅವನನ್ನು ತಬ್ಬಿಕೊಂಡು ಮುದ್ದಾಡಿದನು. ಬಳಿಕ ತನ್ನ ಪಕ್ಕದಲ್ಲಿ ಕುಳ್ಳಿರಿಸಿಕೊಂಡು 'ಎಲೈ ರಾಜಶ್ರೇಷ್ಠನೇ! ನನ್ನ ಭಕ್ತರಲ್ಲಿ ನೀನೇ ಮುಖ್ಯನು!

ನಿನಗಾವ ವರವನ್ನೀಯಲಿ ? ಜಾಗ್ರತೆಯಾಗಿ ಕೇಳು' ಎಂದು ನುಡಿದ ಶಂಕರನ ನುಡಿಗಳನ್ನು ಕೇಳಿ ಇಂದ್ರಸೇನನು ಆನಂದಾಶ್ರುಗಳನ್ನು ಸುರಿಸುತ್ತಾ ಏನನ್ನೂ ಕೇಳಲಿಲ್ಲವು. ಆಗ ಶಂಕರನು ಇಂದ್ರಸೇನನಿಗೆ ಚಂಡನೆಂಬುದಾಗಿ ಹೆಸರಿಟ್ಟು ತನ್ನ ಪಾರ್ಷದನನ್ನಾಗಿ ಮಾಡಿದನು. ಅನಂತರದಲ್ಲಿ ಇಂದ್ರಸೇನನು ಮುಂಡನಪ್ರಿಯ ಸ್ನೇಹಿತನಾಗಿ ನಿತ್ಯ ಸುಖವನ್ನು ಹೊಂದುತಲಿದ್ದನು.

ಎಲೈ ಋಷಿಗಳಿರಾ ! ಪರಾತ್ಪರನಾದ ಶಂಕರನ ನಾಮೋಚ್ಚಾರಣಮಾತ್ರದಿಂದಲೇ, ಆ ದುರಾತ್ಮನಾದ ಇಂದ್ರಸೇನನು ಶಿವಸಾಯುಜ್ಯವನ್ನು ಹೊಂದಿದನು. ಹೀಗೆಯೇ ಅನೇಕ ಮನುಜರು ವ್ಯಾಜಾಂತರದಿಂದ 'ಹರಹರ, ನಾರಾಯಣ, ನಾರಾಯಣ' ಎಂಬ ಹರಿಹರರ ನಾಮಗಳನ್ನು ಉಚ್ಚರಿಸಿ ಸದ್ಗತಿಯನ್ನು ಪಡೆದಿರುವರು. ಆದುದರಿಂದೆಲೈ ಮುನಿಶ್ರೇಷ್ಠರೇ ! ಮೂರುಲೋಕಗಳಲ್ಲಿಯೂ ಪರಶಿವನಿಗಿಂತ ಬೇರೆ ದೈವವು ಕಾಣುವುದಿಲ್ಲವು. ಕೇವಲ ಭಕ್ತಿಯನ್ನವಲಂಬಿಸಿ, ಫಲಾಪೇಕ್ಷೆಯಿಲ್ಲದೆ ಯಾವ ಮನುಜನು ಒಂದು ಬಿಲ್ವದಳದಿಂದಾಗಲಿ, ಒಂದು ಫಲದಿಂದಾಗಲಿ, ಕಡೆಗೆ ಏನೂ ಇಲ್ಲದಿದ್ದರೆ, ನಿರ್ಮಲವಾದ ಉದಕದಿಂದಾಗಲಿ ಶಂಕರನನ್ನು ಅರ್ಕಪುಷ್ಪಗಳಿಂದಲೂ, ಕರವೀರ ಪುಷ್ಪಗಳಿಂದಲೂ ಪೂಜಿಸಬೇಕು. ಜಗತ್ತೆಲ್ಲವೂ ವಿಭೂತಿಮಯವಾಗಿರುವುದು. ವಿಭೂತಿಯು ಶಿವಾಲಯದ ಗುರುತಾಗಿರುವುದರಿಂದ ಎಲ್ಲರೂ ಅದನ್ನು ಧಾರಣೆಮಾಡಿಕೊಳ್ಳಬೇಕು. ಎಲೈ ಮುನಿಗಳಿರಾ ಇನ್ನು ತ್ರಿಪುಂಡ್ರದಲ್ಲಿನ ಮಹಿಮೆಯನ್ನು ಕೇಳಿರಿ.

ಒಂದಾನೊಂದು ಕಾಲದಲ್ಲಿ ಮಹಾ ಪಾಪಿಷ್ಠನಾದೊಬ್ಬ ಕಳ್ಳನು, ರಾಜಾಜ್ಞೆಯಿಂದ ಹತನಾದನು. ಆ ಕಳ್ಳನ ಶವವುಕೊಳೆಯಲಾರಂಭಿಸಲು ನಾಯಿಗಳು ತಿನ್ನಲು ಬಂದವು. ಶವವನ್ನು ತಿನ್ನಲು ಬಂದ ಒಂದು ನಾಯಿಯ ಉಗುರುಗಳಲ್ಲಿನ ಬೂದಿಯು ಆ ಕಳ್ಳನ ಹಣೆಯ ಮೇಲೆ ತ್ರಿಪುಂಡ್ರಾಕಾರವಾಗಿ ಬಿದ್ದಿತು. ಕಳ್ಳನ ಹಣೆಯಲ್ಲಿ ತ್ರಿಪುಂಡ್ರವು ಕಂಡೊಡನೆಯೇ ಶಿವದೂತರು ಅವನನ್ನು ಕೈಲಾಸಕ್ಕೊಯ್ದರು. ಹೀಗೆ ಪಾಪಿಷ್ಠನಾದ ಆ ಕಳ್ಳನೂ, ತ್ರಿಪುಂಡ್ರ

ಮಹಿಮೆಯಿಂದ ಶಿವಸಾನ್ನಿಧ್ಯವನ್ನು ಹೊಂದಿದನು. ತ್ರಿಪುಂಡ್ರ ಮಹಿಮೆಯೇ ಹೀಗಿರುವಲ್ಲಿ ವಿಭೂತಿಯ ಮಹಿಮೆಯನ್ನಾರು ಬಣ್ಣಿಸಲು ಶಕ್ಯರು? ಆರ ಮುಖದಲ್ಲಿ ವಿಭೂತಿಯು ಶೋಭಿಸುತ್ತಿರುವುದೋ, ಯಾರು ಯಾವಾಗಲೂ ಪಂಚಾಕ್ಷರೀ ಮಂತ್ರ ಜಪವನ್ನು ಗೈಯ್ಯುವರೋ, ಅಂತಹವರು ಮನುಷ್ಯ ರೂಪದಿಂದ ಸಂಚರಿಸುವ ರುದ್ರರೇ ಹೊರತು ಮತ್ತೆ ಬೇರೆಯಲ್ಲವು. ಆದುದರಿಂದೆಲೈ ಋಷಿಗಳಿರಾ! ಮನುಷ್ಯನು ಸದಾಕಾಲದಲ್ಲಿಯೂ ಶಂಕರನನ್ನು ಸೇವಿಸಬೇಕು. ಪ್ರಾತಃಕಾಲ, ಮಧ್ಯಾಹ್ನ, ಸಾಯಂಕಾಲಗಳು ಶಿವದರ್ಶನಕ್ಕೆ ಶ್ರೇಷ್ಠಗಳು. ಪ್ರಾತಃಕಾಲದಲ್ಲಿ ಶಿವದರ್ಶನದಿಂದ ತಾಪತ್ರಯಗಳು ನಾಶವಾಗುವುವು. ಮಧ್ಯಾಹ್ನದ ಶಿವದರ್ಶನವು ಏಳುಜನ್ಮಗಳ ಪಾಪಗಳನ್ನು ನಾಶಮಾಡುವುದು. 'ಶಿವ' ಎಂಬದ್ವ್ಯಕ್ಷರ ಮಂತ್ರವನ್ನು ಜಪಿಸುವ ನರನು ಜಗವನ್ನೇ ಪವಿತ್ರವನ್ನಾಗಿ ಮಾಡುವನು. ಪುಣ್ಯಾತ್ಮರಿಂದ ಸ್ಥಾಪಿಸಲ್ಪಟ್ಟ ಭೇರಿಯ ಶಬ್ದವನ್ನು ಕೇಳಿದ, ಪಾಪಿಷ್ಠನೂ, ಪಾಷಂಡಿಯೂ ಪಾಪರಹಿತರಾಗುವರು. ಆ ಭೇರಿಯು ಯಾವ ಮೃಗಚರ್ಮದಿಂದ ಮಾಡಲ್ಪಟ್ಟಿತೊ, ಆ ಮೃಗವೂ ಶಿವಲೋಕವನ್ನು ಹೊಂದುವುದು. ಶಿವ ಪ್ರೀತ್ಯರ್ಥವಾಗಿ ಯಾವನರನು ಸೇವೆಮಾಡುವನೋ, ಅವನು ಪಾಪಿಯಾಗಲಿ, ಶ್ವಪಚನಾಗಲಿ, ಶೂದ್ರನಾಗಲಿ, ಶಿವಕೃಪೆಗೆ ಪಾತ್ರನಾಗುವನೆಂಬುದರಲ್ಲಿ ಸಂಶಯವಿಲ್ಲವು. ಈ ಪ್ರಪಂಚವೆಲ್ಲವೂ ಶಿವನಿಂದಾವರಿಸಲ್ಪಟ್ಟಿರುವುದು. ಅಯ್ಯಾ ಋಷಿಗಳಿರಾ! ಪರಶಿವನನ್ನು, ವೇದಗಳಿಂದಲೂ, ಉಪನಿಷತ್ತುಗಳಿಂದಲೂ, ಆಗಮಗಳಿಂದಲೂ ತಿಳಿಯಬೇಕು. ಮನುಷ್ಯನು ಫಲಾಪೇಕ್ಷೆಯಿಂದಾಗಲಿ, ಫಲಾಪೇಕ್ಷೆಯಿಲ್ಲದೆಯಾಗಲಿ ಶಂಕರನನ್ನರ್ಚಿಸಬೇಕು. ಇದಕ್ಕೊಂದು ಉದಾಹರಣೆಯುಂಟು.

## ವೈಶ್ಯನಂದಿ ಮತ್ತು ಕಿರಾತಭಕ್ತರ ಚರಿತ್ರೆ

ಅವಂತೀನಗರಿಯಲ್ಲಿ ನಂದಿಯೆಂಬ ವೈಶ್ಯನೊಬ್ಬನಿದ್ದನು. ಈತನು ಶಿವಪೂಜಾರತನಾಗಿದ್ದನು. ಈತನು ನಗರಿಗೆ ಸಮೀಪದಲ್ಲಿದ್ದ

ಒಂದು ತಪೋವನದಲ್ಲಿ ಶಿವಲಿಂಗವನ್ನರ್ಚಿಸುತ್ತಿದ್ದನು. ಪ್ರತಿ ದಿನದ ಬೆಳಗಿನ ಝಾವದಲ್ಲಿ, ಈ ವೈಶ್ಯ ನಂದಿಯು, ವೇದವೇದಾಂಗ ಪಾರಂಗತರಾದ ಬ್ರಾಹ್ಮಣರಿಂದೊಡಗೂಡಿ ಆ ತಪೋವನವನ್ನು ಸೇರಿ ಶಾಸ್ತ್ರೋಕ್ತವಾದ ವೇದಮಂತ್ರಗಳಿಂದಲೂ, ಹೂಗಳಿಂದಲೂ ಮುಕ್ತಾಫಲಗಳಿಂದಲೂ, ನಾನಾವಿಧ ಅಮೂಲ್ಯ ರತ್ನಗಳಿಂದಲೂ, ಅಲ್ಲಿದ್ದ ಶಿವಲಿಂಗವನ್ನರ್ಚಿಸುತ್ತಿದ್ದನು. ಹೀಗಿರಲು ಒಂದಾನೊಂದು ದಿನ, ಪ್ರಾಣಿ ಹಿಂಸಕನಾಗಿಯೂ, ಜ್ಞಾನಶೂನ್ಯನಾಗಿಯೂ, ಮೃಗಯಾರಸಿಕನಾಗಿಯೂ ಇರುವ ಮಹಾಕಾಳನೆಂಬ ಕಿರಾತನು, ಬೇಟೆಯ ಆಯಾಸದಿಂದ ಬಾಯಾರಿ ಈ ತಪೋವನಕ್ಕೆ ಬಂದನು. ಆ ಬಳಿಕ ಮಹಾಕಾಳನು ವನದಲ್ಲಿದ್ದ ಸರೋವರದಲ್ಲಿ ನೀರನ್ನು ಕುಡಿದು ತಾನು ಬೇಟೆಯಲ್ಲಿ ಕೊಂದಿದ್ದ ಮೃಗಗಳೆಲ್ಲವನ್ನೂ ಹೊತ್ತುಕೊಂಡು ಹೊರಟನು. ಹೊರಡುವಾಗ ತನ್ನೆದುರಿನಲ್ಲಿದ್ದ ಪೂಜಾಪುರಸ್ಕಾರಗಳಿಂದಲೂ, ನಾನಾರತ್ನಗಳಿಂದಲೂ ರಂಜಿಸುತ್ತಿದ್ದ ಶಿವಲಿಂಗವನ್ನು ಕಂಡನು. ಕಂಡೊಡನೆಯೇ ಕಿರಾತನಲ್ಲಿ ಭಕ್ತಿಯು ಅಂಕುರಿಸಿತು. ಬಳಿಕ ಮಹಾಕಾಳನು ಶಿವಲಿಂಗದ ಮೇಲಿದ್ದ ಪುಷ್ಪಗಳನ್ನೂ ರತ್ನಗಳನ್ನೂ ಅಲ್ಲಲ್ಲಿ ತಳ್ಳಿ, ಎಂಜಲ ನೀರಿನಿಂದ ಶಿವಲಿಂಗವನ್ನು ತೊಳೆದು, ಹತ್ತಿರದಲ್ಲಿಯೇ ಇದ್ದ ಒಂದು ಬಿಲ್ವದಳವನ್ನಿರಿಸಿ, ತಾನು ತಂದಿದ್ದ ಮೃಗಮಾಂಸವೆಲ್ಲವನ್ನೂ ಸಮರ್ಪಿಸಿದನು. ಅನಂತರದಲ್ಲಿ ಭಕ್ತಿಯಿಂದ ಕೈಜೋಡಿಸಿಕೊಂಡು 'ಎಲೈ ಶಂಕರನೇ ! ಇಂದಿನಿಂದ ನಾನು ನಿನಗೆ ಭೃತ್ಯನು. ನೀನು ನನಗೆ ಸ್ವಾಮಿಯು. ಇತಃಪರ ನಾನು ನಿನ್ನನ್ನೆಡೆಬಿಡದೆ ಪೂಜಿಸುವೆನು' ಎಂದು ಮನಸಾ ಸಂಕಲ್ಪಮಾಡಿಕೊಂಡು ಹಿಂತಿರುಗಿದನು.

ಮಾರನೆಯ ದಿನ ಎಂದಿನಂತೆ ವೈಶ್ಯನಂದಿಯು ತಪೋವನಕ್ಕೆ ಬಂದು ಕಿರಾತ ಭಕ್ತನಿಂದಾಚರಿಸಲ್ಪಟ್ಟಿದುದನ್ನು ನೋಡಿ ಬಹಳ ಚಿಂತಾನ್ವಿತನಾಗಿ 'ಅಯ್ಯೋ ! ಶಿವಪೂಜಾರತರಿಗೆ ಅದೆಷ್ಟು ವಿಘ್ನಗಳು ? ಈ ವಿಘ್ನವು ನನ್ನ ದೌರ್ಭಾಗ್ಯದಿಂದಾಯಿತೆಂಬುದರಲ್ಲಿ ಸಂಶ

ಯುವಿಲ್ಲ' ಎಂದು ಬಹಳವಾಗಿ ಚಿಂತಿಸುತ್ತಾ ಆ ಶಿವಮಂದಿರವನ್ನು ಚೆನ್ನಾಗಿ ತೊಳೆದು ಎಂದಿನಂತೆ ಶಿವಪೂಜೆಯನ್ನು ಮಾಡಿ ತನ್ನ ಮನೆಗೆ ಹೋದನು. ನಂದಿಯು ಚಿಂತಿಸುವುದನ್ನು ತಿಳಿದ ಪುರೋಹಿತನು 'ಎಲೈ ಪ್ರಭುವೇ! ಏಕೆ ಚಿಂತಿಸುವೆ? ದಯವಿಟ್ಟು ಹೇಳು!' ಎಂದು ಕೇಳಿದನು. ಆಗ ನಂದಿಯು ಪುರೋಹಿತನನ್ನು ಕುರಿತು, 'ಎಲೈ ಬ್ರಾಹ್ಮಣನೇ! ನಾನಿಂದು ಶಿವಸಾನ್ನಿಧ್ಯದಲ್ಲಿ ಅಮೇಧ್ಯವಿದ್ದುದನ್ನು ಕಂಡೆನು. ಅದು ಯಾರಿಂದ ಹಾಗೆ ಮಾಡಲ್ಪಟ್ಟಿತೋ ಅದನ್ನು ತಿಳಿಯೆನು.' ಎಂದು ನುಡಿದನು. ನಂದಿಯ ಮಾತುಗಳನ್ನು ಕೇಳಿ ಪುರೋಹಿತನು 'ಎಲೈ ನಂದಿಯೇ! ಹಾಗೆಮಾಡಿದವನು, ಮೂರ್ಖನೂ ಕಾರ್ಯಾಕಾರ್ಯಗಳನ್ನು ತಿಳಿಯದವನೂ ಆಗಿರಬೇಕು. ಆದುದರಿಂದ ನೀನು ಚಿಂತಿಸಬೇಡ. ನಾಳೆಯದಿನ ನನ್ನೊಡನೆ ಬರುವವನಾಗು. ಶಿವಲಿಂಗವನ್ನು ಅಪವಿತ್ರವನ್ನಾಗಿ ಯಾರು ಮಾಡಿದರೋ ಅವರನ್ನು ನಿರೀಕ್ಷಿಸುವ' ಎಂದು ಹೇಳಿ ಹೊರಟುಹೋದನು. ಇತ್ತ ನಂದಿಯು ಆಹಾರವನ್ನೂ ಮುಟ್ಟದೆ ಉಪವಾಸವನ್ನು ಮಾಡಿ ಬೆಳಗಾಗುತ್ತಲೇ ಪುರೋಹಿತನೊಡನೆ ಶಿವಮಂದಿರವನ್ನು ಪ್ರವೇಶಿಸಿದನು. ಬಳಿಕ ಪುರೋಹಿತನೂ, ನಂದಿಯೂ ಆ ಕಿರಾತನಿಂದ ಮಾಡಲ್ಪಟ್ಟಿದ್ದ ಪೂಜೆಯನ್ನು ನೋಡಿದರು. ಅನಂತರದಲ್ಲಿ ನಂದಿಯು ಹಿಂದಿನಂತೆ ಶಿವಮಂದಿರವನ್ನು ತೊಳೆದು ರುದ್ರೈಕಾದಶಿಯಿಂದಲೂ, ಪಂಚೋಪಚಾರಗಳಿಂದಲೂ, ಅನೇಕ ಸ್ತುತಿಗಳಿಂದಲೂ ಪಾರ್ವತೀಶನನ್ನು ಪೂಜಿಸಿದನು. ಇಷ್ಟರಲ್ಲಿಯೇ ಎರಡು ಯಾಮಗಳು ಕಳೆಯಲು ಧನುರ್ಧಾರಿಯಾಗಿಯೂ, ಭಯಂಕರನಾಗಿಯೂ ಇರುವ ಮಹಾಭಕ್ತನಾದ ಕಿರಾತನು ಪರಶಿವನ ಪೂಜೆಗಾಗಿ ಬಂದನು. ನಂದಿಯೂ, ಪುರೋಹಿತನೂ ಆ ಕಿರಾತನನ್ನು ನೋಡಿ ಬಹಳವಾಗಿ ಭಯಗೊಂಡರು. ಬಳಿಕ ಆ ಕಿರಾತ ಭಕ್ತನು ನಂದಿಯು ಮಾಡಿದ್ದ ಪೂಜೆಯೆಲ್ಲವನ್ನೂ ಎಡಗಾಲಿನಿಂದ ತಳ್ಳಿ ಎಂಜಲ ನೀರಿನಿಂದ ಆ ಶಿವಲಿಂಗವನ್ನು ತೊಳೆದು, ಬಿಲ್ವದಳ ಒಂದನ್ನು ಅದರಮೇಲಿರಿಸಿ, ತಾನು ತಂದಿದ್ದ ಮೃಗಮಾಂಸವನ್ನು ನಿವೇದಿಸಿ ಹೊರಟುಹೋದನು.

ಕಿರಾತಭಕ್ತನು ಮಾಡಿದುದೆಲ್ಲವನ್ನೂ ನೋಡಿದ ವೈಶ್ಯ ನಂದಿಯು ಬಹಳವಾಗಿ ಚಿಂತಿಸಿ ಬ್ರಾಹ್ಮಣರೆಲ್ಲರನ್ನೂ ಕರೆಯಿಸಿ 'ಎಲೈ ಬ್ರಾಹ್ಮಣರಿರಾ! ಈ ವಿಷಯದಲ್ಲಿ ನಿಮ್ಮ ಅಭಿಪ್ರಾಯವೇನು? ಶಿವಪೂಜೆಗೆ ವಿಘ್ನಬಾರದಿರಲು ಏನು ಮಾಡಬೇಕು? ದಯವಿಟ್ಟು ಹೇಳುವರಾಗಿ' ಎಂದು ಬೇಡಿಕೊಂಡನು. ಆಗಲಾ ಬ್ರಾಹ್ಮಣರು 'ಎಲೈನಂದಿಯೇ! ಈ ವಿಘ್ನವು ದೇವತೆಗಳಿಂದ ಉಪರಿಹರಿಸಲು ಸಹ ಅಶಕ್ಯವಾಗಿರುವುದು. ಆದುದರಿಂದ ನೀನೀಲಿಂಗವನ್ನು ನಿನ್ನ ಮನೆಗೆ ತೆಗೆದುಕೊಂಡು ಹೋಗು' ಎಂದು ಹೇಳಿದರು. ಬ್ರಾಹ್ಮಣರ ಮಾತಿನಂತೆ ಆ ವೈಶ್ಯನಂದಿಯು ಶಿವಲಿಂಗವನ್ನೆಬ್ಬಿಸಿ ತನ್ನ ಮನೆಗೆ ತೆಗೆದುಕೊಂಡು ಹೋದನು. ಅಲ್ಲಿಯಾದರೋ ವಜ್ರಮಾಣಿಕ್ಯಾದಿ ನಾನಾ ರತ್ನಗಳಿಂದ ಮಾಡಲ್ಪಟ್ಟ ಬಂಗಾರದ ಪೀಠವನ್ನು ಮಾಡಿಸಿ, ಅದರ ಮೇಲೆ ಆ ಲಿಂಗವನ್ನಿರಿಸಿ ಅನೇಕ ಉಪಚಾರಗಳಿಂದ ಪೂಜಿಸಿದನು. ಮಾರನೆಯ ದಿನದಲ್ಲಿ ಎಂದಿನಂತೆ ಕಿರಾತಭಕ್ತನು ಶಿವಮಂದಿರವನ್ನು ಪ್ರವೇಶಿಸಿ, ಶಿವಲಿಂಗವನ್ನು ಕಾಣದೆ ಅಳುತ್ತಾ, ಗಟ್ಟಿಯಾಗಿ 'ಎಲೈ ಶಂಭುವೇ! ಎಲ್ಲಿ ಹೋಗಿರುವೆ! ಈಗಲೇ ನಿನ್ನ ಸ್ವರೂಪವನ್ನು ತೋರಿಸು! ಶಂಕರನೇ! ಶಂಭುವೇ! ತ್ರಿಪುರಾಂತಕನೇ! ನೀನೀಗ ನಿನ್ನ ರೂಪವನ್ನು ತೋರದಿದ್ದರೆ, ಇದಿಗೋ ಈ ನನ್ನ ಪ್ರಾಣಗಳನ್ನು ನಿನ್ನೆದುರಿನಲ್ಲಿಯೇ ತ್ಯಜಿಸುವೆನು' ಎಂದು ಹೇಳಿದನು. ಮೃದುಮಧುರವಾಗಿಯೂ ನಿಷ್ಕಪಟವಾಗಿಯೂ ಇದ್ದ ಆ ಕಿರಾತನ ಪ್ರಾರ್ಥನೆಗೆ ಮೆಚ್ಚಿ ಪರಶಿವನು ತಕ್ಷಣದಲ್ಲಿಯೇ ಲಿಂಗರೂಪದಿಂದ ಆವಿರ್ಭವಿಸಿದನು. ಅಲ್ಲಿಗೂ ತೃಪ್ತನಾಗದೇ ಆ ಕಿರಾತಭಕ್ತನು ಸ್ವಹಸ್ತದಿಂದಲೇ ತನ್ನ ಹೊಟ್ಟೆಯನ್ನು ಬಗೆದು ಕರುಳುಗಳನ್ನು ಕಿತ್ತೆಸೆಯುತ್ತಾ 'ಎಲೈ ಮಹದೇವನೇ! ನನ್ನನ್ನು ಬಿಟ್ಟು ಎಲ್ಲಿ ಹೋಗುವೆ' ಎಂದು ಕೂಗುತ್ತಾ ಆ ಸರೋವರದಲ್ಲಿ ಸ್ನಾನಮಾಡಿ, ಅದೇ ಜಲವನ್ನು ತೆಗೆದುಕೊಂಡು ಆ ಶಿವಲಿಂಗವನ್ನಭಿಷೇಕಿಸಿ, ಧ್ಯಾನಾಸಕ್ತನಾದನು. ಆಗ ಕಿರಾತನ ಭಕ್ತಿಗೆ ಮೆಚ್ಚಿ ಸಾಕ್ಷಾತ್ ಪರಶಿವನು ಶಿವಗಣಗಳಿಂದ ಕೂಡಿ ಪ್ರತ್ಯಕ್ಷನಾದನು. ಬಳಿಕ ಕಿರಾತ ಭಕ್ತನನ್ನು ಕುರಿತು 'ಎಲೈ ವೀರನೇ! ನೀನೇ

ನನ್ನ ಭಕ್ತನೆಂಬುದರಲ್ಲಿ ಸಂದೇಹವಿಲ್ಲ. ಕೇಳು! ನಿನಗೆ ಬೇಕಾದ ವರವನ್ನು ಕೇಳು!! ಕೊಡಲು ಸಿದ್ಧನಾಗಿರುವೆನು' ಎಂದು ಹೇಳಿದನು. ಶಂಕರನ ಮಾತುಗಳನ್ನು ಕೇಳಿ ಕಿರಾತನು ಸಾಷ್ಟಾಂಗ ಪ್ರಣಾಮವನ್ನು ಮಾಡಿ 'ದೇವಾ! ನನಗಿನ್ನಾವವರವೂ ಬೇಡ. ನಾನು ನಿನ್ನ ಭೃತ್ಯನೂ, ನೀನು ನನ್ನ ಸ್ವಾಮಿಯೂ ಎಂಬ ಭಾವನೆಯನ್ನೂ, ನಂಬಿಕೆಯನ್ನೂ ಜನ್ಮಜನ್ಮದಲ್ಲಿಯೂ ಕರುಣಿಸು. ಎಲೈ ಪರಶಿವನೇ! ನೀನೇ ನನಗೆ ತಾಯಿಯೂ ತಂದೆಯೂ ಆಗಿರುವೆ. ಬಂಧುವೂ, ಸ್ನೇಹಿತನೂ, ಗುರುವೂ ನೀನೇ! ನೀನೇ ಮಂತ್ರವೂ ಮಂತ್ರಸ್ವರೂಪನೂ ಆಗಿರುವೆ! ನಿನ್ನನ್ನು ಬಿಟ್ಟರೆ ಮೂರುಲೋಕಗಳಲ್ಲಿಯೂ ನನಗೆ ಬೇರೊಂದು ದೈವವಿಲ್ಲವು! ಆದುದರಿಂದ ನನ್ನನ್ನು ಕೃಪೆಮಾಡಿ ಕಾಪಾಡು' ಎಂದು ಬೇಡಿಕೊಂಡ ಫಲಾಪೇಕ್ಷೆಯಿಲ್ಲದೆಯೇ ಸ್ತೋತ್ರಮಾಡುತ್ತಿರುವ ಕಿರಾತಭಕ್ತನಲ್ಲಿ ಬಹಳವಾಗಿ ಕರುಣೆಗೊಂಡ ಶಂಕರನು ಅವನನ್ನು ತನ್ನ ಪಾರ್ಷದರಲ್ಲಿ ಮುಖ್ಯಸ್ಥನನ್ನಾಗಿ ಮಾಡಿರುವನು. ಆ ಸಮಯದಲ್ಲಿ ಭೇರೀಶಬ್ದವೂ ಶಂಖಧ್ವನಿಯೂ ದಿಗಂತರಗಳಿಗೆ ವ್ಯಾಪಿಸಿತು. ಈ ಧ್ವನಿಯನ್ನು ಕೇಳಿ ವೈಶ್ಯನಂದಿಯು ಆ ತಪೋವನಕ್ಕೆ ಬಂದು ಶಿವನನ್ನೂ, ಆ ಕಿರಾತಭಕ್ತನನ್ನೂ ಕಂಡನು. ಇಂತು ಕಂಡ ವೈಶ್ಯನಂದಿಯು ಕಿರಾತನನ್ನು ಬಹಳವಾಗಿ ಸ್ತುತಿಸಿ ಅವನನ್ನು ಕುರಿತು 'ಎಲೈ ಭಕ್ತಾಗ್ರಣಿಯೇ! ನೀನೇಧನ್ಯನು, ಈಶ್ವರನು ನಿನ್ನನ್ನು ಅನುಗ್ರಹಿಸಿರುವನು. ಎಲೈ ಪುಣ್ಯಶಾಲಿಯೇ! ದಯವಿಟ್ಟು ನನ್ನನ್ನೂ ಶಿವಕೃಪೆಗೆ ಪಾತ್ರನನ್ನಾಗಿ ಮಾಡು' ಎಂದು ಬೇಡಿಕೊಂಡನು. ಬಳಿಕ ಕಿರಾತಭಕ್ತನು ನಂದಿಯನ್ನು ಶಿವನಿಗೆ ತೋರಿಸಿ 'ದೇವಾ! ಈ ವೈಶ್ಯ ನಂದಿಯು ನಿನ್ನನ್ನು ವಜ್ರವೈಢೂರ್ಯಾದಿಗಳಿಂದಲೂ, ತನ್ನ ಜೀವಿತದಿಂದಲೂ ಪೂಜಿಸಿರುವನು. ಆದುದರಿಂದ ಇವನನ್ನೂ ಕಾಪಾಡು' ಎಂದು ಹೇಳಿದನು. ಕಿರಾತಭಕ್ತನ ಮಾತುಗಳನ್ನು ಕೇಳಿ ಶಂಕರನು ಅವನನ್ನು ಕುರಿತು 'ಎಲೈ ಮಹಾಕಾಳನೇ! ಇವನಾರೆಂಬುದು ನನಗೆ ತಿಳಿಯದು. ಇವನು ನಿನ್ನ ಭಕ್ತನು. ನಿನ್ನಭಕ್ತರೂ ನನ್ನ ಭಕ್ತರೇ ಸರಿ. ಆದುದರಿಂದ ಇವನನ್ನೂ ಸಂರಕ್ಷಿಸುವೆನು' ಎಂದು ನುಡಿದು ಆನಂದಿಯನ್ನು ತನ್ನ

ಪಾರ್ಷದರಲ್ಲೊಬ್ಬನನ್ನಾಗಿ ಮಾಡಿದನು. ನಂದಿಯೂ, ಮಹಾಕಾಳನೂ ದಿವ್ಯವಾದ ವಿಮಾನಗಳನ್ನೇರಿಕೊಂಡು ಶಂಕರನೊಡನೆ ಕೈಲಾಸಕ್ಕೆ ಹೊರಟುಹೋದರು. ಇವರಿಬ್ಬರೂ ಕೈಲಾಸದ ದ್ವಾರಪಾಲಕರಾಗಿ, ಅಹರ್ನಿಶವೂ ಶಂಕರನನ್ನು ನೋಡುತ್ತಿದ್ದರು.

## ಅಧ್ಯಾಯ ೬

## ಲಿಂಗೋಧ್ಭವಲೀಲೆ.

ಸೂತನು ಹೇಳುತ್ತಾನೆ:—'ಕೇಳಿರೈ ಋಷಿಗಳಿರಾ! ಶಿವಕಿಂಕರನಾದ ನಂದಿಯು ಎಲ್ಲಾಪ್ರಾಣಿಗಳ ದುಷ್ಕೃತ್ಯಗಳ ಪರಿಣಾಮವಾದ ಪಾಪಗಳನ್ನು ನೀಗಿಕೊಳ್ಳಲು ಅನೇಕ ಶಿವಧರ್ಮಗಳನ್ನು ಹೇಳಿರುವನು. ಶಿವನಲ್ಲಿ ಭಕ್ತಿಯನ್ನಿಡುವವನು, ಪಾಪಿಯಾಗಲಿ, ಅಧರ್ಮಿಷ್ಠನಾಗಲಿ, ಕುರುಡನಾಗಲಿ, ಮೂಕನಾಗಲಿ, ಕುಂಟನಾಗಲಿ, ಕುಲಹೀನನಾಗಲಿ, ಶ್ವಪಚನೇ ಆಗಲಿ, ಶಿವಸಾನ್ನಿಧ್ಯವನ್ನು ಹೊಂದುವನೆಂಬುದರಲ್ಲಿ ಸಂಶಯವಿಲ್ಲವು. ಯಾವ ಬುದ್ಧಿವಂತನಾದರೆ ಮರಳಿನಲ್ಲಿ ಲಿಂಗವನ್ನು ರಚಿಸಿ ಪೂಜಿಸುತ್ತಾನೆಯೋ, ಅವನು ಕೈಲಾಸವಾಸವನ್ನನುಭವಿಸುವನು' ಎಂದು ನುಡಿದ ಸೂತಪುರಾಣಿಕನನ್ನು ಕುರಿತು ಶೌನಕಾದಿಗಳು 'ಅಯ್ಯಾ ಸೂತನೇ! ಶಿವನು ಲಿಂಗರೂಪದಿಂದ ಪ್ರತಿಷ್ಠೆಯಾದುದು ಹೇಗೆ? ಅದನ್ನು ದಯವಿಟ್ಟು ಹೇಳು. ಕೇಳಲು ಅತಿ ಕುತೂಹಲವುಳ್ಳವರಾಗಿರುವೆವು' ಎಂದು ಬೆಸಗೊಂಡರು. ಬಳಿಕ ಸೂತನು ಹೇಳಲುಪಕ್ರಮಿಸಿದನು. 'ಅಯ್ಯಾ ಮುನಿಪುಂಗವರಿರಾ! ಹಿಂದೆ ಮಹಾನುಭಾವನಾಗಿಯೂ, ತ್ರಿಭುವನಗಳ ಒಡೆಯನಾಗಿಯೂ, ಅಣುಗಳಿಗಿಂತಲೂ, ಅಣುವಾಗಿಯೂ, ಮಹತ್ತುಗಳಿಗಿಂತಲೂ, ಮಹತ್ತಾಗಿಯೂ ಇರುವ ಪರಶಿವನು, ಜಟೆಗಳನ್ನು ಬಿರಿಹೊಯ್ದುಕೊಂಡು, ದಿಗಂಬರನಾಗಿ, ಬ್ರಹ್ಮಕಪಾಲವನ್ನು ಧರಿಸಿ, ದಾರುವನದಲ್ಲಿ ಭಿಕ್ಷಾರ್ಥಿಯಾಗಿ ಸಂಚರಿಸುತ್ತಿದ್ದನು. ಆಗ ಮಧ್ಯಾಹ್ನಕಾಲವಾಗಿದ್ದುದರಿಂದ ಋಷಿಗಳೆಲ್ಲರೂ ಸ್ನಾನಾರ್ಥವಾಗಿ ತಮ್ಮ

ಆಶ್ರಮಗಳನ್ನು ಬಿಟ್ಟು ಹೊರಟುಹೋಗಿದ್ದರು. ಆಗ ಋಷಿಪತ್ನಿಯರೆಲ್ಲರೂ ಹೊರಗೆ ಬಂದು ಭಿಕ್ಷೆಬೇಡುತ್ತಿದ್ದ ಶಂಕರನನ್ನು ನೋಡಿ ತಮ್ಮ ತಮ್ಮಲ್ಲಿಯೇ 'ಈ ಅಪೂರ್ವ ದರ್ಶನನಾದ ಭಿಕ್ಷುಕರೂಪಿಯಾದ ಮಹಾತ್ಮನಾರಿರಬಹುದು? ಆಹಾ! ನಾವೆಲ್ಲರೂ ಈತನಿಗೆ ಭಿಕ್ಷೆಯನ್ನು ನೀಡುವ' ಎಂದುಕೊಂಡು ವಿವಿಧಗಳಾದ ಭಕ್ಷ್ಯಭೋಜ್ಯಾದಿಗಳನ್ನು ತಂದು ಆ ಶಂಕರನ ಬ್ರಹ್ಮಕಪಾಲದಲ್ಲಿ ಹಾಕಿದರು. ಶಂಕರನವುಗಳನ್ನೆಲ್ಲಾ ತಿಂದನು.

ಆಗಲಾ ಋಷಿಪತ್ನಿಯರಲ್ಲೋರ್ವ ಪ್ರಿಯತಮೆಯು ಶಂಕರನನ್ನು ಕುರಿತು 'ಎಲೈ ಬುದ್ಧಿಶಾಲಿಯೇ! ಭಿಕ್ಷುಕರೂಪಿಯಾದ ನೀನು ಯಾರು? ಶುದ್ಧವಾದ ಈ ಋಷ್ಯಾಶ್ರಮಕ್ಕೇಕೆಬಂದೆ?' ಎಂದು ಕೇಳಿದಳು. ಆ ಮನೋಹರೆಯ ಮಾತುಗಳನ್ನು ಕೇಳಿದ ಶಂಕರನು ಆಕೆಯನ್ನು ಕುರಿತು ನಸುನಗುತ್ತಾ 'ಸುಂದರೀ! ನಾನು ಈಶ್ವರನು! ಈ ಪಾವನವಾದ ಋಷ್ಯಾಶ್ರಮಕ್ಕೆ ಬಂದಿರುವೆನು' ಎಂದನು. ಆಗಲಾ ಋಷಿಪತ್ನಿಯು ಶಂಕರನನ್ನು ಕುರಿತು, 'ಕೈಲಾಸಪತಿಯಾದ ಈಶ್ವರನೇ ನೀನಾಗಿದ್ದರೆ ಏಕಾಂಗಿಯಾಗಿ ಏಕೆ ಅಲೆಯುತ್ತಿರುವೆ?' ಎಂದಳು. ಆಗ ಶಂಭುವು 'ಎಲೌ ಸುಮಧ್ಯಮೇ! ನನ್ನ ಸತಿಯಾದ ದಾಕ್ಷಾಯಣಿಯಿಂದ ವಿರಹಿತನಾಗಿ, ಈ ದಿಗಂಬರ ವೇಷದಿಂದ ಭಿಕ್ಷೆಯನ್ನೆತ್ತುತ್ತಿರುವೆನು. ಆ ಪತಿವ್ರತೆಯನ್ನು ಬಿಟ್ಟು ನನಗೆ ಮತ್ತಾವ ಸ್ತ್ರೀಯೂ ರುಚಿಸುವದಿಲ್ಲ. ಆದುದರಿಂದ ನಾನೀಗ ಏನೂ ತೋಚದೆ ಅಲೆಯುತ್ತಿರುವೆನು' ಎಂದನು. ಶಂಕರನ ನುಡಿಗಳನ್ನು ಕೇಳಿದ ಸುಂದರೀಮಣಿಯು 'ಎಲೈ ಸ್ವಾಮಿಯೇ! ಲೋಕದಲ್ಲಿ ಸ್ತ್ರೀಯರೇ ಅಲ್ಲವೆ ಪುರುಷರಿಗೆ ಸುಖವನ್ನೀಯುವರು. ಅಂತಹ ಸ್ತ್ರೀಯರು ನಿನ್ನಂತಹಾ ಜ್ಞಾನಿಗಳಿಂದ ಬಿಡಲ್ಪಡಬಹುದೇ?' ಎಂದು ಹೇಳಿದಳು. ಬಳಿಕ ಋಷಿಪತ್ನಿಯರೆಲ್ಲರೂ ಸೇರಿ ಷಡ್ರಸೋಪೇತವಾಗಿರುವ ಚತುರ್ವಿಧ ಅನ್ನಗಳಿಂದಲೂ, ವಿಧವಿಧಗಳಾದ ಭಕ್ಷ್ಯಗಳಿಂದಲೂ, ಆ ಶಂಕರನ ಭಿಕ್ಷಾಪಾತ್ರೆಯನ್ನು ತುಂಬಿದರು. ಅನಂತರದಲ್ಲಿ ಶಂಕರನು ಕೈಲಾಸಪರ್ವತ

ವನ್ನು ಕುರಿತು ಹೊರಡಲುದ್ಯುಕ್ತನಾಗಲು, ಋಷಿಪತ್ನಿಯರೆಲ್ಲರೂ ತಮ್ಮ ತಮ್ಮ ಮನೆ ಕೆಲಸಗಳನ್ನು ಬಿಟ್ಟು ಆತನನ್ನನುಸರಿಸಿ ಹೊರಟರು. ಅತ್ತ ಋಷಿಪತ್ನಿಯರು ಪರಶಿವನನ್ನು ಹಿಂಬಾಲಿಸಿ ಹೊರಡಲು, ಇತ್ತ ಸ್ನಾನಾರ್ಥವಾಗಿ ಹೋಗಿದ್ದ ಋಷಿಗಳೆಲ್ಲರೂ ತಮ್ಮ ತಮ್ಮ ಮನೆಗಳಿಗೆ ಬಂದರು. ಬಂದು ನೋಡಲು ಋಷಿಪತ್ನಿಯರಿರಲಿಲ್ಲವು. ಆಗ ಅವರೆಲ್ಲರೂ 'ಎಲ್ಲಿಗೆ ಹೋದರು? ಯಾವ ದುಷ್ಟನು ಹೀಗೆ ಮಾಡಿರುವನೋ ತಿಳಿಯದಲ್ಲಾ!' ಎಂದು ಚಿಂತಿಸುತ್ತಾ ಅಲ್ಲಲ್ಲಿ ಹುಡುಕಹತ್ತಿದರು. ಬಳಿಕ ತಮ್ಮ ಪತ್ನಿಯರೆಲ್ಲರೂ, ದಿಗಂಬರನಾದ ಶಂಭುವನ್ನು ಹಿಂಬಾಲಿಸಿ ಹೋಗುತ್ತಿರುವುದನ್ನು ಕಂಡರು. ಶಿವನನ್ನು ಕಂಡೊಡನೆಯೇ ಋಷಿಗಳು ರೋಷಗೊಂಡು ಅವನ ಮುಂಗಡೆ ಬಂದು 'ಎಲೈ ಶಂಭುವೇ! ನೀನು ವಿರಕ್ತನೂ, ಮಹಾತ್ಮನೂ ಆಗಿರುವೆ. ಹಾಗಿದ್ದರೂ ಋಷಿಪತ್ನಿಯರನ್ನು ಅಪಹಾರ ಮಾಡಿರುವೆಯಲ್ಲ' ಎಂದು ಘರ್ಜಿಸಿದರು. ಇಂತು ಗದರಿಸಿದರೂ ಪರಶಿವನು ಮೌನವಾಗಿ ತೆರಳುತ್ತಿದ್ದನು. ಆಗ ಋಷಿಗಳೆಲ್ಲರೂ ಅತಿ ಕೋಪಾನ್ವಿತರಾಗಿ ಶಂಕರನನ್ನು 'ಎಲೈ ಶಂಕರನೇ!! ನೀನು ಪರದಾರಾಪಹಾರಕನು. ಆದುದರಿಂದ ಷಂಡನಾಗು, ಎಂದು ಶಪಿಸಿದರು. ಇಂತು ಶಪಿಸಿದೊಡನೆಯೇ ಆ ಶಿವನ ಲಿಂಗವು ಭೂಮಿಗೆ ಬಿದ್ದಿತು. ಲಿಂಗವು ಭೂಮಿಗೆ ಬಿದ್ದೊಡನೆಯೇ ಅದ್ಭುತವಾಗಿ ಬೆಳೆಯಲಾರಂಭಿಸಿತು. ಸಪ್ತಪಾತಾಳಗಳೂ, ಭೂಮಿಯೂ, ಅಂತರಿಕ್ಷವೂ, ಸ್ವರ್ಗವೂ, ಈ ಲಿಂಗದಿಂದಾವರಿಸಲ್ಪಟ್ಟಿತು. ಶಿವಲಿಂಗವು ಎಲ್ಲೆಲ್ಲಿಯೂ ವ್ಯಾಪಿಸಲು, ಭೂಮಿಯಾಗಲಿ, ನೀರಾಗಲಿ, ಬೆಂಕಿಯಾಗಲಿ, ಗಾಳಿ, ಆಕಾಶಗಳಾಗಲಿ ಕಾಣದೇ ಹೋದವು. ಲಿಂಗ ವಿನಹ ಎರಡನೆಯ ವಸ್ತುವೇ ಕಾಣದೇ ಹೋಯಿತು. ಎಲ್ಲಿ ನೋಡಿದರೂ ಅದ್ವೈತ ಮೂರ್ತಿಯಾದ ಲಿಂಗವೇ ಕಾಣುತಿದ್ದಿತು. ಯಾವುದರಿಂದ ಎಲ್ಲವೂ ಲಯವಾಗುತ್ತದೆಯೋ ಅಂತಹ ಬಿಂದುವಿಗೆ ಲಿಂಗವೆಂದು ಹೇಳುವರು.

ಇಂತು ಶಿವಲಿಂಗವು, ಭೂವ್ಯಾಕಾಶಗಳನ್ನೂ, ಸ್ವರ್ಗಮರ್ತ್ಯ ಪಾತಾಳಗಳನ್ನೂ ಆವರಿಸಿ, ಅದಕ್ಕಿಂತಲೂ ಅಧಿಕವಾಗಿ ಬೆಳೆಯುತ್ತಿರುವುದನ್ನು ನೋಡಿದ, ಬ್ರಹ್ಮ, ವಿಷ್ಣು, ಇಂದ್ರಾದಿ ದೇವತೆಗಳು ಆಶ್ಚರ್ಯಗೊಂಡು ತಮ್ಮಲ್ಲಿ ತಾವೇ 'ಈ ಲಿಂಗಕ್ಕೆ ಕೊನೆಯಾವುದು ? ಮೊದಲಾವುದು ? ಒಂದೂ ತಿಳಿಯದಲ್ಲ ! ' ಎಂದುಕೊಂಡರು. ಬಳಿಕ ದೇವತೆಗಳೆಲ್ಲರೂ ವಿಷ್ಣುವನ್ನು ಕುರಿತು 'ಎಲೈ ಮಹಾವಿಷ್ಣುವೇ ! ನೀನು ಈ ಲಿಂಗದ ಮೂಲವನ್ನೂ, ಈ ಬ್ರಹ್ಮನು ಅಂತ್ಯವನ್ನೂ ನೋಡಿಕೊಂಡುಬನ್ನಿರಿ' ಎಂದು ಹೇಳಿದರು. ಆಗ ವಿಷ್ಣುವು ಲಿಂಗ ಆದಿಯನ್ನು ಕಾಣಲು ಪಾತಾಳಕ್ಕೆ ಹೊರಟನು. ಬ್ರಹ್ಮನು ಲಿಂಗದ ಅಂತ್ಯವನ್ನು ಕಾಣಲು ಸ್ವರ್ಗಲೋಕಕ್ಕೆ ತೆರಳಿದನು. ಅಲ್ಲಿಯಾದರೋ, ಬ್ರಹ್ಮನು ಶಿವಲಿಂಗಮಸ್ತಕವನ್ನೂ ಕಾಣದೆಹೋದನು. ಅನಂತರ ತಾನು ಬಂದ ದಾರಿಯನ್ನು ಹಿಡಿದುಕೊಂಡು ಹಿಂತಿರುಗುತ್ತಾ ಸುರಭಿಯನ್ನು ಕಂಡನು. ಆ ಸುರಭಿಯು ಬ್ರಹ್ಮನನ್ನು ಕುರಿತು 'ಎಲೈ ಬ್ರಹ್ಮನೇ ! ಸಂಭ್ರಮಯುಕ್ತನಾಗಿ ಎಲ್ಲಿಗೆ ಹೋಗಿದ್ದೆ? ಈಗೇಕೆ ಖಿನ್ನಮನಸ್ಕನಾಗಿರುವೆ ? ' ಎಂದು ನುಡಿಯಿತು. ಸುರಭಿಯ ಮಾತುಗಳನ್ನು ಕೇಳಿ ಬ್ರಹ್ಮನು 'ಎಲೌ ಸುರಭಿಯೇ ! ಈ ಮೂರು ಲೋಕಗಳನ್ನೂ ವ್ಯಾಪಿಸಿರುವ ಮಹಾದ್ಭುತವಾದ ಲಿಂಗ ಮಸ್ತಕವನ್ನು ನೋಡಲು ಹೋಗಿದ್ದೆನು. ಆದರೆ ಮಹಾತ್ಮನಾದ ಶಿವನ ಲಿಂಗ ಮಸ್ತಕವನ್ನು ನೋಡಲು ಆಗಲಿಲ್ಲ. ದೇವತೆಗಳಲ್ಲಿಗೆ ಹೋದರೆ ಏನೆಂದು ಹೇಳಲೆಂಬ ಚಿಂತೆಯು ನನ್ನನ್ನು ಪೀಡಿಸುತ್ತಿರುವುದು. ಈಗ ನಾನೊಂದುಪಾಯವನ್ನು ಹುಡುಕಿರುವೆನು. ನಾನು ಲಿಂಗ ಮಸ್ತಕವನ್ನು ಕಂಡೆನೆಂದು ದೇವತೆಗಳಿಗೆ ಹೇಳುವೆನು. ಅವರು ಸಾಕ್ಷಿಯಾರೆಂದು ಕೇಳಿದರೆ, ನೀನೂ, ಈ ಕೇತಕೀಪುಷ್ಪವೂ ಸಾಕ್ಷಿಗಳಾಗಿ ಬನ್ನಿರಿ' ಎಂದು ಹೇಳಿದನು. ಬ್ರಹ್ಮನ ಆಜ್ಞೆಯನ್ನು ಶಿರಸಾವಹಿಸಿದ ಸುರಭಿಯು ಕೇತಕಿಯೊಡನೆ ಆ ದೇವತೆಗಳಿದ್ದೆಡೆಗೆ ಬಂದಳು. ಬಳಿಕ ಬ್ರಹ್ಮನು ದೇವತೆಗಳನ್ನು ಕುರಿತು 'ಎಲೈ ದೇವತೆಗಳಿರಾ! ಮಹಾತ್ಮನಾಗಿಯೂ ಮಹಾನುಭಾ

ವನಾಗಿಯೂ ಇರುವ ಪರಶಿವನ ಲಿಂಗವನ್ನು ನಾನು ನೋಡಿದೆನು. ಆ ಶಿವಲಿಂಗವು ವಿಶಾಲವಾಗಿಯೂ, ವಿಮಲವಾಗಿಯೂ, ಮಹಾಮಹಿಮೆಯುಳ್ಳದಾಗಿಯೂ ಇದ್ದಿತು. ಅದ್ಭುತವಾಗಿಯೂ ರಮಣೀಯವಾಗಿಯೂ ಇರುವ ಶಿವಲಿಂಗವು ಈ ಕೇತಕೀಪುಷ್ಪಗಳಿಂದ ಪೂಜಿಸಲ್ಪಟ್ಟಿದ್ದಿತು. ಮಹಾದ್ಭುತವಾಗಿಯೂ ಪ್ರಸನ್ನವಾಗಿಯೂ ಇರುವ ಶಿವಲಿಂಗವು ದರ್ಶನೀಯವಾದುದು. ಅಂತಹ ಪರಶಿವಲಿಂಗ ಮಸ್ತಕವನ್ನು ನಾನೊಬ್ಬನೇ ನೋಡಿರುವೆನೆಂಬುದರಲ್ಲಿ ಸಂಶಯವಿಲ್ಲ. ಮತ್ತಾರೂ ನೋಡಿಲ್ಲವೆಂಬುದರಲ್ಲಿ ಸಂದೇಹವೆಲ್ಲಿಯದು?' ಎಂದು ಹೇಳಿದನು. ಇಂತು ನುಡಿದ ಬ್ರಹ್ಮನ ಮಾತುಗಳನ್ನು ಕೇಳಿ ದೇವತೆಗಳೆಲ್ಲರೂ ವಿಸ್ಮಯಗೊಂಡರು. ಆಗ ಅಧ್ಯಾತ್ಮದೀಪಕನಾದ ವಿಷ್ಣುವು ಪಾತಾಳಲೋಕದಿಂದ ಬಂದನು. ಆಗ ದೇವತೆಗಳೆಲ್ಲರೂ ವಿಷ್ಣುವನ್ನು ಪ್ರಶ್ನಿಸಲು ಅವನು, 'ಎಲೈ ದೇವತೆಗಳಿರಾ ! ನಾನು ಶಿವಲಿಂಗದ ಮೂಲವನ್ನು ನೋಡಲಿಲ್ಲವು. ಪಾತಾಳಕ್ಕಿಂತಲೂ ಮುಂದೆ ವ್ಯಾಪಿಸಿರುವ ಲಿಂಗಮೂರ್ತಿಯನ್ನು ನೋಡಿ ನನಗೆ ಆಶ್ಚರ್ಯವುಂಟಾಯಿತು. ಅತಲ, ವಿತಲ, ಸುತಲ, ರಸಾತಲ, ತಲಾತಲಗಳೆಲ್ಲವೂ ಶೂನ್ಯವಾಗಿಯೇ ಕಾಣುತ್ತಿರುವುವು. ಮೂಲವೂ, ಮಧ್ಯವೂ, ಅಂತ್ಯವೂ ಯಾವುದೂ ಕಾಣುವುದಿಲ್ಲ. ಈ ಲಿಂಗರೂಪಿಯು ಮಹದೇವನೇ ಹೊರತು ಮತ್ತೆ ಬೇರೆಯಲ್ಲವು. ಈತನಿಂದಲೇ ನೀವೂ, ಋಷಿಗಳೂ ಹುಟ್ಟಿರುವಿರಿ.' ಎಂದು ನುಡಿದನು. ಆಗಲಾ ದೇವತೆಗಳೂ ಋಷಿಗಳೂ ವಿಷ್ಣುವಿನ ಮಾತುಗಳನ್ನು ಪುರಸ್ಕರಿಸಿದರು. ಬಳಿಕ ವಿಷ್ಣುವು ಬ್ರಹ್ಮನನ್ನು ಕುರಿತು ನಸುನಗುತ್ತಾ 'ಎಲೈ ಬ್ರಹ್ಮನೇ ! ನೀನು ನಿಜವಾಗಿಯೂ ಶಿವಲಿಂಗ ಮಸ್ತಕವನ್ನು ನೋಡಿರುವುದೇ ಆದರೆ ನಿನಗೆ ಸಾಕ್ಷಿಗಳಾರು' ಎಂದು ಕೇಳಿದನು. ಆಗ ಬ್ರಹ್ಮನು "ಎಲೈ ವಿಷ್ಣ್ವಾದಿದೇವತೆಗಳಿರಾ! ಕೇತಕಿಪುಷ್ಪವೂ, ಸುರಭಿಯು ನನಗೆ ಸಾಕ್ಷಿಗಳು' ಎಂದು ನುಳ್ಳಾಡಿದನು. ದೇವತೆಗಳು ಆ ಕೇತಕಿಯನ್ನೂ, ಸುರಭಿಯನ್ನೂ ಕರೆಯಿಸಿದರು. ಆಗ ಸುರಭಿಯು 'ಎಲೈ ದೇವತೆಗಳಿರಾ ! ಬ್ರಹ್ಮನು ಲಿಂಗಮಸ್ತಕವನ್ನು ನೋಡಿ

ದನು. ಈ ಕೇತಕೀ ಪುಷ್ಪವನ್ನು ಆ ಲಿಂಗ ಮಸ್ತಕಕ್ಕೆ ಪೂಜಿಸಿದ್ದರು.' ಎಂದು ನುಡಿಯಿತು. ಆಗ ಆಕಾಶವಾಣಿಯು ಎಲ್ಲ ದೇವತೆಗಳಿಗೂ ಕೇಳಿಸುವಂತೆ 'ಈ ಬ್ರಹ್ಮನು ಲಿಂಗಮಸ್ತಕವನ್ನು ನೋಡಲಿಲ್ಲವು. ಈ ಸುರಭಿಯೂ, ಕೇತಕಿಯೂ ಸುಳ್ಳು ಸಾಕ್ಷಿಗಳನ್ನು ಹೇಳುತ್ತಿರುವರು' ಎಂದು ಸಾರಿತು. ಬಳಿಕ ವಿಷ್ಣುವೇ ಮೊದಲಾದ ದೇವತೆಗಳೆಲ್ಲರೂ ಆ ಸುರಭಿ ಕೇತಕಿಗಳನ್ನು ಶಪಿಸಲಾರಂಭಿಸಿದರು. ಸುಳ್ಳು ಹೇಳಿದುದರಿಂದ ಸುರಭಿಯ ಮುಖವು ಅಪವಿತ್ರವಾಯಿತು. ಕೇತಕಿಯು ಶಿವಪೂಜೆಯಿಂದ ಬಹಿಷ್ಕೃತವಾಯಿತು, ಸೃಷ್ಟಿಕರ್ತನಾದ ಬ್ರಹ್ಮನು ಅನೃತವನ್ನಾಡಿದುದಕ್ಕೋಸುಗ ಆಕಾಶವಾಣಿಯು ಅವನನ್ನು ಶಪಿಸಿದಳು. 'ಎಲೈ ಬ್ರಹ್ಮನೇ! ನೀನು ಹುಡುಗಾಟಿಕೆಯಿಂದ ಭೃಗುವೇ ಮೊದಲಾದ ಋಷಿಗಳಿಂದಲೂ, ಪುರೋಹಿತನಿಂದಲೂ ಕೂಡಿ ಶಿವಲಿಂಗವನ್ನು ನೋಡಿದೆನೆಂದು ಸುಳ್ಳುಹೇಳಿದೆಯಷ್ಟೆ! ಸುಳ್ಳು ಹೇಳಿದುದರಿಂದ ನೀನು ದುಃಖವನ್ನನುಭವಿಸುವನಾಗಿಯೂ, ಅಪೂಜ್ಯನಾಗಿಯೂ ಆಗು. ಈ ಋಷಿಗಳಾದರೋ ಅತತ್ವಜ್ಞರೂ, ಪ್ರತಿದಿನವೂ ತಮ್ಮ ಜ್ಞಾನವನ್ನು ಹಾಳುಮಾಡಿಕೊಳ್ಳುವವರಾಗಿಯೂ, ಮೂರ್ಖವಾದಿಗಳೂ, ಮೂಢರೂ, ದುರಹಂಕಾರಿಗಳಾಗಿಯೂ ಆಗಲಿ' ಎಂಬೀ ಪ್ರಕಾರವಾಗಿ, ಆಕಾಶವಾಣಿಯ ರೂಪದಿಂದ ಶಪ್ತರಾದ ದೇವತೆಗಳೂ. ಋಷಿಗಳೂ. ಬ್ರಹ್ಮನೂ ಮಹಾಮುಖಿಯಿಂದ ಕೂಡಿದ ಪರಶಿವಲಿಂಗಮೂರ್ತಿಯನ್ನು ಶರಣುಹೊಕ್ಕರು.

# ಅಧ್ಯಾಯ ೭

## ವಿಷ್ಣುವು ಯೋನೀಭೂತನಾಗಿ ಲಿಂಗವನ್ನು ಧರಿಸುವಿಕೆ.

ಸೂತಪುರಾಣಿಕನು ಹೇಳುತ್ತಾನೆ:—ಅಯ್ಯಾ ಋಷಿಗಳಿರಾ! ಕೇಳಿರಿ. ಅನಂತರದಲ್ಲಿ ದೇವತೆಗಳೂ, ಋಷಿಗಳೂ, ಬ್ರಹ್ಮನೂ ಆ

ಈಶ್ವರ ಸಂಬಂಧವಾದ ಲಿಂಗಮೂರ್ತಿಯನ್ನು ಸ್ತುತಿಸಲಾರಂಭಿಸಿದರು. ಬ್ರಹ್ಮನು ಲಿಂಗಮೂರ್ತಿಗೆ ಅನಂತ ನಮಸ್ಕಾರಗಳನ್ನರ್ಪಿಸಿ 'ಎಲೈ ಪರಮೇಶ್ವರನೇ! ನೀನೇ ಲಿಂಗರೂಪಿಯು ಮಹಾನುಭಾವನು! ಮಹಾತ್ಮರೂಪಿಯೂ, ವೇದಾಂತವೇದ್ಯನೂ, ನೀನೇ ಆಗಿರುವೆ! ದೇವಾ! ಯಾವುದರಿಂದ ಈ ಸಕಲ ಪ್ರಪಂಚವೂ ಆನಂದವನ್ನು ಹೊಂದುವ ಹಾಗೆ ಮಾಡಲ್ಪಟ್ಟಿತೋ ಅಂತಹ ಮಹಾನುಭಾವನೂ ನೀನೆ! ಎಲೈ ಸ್ವಾಮಿಯೇ ನೀನೇ ಅಲ್ಲವೆ ಈ ಹದಿನಾಲ್ಕು ಲೋಕಗಳಿಗೂ ಸಾಕ್ಷಿಭೂತನು! ಲಯಕರ್ತನೂ, ಪರಿಪಾಲಕನೂ ಮಹಾಭೈರವನೂ, ಜಗತ್ಪತಿಯೂ ನೀನೇ ಆಗಿರುವೆ! ಲಿಂಗರೂಪದಿಂದ ಸಮಸ್ತ ಬ್ರಹ್ಮಾಂಡವನ್ನು ವ್ಯಾಪಿಸಿರುವವನು ನೀನಲ್ಲದೆ ಮತ್ತೆ ಬೇರಯಿಲ್ಲ. ಎಲೈ ಶಂಕರನೇ! ಮಾಯಾಪಾಶದಿಂದ ಬದ್ಧವಾದ ಬುದ್ಧಿಗಳುಳ್ಳ ನಾವೆಲ್ಲರೂ ಕೇವಲ ಪಶುಗಳು. ಈ ಪಶುಗಳನ್ನು ಉದ್ಧಾರಮಾಡುವ ಪಶುಪತಿಯು ನೀನೇ ಅಲ್ಲವೆ! ದೇವಾ! ಪ್ರಪಂಚವನ್ನು ಸೃಷ್ಟಿಸುವ ಸ್ರಷ್ಟನಾದ ನನ್ನನ್ನು ಸೃಷ್ಟಿಸಿದವನೂ ನೀನೇ ಅಲ್ಲವೆ! ಎಲೈ ಜಗದೇಕಬಂಧುವೇ, ಅನಾಥ ರಕ್ಷಕನೇ, ಜಗತ್ಪತಿಯೇ !!! ನಿನ್ನನ್ನು ಅನನ್ಯ ಭಕ್ತಿಯಿಂದ ವಂದಿಸುವೆನು. ಕೃಪೆಮಾಡು. ಕೃಪೆಮಾಡಿ ನಮ್ಮನ್ನು ರಕ್ಷಿಸು!' ಎಂದು ಸ್ತುತಿಸಿದನು. ಬಳಿಕ ಋಷಿಗಳೆಲ್ಲರೂ ಶಿವಲಿಂಗವನ್ನು ನಮಸ್ಕರಿಸಿ 'ಎಲೈ ಶಂಕರನೇ! ಸಕಲ ಚರಾಚರ ಪ್ರಾಣಿಗಳಲ್ಲಿ ನೆಲಸಿರುವ ಆತ್ಮನೂ, ಪರಮಾತ್ಮನೂ ನೀನೆ. ಪ್ರಕೃತಿಸ್ವರೂಪನೂ, ಎಲ್ಲರೂ ಯಾವನನ್ನು ಪೂಜಿಸುವರೋ ಅವನೂ ನೀನೇಯಾಗಿರುವೆ! ನಾವೆಲ್ಲರೂ ಕಾಮಾವೇಶಿತರಾಗಿ ನಿನ್ನ ಸ್ವರೂಪವನ್ನು ತಿಳಿಯಲಾರದೆಹೋದೆವು. ಎಲೈ ಸ್ವಾಮಿಯೇ! ಪ್ರಪಂಚಕ್ಕೆ ಮಾತ್ರವಲ್ಲದೆ, ಹದಿನಾಲ್ಕು ಲೋಕಗಳಿಗೂ, ನೀನೇ ತಾಯಿಯು! ನೀನೇ ತಂದೆಯು! ಬಂಧುವೂ, ಬಳಗವೂ ನೀನೇ ಆಗಿರುವೆ! ವೇದವಿದರಿಗೆ ಗೋಚರನೂ, ವೇದಸಂಬಂಧವಾದ ಚಿಜ್ಜ್ಯೋತಿಯೂ ನೀನೆ! ಸೃಷ್ಟಿ ಸ್ಥಿತಿಲಯ ಕಾರ್ಯಗಳು ನಿನ್ನಿಂದಾಗುವುದರಿಂದ, ನೀನು ಶರ್ವನೆನಿಸಿರುವೆ!

ಎಲ್ಲವೂ ನಿನ್ನಿಂದ ಸಂಭವಿಸುತ್ತದೆಯಾದುದರಿಂದ ನೀನು ಶಂಭುವೆನಿಸಿ ರುವೆ ! ದೇವಾ ! ಅಂತಹ ನಿನ್ನನ್ನು ಈ ದೇವತೆಗಳೂ ನಾವೂ ಶರ ಣುಹೊಕ್ಕಿರುವೆವು ! ನಮ್ಮಲ್ಲಿ ದಯತೋರಿ ಕಾಪಾಡು !' ಎಂದು ಸ್ತುತಿಸಿದರು. ಇಂತು ಪ್ರಾರ್ಥಿಸಿದ ದೇವತೆಗಳ ಮತ್ತು ಋಷಿಗಳ ಪ್ರಾರ್ಥನೆಗೆ ಪ್ರಸನ್ನನಾದ ಲೋಕ ಶಂಕರನಾದ ಶಂಕರನು 'ಎಲೈ ದೇವತೆಗಳಿರಾ ! ಈಗ ನೀವು ಈ ವಿಷಯದಲ್ಲಿ ವಿಷ್ಣುವನ್ನು ಪ್ರಾರ್ಥಿ ಸಿರಿ. ಆತನಿಂದೀಕಾರ್ಯ ಫಲಕಾರಿಯಾಗುವುದು ' ಎಂದು ಹೇಳಿ ಅಂತರ್ಧಾನವಾದನು.

ಶಂಕರನ ಆಜ್ಞಾನುಸಾರವಾಗಿ, ದೇವತೆಗಳೂ, ಋಷಿಗಳೂ ವಿಷ್ಣುವಿನಲ್ಲಿಗೆ ಬಂದು ಆತನನ್ನು ಸ್ತುತಿಸಲಾರಂಭಿಸಿದರು. 'ಎಲೈ ಮಹಾವಿಷ್ಣುವೇ ! ಜಗದೇಕ ಬಂಧುವೇ ! ಜಗನ್ನಿವಾಸನೇ ! ಈಶ್ವ ರನ ಶಾಪದಿಂದ ನರಳುತ್ತಿರುವ ನಾವೆಲ್ಲರೂ ನಿನ್ನನ್ನು ಶರಣುಹೊಕ್ಕಿ ರುವೆವು. ದಯತೋರಿ ಕಾಪಾಡು. ನಮಗೆ ನೀನೇ ಗತಿಯು' ಎಂದು ಸ್ತುತಿಸಿದ ದೇವತೆಗಳನ್ನು ಕುರಿತು ಮಹಾವಿಷ್ಣುವು ನಸುನಗುತ್ತಾ 'ಎಲೈ ದೇವತೆಗಳಿರಾ ! ರಾಕ್ಷಸರಿಂದ ಪೀಡಿತರಾದ ನಿಮ್ಮನ್ನು ಹಿಂದೊಮ್ಮೆ ಕರುಣಿಸಿ ಕಾಪಾಡಿದೆನು. ಈಗಲಾದರೋ ಈ ಮಹಾ ಶಿವಲಿಂಗದಿಂದ ಮಹಾಭಯವು ಹುಟ್ಟಿರುವುದು. ಈ ಭಯವನ್ನು ತಪ್ಪಿಸಲು ನಾನು ಶಕ್ಯನಲ್ಲವು ' ಎಂದನು. ಮಹಾವಿಷ್ಣುವಿನ ನುಡಿ ಗಳನ್ನು ಕೇಳಿ ದೇವತೆಗಳೆಲ್ಲರೂ ಬಹಳವಾಗಿ ಖತಿಗೊಂಡರು. ಆಗ ಆಕಾಶವಾಣಿಯು, ದೇವತೆಗಳನ್ನು ಸಂತೈಸುತ್ತಾ ವಿಷ್ಣುವನ್ನು ಕುರಿತು 'ಎಲೈ ಮಹಾನುಭಾವನೇ ! ನೀನು ಯೋನಿಭೂತನಾಗಿ ಈ ಶಿವಲಿಂಗವನ್ನು ಧರಿಸಿ ಪ್ರಪಂಚವನ್ನು ಕಾಪಾಡು' ಎಂದು ನುಡಿ ಯಿತು. ಆಕಾಶವಾಣಿಯು ಆಜ್ಞೆಯಂತೆ ವಿಷ್ಣುವು ಯೋನಿಭೂತ ನಾಗಿ ಮಹಾ ಶಿವಲಿಂಗವನ್ನು ಧರಿಸಿದನು. ದೇವತೆಗಳೆಲ್ಲರೂ ಪರಶಿವನನ್ನು ಧ್ಯಾನಿಸಿದರು. ಬಳಿಕ ಶಿವಪೂಜಾರತನಾಗಿಯೂ, ಶಿವಪ್ರಿಯನಾಗಿಯೂ ಇರುವ ವೀರಭದ್ರನು, ದೇವತೆಗಳಿಂದ

ಲೂ, ಋಷಿಗಳಿಂದಲೂ ಸಹಿತನಾಗಿ ಶಿವಲಿಂಗವನ್ನರ್ಚಿಸಿದನು. ತತ್ವವಿದನು, ಯಾವುದರಲ್ಲಿ ಈ ಸಮಸ್ತ ಲೋಕಗಳೂ ಹುಟ್ಟಿ ಬೆಳೆದು ನಾಶವಾಗುವುವೋ ಅಂತಹುದಕ್ಕೆ ಲಿಂಗವೆಂದು ಹೇಳುವರು. ಇಂತಹ ಲಿಂಗವನ್ನು ದೇವತೆಗಳೂ, ಋಷಿಗಳೂ ವೇದವಾಕ್ಯಗಳಿಂದ ಸ್ತುತಿಸಲಾರಂಭಿಸಿದರು. ಅದೆಂತೆನೆ:—ಎಲೈ ಸ್ವಾಮಿಯೇ! ನೀನು ಅಣುಗಳಿಗಿಂತಲೂ ಅಣುಪ್ರಾಯನು! ಮಹದ್ವಸ್ತುಗಳೆಂದಾವುವಿರುವುವೋ ಅವುಗಳಿಗಿಂತಲೂ ಮಹತ್ತರವಾದವನು! ದೇವಾ! ನೀನು ಈ ಲಿಂಗರೂಪದಿಂದ ಬ್ರಹ್ಮಾಂಡ ಗೋಲಕವೆಲ್ಲವನ್ನೂ ವ್ಯಾಪಿಸಿರುವೆಯಲ್ಲದೆ, ಆತ್ಮನೂ, ಪರಮಾತ್ಮಸ್ವರೂಪನೂ ನೀನೇ ಆಗಿರುವೆ! ನಿನ್ನ ಮಹಿಮೆಯನ್ನು ಆದಿಶೇಷನೂ ಬಣ್ಣಿಸಲಾರದೆ ಹೋದನಲ್ಲವೆ? ಇಂತಿರುವಲ್ಲಿ ಕೇವಲ ಮಾನುಷನೋಹಿತರಾದ ನಾವು ಬಣ್ಣಿಸುವದೆಂತು? ನೀನು ಬಹು ರೂಪಿಯು! ನಿನಗೆ ರೂಪವಿಲ್ಲ! ಅಜ್ಞಾನಿಗಳಾದ ನಮ್ಮ ಕಂಗಳಿಗೆ ಲಿಂಗರೂಪಿಯಾಗಿ ಕಾಣುವೆ? ಜ್ಞಾನಿಗಳಾದವರು ನೀನು ಚಿಜ್ಜ್ಯೋತಿರೂಪನಾಗಿ ಕಾಣುವೆಯೆಂದು ಚಿತ್ರಿಸಿರುವರು! ಆದುದರಿಂದೆಲೈ! ಮಹದೇವನೇ! ದೀನರಾಗಿಯೂ, ಶರಣಾಗತರಾಗಿಯೂ, ಅಜ್ಞಾನಿಗಳಾಗಿಯೂ ಇರುವ ನಮಗೆ ಈ ನಿನ್ನ ಲಿಂಗರೂಪದ ಪೂಜೆಯನ್ನನುಗ್ರಹಿಸು! ನಾವು ಕೃತಾರ್ಥರಾಗುವೆವು.' ಎಂಬೀಪ್ರಕಾರವಾಗಿ ಸ್ತುತಿಸಲು ಪರಶಿವನು ಅನೇಕ ಲಿಂಗಗಳನ್ನು ಕಲ್ಪಿಸಿದನು.

ಆಗ ವಿಷ್ಣುವು ವೈಕುಂಠದಲ್ಲಿ ಸದಾ ಶಿವಲಿಂಗವನ್ನು ಪೂಜಿಸಿದನು; ಸತ್ಯಲೋಕದಲ್ಲಿ ಬ್ರಹ್ಮನು ಬ್ರಹ್ಮೇಶ್ವರಲಿಂಗವನ್ನು ಅರ್ಚಿಸಿದನು; ಇಂದ್ರನು ಅಮರೇಶ್ವರ ಲಿಂಗವನ್ನು ಅಮರಾವತಿಯಲ್ಲಿ ಪ್ರತಿಷ್ಠಿಸಿ ಪೂಜಿಸಿದನು; ಬಳಿಕ ವರುಣದಿಕ್ಕಿನಲ್ಲಿ ವಾರುಣೇಶ್ವರಲಿಂಗವೂ, ನೈರುತದಲ್ಲಿ ನೈರುತೇಶ್ವರ ಲಿಂಗವೂ, ವಾಯುವ್ಯದಲ್ಲಿ ಪಾವನೇಶ್ವರ ಲಿಂಗವೂ, ಮೃತ್ಯುಲೋಕದಲ್ಲಿ ಕೇದಾರೇಶ್ವರಲಿಂಗವೂ, ನರ್ಮದಾ ನದೀತೀರದಲ್ಲಿ ಓಂಕಾರೇಶ್ವರಲಿಂಗವೂ, ಪ್ರಯಾಗದಲ್ಲಿ ಲಲಿತೇಶ್ವರ ಲಿಂಗವೂ ಪ್ರತಿಷ್ಠಿಸಲ್ಪಟ್ಟವು. ಬ್ರಹ್ಮಗಿರಿಯಲ್ಲಿ ಭದ್ರೇಶ್ವರ, ತ್ರಿಯಂ

ಬಕೇಶ್ವರಗಳೆಂಬ ಲಿಂಗಗಳನ್ನೂ, ಗಂಗಾಸಾಗರ ಸಂಗಮದಲ್ಲಿ ದ್ರಾಕ್ಷಾರಾಮೇಶ್ವರಲಿಂಗವನ್ನೂ, ಸೌರಾಷ್ಟ್ರದಲ್ಲಿ ಸೋಮೇಶ್ವರ ಲಿಂಗವನ್ನೂ, ವಿಂಧ್ಯಪರ್ವತದಲ್ಲಿ, ಸರ್ವೇಶ್ವರಲಿಂಗವನ್ನೂ, ಶ್ರೀಶೈಲ ದಲ್ಲಿ ಶಿಖರೇಶ್ವರ ಲಿಂಗವನ್ನೂ, ಕಾಂಚಿಯಲ್ಲಿ ಅಮ್ಲಾಲೇಶ್ವರ ಲಿಂಗ ವನ್ನೂ, ಸಿಂಹಳದಲ್ಲಿ ಸಿಂಹಳೇಶ್ವರ ಲಿಂಗವನ್ನೂ, ಪಾತಾಳದಲ್ಲಿ ಹಾಟಕೇಶ್ವರಲಿಂಗವನ್ನೂ ಪ್ರತಿಷ್ಠಿಸಿ ಪೂಜಿಸಿದರು. ಈರೀತಿಯಾಗಿ ಮೂರು ಲೋಕಗಳೂ ಲಿಂಗಗಳಿಂದ ತುಂಬಿಹೋದವು. ಆಗ ಶಂಕರನು ತನ್ನ ಸಂಬಂಧವಾದ ಲಿಂಗಗಳ ಪೂಜೆಗಾಗಿ ವೀರಭದ್ರಾಂಶ ರನ್ನು ಸೃಷ್ಟಿಸಿದನು. (ಇವರನ್ನು ಈಗಲೂ ಶಿವದ್ವಿಜರೆಂದು ಕರೆಯು ವರು) ಈ ಶಿವದ್ವಿಜರು, ಲಿಂಗವನ್ನರ್ಚಿಸಲು ಶಿವನಿಂದ ಇಪ್ಪತ್ತೆಂಟ ಕ್ಕಿಂತಲೂ ಅಧಿಕವಾದ ಸಂಸ್ಕಾರಗಳು ಹೇಳಲ್ಪಟ್ಟಿವೆಯಲ್ಲದೆ, ಶಂಕ ರನು ಇನ್ನೂ ಅನೇಕ ಸನಾತನ ಶಿವಧರ್ಮಗಳನ್ನು ಹೇಳಿರುವನು. ಅಯ್ಯಾ ಋಷಿಗಳಿರಾ! ಪರಶಿವಲಿಂಗಮಹಿಮೆಯನ್ನು ನಂದಿಯು ಬಹಳ ಚೆನ್ನಾಗಿ ತಿಳಿದಿರುವನು. ಷಣ್ಮುಖನೂ ಸಹ ತಿಳಿದಿರುವನು. ನಂದಿಯು ಶಿವಲಿಂಗವನ್ನು ಧರಿಸಿರುವನು. ಪೂರ್ವಿಕರೂ ಲಿಂಗ ವನ್ನು ಧರಿಸುತ್ತಿದ್ದರು. ಮಹಾತ್ಮನಾಗಿಯೂ, ಪವಿತ್ರನಾಗಿಯೂ ಇರುವ ನಂದಿಯು "ಲಿಂಗದಿಂದಲೇ ಸಾಯುವಿಕೆ. ಲಿಂಗದಿಂದಲೇ ಬದುಕುವಿಕೆ" ಎಂಬಿವೇ ಮೊದಲಾದ ಧರ್ಮಗಳನ್ನು ಸ್ಥಾಪಿಸಿ ದನು. ಧರ್ಮಗಳಲ್ಲಿ ಸ್ಕಂದ (ಷಣ್ಮುಖ) ನಿಂದ ಪ್ರತಿಪಾದಿಸಲ್ಪಟ್ಟಿ ರುವ ಧರ್ಮಗಳು ಶ್ರೇಷ್ಠಗಳು. ಅಗಸ್ತ್ಯಮಹರ್ಷಿಯು ಈ ಸ್ಕಂದನಿಂದ ಪಂಚಾಕ್ಷರೀಪ್ರಣವ ವಿದ್ಯೆಯನ್ನೂ, ಷಡಕ್ಷರೀ ಮಂತ್ರವನ್ನೂ ಉಪದೇಶಹೊಂದಿದನು. ಇದಲ್ಲದೆ ಆಯಾಯ ಆಚಾರ್ಯರು (ಮತ ಗುರುಗಳು) ಮಾಡಿದ ಆಗಮಗಳನೇಕವಿರುವುವು. ಅಯ್ಯಾ ಋಷಿ ಗಳಿರಾ! ಹೆಚ್ಚಾಗಿ ಹೇಳುವುದರಿಂದೇನು ಫಲವು? ಯಾವ ನರಶ್ರೇ ಷ್ಠನು "ಶಿವ" ಎಂಬ ಅಕ್ಷರದ್ವಯವನ್ನು ನುಡಿಯುತ್ತಾನೆಯೋ ಅಂತಹನು ಸಾಕ್ಷಾತ್ಪರಶಿವನೆಂಬುದರಲ್ಲಿ ಸಂಶಯವಿಲ್ಲವು. ಯಾರು ಸನ್ಮಾರ್ಗಗಾಮಿಗಳಾಗಿ, ಶಿವಧರ್ಮಗಳನ್ನರಿಯುವರೋ ಅವರೇ

ಮಹೇಶ್ವರರು. ಅವರೇ ಮನುಜರ ಪಾಪಗಳನ್ನು ನಾಶಮಾಡುವವರು. ಇದನ್ನು ಚೆನ್ನಾಗಿ ತಿಳಿಯಿರಿ. ಈ ಲೋಕದಲ್ಲಿ, ಮನುಜನು ಕಾಕತಾಳೀಯ ನ್ಯಾಯದಿಂದಾಗಲಿ, ಶ್ರದ್ಧೆಯಿಂದಾಗಲಿ, ಅಶ್ರದ್ಧೆಯಿಂದಾಗಲಿ, ಹೇಗೋ ಅಂತು ಶಿವನಲ್ಲಿ ಭಕ್ತಿಯನ್ನಿಟ್ಟಮಾತ್ರಕ್ಕೆ ಸದ್ಗತಿಯನ್ನು ಹೊಂದುತ್ತಾನೆ. ಇದಕ್ಕೊಂದು ಪುರಾತನವಾದ ಇತಿಹಾಸವುಂಟು.

ಹಿಂದೆ ಒಂದು ಹೆಣ್ಣು ಪತಂಗದ ಹುಳುವು ಒಂದು ಶಿವದೇವಾಲಯಕ್ಕೆ ಬಂದಿತು. ಅಲ್ಲಿ ಯಾರೋ ಶಿವಪ್ರೀತ್ಯರ್ಥವಾಗಿ ನೈವೇದ್ಯವನ್ನಿಟ್ಟಿದ್ದರು. ಆ ಪತಂಗ ಹುಳುವು ಆ ನೈವೇದ್ಯವನ್ನು ತಿನ್ನಲೋಸುಗ ಬಂದಿತು. ಆತುರದಿಂದ ತಿನ್ನಲು ಬಂದಾಗ ಹುಳುವಿನ ರೆಕ್ಕೆಗಳಿಂದ ಶಿವದೇವಾಲಯವು ಸಮ್ಮಾರ್ಜಿತವಾಯಿತು. ಹುಳುವು ನಿಜವಾದ ಭಕ್ತಿಯಿಂದ ದೇವಾಲಯದಲ್ಲಿ ಸಮ್ಮಾರ್ಜನೆ ಮಾಡಲಿಲ್ಲವು. ಆದರೆ ಈ ಕರ್ಮವಿಪಾಕದ ದೆಶೆಯಿಂದಲೇ ಆ ಹೆಣ್ಣು ಪತಂಗದ ಹುಳುವು ಸ್ವರ್ಗವನ್ನು ಸೇರಿತು. ಸ್ವಲ್ಪಕಾಲ ಸ್ವರ್ಗ ಸುಖವನ್ನನುಭವಿಸಿ ಮರಳಿ ಘೋರವಾದ ಈ ಸಂಸಾರಕ್ಕೆ (ಪ್ರಪಂಚಕ್ಕೆ ಬಂದಿತು. ಇಲ್ಲಿಯಾದರೋ ಆ ಹೆಣ್ಣು ಪತಂಗವು ಕಾಶೀರಾಜನ ಮಗಳಾಗಿ "ಸುಂದರಿ" ಎಂಬ ನಾಮಧೇಯದಿಂದ ಬೆಳೆದಳು. ಸುಂದರಿಯು ರಾಜಕುಮಾರಿಯಾದರೂ ಹಿಂದಿನ ಜನ್ಮದ ವಾಸನಾವಿಶೇಷದಿಂದ, ಪ್ರತಿದಿನದ ಬ್ರಾಹ್ಮೀ ಮುಹೂರ್ತದಲ್ಲಿ ಎದ್ದು, ಶಿವದೇವಾಲಯಕ್ಕೆ ಒಂದು ಸಮ್ಮಾರ್ಜನೆಯನ್ನು ಮಾಡಿ, ಶಿವನನ್ನು ವಂದಿಸಿ ತೆರಳುತ್ತಿದ್ದಳು. ರಾಜಕುವರಿಗೆ, ಪರಿಚಾರಕ ಪರಿಚಾರಕಿಯರಿಗೆ ಕೊರತೆಯುಂಟೆ? ಎಂದಿಗೂ ಇಲ್ಲವು. ಹಾಗಿದ್ದರೂ, ಆ ಸುಂದರಿಯು ಹಿಂದಿನ ಜನ್ಮದಲ್ಲಿ ತಾನು ಆಚರಿಸಿದ್ದ ಆ ಶಿವಭಕ್ತಿಯನ್ನೇ ಈಗಲೂ ಮಾಡುತ್ತಿರುವಳು. ಇಂತಿರಲೊಂದು ದಿನ ಉದ್ದಾಲಕ ಋಷಿಯು ರಾಜಕುವರಿಯಾದ ಸುಂದರಿಯು ಸ್ವಹಸ್ತದಿಂದಲೇ ಸಮ್ಮಾರ್ಜನೆ ಮಾಡುತ್ತಿದ್ದುದನ್ನು ನೋಡಿ ಬಹಳವಾಗಿ ಆಶ್ಚರ್ಯ

ಪಟ್ಟನು. ಬಳಿಕ ಆಕೆಯನ್ನು ಕುರಿತು 'ಎಲೌ ಬಾಲೇ! ನೀನು ರಾಜಕುಮಾರಿಯು. ನಿನಗೆ ಬೇಕಾದಹಾಗೆ ದಾಸಾದಾಸಿಯರು ಇರುವರು. ನಿನ್ನ ಆಜ್ಞಾಮಾತ್ರದಿಂದ ಅವರು ಬೇಕಾದ ಕೆಲಸವನ್ನು ಮಾಡುವರು. ಹೀಗಿರುವಲ್ಲಿ ಸುಕುಮಾರಿಯಾದ ನೀನು ನಿನ್ನ ಸ್ವಹಸ್ತದಿಂದಲೇ ಈ ದೇವಾಲಯವನ್ನು ಸಮ್ಮಾರ್ಜಿಸುವೆಯ ಲ್ಲಾ! ಇದೇನು ವಿಚಿತ್ರ! ದಯವಿಟ್ಟು ಹೇಳು.' ಎಂದು ಕೇಳಿ ದನು. ಇಂತು ನುಡಿದ ಉದ್ದಾಲಕ ಋಷಿಯ ಮಾತುಗಳನ್ನು ಕೇಳಿ ಆ ಸುಂದರಿಯು "ಪೂಜ್ಯರೇ! ಶಿವನಲ್ಲಿ ಭಕ್ತಿಯನ್ನಿಟ್ಟು, ಶಿವಸೇವೆಯನ್ನು ಮಾಡಿದವರೆಲ್ಲರೂ ಕೈಲಾಸವನ್ನು ಹೊಂದುವರ ಲ್ಲವೆ? ಯಾರು ಶಿವದೇವಾಲಯದಲ್ಲಿ ಸಮ್ಮಾರ್ಜನೆಯನ್ನು ಮಾಡು ವರೋ, ಯಾರು ಪ್ರತಿದಿನವೂ ಶಿವದರ್ಶನಾರ್ಥವಾಗಿ ಶಿವಾಲಯಕ್ಕೆ ಹೋಗುವರೋ ಅಂತಹರು ಸ್ವರ್ಗವನ್ನೂ, ಮೋಕ್ಷವನ್ನೂ ಹೊಂದು ವರಲ್ಲವೆ? ಈ ಕಾರಣಗಳಿಂದ ನಾನು ಮತ್ತೊಬ್ಬರ ಅಪೇಕ್ಷೆಯಿ ಲ್ಲದೆಯೇ ಸಮ್ಮಾರ್ಜನೆಯನ್ನು ಮಾಡುತ್ತಿರುವೆನು. ಈ ಸಮ್ಮಾ ರ್ಜನಕಾರ್ಯವನ್ನು ಬಿಟ್ಟು ಮತ್ತಾವುದನ್ನೂ ನಾನರಿಯೆನು.' ಎಂದು ನುಡಿದಳು. ಇಂತು ನುಡಿದ ಸುಂದರಿಯ ಮಾತುಗಳನ್ನು ಕೇಳಿ ಉದ್ದಾಲಕನು ತನ್ನ ಜ್ಞಾನದೃಷ್ಟಿಯಿಂದ 'ಇವಳಾರು? ಹಿಂದಿನ ಜನ್ಮದಲ್ಲಿವಳೇನಾಗಿದ್ದಳು? ಯಾವ ಪುಣ್ಯ ಕೆಲಸಗಳನ್ನು ಮಾಡಿದಳು? ಇವಳಿಗೆ ಈ ಉತ್ತಮ ಜ್ಞಾನವು ಹುಟ್ಟಲು ಕಾರಣ ವೇನು?' ಎಂಬುದನ್ನು ವಿಮರ್ಶಿಸಿ ಸಕಲ ವೃತ್ತಾಂತವನ್ನೂ ತಿಳಿದು ಸುಮ್ಮನಾದನಲ್ಲದೆ, ಆಶ್ಚರ್ಯಪಟ್ಟು ಶಿವಭಕ್ತಿ ಪ್ರಾಶಸ್ತ್ಯ ವನ್ನು ಕೊಂಡಾಡುತ್ತಾ ಅದ್ಭುತವಾದ ಜ್ಞಾನಿಯಾದನು.

# ಅಧ್ಯಾಯ ೮.

## ಮಹಾ ಶಿವಭಕ್ತನಾದ ರಾವಣನ ಚರಿತ್ರೆ

ಸೂತಪುರಾಣಿಕನು ಹೇಳುತ್ತಾನೆ:— ಕೇಳಿರೈ ಋಷಿಗಳಿರಾ ! ಪರಮೇಶ್ವರನಲ್ಲಿ ಭಕ್ತಿಯನ್ನಿಟ್ಟ ಪಶುವೂ ಸದ್ಗತಿಯನ್ನು ಹೊಂದುವುದೆಂದಮೇಲೆ, ಜ್ಞಾನಿಯಾದ ಮನುಷ್ಯನು ಶಿವನಲ್ಲಿ ಭಕ್ತಿಯನ್ನಿಟ್ಟರೆ ಎಂತಹ ಸದ್ಗತಿಯನ್ನು ಹೊಂದುವನೆಂಬುದನ್ನು ನೀವೇ ಯೋಚಿಸಿರಿ. ತಾರ್ಕಿಕರೂ, ಮೀಮಾಂಸಾಶಾಸ್ತ್ರಜ್ಞಾನಿಗಳೂ ಪರಸ್ಪರವಾಗಿ ಆತ್ಮ (ಪರಮಾತ್ಮ) ವಿಚಾರವಾದ, ವಾದವಿವಾದಗಳನ್ನು ಮಾಡುವರೇ ಹೊರತು, ಆತರ್ಕ ಮೀಮಾಂಸಾಶಾಸ್ತ್ರಗಳಾರಿಂದ ಹುಟ್ಟಿದವೋ ಅಂತಹ ಪರಶಿವನ ನಾಮವನ್ನು ಒಂದುಸಲವಾದರೂ ಉಚ್ಚಾರಮಾಡುವುದಿಲ್ಲ. ಅಯ್ಯಾ ಋಷಿಗಳಿರಾ ! ಹೆಚ್ಚಾಗಿ ಹೇಳುವುದರಿಂದೇನು ಫಲವು ? ಕೇಳಿರಿ, ಚರಾಚರಾತ್ಮಕವಾದೀ ಜಗತ್ತೆಲ್ಲವೂ ಪರಶಿವನ ಲಿಂಗವನ್ನು ಧರಿಸಿಕೊಂಡೇ ಹುಟ್ಟುತ್ತವೆ. ಹಿಂದೆ ಸಾಕ್ಷಾತ್ಪರಶಿವಲಿಂಗವು ಪಿಂಡೀಯುಕ್ತವಾಗಿಯೇ ಪ್ರತಿಷ್ಠಿಸಲ್ಪಟ್ಟಿತೆಂದು ಹೇಳಿದೆನಷ್ಟೆ! ಹಾಗೆಯೇ ನರರು ಲಿಂಗಧಾರಿಗಳಾಗಿಯೂ ಸ್ತ್ರೀಯರು ಪಿಂಡೀಯುಕ್ತರಾಗಿಯೂ ಹುಟ್ಟುತ್ತಾರೆ. ಪ್ರಪಂಚವೆಲ್ಲವೂ ಶಿವಶಕ್ತಿಯಿಂದಾವೃತವಾಗಿರುವುದು. ಇಂತಿರುವ ವೇದಾಂತವೇದ್ಯನಾದ ಪರಶಿವನನ್ನು ಬಿಟ್ಟು, ಮಂದಮತಿಗಳು ಅನ್ಯದೇವತೆಗಳನ್ನು ಪೂಜಿಸುವರು. ಇದು ಚೋದ್ಯವಲ್ಲವೆ ? ಹೀಗೆಮಾಡುವುದು ಧರ್ಮವಲ್ಲ. ಕ್ಷಣಿಕ ಫಲಗಳನ್ನೀಯುವ ದೇವತೆಗಳನ್ನು ಶರಣುಹೊಕ್ಕರೆ, ಕ್ಷಣಿಕ ಫಲಗಳನ್ನೇ ಕೊಡುವರು. ಮೂಢರು ವಿಷ್ಣುವಿಗೂ, ಶಂಕರನಿಗೂ ಭೇದವನ್ನೆಣಿಸುವರು. ಇದು ಶುದ್ಧ ಅಜ್ಞಾನದಿಂದುಂಟಾದ ಭಾವನೆಯು. ವಿಷ್ಣುವು ಹೇಗೋ, ಶಿವನೂ ಹಾಗೆಯೇ ಎಂಬುದರಲ್ಲಿ ಲೇಶಮಾತ್ರವೂ ಸಂಶಯವಿಲ್ಲ. ಪೀಠಿಕಾ ಭೂತನಾಗಿರುವವನು ಸಾಕ್ಷಾತ್ ವಿಷ್ಣುವು. ಲಿಂಗರೂಪಿಯಾಗಿರುವವನು ಮಹೇಶ್ವರನು. ಆದು

ದರಿಂದ ಲಿಂಗಾರ್ಚನೆಯು ಸಕಲರಿಗೂ ಶ್ರೇಷ್ಠವಾದುದು. ಬ್ರಹ್ಮನು ಮಣಿಮಯವಾದ ಲಿಂಗವನ್ನೂ, ಇಂದ್ರನು ರತ್ನಮಯವಾದ ಲಿಂಗವನ್ನೂ, ಚಂದ್ರನು ಮುಕ್ತಾಮಯವಾದ ಲಿಂಗವನ್ನೂ, ಸೂರ್ಯನು ತಾಮ್ರಲಿಂಗವನ್ನೂ ಪೂಜಿಸುವರು. ಕುಬೇರ, ವರುಣ, ಯಮ, ನೈರುತಿ, ವಾಯು ಇತ್ಯಾದಿಗಳು, ರೌಕ್ಮ, ರಕ್ತ, ನೀಲ, ರಾಜಿತ, ಕಾಶ್ಮೀರಾದಿ ಲಿಂಗಗಳನ್ನು ಪೂಜಿಸುತ್ತಾರೆ. ಇಂತು ಸಕಲದೇವತೆಗಳೂ ಲಿಂಗಿತರಾಗಿ ಪರಶಿವಲಿಂಗಪೂಜೆಯಲ್ಲಿ ಸದಾಸಿರುತರಾಗಿರುವರು. ದೈತ್ಯರಲ್ಲಿ ಪ್ರಹ್ಲಾದನೇ ಮೊದಲಾದವರು, ರಾಕ್ಷಸರಲ್ಲಿ ವಿಭೀಷಣನೇ ಮೊದಲಾದವರು, ವಿಷ್ಣು ಭಕ್ತರಾದರೂ ಪರಶಿವಲಿಂಗವನ್ನು ಸದಾ ಪೂಜಿಸುವರು. ನಮುಚಿ, ಹಿರಣ್ಯಕಶಿಪು, ಬಲಿ, ವೃಷಪರ್ವ, ಸಂಹಾದ್ರ್ರ, ಬಾಣ ಇವರೆಲ್ಲರೂ ಶುಕ್ರನ ಶಿಷ್ಯರು. ಇವರು ಶಿವಪೂಜಾಧುರಂಧರರು. ಹೇತಿ, ಪ್ರಹೇತಿ, ಸಂಯಾತಿ, ವಿಘಸ, ಪ್ರಘಸ, ವಿದ್ಯುಜ್ಜಿಹ್ವ, ತೀಕ್ಷ್ಣದಂಷ್ಟ್ರ, ಧೂಮ್ರಾಕ್ಷ, ಮಾಲಿ, ಸುಮಾಲಿ, ಮಾಲ್ಯವಂತ, ರಾವಣೇಶ್ವರನೇ ಮೊದಲಾದವರು ಅಪ್ರತಿಭರಾದ ಶಿವಪೂಜಾ ನಿರುತರು. ಇವರೆಲ್ಲರೂ ಪೂರ್ವದಲ್ಲಿ ಶಿವಲಿಂಗವನ್ನರ್ಚಿಸಿ ತಮ್ಮ ಇಷ್ಟಸಿದ್ಧಿಯನ್ನು ಪಡೆದಿರುತ್ತಾರೆ. ಈ ರಾಕ್ಷಸರಲ್ಲಿ ರಾವಣನೆಂಬುವನು, ಶಿವನನ್ನು ಕುರಿತು, ಯಾರಿಂದಲೂ ಮಾಡಲಸಾಧ್ಯವಾದ ತಪಸ್ಸಿನಿಂದಾತನನ್ನು ಸಂತೋಷಗೊಳಿಸಿ, ಯಾರೂ ಹೊಂದದ, ವಿಜ್ಞಾನಪ್ರಜ್ಞಾನಗಳಿಂದ ಕೂಡಿದ ವರಗಳನ್ನು ಪಡೆದನು. 'ಯುದ್ಧದಲ್ಲಿ ಯಾರಿಂದಲೂ ಗೆಲ್ಲಲ್ಪಡತಕ್ಕವನಲ್ಲ' ಎಂಬ ಆಶೀರ್ವಾದವನ್ನೂ ಕೂಡ, ಶಂಕರನಿಂದ ಹೊಂದಿದನು. ಅದೂ ಅಲ್ಲದೆ ಈ ರಾವಣನು ಮತ್ತೂ ಉಗ್ರವಾದ ತಪಸ್ಸನ್ನಾಚರಿಸಿ ಶಿವನ ಶಿರಸ್ಸುಗಳಿಗೆ ದ್ವಿಗುಣಿತವಾದ ಶಿರಸ್ಸುಗಳನ್ನು ಪಡೆದನು. ಆದುದರಿಂದಲೇ, ಈ ರಾವಣೇಶ್ವರನು ದಶಮುಖನಾದುದು. ಬಳಿಕ, ಮಹಾ ಶಿವಭಕ್ತನಾದ ರಾವಣೇಶ್ವರನು, ತನ್ನ ತಪೋಬಲದಿಂದ, ದೇವತೆಗಳನ್ನೂ ಋಷಿಗಳನ್ನೂ, ಪಿತೃಗಳನ್ನೂ, ಗೆದ್ದು ಎಲ್ಲರಿಗಿಂತಲೂ ಅಧಿಕನಾಗಿ ಬೆಳಗಿದನು. ಆಗ ಈ ರಾವಣನು ಶಿವನಿಂದ ತ್ರಿಕೂಟಕ್ಕೆ ರಾಜನನ್ನಾಗಿ ಮಾಡಲ್ಪ

ಟ್ಟನು. ಎಲೈ ಋಷಿಗಳಿರಾ! ಮಹಾ ಪ್ರಭಾಶಾಲಿಯಾದ ದಶಮುಖನು, ಎಲ್ಲ ರಾಕ್ಷಸರಿಗೂ ಒಡೆಯನಾಗಿ, ಅತ್ಯುನ್ನತ ಪದವಿಯನ್ನು ಹೊಂದಿ, ಋಷಿಗಳನ್ನು ಮತ್ತು ತಪಸ್ವಿಗಳನ್ನು ಪರೀಕ್ಷಿಸಲೋಸುಗ ಹಿಂಸಿಸಲುಪಕ್ರಮಿಸಿದನು. ಎಲ್ಲರಿಗೂ ಅಜೇಯನಾದ ಈಶಿವಭಕ್ತನು ಬೇರೊಂದು ಸೃಷ್ಟಿಯನ್ನೂ ಮಾಡಿದನು. ಲೋಕಪಾಲಕರೂ, ಕೊನೆಗೆ ಬ್ರಹ್ಮನೂ ಈ ರಾವಣನಿಂದ ಸೋತುಹೋದರು. ಮಹಾತಪಸ್ವಿಯಾದೀರಾವಣನು, ಅಮೃತಕಿರಣನಾಗಿ ಚಂದ್ರನನ್ನೂ, ಸುಡುವಿಕೆಯಿಂದ ಅಗ್ನಿಯನ್ನೂ, ಕೈಲಾಸಪರ್ವತವನ್ನು ತೂಗುವಿಕೆಯಿಂದ ಸಾಕ್ಷಾತ್ಪರಶಿವಮೂರ್ತಿಯನ್ನೂ, ಐಶ್ವರ್ಯದಿಂದ ಮಹೇಂದ್ರನನ್ನೂ ಗೆದ್ದವನಾದನು. ಹೆಚ್ಚೇನು? ಆ ಲಿಂಗಪೂಜಾ ಬಲದಿಂದ ಮೂರು ಲೋಕಗಳನ್ನೂ ಗೆದ್ದು ತ್ರಿಲೋಕಾಧಿಪತಿಯಾದನು.

ಇಂತು ದಶಕಂಠನು ಎಲ್ಲವನ್ನೂ ಆಕ್ರಮಿಸಲು ಬ್ರಹ್ಮವಿಷ್ಣ್ವಾದಿ ಸಕಲ ದೇವತೆಗಳು ಮೇರುಪರ್ವತದ ತಪ್ಪಲಲ್ಲಿ ಸೇರಿ ಯೋಚಿಸಲಾರಂಭಿಸಿದರು. ಇವರಲ್ಲೊಬ್ಬನಾದ ವಿಷ್ಣುವು ದೇವತೆಗಳೆಲ್ಲರನ್ನೂ ಕುರಿತು ನುಡಿಯಲಾರಂಭಿಸಿದನು 'ಕೇಳಿರೈ ದೇವತೆಗಳಿರಾ! ಈ ರಾವಣನು ಸಾಮಾನ್ಯನಲ್ಲ. ಈ ರಾವಣನ ಘೋರವಾದ ತಪೋಗ್ನಿಯು ನಮ್ಮೆಲ್ಲರನ್ನೂ ದಹಿಸುತ್ತಿರುವುದು. ಮಹಾತ್ಮನಾದ ದಶಮುಖನು ಗೋಕರ್ಣಗಿರಿಯಲ್ಲಿರುವ ಸಾಕ್ಷಾತ್ ಗೋಕರ್ಣೇಶ್ವರ ಲಿಂಗವನ್ನು ಪೂಜಿಸುವನು. ಜ್ಞಾನಗಮ್ಯವಾದ ಅನೇಕ ಅದ್ಭುತಕಾರ್ಯಗಳನ್ನೂ ಮಾಡಿರುವನು. ಯಾರಿಂದಲೂ ಮಾಡಲಸಾಧ್ಯವಾದ ಮಹಾಕಾರ್ಯಗಳನ್ನು ಮಾಡಿರುವನು. ಕೇಳಿರೈ! ಈ ರಾವಣನು ಬಹಳವಾದ ವೈರಾಗ್ಯವನ್ನೂ, ಔದಾರ್ಯವನ್ನೂ ಹೊಂದಿ ಅಹಂಕಾರ ಮಮಕಾರಗಳನ್ನು ತ್ಯಜಿಸಿ, ಮಹಾ ಭುಜಬಲಪರಾಕ್ರಮಶಾಲಿಯಾಗಿ ಸಾವಿರಾರು ಸಂವತ್ಸರಗಳವರೆವಿಗೂ, ತನ್ನ ಸ್ವಹಸ್ತದಿಂದಲೇ ತನ್ನ ಶಿರಸ್ಸನ್ನು ಕತ್ತರಿಸಿ ಲಿಂಗಪೂಜಾರ್ಥವಾಗಿ ಸಮರ್ಪಿಸಿರುವನು. ಈತನ ಕಬಂಧವು ಅತಿಶಯವಾದ ಯೋಗಧಾರಣೆಯಿಂದಲೂ

ಸಮಾಧಿಯಿಂದಲೂ ಆ ಶಿವಲಿಂಗದಲ್ಲಿ ಲಯವನ್ನಿಟ್ಟು, ಯಾವುದೋ
ಒಂದು ಕಳೆಯಿಂದಿರಲು, ಮತ್ತೊಂದು ಶಿರಸ್ಸು ಹುಟ್ಟಿತು. ಮಹಾನು
ಭಾವನಾದ ರಾವಣೇಶ್ವರನು ಅದನ್ನೂ ತರಿದು ಲಿಂಗಮೂರ್ತಿಗ
ರ್ಪಿಸಿದನು. ಈ ರೀತಿ ದಶಕಂಠನು ಪುನಃ ಪುನಃ ಕಬಂಧನಾಗಿ ಸಹ
ಸ್ರಾಧಿಕವಾದ ಶಿರಸ್ಸುಗಳಿಂದ ಶಂಕರನನ್ನರ್ಚಿಸಿದನು. ಆಗ ಪರಾ
ತ್ಪರನಾಗಿಯೂ ಪರೇಶನಾಗಿಯೂ, ಭೂತಯೋನಿಯಾಗಿಯೂ ಇರುವ
ಶಂಕರನು ಪ್ರಸನ್ನನಾದನು. ಬಳಿಕ ಶಂಭುವು ಆ ರಾವಣನನ್ನು
ಕುರಿತು 'ಎಲೈ ಭಕ್ತಾಗ್ರಣಿಯೇ ! ನಿನ್ನ ಭಕ್ತಿಗೆ ನಾನು ಬಹಳವಾಗಿ
ಮೆಚ್ಚಿದೆನು. ಬೇಕಾದ ವರಗಳನ್ನು ಬೇಡು ' ಎಂದು ಹೇಳಿದನು.
ಮಹಾವಿಷ್ಣುವಿನ ಮಾತುಗಳನ್ನು ಕೇಳಿದ ಬ್ರಹ್ಮಾದಿದೇವತೆಗಳೆಲ್ಲರೂ
ಚಿಂತಾನ್ವಿತರಾದರು. ಬ್ರಹ್ಮನು ಇಂದ್ರಿಯಗ್ರಸ್ತನಾಗಿ ಮಗಳಾದ
ಸರಸ್ವತಿಯನ್ನು ಕಾಮಿಸಿದನು; ಇಂದ್ರನು ಜಾರನಾದನು ; ಚಂದ್ರ
ನು ಗುರುತಲ್ಪಗನಾದನು ; ಯಮನು ಚಿತ್ತವಿಭ್ರಮವುಳ್ಳವನಾ
ದನು ; ಸೂರ್ಯನು ಚಂಚಲನಾದನು ; ಆದುದರಿಂದ ದೇವತೆಗಳು
ಮಹಾತಪಸ್ವಿಯಾದ ರಾವಣನನ್ನು ಗೆಲ್ಲಲು ಅಶಕ್ತರಾಗಿಯೂ, ಶೋ
ಕಾವಿಷ್ಟರಾಗಿಯೂ ಆದರು. ಆ ಸಮಯದಲ್ಲಿ ಶಿವಗಣಗಳಿಗೆ ಅಧಿ
ಪತಿಯಾಗಿಯೂ ಶಿವಪ್ರಿಯನಾಗಿಯೂ ಇರುವ ನಂದಿಯು ಆಸ್ಥಳಕ್ಕೆ
ಬಂದು ಇಂದ್ರಾದಿ ದೇವತೆಗಳನ್ನು ಕುರಿತು 'ಅಯ್ಯಾ ! ನೀವೆಲ್ಲರೂ
ಮುಖಗೆಟ್ಟವರಾಗಿ, ಯೋಚಿಸುತ್ತಿರುವರೇಕೆ ?' ಎಂದು ಕೇಳಿದನು.
ಆಗ ದೇವತೆಗಳೆಲ್ಲರೂ ನಂದಿಯನ್ನು ಕುರಿತು 'ಎಲೈ ನಂದಿಯೇ! ದೇವ
ತೆಗಳಾದ ನಾವೂ, ತಪಸ್ವಿಗಳಾದ ಋಷಿಗಳೂ, ರಾವಣನಿಂದ ನಿರ್ಜಿತ
ರಾಗಿರುವೆವು. ಆದುದರಿಂದ ಲೋಕೇಶ್ವರನಾದ ಶಂಕರನನ್ನು ಪ್ರಸ
ನ್ನನಾಗಿ ಮಾಡಿಕೊಂಡು, ಇಷ್ಟಸಿದ್ಧಿಯನ್ನು ಹೊಂದಲೋಸುಗ
ಇಲ್ಲಿಗೆ ಬಂದಿರುವೆವು ' ಎಂದು ಹೇಳಿದರು. ಇಂತು ನುಡಿದ ದೇವ
ತೆಗಳ ಮಾತನ್ನು ಕೇಳಿ ನಂದಿಯು ಹೇಳುತ್ತಾನೆ. 'ದೇವತೆಗಳಿರಾ !
ಕೇಳಿ; ಕಾಮಪೀಡಿತರೂ, ಚಂಚಲಚಿತ್ತರೂ ಆದ ನೀವೆಲ್ಲಿ ? ಪರಮ
ಶೋಭನಮೂರ್ತಿಯಾದ ಪರಶಿವನೆಲ್ಲಿ ? ದಾರುಣವಾದ ತಪಶ್ಚರ್ಯ

ದಿಂದಲೂ ಯೋಗದಿಂದಲೂ, ಪ್ರಸನ್ನನಾಗುವ ಸಾಂಬಮೂರ್ತಿಯು ನಿಮ್ಮಂತಹರಿಗೆ ಕಾಣುವನೇ ? ಎಂದಿಗೂ ಇಲ್ಲ. ಎದುವರೆವಿಗೂ ಚಿತ್ತ ಚಾಂಚಲ್ಯವಿರುವುದೋ, ಎದುವರೆವಿಗೂ ಇಂದ್ರಿಯಗಳು ಸ್ವಾಧೀನದಲ್ಲಿರುವುದಿಲ್ಲವೋ, ಅದುವರೆವಿಗೂ ಶಿವನು ಪ್ರತ್ಯಕ್ಷ ನಾಗಲಾರನು. ಜಿತೇಂದ್ರಿಯರಾಗಿಯೂ, ಬ್ರಹ್ಮಚರ್ಯವ್ರತಿಗಳಾಗಿಯೂ ಇರುವ ಮಹಾತ್ಮರಿಗೆ ಲಿಂಗರೂಪಿಯಾದ ಪರಮಾತ್ಮನು ಪ್ರಸನ್ನನಾಗುವನೇಹೊರತು, ನಿಮ್ಮಂತಹರಿಗೆ ಎಂದೆಂದಿಗೂ ದೃಗ್ಗೋಚರನಾಗುವುದಿಲ್ಲ. ಇದನ್ನು ಚೆನ್ನಾಗಿ ತಿಳಿಯಿರಿ' ಎಂದು ನುಡಿದನು. ನಂದಿಯ ವಾಕ್ಯಗಳನ್ನು ಕೇಳಿ ಬ್ರಹ್ಮಾದಿ ದೇವತೆಗಳು ಆತನನ್ನು ನಮಸ್ಕರಿಸಿ, 'ಅಯ್ಯಾ ಮಹಾನುಭಾವನಾದ ನಂದಿಯೇ !! ನಿನಗೆ ಈ ವಾನರಮುಖವು ಹೇಗೆ ಬಂದಿತು ? ರಾವಣನ ತಪಃಪ್ರಭಾವವೆಂಥದು ? ಎಂಬೀ ವಿಷಯಗಳನ್ನು ತಿಳಿದುಕೊಳ್ಳಲು ಅತಿ ಕುತೂಹಲವುಳ್ಳವರಾಗಿರುವೆವು. ದಯವಿಟ್ಟು ಹೇಳುವವನಾಗು, ಎಂದು ಬೇಡಿಕೊಂಡರು.

ಆಗ ಮಹಾಶಿವನ ಭಕ್ತನಾದ ನಂದಿಯು ಹೇಳುತ್ತಾನೆ. 'ಕೇಳಿರೈ ! ದೇವತೆಗಳಿರಾ ! ಪೂರ್ವದಲ್ಲಿ ನಮ್ಮ ಸ್ವಾಮಿಯಾದ ಶಂಕರನು, ಕುಬೇರನನ್ನು ಧನಾಧಿಪನನ್ನಾಗಿ ಮಾಡಿದನು. ಒಂದು ದಿನ ಮಹಾಪ್ರಭಾಶಾಲಿಯಾದ ರಾವಣನು ತನ್ನ ವಾಹನವನ್ನೇರಿಕೊಂಡು ನಡಗರದಿಂದ ಬಂದು ನನ್ನನ್ನು ಕುರಿತು, 'ಕುಬೇರನು ಎಲ್ಲಿಗೆ ಹೋದನು ? ಅಥವ ಇಲ್ಲಿಯೇ ಇರುವನೋ ? ಬೇಗ ಹೇಳು. ತಡಮಾಡಬೇಡ' ಎಂದು ಕೇಳಿದನು. ನಾನು 'ಅಯ್ಯಾ ! ಕುಬೇರನಿಂದ ನಿನಗೆ ಯಾವ ಕಾರ್ಯವಾಗಬೇಕು?' ಎಂದು ಕೇಳಿದೆನು. ನನ್ನ ಮಾತುಗಳನ್ನು ಕೇಳಿ, ಮಹಾ ತೇಜಸ್ವಿಯಾದ ರಾವಣನು ನನ್ನಲ್ಲಿ ಅಶ್ರದ್ಧೆಯನ್ನು ತೋರಿ ನನ್ನನ್ನೇ ಶಿಕ್ಷಿಸಲುಪಕ್ರಮಿಸಿ, 'ಎಲವೋ, ಮಂದಮತಿಯೇ ! ಕೇಳು, ನಾನು ಹೇಗೆ ಶ್ರೀಮಂತನಾಗಿರುವೆನೋ, ಬಲಶಾಲಿಯೂ, ಪುಷ್ಟನೂ ಹೇಗಾಗಿರುವೆನೋ

ಹಾಗೆಯೇ ನೀನೂ ಆಗಿ ಬಳಿಕ ನನ್ನೊಡನೆ ಮಾತನಾಡು. ಸುಮ್ಮನೆ ಮೂಢನೆಂದೆನಿಸಿಕೊಳ್ಳಬೇಡ.' ಎಂದು ಗರ್ಜಿಸಿದನು. ಅಯ್ಯೋ ದೇವತೆಗಳಿರಾ! ಆ ರಾವಣನಿಂದ ನಾನು ಮೂಢನಾಗಿ ಮಾಡಲ್ಪಟ್ಟೆನು. ಬಳಿಕ ನಾನು ದಶಮುಖನನ್ನು ನಿರಾಕರಿಸಿದೆನು. ಆಗ ರಾವಣನು ಅತಿ ರೋಷಾವಿಷ್ಟನಾಗಿ 'ಎಲವೋ! ಸುಮ್ಮನೆ ಹರಟಬೇಡ. ಆ ಕುಬೇರನೆಲ್ಲಿರುವನೆಂಬುದನ್ನು ಹೇಳು' ಎಂದು ಗರ್ಜಿಸಿದನು. ಇಂತು ನುಡಿದ ಮಹಾ ತೇಜಸ್ವಿಯಾದ ರಾವಣನ ಮಾತುಗಳನ್ನು ಕೇಳಿ ನಾನು ಕೋಪದಿಂದ ಬೆಂಕಿಯಾಗಿ 'ಎಲವೋ ರಾವಣನೇ! ನೀನು ಹೇಗೆ ಲಿಂಗಕನಾಗಿರುವೆಯೋ ನಾನೂ ಹಾಗೆಯೇ ಲಿಂಗಕನಾಗಿರುವೆನು. ನಾವಿಬ್ಬರೂ ಸಮತ್ವವನ್ನು ಅನುಭವಿಸುತ್ತಿರುವಾಗ, ದುಷ್ಟಬುದ್ಧಿಯಾದ ನೀನು ಮನಸ್ಸಿಗೆ ಬಂದಂತೆ ಬೊಗಳುತ್ತಿರುವೆಯಲ್ಲಾ!' ಎಂದೆನು. ಬಳಿಕ ನಿಜಾಂಶವನ್ನು ಮರೆಮಾಚದೆ ಹೇಳುತ್ತಿರುವ ನನ್ನ ಮಾತುಗಳನ್ನು ಕೇಳಿ ಆ ದುಷ್ಟನಾದ ರಾವಣನು ನನ್ನ ಮುಖದಮೇಲೆ ಬಲವಾಗಿ ಹೊಡೆದನು. ತಕ್ಷಣವೇ ನನ್ನ ಮುಖವು ವಾನರ ಮುಖವಾಯಿತು. ಅಯ್ಯೋ ಮಹಾತ್ಮರೇ! ನೀವು ನನ್ನ ಮುಖವು ವಾನರ ಮುಖವಾದುದಕ್ಕೆ ಕಾರಣಗಳನ್ನು ಕೇಳಿದಿರಷ್ಟೆ. ಅದನ್ನೀಗ ತಿಳಿಸುವೆನು. ಅನಂತರದಲ್ಲಿ ಶಿವಂಕರನಾದ ಶಂಕರನು ನನ್ನ ಈ ವಿಲಕ್ಷಣ ಸ್ವರೂಪವನ್ನು ನೋಡಿ ಸಾರೂಪ್ಯವನ್ನು ಕರುಣಿಸಿದನು. ಆದರೆ ನಾನದನ್ನು ಸ್ವೀಕರಿಸಲಿಲ್ಲ. ಕೇಳಿರಿ! ಅಹಂಕಾರಶೂನ್ಯರಾಗಿಯೂ, ಮಮಕಾರರಹಿತರಾಗಿಯೂ ಇರುವವರೆಲ್ಲರೂ ಶಂಕರನ ಪ್ರೀತಿಗೆ ಪಾತ್ರರೆನಿಸುವರು. ಹಾಗಿಲ್ಲದೆ ಕಾಮಕ್ರೋಧಾದ್ಯರಿಷಡ್ವರ್ಗಗಳಿಂದ ಪೀಡಿತರಾಗಿ ಮೆರೆಯುತ್ತಿದ್ದರೆ ಶಿವದ್ವೇಷಿಗಳೆನಿಸುವರು. ಇದನ್ನು ಚೆನ್ನಾಗಿ ತಿಳಿಯಿರಿ. ಬಳಿಕ ನಾನೂ ಆ ರಾವಣನೂ, ಪರಶಿವನನ್ನು ಕುರಿತು ತಪಸ್ಸನ್ನು ಮಾಡಿದೆವು. ಆ ತಪಸ್ಸಿನಿಂದ ಶಂಕರನು ಪ್ರಸನ್ನನಾಗಲು ನಾನು ಆತನನ್ನು ವಾನರಮುಖವನ್ನೆ ದಯಪಾಲಿಸೆಂದು ಬೇಡಿಕೊಂಡೆನು. ಪರಮ ಕರುಣಾಶಾಲಿಯಾದ ಪರಶಿವನು ನನ್ನ ಪ್ರಾರ್ಥನೆಯನ್ನು

ನೆರವೇರಿಸಿಕೊಟ್ಟನು. ಆಗ ರಾವಣನು ನನ್ನ ಈ ವಿಧವಾದ ಪ್ರಾರ್ಥನೆಯನ್ನು ಕೇಳಿ ನಗಲಾರಂಭಿಸಿದನು. ನನಗೆ ಬಹಳ ಕೋಪಬಂದಿತು. ನಾನು ಆ ಕೋಪದಲ್ಲಿಯೇ ರಾವಣನನ್ನು ಈರೀತಿ ಶಪಿಸಿದೆನು. 'ಎಲೈ ರಾವಣನೇ! ಹತ್ತು ತಲೆಗಳಿರುವ ಯಾವನೇ ಆಗಲಿ, ಅವನು ನನ್ನಂತಹ ವಾನರರಿಂದ ಸಮೇತನಾಗಿ ಬರುವ ಯಾವನೊಬ್ಬ ಮನುಷ್ಯನಿಂದ ಕೊಲ್ಲಲ್ಪಡುತ್ತಾನೆ. ಆದುದರಿಂದ ನಿನಗೂ ಮರಣವು ಸಮೀಪಿಸಿ ಬರಲಿ' ಇಂತು ಶಪಿಸಿದನಂತರ ಆ ರಾವಣನು ಪೀಠಿಕಾರೂಪನಾದ ವಿಷ್ಣುವನ್ನು ಪೂಜಿಸದೆಯೇ ಶಿವಲಿಂಗವನ್ನರ್ಚಿಸಿದನು. ಆದುದರಿಂದ ಎಲೈ ದೇವತೆಗಳಿರಾ! ನೀವು ಮಹಾನುಭಾವನಾದ ವಿಷ್ಣುವನ್ನು ಶರಣುಹೋಗಿರಿ. ನಿಮಗೆ ಇಷ್ಟಸಿದ್ಧಿಯಾಗುವುದು' ಎಂದು ನುಡಿದನು. ನಂದಿಯ ಮಾತುಗಳನ್ನು ಕೇಳಿ, ದೇವತೆಗಳೆಲ್ಲರೂ, ವಿಷ್ಣುವಿದ್ದೆಡೆಗೆ ಬಂದು ಮನೋಹರವಾದ ಸ್ತೋತ್ರಗಳಿಂದ ಸ್ತುತಿಸಿ 'ಎಲೈ ಲೋಕೈಕನಾಥನಾದ ವಿಷ್ಣುವೇ! ನಿನಗೆ ನಮಸ್ಕಾರವು. ನಿನ್ನ ಆಧಾರದಿಂದಲೇ ಅಲ್ಲವೆ, ಚರಾಚರಾತ್ಮಕವಾದ ಈ ಪ್ರಪಂಚವು ನಲಿಯುತ್ತಿರುವುದು! ಎಲೈ ಮಧುಸೂದನನೇ! ನೀನು ಪಿಂಡೀಭೂತನಾಗಿ ತ್ರಿಭುವನಗಳನ್ನೂ ಸಂರಕ್ಷಿಸಿದೆಯಲ್ಲವೆ! ಮಹಾವಿಷ್ಣು ರೂಪದಿಂದ ಮಧುಕೈಟಭರೆಂಬ ರಾಕ್ಷಸರನ್ನು ನಾಶಮಾಡಿರುವೆ. ಕಮಠ ರೂಪವನ್ನು ತಾಳಿ ಮಂದರಾಚಲವನ್ನು ಹೊತ್ತಿರುವೆ. ವರಾಹ ರೂಪದಿಂದ ಹಿರಣ್ಯಾಕ್ಷನನ್ನು ಸಂಹರಿಸಿರುವೆ. ನರಸಿಂಹ ರೂಪದಿಂದ ಹಿರಣ್ಯಕಶಿಪುವನ್ನು ಧ್ವಂಸಮಾಡಿರುವೆ. ವಾಮನಾವತಾರವನ್ನು ಮಾಡಿ ಬಲಿಯನ್ನು ಪಾತಾಳಕ್ಕೊತ್ತಿರುವೆ. ಪರಶುರಾಮಾವತಾರವನ್ನು ಮಾಡಿ ಕಾರ್ತವೀರ್ಯಾರ್ಜುನನನ್ನು ಕೊಂದಿರುವೆ. ಈಗಲಾದರೋ, ರಾವಣನ ಭಯದಿಂದ ಕಂಗೆಟ್ಟಿರುವ ನಮ್ಮನ್ನು ಕೃಪೆದೋರಿ ಕಾಪಾಡು' ಎಂದು ಬೇಡಿಕೊಂಡರು. ಆಗ ವಿಷ್ಣುವು ಪ್ರಸನ್ನನಾಗಿ ಆ ದೇವತೆಗಳನ್ನು ಕುರಿತು 'ಅಯ್ಯಾ ದೇವತೆಗಳಿರಾ! ಕೇಳಿರಿ. ನಂದಿಯೇ ಮೊದಲಾದ ಶಿವಗಣಗಳನ್ನು ಮುಂದುಮಾಡಿಕೊಂಡು, ನೀವೆಲ್ಲರೂ ಭೂಲೋಕದಲ್ಲಿ ಕಪಿಗಳಾಗಿ

ಹುಟ್ಟಿರಿ. ನಾನು ಅಜ್ಞಾನದಿಂದಕೂಡಿದವನಾಗಿ ಅಯೋಧ್ಯೆಗೆ ಒಡೆಯನಾದ ದಶರಥರಾಯನ ಮಗನಾಗಿ ಹುಟ್ಟುವೆನು. ಇದಲ್ಲದೆ ಈ ಕಾರ್ಯಸಿದ್ಧಿಗಾಗಿ ನಾನು ಬ್ರಹ್ಮವಿದ್ಯೆಯ ಸಹಾಯವನ್ನು ಪಡೆದಿರುವೆನು. ಆ ಬ್ರಹ್ಮವಿದ್ಯೆಯು ಮಿಥಿಲಾಪುರದ ರಾಜನಾದ ಜನಕನ ಮನೆಯಲ್ಲಿ ಬೆಳೆಯುವಳು. ಮಹಾ ಶಿವ ಭಕ್ತಾಗ್ರಣಿಯಾದ ರಾವಣನು ಉಗ್ರವಾದ ತಪಸ್ಸಿನಿಂದೊಡಗೂಡಿದವನಾಗಿ ಬ್ರಹ್ಮವಿದ್ಯೆಯನ್ನು ಬಯಸುವನು. ಆಗಲಾ ಧರ್ಮಬಹಿಷ್ಕೃತನಾದ ರಾವಣನು ಗೆಲ್ಲಲು ಸಾಧ್ಯವಾಗುವನು' ಎಂದು ಹೇಳಿ ಅಂತರ್ಧಾನನಾದನು.

ಬಳಿಕ ಇಂದ್ರನ ಅಂಶದಿಂದ ವಾಲಿಯೂ, ಅಂಶುಮಂತನಿಂದ ಸುಗ್ರೀವನೂ, ಬ್ರಹ್ಮಾಂಶದಿಂದ ಋಕ್ಷ ಕುಂಜರನಾದ ಜಾಂಬುವಂತನೂ, ನಂದಿಯೇ ಮೊದಲಾದ ಏಕಾದಶರುದ್ರರೂ, ಮಹಾ ಕಪಿಯಾದ ಆಂಜನೇಯನೂ, ವಿಷ್ಣುವಿನ ಸಹಾಯಾರ್ಥವಾಗಿ, ಮೈಂದಾದಿಕಪಿಗಳಾಗಿ ಜನಿಸಿದರು. ಅನಂತರದಲ್ಲಿ ವಿಷ್ಣುವೂಕೂಡ ಅಯೋಧ್ಯೆಯಲ್ಲಿ ದಶರಥನ ಹೆಂಡತಿಯಾದ ಕೌಸಲ್ಯಾನಂದದಾಯಕನಾಗಿ, ಆಕೆಯ ಗರ್ಭಾಂಬುಧಿಯಲ್ಲಿ ಜನಿಸಿದನು. ಪ್ರಪಂಚಕ್ಕೆಲ್ಲ ಆನಂದದಾಯಕನಾಗಿದ್ದುದರಿಂದ ಪಂಡಿತರು ಇವನಿಗೆ ರಾಮನೆಂದು ಹೆಸರಿಟ್ಟರು. ಆದಿಶೇಷನಾದರೋ ವಿಷ್ಣುವನ್ನು ಕುರಿತು ಅತಿ ಭಕ್ತಿಯಿಂದ ತಪಸ್ಸನ್ನು ಮಾಡಿ, ಲಕ್ಷ್ಮಣನೆಂಬ ಹೆಸರಿನಿಂದ ಭೂಲೋಕದಲ್ಲಿ ಜನಿಸಿದನು. ವಿಷ್ಣುವಿನ ಆಯುಧಗಳಾದ ಶಂಖಚಕ್ರಗಳೂ ತಪಸ್ಸಿನಿಂದ ಭರತ ಶತ್ರುಘ್ನರೆಂಬ ಹೆಸರಿನಿಂದ ಅವತರಿಸಿದರು. ಬ್ರಹ್ಮವಾದಿಗಳು ಯಾವುದನ್ನು ಬ್ರಹ್ಮ ವಿದ್ಯೆಯೆಂದು ಕರೆಯುವರೋ ಅದು ದೇವತೆಗಳ ಕಾರ್ಯ ಸಿದ್ಧಿಗಾಗಿ ಜನಕರಾಜನ ಮಗಳಾಗಿ ಅವತರಿಸಿದಳು. ಈ ಬ್ರಹ್ಮವಿದ್ಯೆಯು ಮಿಥಿಲಾಪಟ್ಟಣದಲ್ಲಿ ಹುಟ್ಟಿದುದರಿಂದ ಮೈಥಿಲಿಯೆಂದೂ, ಜನಕರಾಜನ ಕುಲದಲ್ಲಿ ಹುಟ್ಟಿದುದರಿಂದ ಜಾನಕಿಯೆಂದೂ ಹೆಸರಾಯಿತು. ಈ ಬ್ರಹ್ಮವಿದ್ಯೆಯು, ಪಾಪನಾಶಿನಿಯಾದ ವೇದವತಿಯೆಂದು ಪ್ರಸಿದ್ಧಿಯಾಗಿದ್ದಳು. ಬಳಿಕ ಜನಕ

ರಾಜನು ಬ್ರಹ್ಮವಿದ್ಯಾ ರೂಪಿಣಿಯಾದ ಜಾನಕಿಯನ್ನು, ವಿಷ್ಣು ರೂಪಿಯಾದ ರಾಮನಿಗೆ ಕೊಟ್ಟನು. ಶ್ರೀರಾಮನು ದೇವತೆಗಳ ಕಾರ್ಯಸಿದ್ಧಿಗೋಸುಗ ಈ ಬ್ರಹ್ಮವಿದ್ಯೆಯೊಡನೆ ಅತಿ ತೀವ್ರವಾದ ತಪಸ್ಸನ್ನು ಮಾಡಿದನು. ಬಳಿಕ ರಾಜೀವನಯನನಾದ ರಾಮನು ಮಹಾ ಶಿವಭಕ್ತನಾದ ರಾವಣನನ್ನು ಜಯಿಸಲು ಅರಣ್ಯವನ್ನು ಸೇರಿದನು. ಶೇಷಾವತಾರದಿಂದ ಜನಿಸಿರುವ ಲಕ್ಷ್ಮಣನು ಸಹ, ದೇವತೆಗಳ ಕಾರ್ಯಸಿದ್ಧಿಗಾಗಿ ಘೋರವಾದ ತಪಸ್ಸನ್ನು ಮಾಡಿದನು. ಭರತಶತ್ರುಘ್ನರೂ ಅದೇ ಫಲಕ್ಕಾಗಿಯೇ ತಪವನ್ನಾಚರಿಸಿದರು. ಇಂತು ಅದ್ಭುತವಾದ ತಪಸ್ಸಿನಿಂದಲೂ, ಶಿವಗಣಗಳಿಂದಲೂ ದೇವಗಣಗಳಿಂದಲೂ ಕೂಡಿದ ಆ ರಾಮನು, ಮಹಾ ಶಿವಭಕ್ತನಾದ ರಾವಣನನ್ನೂ, ಅವನ ಬಂಧುಗಳನ್ನೂ ಕೊಂದುಹಾಕಿದನು. ಪರಮ ಭಕ್ತಾಗ್ರಣಿಯಾದ ರಾವಣನಾದರೋ, ಶಿವಸಾನ್ನಿಧ್ಯದಲ್ಲಿ ಸಾರೂಪ್ಯವನ್ನು ಹೊಂದಿ, ದ್ವೈತಾದ್ವೈತವನ್ನು ಹೊಂದಿದನು.

ಕೇಳಿರೈ ಋಷಿಗಳಿರಾ! ಭೂಲೋಕದಲ್ಲಿ, ನರರೂ, ಋಷಿಗಳೂ ದ್ವೈತಾದ್ವೈತವನ್ನು ಮೋಹಿಸಿ, ಪ್ರಬಲತರನಾದ ಪರಶಿವನ ಪೂಜೆಯಿಂದ ಅದನ್ನು ಪಡೆಯುವರು. ಯಾರು ಲಿಂಗರೂಪಿಯಾದ ಶಿವನನ್ನು ಪರಮಭಕ್ತಿಯಿಂದ ಪೂಜಿಸುತ್ತಾರೆಯೋ ಅಂತಹರು ಸ್ತ್ರೀಯರೇ ಆಗಲಿ, ಶೂದ್ರರೇ ಆಗಲಿ, ಶ್ವಪಚರೇ ಆಗಲಿ, ಅದೂ ಅಲ್ಲದಿದ್ದರೆ ಹೀನಕುಲವೆಂದೆಣಿಸಿದ ಪಂಚಮರೇ ಆಗಲಿ, ಎಲ್ಲ ದುಃಖಗಳಿಂದ ಬಿಡಲ್ಪಟ್ಟು ಸರ್ವ ಲೋಕಶರಣ್ಯನಾದ ಶಂಕರನನ್ನು ಹೊಂದುತ್ತಾರೆಂಬುದರಲ್ಲಿ ಸಂಶಯವೇ ಇಲ್ಲವು. ಶಿವಭಕ್ತಿಯನ್ನು ಮಾಡಿದ ಪಶುವೂ ಸಾಯುಜ್ಯವನ್ನು ಹೊಂದುವುದೆಂದಮೇಲೆ ಮನುಷ್ಯನು ಶಿವಭಕ್ತಿಯನ್ನು ಮಾಡಿದರೆ ಎಂತಹ ಪುಣ್ಯವು ಲಭಿಸುವುದು? ನೀವೇ ಯೋಚಿಸಿರಿ. ಹೆಚ್ಚಾಗಿ ಹೇಳುವುದೇನಿರುವುದು? ಕೇಳಿರಿ. ಬ್ರಹ್ಮಚರ್ಯನಿಷ್ಠರಾದ ಅನೇಕದ್ವಿಜರು, ವಾಜಪೇಯ, ಜ್ಯೋತಿಷ್ಟೋಮ, ಅತಿರಾತ್ರಿಯೇ ಮೊದಲಾದ ಯಾಗಗಳನ್ನು ಮಾಡಿ

ಸ್ವರ್ಗವನ್ನು ಬಯಿಸುತ್ತಾರೆ. ಯಾಗ ಯಜ್ಞಾದಿಗಳಿಂದ ಸ್ವರ್ಗವು ಸಿಗುವುದೆಂಬುದರಲ್ಲಿ ಸಂಶಯವಿಲ್ಲ. ಆದರೆ ದ್ವಿಜರು ಆ ಯಾಗ ಫಲಾನುರೂಪವಾದ ಸ್ವರ್ಗವನ್ನು ಅನುಭವಿಸಿ ಪುನಃ ಈ ಮರ್ತ್ಯ ಲೋಕವನ್ನು ಸೇರುತ್ತಾರೆ. ಬಳಿಕ ಸಂಸಾರಸಾಗರದಲ್ಲಿ ಬಿದ್ದು ನರಳುತ್ತ ದೈವಿಕವಾದ ಜ್ಞಾನವು ಹುಟ್ಟುವುದು. ಆ ಬಳಿಕ ಅವರು ಗುಣತ್ರಯಾತ್ಮಕವಾದ ವಿಧವಿಧವಾದ ಯೋನಿಗಳಲ್ಲಿ ಹುಟ್ಟುತ್ತಲೂ ಸಾಯುತ್ತಲೂ ನರಳುವರು. ಹೇಗೆ ಯೋನಿ ಸಂಬಂಧವಾದ ಗುಣ ತ್ರಯಗಳಿಂದ ಹುಟ್ಟುತ್ತಾರೆಯೋ, ಹಾಗೆಯೇ ಮನುಷ್ಯರು ಸಾತ್ವಿಕರೂ, ರಾಜಸರೂ, ತಾಮಸರೂ ಆಗಿರುತ್ತಾರೆ. ಇಂತು ಮನುಜರು ಸಂಸಾರಾರ್ಣವದಲ್ಲಿ ಸುತ್ತುತ್ತಾ ಆಕಸ್ಮಿಕವಾಗಿ ಶಿವಲಿಂಗಾರ್ಚನೆಯನ್ನು ಮಾಡುವರು. ಯಾವಾಗ ಶಿವಲಿಂಗಾರ್ಚನೆಯನ್ನು ಮಾಡುವರೋ ಆಗಲೆ ಸಂಸಾರವೆಂಬ ಮಾಯಾವರಣವು ನೀಗಿಹೋಗುವುದು. ಮಾಯಾವರಣವು ನೀಗಿದಮೇಲೆ ಗುಣತ್ರಯಾತೀತರಾಗುವುದಲ್ಲದೆ ಶಿವಸಾಯುಜ್ಯಕ್ಕೆ ಪಾತ್ರರಾಗುತ್ತಾರೆ. ಆದುದರಿಂದ ಎಲೈ ಶೌನಕಾದಿಗಳಿರಾ! ಸಕಲ ಮಾನವರೂ ಲಿಂಗ ಪೂಜೆಯನ್ನು ಮಾಡಲೇಬೇಕು. ಲಿಂಗರೂಪದಿಂದಲೇ ಆ ಪರಮಾತ್ಮನಾದ ಶಂಭುವು ಲೋಕತ್ರಯಗಳನ್ನು ಕಾಪಾಡುವನು. ನೀವು ಕೇಳಿದ, ಶಿವಲಿಂಗ ರೂಪದ ವಿಧಾನವನ್ನು ನನಗೆ ತೋರಿದಷ್ಟು, ವ್ಯಾಸಮಹರ್ಷಿಯ ಪ್ರಸಾದದಿಂದ ಹೇಳಿರುವೆನು. ಹಿಂದೆ ನೀವು 'ಪರಮೇಶ್ವರನು ವಿಷವನ್ನು ಪಾನಮಾಡಿದುದು ಹೇಗೆ' ಎಂದು ಕೇಳಿದಿರಲ್ಲಾ! ಅದನ್ನೀಗ ಹೇಳುವೆನು ಕೇಳಿರಿ.

## ಅಧ್ಯಾಯ ೯

### ಸಮುದ್ರಮಥನ

ಸೂತಪುರಾಣಿಕನು ಹೇಳುತ್ತಾನೆ–ಕೇಳಿರೈ ಶೌನಕಾದಿಗಳಿರಾ! ಒಂದಾನೊಂದು ಕಾಲದಲ್ಲಿ ಇಂದ್ರನು, ಅಷ್ಟದಿಕ್ಪಾಲಕರು, ದೇವತೆ

ಗಳು, ಋಷಿಗಳು, ಅಪ್ಸರಗಂಧರ್ವಗಣಗಳು, ಇವರಿಂದ ಶೋಭಾಯಮಾನವಾದ ಸಭಾಮಧ್ಯದಲ್ಲಿ ಮಿರುಮಿರುಗುವ ರತ್ನಸಿಂಹಾಸನದಲ್ಲಿ ಕುಳಿತಿದ್ದನು. ಆಗ ಸಿದ್ಧ ಸಾಧ್ಯರು ಇಂದ್ರನ ಬಿರುದಾವಳಿಗಳನ್ನೂ, ಶೌರ್ಯ, ಧೈರ್ಯ, ಪರಾಕ್ರಮಗಳನ್ನೂ ಗಾನರೂಪವಾಗಿ ಹೊಗಳುತ್ತಿದ್ದರು. ಆ ಸಮಯದಲ್ಲಿ ಕುಶಲಾಗ್ರ ಬುದ್ಧಿಯಾದ, ಬೃಹಸ್ಪತಿಯು ಅಲ್ಲಿಗೆ ಬಂದನು. ಗುರುವಾದ ಬೃಹಸ್ಪತಿಯು ಬಂದೊಡನೆಯೇ ಅಲ್ಲಿದ್ದ ದೇವತೆಗಳೆಲ್ಲರೂ ನಮಸ್ಕರಿಸಿ ಸನ್ಮಾನಿಸಿದರು. ದೇವೇಂದ್ರನಾದರೋ ಗರ್ವದಿಂದ ಹಿಗ್ಗಿ ಮಾನಾರ್ಹವಾದ ಒಂದು ಮಾತನ್ನಾದರೂ ಆಡಲಿಲ್ಲ. ನಮಸ್ಕರಿಸಲೂ ಇಲ್ಲ. ಇಂತು ಗರ್ವದಿಂದ ಮೈಮರೆತಿರುವ ಇಂದ್ರನನ್ನು ನೋಡಿ ಬೃಹಸ್ಪತಿಯು ಅತಿಯಾಗಿ ಕೋಪಗೊಂಡು, ಒಂದು ಕ್ಷಣವಾದರೂ ಅಲ್ಲಿರದೆ ಅಂತರ್ಧಾನವಾದನು. ಆಗ ದೇವತೆಗಳೆಲ್ಲರೂ ಚಿಂತಾನ್ವಿತರಾದರು. ಈ ಸೂಚನೆಯನ್ನರಿತ ಬುದ್ಧಿಶಾಲಿಯಾದ ಇಂದ್ರನು ದೇವತೆಗಳನ್ನು ಕುರಿತು 'ಮಹಾತಪಸ್ವಿಯಾದ ಗುರುವು ಎಲ್ಲಿಗೆಹೋದನು' ಎಂದನು. ಆಗ ನಾರದಮಹರ್ಷಿಯು ತ್ವರಾನ್ವಿತನಾಗಿ ಇಂದ್ರನನ್ನು ಕುರಿತು 'ಎಲವೋ ಇಂದ್ರನೇ ! ನೀನು ಅಜ್ಞಾನದಿಂದ ಮಾಡಿದ ಕಾರ್ಯದಿಂದ ಗುರುವಾದ ಬೃಹಸ್ಪತಿಯು ಕೋಪದಿಂದ ಹಿಂತಿರುಗಿದನು. ಇಲ್ಲೆಲ್ಲಿಯೂ ಇಲ್ಲವು. ಗುರುವನ್ನು ಅಲಕ್ಷ್ಯಮಾಡಿದುದರಿಂದ ನೀನು ರಾಜ್ಯಭ್ರಷ್ಟನಾಗುವೆ. ಆದುದರಿಂದ ನೀನೀಗಲೇ ಆ ಬೃಹಸ್ಪತಿಯಲ್ಲಿಗೆ ಹೋಗಿ ಕ್ಷಮಾಪಣೆಯನ್ನು ಕೇಳಿಕೋ.' ಎಂದು ಹೇಳಿದನು. ನಾರದನ ಮಾತುಗಳನ್ನು ಕೇಳಿ, ದೇವೇಂದ್ರನು, ಅತಿ ಜಾಗ್ರತೆಯಾಗಿ ಸಕಲ ದೇವತೆಗಳಿಂದ ಕೂಡಿದವನಾಗಿ ಬೃಹಸ್ಪತಿಯ ಮನೆಗೆ ಬಂದು, ಗುರುಪತ್ನಿಯಾದ ತಾರಾದೇವಿಯನ್ನು ಕುರಿತು 'ಗುರುಗಳೆಲ್ಲಿ ಹೋದರು' ಎಂದು ಕೇಳಿದನು. ತಾರೆಯು ತನಗೆ ತಿಳಿಯದೆಂದು ಹೇಳಿದಳು. ಆಗ ಇಂದ್ರನು ಬಹಳ ಚಿಂತಾಕ್ರಾಂತನಾದನು.

ಈ ಮಧ್ಯೆ, ಅಮರಾವತಿಯಲ್ಲಿ ಅದ್ಭುತವಾದ ಅಪಶಕುನಗಳಾದವು. ಬಳಿಕ ಇಂದ್ರನಿಂದ ಆಚರಿಸಲ್ಪಟ್ಟುದುದೆಲ್ಲವನ್ನೂ, ಗೂಢಚಾ

ರರಿಂದ ತಿಳಿದ ಬಲಿಯು, ಪಾತಾಳ ಲೋಕವನ್ನು ಬಿಟ್ಟು ದೈತ್ಯರಿಂದೊಡಗೂಡಿ ಇಂದ್ರನ ಅಮರಾವತಿಗೆ ಬಂದನು. ಆಗ ದೈತ್ಯರಿಗೂ, ದೇವತೆಗಳಿಗೂ ಘೋರವಾದ ಯುದ್ಧವು ನಡೆಯಿತು. ಈ ಯುದ್ಧದಲ್ಲಿ ಗುರುದ್ರೋಹಿಯಾದ ಇಂದ್ರನು ಬಲಿಯಿಂದ ಸೋತುಹೋದನು. ದೈತ್ಯರೆಲ್ಲರೂ ತಮ್ಮ ಗುರುವಾದ ಶುಕ್ರನ ಪರಪ್ರಸಾದದಿಂದ ಜಯಶಾಲಿಗಳಾದರು. ಅನಂತರದಲ್ಲಿ ದೈತ್ಯರು ಆ ಇಂದ್ರನ ಸಕಲೈಶ್ವರ್ಯವನ್ನೂ ಪಾತಾಳಕ್ಕೊಯ್ದರು. ಇಂದ್ರನಾದರೋ ದೇವತೆಗಳಿಂದ ಬಿಡಲ್ಪಟ್ಟವನಾಗಿ ರಾಜ್ಯಭ್ರಷ್ಟನಾದನು. ಇಂದ್ರಸತಿಯಾದ ಶಚೀದೇವಿಯು ಅಂತರ್ಧಾನವಾದಳು. ದೈತ್ಯರು ಅತಿ ಹೇಯವಾದ ಕೆಲಸಗಳನ್ನು ಮಾಡುತ್ತಾ ಇಂದ್ರನ ಐರಾವತ, ಉಚ್ಚೈಶ್ರವಸ್ಸೇ ಮೊದಲಾದ ರತ್ನಗಳನ್ನು ಸಾಗರದಲ್ಲೆಸೆದರು. ಆಗ ಬಲಿಯು ವಿಸ್ಮಿತನಾಗಿ ತನ್ನ ಗುರುವಾದ ಶುಕ್ರನನ್ನು ಕುರಿತು 'ಎಲೈ ಗುರುವೇ! ನಾವು ದೇವತೆಗಳನ್ನು ಜಯಿಸಿ ಅವರಲ್ಲಿದ್ದ ಸಮಸ್ತ ರತ್ನಗಳನ್ನೂ ಸಮುದ್ರದಲ್ಲೆಸೆದುಬಿಟ್ಟೆವು.' ಎಂದು ನುಡಿದನು. ಇಂತೆಂದ ಬಲಿಯನ್ನು ಕುರಿತು ಶುಕ್ರನು 'ಎಲೈ ಬಲಿಯೇ! ನೂರು ಅಶ್ವಮೇಧಯಾಗಗಳನ್ನು ಮಾಡಿದವನು ದೇವರಾಜ್ಯವನ್ನು ಅನುಭವಿಸುವನು. ದೇವೇಂದ್ರನು ನೂರು ಅಶ್ವಮೇಧಗಳನ್ನು ಮಾಡಿರುವನು. ಅಶ್ವಮೇಧಯಾಗಗಳನ್ನು ಮಾಡದಿದ್ದರೆ ಸ್ವರ್ಗಲೋಕವು ಸಿಗಲಾರದು' ಎಂದುಹೇಳಲು ಬಲಿಯು ಸುಮ್ಮನಾದನು. ಇಂದ್ರನಾದರೋ ದೇವತೆಗಳಿಂದೊಡಗೂಡಿ ಯಥೋಚಿತ ಕಾರ್ಯಗಳನ್ನು ಮಾಡಿದನಂತರ ಬ್ರಹ್ಮನಲ್ಲಿಗೆ ಬಂದು ತನ್ನ ರಾಜ್ಯ ಭ್ರಷ್ಟತೆಯನ್ನೂ, ಹಿಂದೆನಡೆದ ಕಥೆಯನ್ನೂ ವಿಜ್ಞಾಪಿಸಿಕೊಂಡನು. ಆಗಲಾಬ್ರಹ್ಮನು ಇಂದ್ರನನ್ನು ಕುರಿತು, 'ಎಲೈ ಇಂದ್ರನೇ ನೀನು ಈ ದೇವತೆಗಳೊಡಗೂಡಿ ಕ್ಷೀರಸಮುದ್ರದ ಬಳಿಗೆ ಹೋಗು. ನಾನೂ ಅಲ್ಲಿಗೆ ಬರುವೆನು. ನಾವೆಲ್ಲರೂ ಶ್ರೀಮನ್ನಾರಾಯಣನನ್ನು ಪ್ರಾರ್ಥಿಸುವ' ಎಂದು ಹೇಳಲು ಅವರೆಲ್ಲರೂ ಕ್ಷೀರಸಮುದ್ರದ ಬಳಿಗೆ ಬಂದರು. ಆಗ ಬ್ರಹ್ಮನು ವಿಷ್ಣುವನ್ನು ಪ್ರಾರ್ಥಿಸಿದನದೆಂತೆನೆ ; 'ಎಲೈ ದೇವದೇವನಾದ ವಿಷ್ಣುವೇ! ಜಗದೇಕ

ನಾಥನೂ, ಸುರಾಸುರ ವಂದಿತ ಪಾದಪದ್ಮವುಳ್ಳವನೂ, ಪುಣ್ಯಶ್ಲೋಕನೂ, ಅವ್ಯಯನೂ ಪರಮಾತ್ಮನೂ ಆದ ನಿನಗೆ ನಮಸ್ಕಾರವು! ಎಲೈ ಮಹಾ ವಿಷ್ಣುವೇ! ಯಜ್ಞವೂ, ಯಜ್ಞ ಸ್ವರೂಪನೂ, ಯಜ್ಞಾಂಗನೂ ನೀನೇ ಆಗಿರುವೆ! ದೀನರಾದ ನಾವು ನಿನ್ನನ್ನು ಮೊರೆಹೊಕ್ಕಿರುವೆವು. ದೇವಾ! ಈ ದೇವೇಂದ್ರನು, ಗುರುವಾದ ಬೃಹಸ್ಪತಿಯನ್ನು ತಿರಸ್ಕರಿಸಿ ರಾಜ್ಯಭ್ರಷ್ಟನಾಗಿರುವನು. ಈಗಿವನು ಸಕಲ ದೇವತೆಗಳನ್ನೂ, ಋಷಿಗಳನ್ನೂ ಕರೆದುಕೊಂಡು ಇಲ್ಲಿಗೆ ಬಂದಿರುವನು. ಅವನನ್ನುದ್ಧಾರಮಾಡು.' ಎಂದು ಪ್ರಾರ್ಥಿಸಿದ ಬ್ರಹ್ಮನನ್ನು ಕುರಿತು ಮಹಾವಿಷ್ಣುವು 'ಎಲೈ ಬ್ರಹ್ಮನೇ! ಗುರುಗಳನ್ನು ತಿರಸ್ಕರಿಸುವುದರಿಂದ ಎಲ್ಲವೂ ನಾಶವಾಗುವುದೆಂಬುದರಲ್ಲಿ ಸಂದೇಹವೇನು? ಯಾರು ಪಾಪಿಗಳಾಗಿಯೂ, ಅಧರ್ಮಿಷ್ಠರಾಗಿಯೂ, ಕೇವಲ ವಿಷಯಾಭಿಲಾಷಿಗಳಾಗಿಯೂ, ಗುರುವನ್ನೂ, ತಂದೆತಾಯಿಗಳನ್ನೂ ನಿಂದಿಸುತ್ತಾರೆಯೋ, ಅವರು ದೇವತೆಗಳೇ ಅಲ್ಲವು. ಈ ದುರ್ಮತಿಯಾದ ಇಂದ್ರನು ಮಾಡಿದ ಗುರುನಿಂದೆಗೆ ತಕ್ಕ ಫಲವನ್ನನುಭವಿಸಿದನು. ಮನುಷ್ಯನಿಗೆ ವಿಪರೀತ ಕಾಲದಲ್ಲಿ ವಿಪರೀತ ಬುದ್ಧಿಯೇ ಹುಟ್ಟುವುದು. ಹಾಗೆ ವಿಪತ್ತು ಸಂಭವಿಸಿದಲ್ಲಿ ಮನುಷ್ಯನು, ಶತ್ರುವಿನಲ್ಲಿಯೂ ಸ್ನೇಹವನ್ನು ಬೆಳಿಸುತ್ತಾನೆ. ಆದುದರಿಂದಲೈ ಇಂದ್ರನೇ! ನೀನು ದೈತ್ಯರೊಂದಿಗೆ ಸ್ನೇಹವನ್ನು ಬೆಳಿಸಬೇಕು.' ಎಂದು ನುಡಿದನು.

ವಿಷ್ಣುವಿನ ಹೇಳಿಕೆಯಂತೆ ದೇವೇಂದ್ರನು ಸಕಲರಾದ ದೇವತೆಗಳಿಂದೊಡಗೂಡಿ ಅಮರಾವತೀ ಪಟ್ಟಣವನ್ನು ಬಿಟ್ಟು, ಬಲಿಚಕ್ರವರ್ತಿಯ ರಾಜಧಾನಿಯಾದ ಸುತಲಕ್ಕೆ ಬಂದನು. ಆಗ ಇಂದ್ರಸೇನನೆಂಬ ದೈತ್ಯನು ಅತಿಯಾಗಿ ರೋಷಗೊಂಡು ಇಂದ್ರನನ್ನು ಕೊಲ್ಲಲುಬಂದನು. ಆ ಸಮಯದಲ್ಲಿ ತ್ರಿಲೋಕಸಂಚಾರಿಯಾದ ನಾರದನು ಬಲಿಯನ್ನು ಸಮಾಧಾನಮಾಡುತ್ತಿರಲು ದೇವತೆಗಳಿಂದೊಡಗೂಡಿದ ಇಂದ್ರನು ಬಂದೇಬಿಟ್ಟನು. ಲೋಕಪಾಲಕರಿಂದ ಸಮೇತನಾಗಿ ಬರುತ್ತಿರುವ ಇಂದ್ರನನ್ನು ನೋಡಿ, ಬಲಿಚಕ್ರವರ್ತಿಯು 'ಅಯ್ಯಾ ಇಂದ್ರನೇ!



ಶಂಕರ

ಈ ಸ್ಥಳಕ್ಕೇಕೆ ಬಂದೆ?' ಎಂದು ಕೇಳಿದನು. ಆಗ ಇಂದ್ರನು ನಸು ನಗುತ್ತಾ 'ಎಲೈ ಬಲಿಚಕ್ರವರ್ತಿಯೇ ! ನಾವೂ, ಕಶ್ಯಪಬ್ರಹ್ಮನ ಮಕ್ಕಳು. ನೀವೂ ಕಶ್ಯಪಬ್ರಹ್ಮನ ಮಕ್ಕಳು. ನಾವು ಹೇಗೋ ನೀವೂ ಹಾಗೆಯೇ ಸರಿ. ಹೀಗಿರುವಲ್ಲಿ ಅಣ್ಣತಮ್ಮಂದಿರಾದ ನಾವೂ ನೀವೂ ಯುದ್ಧಮಾಡುವುದರಿಂದೇನು ಫಲವು ? ನನ್ನ ರಾಜ್ಯವು ದೈವ ವಶಾತ್ ನಿನ್ನಿಂದ ಅನುಭವಿಸಲ್ಪಡುತ್ತಿರುವುದು. ಚಿಂತೆಯಿಲ್ಲ. ಆದರೆ ಅನೇಕ ಅಮೂಲ್ಯ ರತ್ನಗಳು ನಿನ್ನಿಂದ ಸಮುದ್ರದ ಪಾಲಾದವು. ಈ ವಿಷಯದಲ್ಲಿ ನಾವೂ ನೀವೂ ಸೇರಿ ಯೋಚಿಸಬೇಕಾಗಿರುವುದು. ಯೋಚಿಸಿ ವಿಮರ್ಶೆಮಾಡುವುದರಿಂದ ಜ್ಞಾನವುಂಟಾಗುವುದು. ಜ್ಞಾನ ದಿಂದ ಮೋಕ್ಷವು ದೊರೆಯುವುದು. ಆದಕಾರಣ, ನಾನಿಲ್ಲಿಗೆ ಬಂ ದಿರುವೆನು. ಶರಣಾಗತನಾಗಿ ಬಂದಿರುವ ನಾನು ಇವುಗಳನ್ನೆಲ್ಲಾ ಹೇಳುವುದರಿಂದೇನು ಫಲವು.' ಎಂದು ನುಡಿದನು. ಆಗಲಾ ಬಲಿಚಕ್ರ ವರ್ತಿಯು ಇಂದ್ರನನ್ನು ಮತ್ತಷ್ಟು ನಿರಾಕರಿಸಿದನು. ಇಂದ್ರನು ಕಣ್ಣೀರನ್ನು ಸುರಿಸಲಾರಂಭಿಸಿದನು. ಬಳಿಕ ನಾರದನು ಬಲಿಯನ್ನು ಕುರಿತು 'ಎಲೈ ಬಲಿಯೇ ! ಚೆನ್ನಾಯಿತು !! ಇದೇನಿದು ? ಇದು ಮಾಡತಕ್ಕಕಾರ್ಯ, ಇದು ಅಕಾರ್ಯವೆಂಬುದನ್ನು ನೀನರಿತಿಲ್ಲನೆ ? ಜ್ಞಾನಿಯಾದವನು ಶರಣಾಗತರನ್ನು ರಕ್ಷಿಸಲೇಬೇಕು. ಕೇಳು ; ಶರಣಾಗತರನ್ನು ರಕ್ಷಿಸುವುದು ಧರ್ಮಗಳಲ್ಲೆಲ್ಲಾ ಶ್ರೇಷ್ಠವಾದ ಧರ್ಮವು. ಶರಣಾಗತನಾಗಿರುವ ವಿಪ್ರನನ್ನೂ, ರೋಗಿಯನ್ನೂ ವೃದ್ಧನನ್ನೂ ಯಾರು ರಕ್ಷಿಸುವುದಿಲ್ಲವೋ ಅಂತಹರು ಬ್ರಹ್ಮಘಾತಿ ಗಳೆನಿಸುವರು. ಇಂದ್ರನಾದರೋ 'ಅಯ್ಯ ! ನಾನು ಶರಣಾಗತ' ಎಂದು ನಿನ್ನನ್ನು ಮೊರೆ ಹೊಕ್ಕಿರುವನು. ಇಂತಿರುವಲ್ಲಿ ಈ ಮಹೇಂದ್ರ ನನ್ನು ಸಂರಕ್ಷಿಸುವುದು ನಿನ್ನ ಧರ್ಮವು' ಎಂದನು. ಆಗಲಾ ಬಲಿ ಚಕ್ರವರ್ತಿಯು ಸ್ವಬುದ್ಧಿಯಿಂದ ಕಾರ್ಯಾಕಾರ್ಯಗಳನ್ನು ವಿಮ ರ್ಶಿಸಿ, ತಾನಾಗಿಯೇ ಬಂದು, ಅಷ್ಟದಿಕ್ಪಾಲಕರಿಂದಲೂ, ದೇವಗಣಗ ಳಿಂದಲೂ ಕೂಡಿರುವ ಇಂದ್ರನನ್ನು ಸತ್ಕರಿಸಿದನು. ಬಳಿಕ ಅರ್ಥ ಶಾಸ್ತ್ರ ನಿಪುಣನಾದ ಇಂದ್ರನು ಸ್ವಾರ್ಥಪರಾಯಣನಾಗಿ ಬಲಿಯೊ

ಡನೆ ಬಹಳ ಸ್ನೇಹದಿಂದಿದ್ದು ಮಹಾ ವಿಷ್ಣುವಿನ ಮಾತುಗಳನ್ನು ಜ್ಞಾಪಿಸಿಕೊಂಡು, ಬಲಿಚಕ್ರವರ್ತಿಯಲ್ಲಿ ಸಮುದ್ರ ಮಥನದ ವಿಚಾರವನ್ನು ಮಾಡಲೆಣಿಸಿದನು.

ಒಂದಾನೊಂದು ದಿವಸ ಬಲಿಯು ಸಭೆಗೊಂಡಿರಲು, ನೀತಿ ಶಾಸ್ತ್ರ ನಿಪುಣನಾದ ದೇವೇಂದ್ರನು, ತಾನಾಗಿಯೇ ಬಲಿಯನ್ನು ಕುರಿತು 'ಎಲೈ ವೀರಾಗ್ರಣಿಯಾದ ಬಲಿಯೇ ! ನೀನು ಕಳೆದುಕೊಂಡಿರುವ ಐರಾವತಾದಿರತ್ನಗಳನ್ನು ಪುನಃಹೊಂದಲು ಮನಸದೆರೆಯಬೇಕು. ಈ ಕಾರ್ಯದಲ್ಲಿ ನಾವೂ ನೀವೂ ಐಕಮತ್ಯದಿಂದ ಕಾರ್ಯಸಾಧನೆ ಮಾಡಬೇಕು. ರತ್ನಗಳನ್ನು ಪಡೆಯಬೇಕೆಂಬ ಅಭಿಲಾಷೆಯು ನಿನಗಿದ್ದದ್ದೇ ಆದಲ್ಲಿ ಉಭಯತ್ರರೂಸೇರಿ ಕ್ಷೀರ ಸಮುದ್ರವನ್ನು ಕಡಿಯಬೇಕು.' ಎಂದು ನುಡಿದನು. ಆಗಲಾ ದೇವಘಾತಿಯಾದ ಬಲಿಯು 'ಕ್ಷೀರಸಮುದ್ರವನ್ನು ಕಡಿಯುವುದು ಹೇಗೆ' ಎಂದು ಕೇಳಿದನು. ಆ ಸಮಯದಲ್ಲಿ ಆಕಾಶವಾಣಿಯು 'ಎಲೈ ದೇವಾಸುರರಿರಾ ! ನೀವೆಲ್ಲರೂಸೇರಿ ಮಂದರ ಪರ್ವತವನ್ನು ಕಡಗೋಲಾಗಿಯೂ, ವಾಸುಕಿಯನ್ನು ಹಗ್ಗವನ್ನಾಗಿಯೂ ಮಾಡಿಕೊಂಡು ಕ್ಷೀರಸಮುದ್ರವನ್ನು ಕಡಿಯಿರಿ. ನಿಮಗೆ ಖಂಡಿತವಾಗಿಯೂ ಜಯಪ್ರದವಾಗುವುದು.' ಎಂದಿತು. ಆಕಾಶವಾಣಿಯು ನುಡಿದಬಳಿಕ ದೇವದಾನವರೆಲ್ಲರೂ ಪಾತಾಳದಿಂದ ಹೊರಹೊರಟು, ಅಗಾಧವಾದ ಮಂದರ ಪರ್ವತದ ಬಳಿಗೆ ಬಂದರು. ಬಳಿಕ ಸುವರ್ಣಕಾಂತಿಯುಳ್ಳದ್ದಾಗಿಯೂ, ಅನೇಕರತ್ನಗಳ ಕಾಂತಿಯಿಂದ ಬೆಳಗುತ್ತಿರುವುದಾಗಿಯೂ, ಚಂದನ, ಪಾರಿಜಾತ, ನಾಗ, ಪುನ್ನಾಗ, ಚಂಪಕಾದಿ ವೃಕ್ಷಗಳಿಂದ ರಂಜಿಸುತ್ತಿರುವುದಾಗಿಯೂ, ಸಿಂಹ ಶಾರ್ದೂಲಾದಿ ನಾನಾ ಮೃಗಗಳಿಂದ ಭಯಂಕರವಾಗಿಯೂ ಇರುವ ಮಂದರ ಪರ್ವತವನ್ನು ನೋಡಿ, ದೇವದಾನವರೆಲ್ಲರೂ, ಅಂಜಲಿಬದ್ಧರಾಗಿ ಆ ಪರ್ವತವನ್ನು ಕುರಿತಿಂತೆಂದರು. 'ಎಲೈ ಪರೋಪಕಾರಿಯಾದ ಮಂದರ ಪರ್ವತನೇ ! ನಿನ್ನಲ್ಲಿ ಒಂದು ವಿಜ್ಞಾಪನೆಯನ್ನು ಅರಿಕೆಮಾಡಿಕೊಳ್ಳಲು ಬಂದಿರುವೆವು. ಅಮೃತ

ವನ್ನೂ, ಕಳೆದುಹೋದ ರತ್ನಗಳನ್ನೂ ಹೊಂದಲು ಕ್ಷೀರಸಾಗರವನ್ನು ಕಡೆಯಬೇಕೆಂದಿರುವೆವು. ಈ ಕಾರ್ಯದಲ್ಲಿ ನೀನು ನಮ್ಮಮೇಲೆ ಕರುಣೆಯಿಟ್ಟು ಕಡಗೋಲಾಗಬೇಕು.' ಎಂದರು. ಆಗ ಮಂದರ ಪರ್ವತವು ದೇವದಾನವರನ್ನು (ವಿಶೇಷವಾಗಿ ಇಂದ್ರನನ್ನು) ಕುರಿತು 'ಅಯ್ಯಾ ಇಂದ್ರನೇ ! ಹಿಂದೆ ನೀನು ನನ್ನರೆಕ್ಕೆಗಳನ್ನು ಆ ನಿನ್ನ ವಜ್ರಾಯುಧದಿಂದ ಕಡಿದುಹಾಕಿರುವೆ. ಚಲಿಸಲು ಸಹ ನನ್ನಿಂದಾಗದು. ಹೀಗಿರುವಲ್ಲಿ ನಾನು ನಿಮಗೆ ಉಪಕಾರಿಯಾಗುವುದು ಹೇಗೆ? ಎಂದಿತು. ಆಗ ದೇವದಾನವರು ಆ ಪರ್ವತರಾಜನನ್ನು ಬಹಳವಾಗಿ ಸ್ತುತಿಸಿ ಎಬ್ಬಿಸಿದರು. ಬಳಿಕ ಆ ಪರ್ವತವನ್ನು ಕ್ಷೀರಸಾಗರದಬಳಿಗೊಯ್ಯಲು ಯತ್ನಿಸಿ ಅಶಕ್ತರಾಗಲು, ಪರ್ವತವು ದೇವದಾನವರಮೇಲೆ ಬಿದ್ದಿತು. ಆಗ ಕೆಲವರು ಭಗ್ನರಾದರು ; ಇನ್ನು ಕೆಲವರು ಮೃತರಾದರು ; ಮತ್ತೆ ಕೆಲವರು ಮೂರ್ಛೆ ಹೊಂದಿದರು ; ಇನ್ನೂ ಕೆಲವರು ಅಳಲಾರಂಭಿಸಿದರು. ಬಳಿಕ ಭಗ್ನೋದ್ಯೋಗಿಗಳಾದ ದೇವ ದಾನವರು ಮಹಾ ವಿಷ್ಣುವನ್ನು ಕುರಿತು ಬಹಳವಾಗಿ ಸ್ತುತಿಸಿದರು. ಆಗಲಾ ಗರುಡವಾಹನನಾದ ವಿಷ್ಣುವು ಪ್ರತ್ಯಕ್ಷನಾಗಿ ಆ ಮಂದರ ಪರ್ವತವನ್ನು ಗರುಡನಮೇಲೆ ಹೊರಿಸಿ ಕ್ಷೀರಸಮುದ್ರದಲ್ಲಿರಿಸಿ, ದೇವತೆಗಳನ್ನುಳುಹಿ ಅಂತರ್ಧಾನವಾದನು. ಬಳಿಕ ದೇವದಾನವರು ವಾಸುಕಿಯನ್ನು ಕರೆತಂದು, ಹಗ್ಗವನ್ನಾಗಿ ಮಾಡಿಕೊಂಡು ಕ್ಷೀರಸಮುದ್ರವನ್ನು ಕಡಿಯಲಾರಂಭಿಸಿದರು. ಹೀಗೆ ಕಡಯುತ್ತಿರುವಾಗ ಮಂದರಪರ್ವತವು ರಸಾತಲಕ್ಕೆಹೋಗಿ ನಿಂತಿತು. ತಕ್ಷಣದಲ್ಲಿಯೇ ವಿಷ್ಣುವು ಕಮಠರೂಪಿಯಾಗಿ ಬಂದು ಆ ಪರ್ವತವನ್ನು ಲೀಲೆಯಿಂದ ಮೇಲಕ್ಕೆತ್ತಿದನು. ಇದು ಪರಮಾದ್ಭುತವಾಗಿ ಕಂಡಿತು.

ಅನಂತರದಲ್ಲಿ ಅತಿ ಬಲಪರಾಕ್ರಮಶಾಲಿಗಳಾದ ದೇವದಾನವರು ಬಹಳವಾದ ಶ್ರಮವನ್ನು ಸಹಿಸಿ ಕ್ಷೀರಸಮುದ್ರವನ್ನು ಕಡಿಯಲಾರಂಭಿಸಿದರು. ಆಗ ಕಮಠರೂಪಿಯಾದ ಮಹಾವಿಷ್ಣುವಿನ ಬೆನ್ನಿಗೂ ಮಂದರ ಪರ್ವತಕ್ಕೂ ಘರ್ಷಣೆಯುಂಟಾಗಿ, ಬಡಬಾಗ್ನಿ

ಯ್ಯೂ, ಹಾಲಾಹಲವಿಷವೂ ಉದ್ಭವಿಸಲು ಮೊದಲಾಯಿತು. ಇದನ್ನು ನೋಡುತ್ತಿದ್ದ ಜ್ಞಾನಿಯಾದ ನಾರದಮುನಿಯು ದೇವ ದಾನವ ರನ್ನು ಕುರಿತಿಂತೆಂದನು; 'ಎಲೈ ಸುರಾಸುರರಿರಾ! ನೀವು ಈ ಮಥನ ಕಾರ್ಯವನ್ನು ಬಿಟ್ಟು ದೇವದೇವನಾದ ಶಂಕರನನ್ನು ಭಜಿಸಿರಿ! ನಿಮಗೆ ಮಂಗಳವಾಗುವುದು. ಹಿಂದೆ ದುರುಳ ದಕ್ಷನು ಶಂಕರ ನನ್ನು ಲಕ್ಷ್ಯಮಾಡದಿರಲು, ವೀರಭದ್ರನು ಜನಿಸಿ ಆ ಶಿವದ್ವೇಷಿ ಯಾದ ದಕ್ಷನನ್ನೇನುಮಾಡಿದನೆಂಬುದನ್ನು ಮರೆತಿರುವಿರಾ? ಯಾವ ಪರಶಿವನು, ಪರಾತ್ಪರನಾಗಿಯೂ, ಪರಮಾನಂದ ರೂಪನಾಗಿಯೂ, ರೂಪ ರಹಿತನಾಗಿಯೂ, ನಿಷ್ಪ್ರಪಂಚನಾಗಿಯೂ ಇರುವನೋ, ಅಂತಹ ಪರಾತ್ಪರ ವಸ್ತುವಾದ ಪರಶಿವಲಿಂಗವನ್ನು ಧ್ಯಾನಿಸಿರಿ' ಎಂದು ಹೇಳಿದನು. ನಾರದನ ನುಡಿಯು ಸ್ವಾರ್ಥಪರಾಯಣನಾದ ದೇವಾಸುರರಿಗೆ ಕೇಳಿಸಲೇ ಇಲ್ಲವು. ಸ್ವಾರ್ಥ ಪರಾಯಣರಿಗೂ, ಕಾಮ ಕ್ರೋಧಗಳಿಂದ ಮೆರೆಯುವವರಿಗೂ ಮಾಡಿದ ಉಪದೇಶವು ಸಾರ್ಥಕವಾದೀತೆ? ಎಂದಿಗೂ ಇಲ್ಲವು. ಅಂತಹರು ಉಪದೇ ಶಕ್ಕೆ ಅರ್ಹರೇ ಅಲ್ಲವು. ಬಳಿಕ ದೇವಾಸುರರು ಕೇವಲ ತಮ್ಮ ಉದ್ಯೋಗಗಳಲ್ಲಿಯೇ ನಿರುತರಾಗಿ, ಶಿವನನ್ನು ನಿರಾಕರಿಸಿ ಕ್ಷೀರಸಾ ಗರವನ್ನು ಮಥನ ಮಾಡುತ್ತಿದ್ದರು. ಹೀಗೆ ಮಥನಮಾಡುತ್ತಿರಲು, ಕಮಠರೂಪಿಯಾದ ಮಹಾವಿಷ್ಣುವಿಗೂ, ಮಂದರ ಪರ್ವತಕ್ಕೂ ಬಹಳವಾದ ಘರ್ಷಣೆಯುಂಟಾಗಿ ಕಾಲಕೂಟ ಮಹಾ ವಿಷವು ಹುಟ್ಟಿತು. ಈ ವಿಷವು ಮೂರು ಲೋಕಗಳನ್ನೂ ದಹಿಸುವುದರಲ್ಲಿ ಸಮರ್ಥವಾಗಿಯೂ, ಇಂದ್ರನನ್ನು ಕೊಲ್ಲುವುದಾಗಿಯೂ ಆಗಿ, ನಭಸ್ಥಲವೆಲ್ಲವನ್ನೂ ವ್ಯಾಪಿಸಿ, ಸಕಲ ಭೂತಗಣಗಳನ್ನೂ ಗ್ರಸನ ಮಾಡಲು ಬಂದಿತು. ಇಂತು ಬರುತ್ತಿರುವ ಮಹಾ ವಿಷವನ್ನು ಕಂಡ ದೇವದಾನವರು ಮಂದರಪರ್ವತವನ್ನಲ್ಲಿಯೇ ಬಿಟ್ಟು ಪಲಾ ಯನ ಸೂಕ್ತಿಯನ್ನು ಚೆನ್ನಾಗಿ ಪಠಿಸಿದರು, ಮಹಾತ್ಮರಾದ ನೂರಾ ರು ಋಷಿಗಳೂ, ಹಿಂದೆ ದಕ್ಷಬ್ರಹ್ಮನ ಯಾಗಶಾಲೆಯಿಂದ ಪಲಾ ಯನ ಪರಾಯಣರಾದಂತೆ, ಓಡಿಹೋದರು. ಆಗಲಾ ಭೃಗುಮಹ

ಷಿ೯ಯು ದೇವತೆಗಳನ್ನು ಕುರಿತು 'ಎಲೈ ದೇವತೆಗಳಿರಾ! ಬ್ರಹ್ಮ ನನ್ನು ಶರಣುಹೋಗಿರಿ. ಆತನು ವೇದವಾಕ್ಯಗಳಿಂದ ಈ ಮಹಾ ಕಾಲಕೂಟವಿಷವನ್ನು ನಾಶಮಾಡುವನು. ಇದು ಸತ್ಯವು' ಎಂದನು. ಆಗ ಸಕಲರಾದ ದೇವದಾನವರು ಬ್ರಹ್ಮನನ್ನು ಶರಣುಹೊಕ್ಕರು. ಬ್ರಹ್ಮನಾದರೋ ಕಾಲಕೂಟ ಮಹಾವಿಷವು ಅತಿ ವೇಗವಾಗಿ ಬರು ತ್ತಿರುವುದನ್ನೂ, ದೇವತೆಗಳು ಮಾಡಿದ ಚರ್ಯೆಗಳನ್ನೂ ನೋಡಿ, ಅತಿಯಾಗಿ ಕೋಪಗೊಂಡು ಅವರನ್ನು ಶಪಿಸಲುದ್ಯುಕ್ತನಾದನು. ಆಗಲಾ ಮಹಾತ್ಮನಾದ ನಾರದಮುನಿಯು ಕೋಪಿಷ್ಠನಾದ ತನ್ನ ತಂದೆಯ ಕೋಪವನ್ನು ಸಮಾಧಾನಪಡಿಸಿದನು. ಬಳಿಕ ಬ್ರಹ್ಮನು ದೇವತೆಗಳನ್ನು ಕುರಿತು 'ಎಲೈ ದೇವತೆಗಳಿರಾ! ನೀವೆಂತಹ ಅಕಾ ರ್ಯವನ್ನು ಮಾಡಿರುವಿರಿ. ಈಶ್ವರನನ್ನು ನಿರಾಕರಿಸಿ ಕ್ಷೀರಸಾಗರ ವನ್ನು ಹೇಗೆ ಮಥನಮಾಡಿದಿರಿ? ಈ ಕಾಲಕೂಟ ಮಹಾ ವಿಷವು ಸಾಕ್ಷಾತ್ ಶಂಕರನ ಕೋಪದಿಂದ ಹುಟ್ಟಿರುವುದೇ ಹೊರತು ಮತ್ತೆ ಬೇರೆಯಲ್ಲ.' ಎಂದು ಕಾಲಕೂಟ ಮಹಾವಿಷದ ಭಯದಿಂದ ಚತು ರ್ವೇದಗಳನ್ನೂ, ಆಗಮಗಳನ್ನೂ ತೆಗೆದುಕೊಂಡು ಹೊರಟನು. ಬಳಿಕ ದೇವತೆಗಳೆಲ್ಲರೂ, ತಮ್ಮಲ್ಲಿಯೇ 'ಅಯ್ಯೋ ಅಜ್ಞಾನದಿಂದಲೂ ಕಾಮಕ್ರೋಧಾದಿಗಳಿಂದಲೂ ಕೂಡಿರುವ ನಾವು ಶಂಕರನಲ್ಲೇನು ಮಾಡಬೇಕು?' ಎಂದುಕೊಂಡು ಬ್ರಹ್ಮನನ್ನು ಮುಂದಿಟ್ಟುಕೊಂಡು ಅತಿ ಶೀಘ್ರವಾಗಿ ವೈಕುಂಠಕ್ಕೆ ಬಂದರು. ಅಷ್ಟರಲ್ಲಿಯೇ ಕಾಲ ಕೂಟ ಮಹಾವಿಷವು ಪ್ರವೃದ್ಧವಾಗಿ ಬ್ರಹ್ಮಲೋಕವನ್ನೂ, ವೈಕುಂ ಠವನ್ನೂ ಸುಟ್ಟುಬಿಟ್ಟಿತು. ವಿಷ್ಣುವೂ ಬ್ರಹ್ಮಾದಿ ಸಕಲ ದೇವತೆಗಳೂ ಕಾಲಕೂಟ ವಿಷದಿಂದ ಭಸ್ಮವಾಗಿಹೋದರು. ಆಗ ಭೂಮಿ, ನೀರು, ಗಾಳಿ, ಬೆಂಕಿ, ಆಕಾಶ ಎಂಬ ಪಂಚಭೂತಗಳೇ ಕಾಣದಂತಾದವು.' ಅಹಂಕಾರವೂ, ಮೂಲವಿದ್ಯೆಯೂ ಶಿವಕೋಪಾಗ್ನಿಯಿಂದ ಹುಟ್ಟಿ ಮಹಾ ವಿಷದಿಂದ ದಗ್ಧವಾಗಿ ಹೋದವು.

# ಅಧ್ಯಾಯ ೧೦

## ಗಣಪತಿಯ ಕಥೆ–ವಿಶ್ವರೂಪದರ್ಶನ–ವಿಷಪಾನಲೀಲೆ.

ಶೌನಕಾದಿ ಮಹರ್ಷಿಗಳು ಹೇಳುತ್ತಾರೆ:— 'ಎಲೈ ಸೂತ ಪುರಾಣಿಕನೇ! ಶಿವಕೋಪದಿಂದುತ್ಪನ್ನವಾದ ಕಾಲಕೂಟ ಮಹಾ ವಿಷದಿಂದ ಚರಾಚರಾತ್ಮಕವಾದ ಈ ಪ್ರಪಂಚವೆಲ್ಲವೂ ನಾಶವಾಯಿತೆಂದು ಹೇಳಿದೆಯಷ್ಟೆ? ಈಶ್ವರನೂ ಈ ಬ್ರಹ್ಮಾಂಡದಲ್ಲಿಯೇ ಇರುವವನಲ್ಲವೆ? ಸತ್ಯಲೋಕ, ವೈಕುಂಠ, ಕೈಲಾಸಾದಿ ಲೋಕಗಳೂ ಬ್ರಹ್ಮಾಂಡದಲ್ಲಿ ಇರುವವೆಂದು ತಿಳಿದುಕೊಂಡಿರುವೆವು. ಹೀಗಿರುವಲ್ಲಿ ಸೃಷ್ಟಿಯು ಮರಳಿ ಹೇಗಾಯಿತು? ಯಾರಿಂದಾಯಿತು? ಬ್ರಹ್ಮನೂ, ವಿಷ್ಣುವೂ, ಸೂರ್ಯಚಂದ್ರಾದಿಗಳೂ ಎಲ್ಲಿ ಹೇಗೆ ನಾಶವಾದರು? ಮಹದದ್ಭುತವಾದ ಆಕಾಶವೇನಾಯಿತು. ಅಯ್ಯಾ ಮಹರ್ಷಿಯೇ! ವ್ಯಾಸ ಶಿಷ್ಯನಾದ ನೀನು ಆತನ ಪ್ರಸಾದದಿಂದೆಲ್ಲವನ್ನೂ ತಿಳಿದಿರುವೆ. ಜ್ಞಾನಶಾಸ್ತ್ರವನ್ನು ತಿಳಿದವರಲ್ಲಿ ನಿನ್ನನ್ನು ಬಿಟ್ಟರೆ ಮತ್ತಾರೂ ಸಮರ್ಥರಿಲ್ಲವು. ಆದುದರಿಂದ ದಯವಿಟ್ಟು ಈ ರಹಸ್ಯವನ್ನು ನಮಗೆ ತಿಳಿಸುವವನಾಗು' ಎಂದು ನುಡಿದ ಋಷಿಗಳನ್ನು ಕುರಿತು ವ್ಯಾಸ ಶಿಷ್ಯನಾದ ಸೂತನು ಗುರುವಾದ ವ್ಯಾಸನನ್ನು ನಮಸ್ಕರಿಸಿ ಹೇಳಲುಪಕ್ರಮಿಸಿದನು. 'ಕೇಳಿರೈ! ವಿಷ್ಣು ಬ್ರಹ್ಮಾದಿಗಳೂ, ಇಂದ್ರಾದ್ಯಷ್ಟದಿಕ್ಪಾಲಕರೂ ಬ್ರಹ್ಮಾಂಡ ಮಧ್ಯದಲ್ಲಿ ಕಾಲಕೂಟ ಮಹಾ ವಿಷದಿಂದ ವ್ಯಾಪಿಸಲ್ಪಟ್ಟಾಗ, ಗಣಪತಿಯು ತನ್ನ ತಂದೆಯಾದ ಪರಶಿವನನ್ನು ಕುರಿತು 'ಎಲೈ ಜಗತ್ಪತಿಯೇ! ನಾನು ವಿನೋದಕ್ಕಾಗಿ, ಈ ದೇವತೆಗಳಿಗೆ ಈ ವಿಧವಾದ ವಿಘ್ನವನ್ನು ತಂದೊಡ್ಡಿದೆನು. ಏಕೆಂದರೆ ಈ ಮೂಢರಾದ ದೇವತೆಗಳು, ಕಾಮಕ್ರೋಧಾದಿಗಳಿಂದ ಗ್ರಸ್ತರಾಗಿ ನಿನ್ನನ್ನಾಗಲಿ, ನನ್ನನ್ನಾಗಲಿ, ಪೂಜಿಸುವುದಿಲ್ಲ. ಯಾರು ಕಾರ್ಯಾರಂಭದಲ್ಲಿ ನನ್ನನ್ನೂ, ನಿನ್ನನ್ನೂ ಪೂಜಿಸುವುದಿಲ್ಲವೋ ಅವರೆಲ್ಲರೂ ಅಧಿಕ

ತರವಾದ ಕ್ಲೇಶವನ್ನನುಭವಿಸುವರು ' ಎಂದು ನುಡಿದನು. ಆಗಲಾ ಪರಶಿವನು ಗಣಪತಿಯನ್ನು ಕುರಿತು ಇಂತೆಂದನು. ' ಎಲೈ ವತ್ಸನೆ! ಈ ಪ್ರಪಂಚವೆಲ್ಲವೂ, ಅಹಂಕಾರಮಯವಾದುದು. ಅಹಂಕಾರದಿಂದಲೇ ಸೃಷ್ಟಿ, ಸ್ಥಿತಿ, ಲಯ ಕಾರ್ಯಗಳಾಗುವವು. ಪ್ರಪಂಚದ ಆದಿಯಲ್ಲಾದರೋ ವಿಜ್ಞಪ್ತಿಮಾತ್ರವಿರುತ್ತದೆ. ಸದಾನಂದಕರವಾದ ಶಾಂತಿಯು ಸದಾ ದ್ವೈತಾದ್ವೈತ ಲಕ್ಷಣವುಳ್ಳದ್ದಾಗಿರುವುದು' ಇಂತೆಂದ ಪರಶಿವನನ್ನು ಕುರಿತು ಗಣಪತಿಯು ' ಎಲೈ ಶಂಕರನೇ ! ನೀನೇ ಸದಾನಂದೈಕಸ್ವರೂಪನಾದ ಆತ್ಮನಾದರೆ, ನಿನಗಿಂತ ಬೇರೆ ಯಾವುದೂ ಇಲ್ಲವು. ಎಲೈ ಪರಮೇಶ್ವರನೆ ! ಈ ಪ್ರಪಂಚದಲ್ಲಿ ದೇವತೆಗಳು, ರಾಕ್ಷಸರು, ಮನುಷ್ಯರು, ಹುಳು, ಪಶು ಎಂಬೀ ರೂಪಗಳು ಹೇಗೆ ಹುಟ್ಟಿದವು? ತ್ರಿಮೂರ್ತಿಗಳಿಂದಲೂ ಗಮನಿಸಲ್ಪಟ್ಟ ವಿಚಿತ್ರವಾದ ಅಹಂಕಾರವು, ಹೇಗೆ ಹುಟ್ಟಿತು ? ನಾನಾ ಭೇದಗಳಿಂದ ಕೂಡಿದ, ಅಂಡಜ, ಸ್ವೇದಜ, ಉದ್ಭಿಜ್ಜ, ಆಯುಜಗಳೆಂಬೀ ಚತುರ್ವಿಧ ಭೂತಗ್ರಾಮಗಳೂ, ನಿತ್ಯಾನಿತ್ಯವಾದ ಸಂಸಾರಚಕ್ರವೂ ಹೇಗೆ ಹುಟ್ಟಿದವು? ಎಲೈ ತಂದೆಯೇ ! ಈ ಪ್ರಪಂಚದಲ್ಲಿ ಮನುಜರು ಜ್ಞಾನವಾದದಿಂದ ಮೋಹಿತರಾಗಿ, ಕೆಲವರು ಕರ್ಮವೇ ಮುಖ್ಯವೆಂದೂ, ಇನ್ನು ಕೆಲವರು ಜ್ಞಾನವೇ ಮುಖ್ಯವೆಂದೂ, ಮತ್ತೆ ಕೆಲವರು ಸಗುಣಬ್ರಹ್ಮನನ್ನಾಶ್ರಯಿಸಿದವರೂ, ಇನ್ನೂ ಕೆಲವರು ನಿರ್ಗುಣಬ್ರಹ್ಮನನ್ನು ಆಶ್ರಯಿಸಿದವರೂ ಮತ್ತು ಕೆಲವರು ಇವೆಲ್ಲಕ್ಕೂ ವಿರೋಧಿಗಳಾಗಿಯೂ ಹೇಗಾದರು? ಇದು ನನಗೆ ಅದ್ಭುತವಾದ ಸಂಶಯದಂತೆ ಕಾಣುವುದು. ಈ ಸಂಶಯವನ್ನು ಹೋಗಲಾಡಿಸಲು ನೀನೇ ಸಮರ್ಥನು. ಕಾಪಾಡು ! ಎಲೈ ಸ್ವಾಮಿಯೇ ಇಲ್ಲಿರುವ ನಾನೂ, ಈ ಶಿವಗಣಗಳೂ, ಈ ವೃಷಭನೂ ಎಲ್ಲಿಂದ ಬಂದೆವು ? ಎಲೈ ಶಂಕರನೇ ! ಮಹಾ ಭಾಗ್ಯಶಾಲಿಗಳಾದ ರಾಜಸರು, ತಾಮಸರು ಎಂಬುವರು ಎಲ್ಲಿಂದ ಬಂದರು ?' ಎಂದು ಕೇಳಿದನು. ಆಗ ಶಂಕರನು ಗಣಪತಿಯನ್ನು ಕುರಿತು ' ಕೇಳೈ ಕುಮಾರ ! ಸಕಲ ದೇವತೆಗಳೂ, ಮಾನುಷ ರಾಕ್ಷಸ ಗಣಗಳೂ

ಇವರಿಂದ ಕೂಡಿದ ಇಡೀ ಜಗತ್ತು ಸತ್ವರಜಸ್ತಮೋಗುಣಗಳಿಂದಾ ವೃತವಾಗಿರುವುದು. ಈ ತ್ರಿಗಣಗಳು ಕಾಲಶಕ್ತಿಯಿಂದ ಹುಟ್ಟಿದ ವುಗಳು. ಕೃತಕಗಳು ಮತ್ತು ನಶ್ವರಗಳು' ಎಂದು ನುಡಿದನು. ಬಳಿಕ ಗಣಪತಿಯೂ, ಶಂಕರನೂ ಮಾತನಾಡುತ್ತಿರುವಲ್ಲಿಯೇ ಲಿಂಗ ರೂಪಿಯಾದ ಪರಶಿವನು ವಿಶ್ವರೂಪವನ್ನು ತೋರಿದನು, ಆಗ ಭಗವಂತ ನಾದ ಪರಶಿವನು ಅಂತರ್ಧಾನವಾದನು. ಬ್ರಹ್ಮವಿದ್ಯೆಯೆಂಬ ಪರಾ ಶಕ್ತಿಯು ಮಾತ್ರ ಉಳಿಯಿತು. ಮಹಾಮಹಿಮನಾದ ಗಣಪತಿಯು ಲಿಂಗಮೂರ್ತಿಯ ವಿಶ್ವರೂಪವನ್ನು ಎವೆಯಿಕ್ಕದೆ ನೋಡುತ್ತ ನಿಂತನು.

ಎಂಬೀಪ್ರಕಾರವಾಗಿ ನುಡಿದ ಸೂತಪುರಾಣಿಕನನ್ನು ಕುರಿತು ಶೌನಕಾದಿ ಮಹರ್ಷಿಗಳು ಕೇಳುತ್ತಾರೆ; 'ಅಯ್ಯಾ! ಸೂತನೇ!! ಪ್ರಕೃತಿಯಲ್ಲಿಯೇ ಅಲ್ಲವೇ ಈ ಚರಾಚರಾತ್ಮಕವಾದ ಪ್ರಪಂಚವು ಸೇರಿರುವುದು? ಲಿಂಗರೂಪಿಯಾದ ಪರಶಿವನವಿನಾ ಉಳಿದವರೆಲ್ಲರೂ ಪ್ರಕೃತಿಯಲ್ಲಿಯೇ ಸೇರಿಹೋಗಬೇಕಲ್ಲವೆ? ಇಂತಿರುವಲ್ಲಿ ಗಣಪತಿಯು ಮಾತ್ರ ಬೇರೆಯಾದುದು ಹೇಗೆ? ಇದನ್ನು ದಯವಿಟ್ಟು ಹೇಳು' ಎಂದು ಬೆಸಗೊಂಡ ಋಷಿಪುಂಗವರನ್ನು ಕುರಿತು ಸೂತನು ಹೇಳ ತೊಡಗಿದನು. ಅಯ್ಯಾ ಋಷಿಗಳಿರಾ! ಭೂತಭಾವನನಾದ ಗಣ ಪತಿಯು ಸಾಕ್ಷಾತ್ ಪ್ರಕೃತಿಯಿಂದಲೇ ಜನಿಸಿರುವನು. ಪರಶಿವನ ಸ್ವರೂಪವು ಹೇಗೋ, ಗಣಪತಿಯ ಸ್ವರೂಪವೂ ಹಾಗೆಯೇ ಇರು ವುದು. ಒಂದಾನೊಂದು ದಿನ ಈ ಗಣಪತಿಯು ಅವಿದ್ಯೆಯಿಂದ ಗ್ರಸ್ತನಾಗಿ ಪರಶಿವನೊಡನೆ ಯುದ್ಧ ಮಾಡಿದನು. ಗೆಲ್ಲಲಸಾಧ್ಯನಾ ಗಿಯೂ ಗಜಾರೂಢನಾಗಿಯೂ ಇರುವ ಗಣಪತಿಯನ್ನು ಪರಶಿವನು ತನ್ನ ಶೂಲಾಯುಧದಿಂದ ಹೊಡೆದು ಕೆಡುಹಿದನು. ಆಗ ಪ್ರಕೃತಿಯು ತನ್ನ ಮುದ್ದು ಮಗನ ಮೃತಿಯನ್ನು ನೋಡಿ, ಪರಶಿವನನ್ನು ಬಹಳ ವಾಗಿ ಪ್ರಾರ್ಥಿಸಿದಳು. ಆಗಲಾ ಪರಶಿವನು ಪ್ರಕೃತಿಯನ್ನು ಕುರಿತು 'ಎಲೈ ಮಂಗಳಕರಳೇ! ನಿನ್ನ ಪ್ರಾರ್ಥನೆಗೆ ಮೆಚ್ಚಿರುವೆನು. ಬೇಕಾದ ವರವನ್ನು ಬೇಡುವವಳಾಗೆ'ಂದನು. ಆಗ ಜಗನ್ಮಾತೆಯು

'ನನ್ನ ಮಗನಾದ ಈ ಗಣಪತಿಯನ್ನು ಬದುಕಿಸಿಕೊಡು' ಎಂದು ಕೇಳಿದಳು. ಬಳಿಕ ಪರಶಿವನು ಆನೆಯ ಮುಖವನ್ನು ಗಣಪತಿಯ ಕಬಂಧದಮೇಲಿಟ್ಟು ಜೀವಕಳೆಯನ್ನು ತುಂಬಿದನು. ಆಗ ಗಣಪತಿಯು ಶಂಕರನ ವರಪ್ರಸಾದ ಬಲದಿಂದ ಮಾಯಾರಹಿತನಾಗಿಯೂ ಜ್ಞಾನಪೂರ್ಣನಾಗಿಯೂ, ಜ್ಞಾನಾಮೃತದಿಂದ, ನಿತ್ಯತೃಪ್ತನಾಗಿಯೂ, ನಿರಾಮಯನಾಗಿಯೂ, ಸಮಾಧಿ ಸಂಸ್ಥಿತನಾಗಿಯೂ, ಶಾಶ್ವತನಾಗಿಯೂ ಆದನು. ಬಳಿಕ ಮಹಾ ಗಣಪತಿಯು ಯೋಗ ದಂಡಕ್ಕಾಗಿ ತನ್ನ ದಂತವನ್ನೇ ಕಿತ್ತುಕೊಂಡು, ಶಬ್ದಬ್ರಹ್ಮನಿಗಿಂತಲೂ ಅತೀತನಾದನು. ಅನಂತರದಲ್ಲಿ ಶಂಕರನು ಈ ಗಣಪತಿಯನ್ನು ವಿಘ್ನಾಧಿಪನನ್ನಾಗಿ ಮಾಡಿದನು.

ಈ ಕಾರಣದಿಂದಲೇ ಗಜಾನನನು ತಾನು ಬೇರೆಯಾಗಿದ್ದು ಕೊಂಡು ಪ್ರಕೃತಿಯನ್ನೂ, ಲಿಂಗವನ್ನೂ ಪ್ರತ್ಯಕ್ಷವಾಗಿ ನೋಡಿದನು. ಸ್ವಭಾವಜನ್ಯವಾದ ಪ್ರಕೃತಿಯಿಂದ ಕೂಡಿದ ಲಿಂಗಮೂರ್ತಿಯನ್ನೂ ಆ ಲಿಂಗಮೂರ್ತಿಯಲ್ಲಿ ಅನೇಕ ಗಣಗಳಿಂದ ಕೂಡಿದ ತಾನೂ, ಸಕಲವಾದೀ ಪ್ರಪಂಚವೂ ಲೀನವಾಗುತ್ತಿರುವುದನ್ನು ಕಂಡನು. ಈ ಅದ್ಭುತವಾದ ವಿಶ್ವರೂಪವನ್ನು ಕಂಡ ಗಜಾನನನು ಬಹಳಕಾಲ ಆಶ್ಚರ್ಯದಿಂದ ಮೈಮರೆತಿದ್ದು, ಸ್ಮೃತಿಯನ್ನು ಹೊಂದಿ ಪುನಃ ನೋಡಲಾರಂಭಿಸಿದನು. ಆ ಬಳಿಕ ಲಿಂಗರೂಪದಿಂದ ವಿಶ್ವರೂಪವನ್ನು ತೋರಿದ್ದ ಪರಶಿವನಲ್ಲಿ, ಸೃಷ್ಟಿಕರ್ತನೂ, ರಜೋಗುಣ ಭರಿತನೂ ಆದ ಬ್ರಹ್ಮನೂ, ಪಾಲಕನೂ, ಸತ್ವಗುಣಭರಿತನೂ ಆದ ವಿಷ್ಣುವೂ, ಲಯಕರ್ತನೂ ತಮೋಗುಣ ಭರಿತನೂ ಆದ ರುದ್ರನೂ ಲಿಂಗಶಕ್ತಿಗೊಳಪಟ್ಟು ಶವಗಳಂತೆ ತೇಲಾಡುತ್ತಿರುವುದನ್ನು ಕಂಡನು. ಬ್ರಹ್ಮಾಂಡ ಗೋಲಕಗಳೆಲ್ಲವೂ ಕೋಟ್ಯಂತರ ಅಣುಗಳಂತೆ ತೇಲಾಡುತ್ತಿದ್ದುದನ್ನು ಕಂಡನು. ಇವುಗಳೆಲ್ಲವೂ ಆ ಲಿಂಗರೂಪಿಯಾದ ಪರಶಿವನ ಉದರ ಭಾಂಡಾಗಾರದಲ್ಲಿ ಲೀನವಾಗುತ್ತಲೂ, ಪುನಃ ಹುಟ್ಟುತ್ತಲೂ ಇರುವುದನ್ನು ತನ್ನ ಕಣ್ಣಾರೆ ಕಂಡನು.

ಪ್ರಕೃತಿಯಲ್ಲಿ ಲಿಂಗವೂ, ಲಿಂಗದಲ್ಲಿ ಪ್ರಕೃತಿಯೂ, ಪರಾಶಕ್ತಿಯಲ್ಲಿ ಲಿಂಗವೂ, ಲಿಂಗದಲ್ಲಿ ಪರಾಶಕ್ತಿಯೂ ಸೇರಿಕೊಂಡಿರುವುದನ್ನು ನೋಡಿದ ಗಜಾನನನು ಆಶ್ಚರ್ಯಗೊಂಡನು. ಬಳಿಕ ಗಜಾನನನು ಶಿವಲಿಂಗದಲ್ಲಿಯೇ ಅಡಕವಾಗಿರುವ ಚರಾಚರಾತ್ಮಕವಾದ ಪ್ರಪಂಚ ವನ್ನು ನೋಡಿ, ಶಿವಮಯವಾದುದೇ ಪ್ರಪಂಚವೆಂದು ನಿರ್ಧರಿಸಿದನು. ಇಂತು ಸಂಪೂರ್ಣ ಜ್ಞಾನವನ್ನು ಹೊಂದಿದ ಗಣಪತಿಯು ವಿಶ್ವರೂಪಿಯೂ, ವೇದಾಂತ ವೇದ್ಯನೂ ಆದ ಪರಶಿವನನ್ನು ಸ್ತುತಿಸುವನದೆಂತೆನೆ:—'ದೇವ! ಶಕ್ತ್ಯನ್ವಿತನಾಗಿಯೂ, ಪ್ರಸನ್ನನಾಗಿಯೂ, ಜ್ಞಾನ ರೂಪನಾಗಿಯೂ ಇರುವ ಪರಂಜ್ಯೋತಿ ಸ್ವರೂಪನಾದ ಶಂಕರನೇ! ನಿನಗೆ ಅನಂತ ವಂದನೆಗಳು! ಜ್ಞಾನಕ್ಕಿಂತಲೂ ಶ್ರೇಷ್ಟವಾದ ಜ್ಯೋತಿ ಸ್ವರೂಪನೂ, ಜ್ಯೋತಿ ಸ್ವರೂಪಕ್ಕಿಂತಲೂ ಶ್ರೇಷ್ಠವಾದ ತತ್ವ ರೂಪನಾಗಿಯೂ, ತತ್ವ ರೂಪಕ್ಕಿಂತಲೂ, ಪರಮಶ್ರೇಷ್ಠವಾದ ಪರಮ ಮಂಗಳ ಸ್ವರೂಪನಾಗಿಯೂ, ನಿರಾಮಯನೂ ನಿಷ್ಕಳಂಕನೂ ಆದ ನಿನ್ನನ್ನು ನಮಸ್ಕರಿಸುವೆನು! ಎಲೈ ಶಂಭುವೆ! ಹೊಗೆಗಿಂತಲೂ ಶ್ರೇಷ್ಠವಾದ ಅಗ್ನಿಯು ಹೇಗೆ ಹೊಗೆಯಂತೆಯೇ ಕಾಣುವುದೋ ಹಾಗೆಯೇ ನೀನೂ, ಜ್ಞಾನಕ್ಕಿಂತಲೂ ಅಧಿಕನಾಗಿದ್ದುಕೊಂಡು, ಪ್ರಕೃತಿಯಲ್ಲಿ ಸೇರಿ ಜ್ಞಾನರೂಪನಂತೆಯೇ ಕಾಣುತ್ತಿರುವೆ! ಇಂತಿರುವ ನೀನು ಮಾಯೆಯಿಂದ ಸಕಲವಾದೀ ಪ್ರಪಂಚವನ್ನು ಸೃಷ್ಟಿಸುವೆ! ಸೃಷ್ಟಿಸಿದ ಪ್ರಪಂಚವನ್ನು ಪಾಲಿಸುವೆ!! ಪಾಲಿಸಿದ ಪ್ರಪಂಚವನ್ನು ನಾಶಮಾಡುವೆ! ಈ ಕಾಲಕೂಟ ಮಹಾ ವಿಷವು ನಿನ್ನ ಮಾಯೆಯೇ ಎಂಬುದರಲ್ಲಿ ಸಂದೇಹವಿಲ್ಲವು. ಈಮಹಾ ವಿಷದಿಂದ, ಬ್ರಹ್ಮ, ವಿಷ್ಣು, ಇಂದ್ರಾದಿದೇವತೆಗಳೂ, ಚರಾಚರಾತ್ಮಕವಾದೀ ಪ್ರಪಂಚವೂ ನಾಶವಾಯಿತು. ಎಲೈ ಮಹೇಶನೇ ಲೋಕೈಕನಾಥನೇ! ಚರಾಚರಾತ್ಮಕನೇ! ನಾಶವಾಗುವ ಪ್ರಪಂಚವು ಪೂರ್ವದಲ್ಲಿ ಹೇಗಿದ್ದಿತೋ ಹಾಗೆಯೇ ಅನುಗ್ರಹಿಸು.' ಇಂತೆಂದು ಸ್ತುತಿಸಿದ ಗಣೇಶನ ಸ್ತುತಿಗೆ ಮೆಚ್ಚಿದ ಲಿಂಗರೂಪಿ

ಯಾದ ಪರಮೇಶ್ವರನು ಕಾಲಕೂಟ ಮಹಾವಿಷವನ್ನು ಪಾನಮಾಡಿ ಪ್ರಪಂಚವೆಲ್ಲವನ್ನೂ ನಿರ್ಮಲವನ್ನಾಗಿ ಮಾಡಿದನು.

ಆಗಲಾ ಬ್ರಹ್ಮ, ವಿಷ್ಣು, ಇಂದ್ರರೇ ಮೊದಲಾದ ದೇವತೆಗಳು ನಿದ್ರೆಯಿಂದ ಎಚ್ಚೆತ್ತವರಂತೆ ಜ್ಞಾನವನ್ನು ಹೊಂದಿ, 'ಆಹಾ ! ನಮ್ಮನ್ನು ಪೀಡಿಸುತ್ತಿದ್ದ ಆ ಕಾಲಕೂಟ ಮಹಾ ವಿಷವೆಲ್ಲಿ? ಈ ಮಹತ್ತರವಾದ ಭಯದಿಂದ ನಮ್ಮನ್ನು ಕಾಪಾಡಿದವರಾರು? ಎಂದು ಆಶ್ಚರ್ಯಪಟ್ಟರು. ದಾನವರಾದರೋ ಮದಾವಿಷ್ಟರಾಗಿಯೂ, ಜ್ಞಾನಶೂನ್ಯರಾಗಿಯೂ ಸುಮ್ಮನಾದರು. ಇಂದ್ರಾದಿ ದೇವತೆಗಳು ಬ್ರಹ್ಮನನ್ನು ಮುಂದುಮಾಡಿಕೊಂಡು ವಿಷ್ಣುವನ್ನು ಕುರಿತು 'ಎಲೈ ಮಹಾ ವಿಷ್ಣುವೆ! ನಮ್ಮನ್ನು ಪೀಡಿಸುತ್ತಿದ್ದ ಕಾಲಕೂಟವನ್ನು ನಾಶಮಾಡಿದವರಾರು ? ಮಂದಬುದ್ಧಿಗಳಾದ ನಮಗೇನೊಂದೂ ತಿಳಿಯದಿರುವುದು. ದಯವಿಟ್ಟು ಹೇಳು.' ಎಂದು ಬೇಡಿಕೊಂಡರು. ಬಳಿಕ ಭಗವಂತನಾದ ವಿಷ್ಣುವೂ, ಬ್ರಹ್ಮನೂ, ಇಂದ್ರಾದಿದೇವತೆಗಳೂ, ತತ್ವಜ್ಞಾನದಿಂದ ಕಾಮ ಕ್ರೋಧಾದ್ಯರಿಷಡ್ವರ್ಗಗಳನ್ನು ತೊರೆದು ಏಕಾಗ್ರತೆಯಿಂದ ಸಮಾಧಿಗತರಾಗಲು ತಮ್ಮ ತಮ್ಮಲ್ಲಿಯೇ ನೆಲೆಗೊಂಡಿದ್ದ ಲಿಂಗರೂಪಿಯಾದ ಭಗವಂತನನ್ನು ಕಂಡವರಾದರು. ಆಬಳಿಕ ಲಿಂಗಮೂರ್ತಿಯ ಮಹಿಮೆಯನ್ನು ಪಾರಮಾರ್ಥಿಕವಾಗಿ ತಿಳಿದು 'ಯೋಗಿಗಳು ತಮ್ಮಲ್ಲಿಯೇ ನೆಲೆಗೊಂಡಿರುವ ಲಿಂಗರೂಪಿಯಾದ ಪರಶಿವನನ್ನು ಅರಿತು ಉಪಾಸನೆ ಮಾಡುವರು. ಲಿಂಗಜ್ಞಾನವೇ ಶ್ರೇಷ್ಠವಾದ ಜ್ಞಾನವು. ಲಿಂಗಮೂರ್ತಿಯನ್ನು ಕುರಿತು ಆಚರಿಸುವ ತಪಸ್ಸೇ ಪವಿತ್ರವಾದ ತಪಸ್ಸು. ಲಿಂಗಧರ್ಮವನ್ನರಿಯುವುದೇ ಶ್ರೇಷ್ಠವಾದ ಧರ್ಮವು. ಲಿಂಗದಿಂದಲೇ ಮುಕ್ತಿಯು. ಆದುದರಿಂದ ಲಿಂಗಕ್ಕಿಂತಲೂ ಪವಿತ್ರವಾದ ವಸ್ತುವು ಮೂರುಲೋಕಗಳಲ್ಲಿಯೂ ಇಲ್ಲವು.' ಎಂಬೀ ಪ್ರಕಾರವಾಗಿ ಹೇಳುತ್ತಾ ವಿಷ್ಣು ಬ್ರಹ್ಮಾದಿಗಳೆಂದಕೂಡಿ ಪರಮಾತ್ಮನಾದ ಶಂಭುವನ್ನು ಸ್ತುತಿವಚನಗಳಿಂದ ಸಂತೋಷಗೊಳಿಸುವರದೆಂತೆನೆ: 'ಎಲೈ ಲೋಕೈಕನಾಥ

ನಾದ ಶಂಭುವೆ ಕಾಪಾಡು ! ಕಾಪಾಡು !! ನಾವೆಲ್ಲರೂ ನಿನ್ನಪಾದಾರವಿಂದಗಳ ಸೇವಾನುಭಂಧರಾಗಿ ಮೊರೆಯಿಡುತ್ತಿರುವೆವು. ಎಲೈ ಅನಂತರೂಪನಾದ, ಮಹಾ ಮಹಿಮನಾದ ಪರಶಿವನೆ ! ನಿನಗೆ ನಮಸ್ಕಾರವು !! ದಯತೋರು ! ದಯತೋರಿ ಪ್ರಸನ್ನನಾಗು,' ಇಂತೆಂದು ಸ್ತುತಿಸಿದ ದೇವತೆಗಳನ್ನು ಕುರಿತು ಮಹಾತ್ಮನಾದ ಶಂಕರನು ನುಡಿದನು. 'ಎಲೈ ದೇವತೆಗಳಿರಾ ! ಕೇಳಿರಿ ; ಈ ಸಂಸಾರವು ಅನಿತ್ಯವಾದರೂ ನಿತ್ಯವಾಗಿ ಎಣಿಸಿ, ನೀವೇ ಆಲೋಚಿಸಿರಿ. ಈ ಯಜ್ಞ, ತಪಸ್ಸು, ದಾನ, ಇವುಗಳಿಂದೇನು ಫಲವು? ಮೃತ್ಯುಂಜಯನಾದ ನನ್ನನ್ನು ನಿರಾಕರಿಸಿ ಸಮುದ್ರ ಮಥನವೆಂಬ ಮಹತ್ಕಾರ್ಯವನ್ನು ಮಾಡಿದಿರಿ. ಅದರಿಂದೇನು ಫಲವಾಯಿತು ? ಸಕಲಕಾರ್ಯ ಸಿದ್ಧಿಗೂ ವಿನಾಯಕನು ನಾಯಕನಾಗಿ ಮಾಡಲ್ಪಟ್ಟನು. ಆದರೆ ನೀವು ಮಹಾತ್ಮನಾದ ಗಣಪತಿಯನ್ನೂ ದುರ್ಗಿಯನ್ನೂ ಪೂಜಿಸಲಿಲ್ಲವು. ಕಾರ್ಯಾರಂಭದಲ್ಲಿ ಯಾರು ಗಣಪತಿಯನ್ನೂ, ದುರ್ಗಿಯನ್ನೂ ಪೂಜಿಸುವುದಿಲ್ಲವೊ ಅಂತಹರು ಕ್ಲೇಶಭಾಗಿಗಳಾಗುವರು. ನೀವೆಲ್ಲರೂ ಅಧರ್ಮಿಷ್ಠರು; ಮೂರ್ಖರು ; ಸ್ವಾರ್ಥಪರಾಯಣರು. ಇದು ಮಾಡತಕ್ಕ ಕಾರ್ಯ, ಇದು ಅಕಾರ್ಯ ಎಂಬುದನ್ನು ವಿಚಾರಮಾಡುವುದಿಲ್ಲ. ಆದುದರಿಂದಲೇ ವಿಷಯಲಂಪಟರಾದ ನೀವು ಪ್ರಳಯ ಸುಖವನ್ನು ಅನುಭವಿಸಿದಿರಿ. ಎಲೆವೋ ಇಂದ್ರನೆ ! ನೀನು 'ನನ್ನನ್ನು ಬಿಟ್ಟರೆ ಪ್ರಪಂಚವೇ ಇಲ್ಲವು' ಎಂಬ ದುರಹಂಕಾರದಿಂದ ಉಬ್ಬಿ ಮೆರೆಯುತ್ತಿರುವೆ. ನೀನು ಶಠನು. ಕಾರ್ಯಾಕಾರ್ಯಗಳನ್ನು ವಿಚಾರಮಾಡದೆ ಸಮುದ್ರ ಮಥನ ಮಾಡಿದೆ. ನಿನ್ನಿಂದ ಎಲ್ಲರೂ ಕ್ಲೇಶವನ್ನನುಭವಿಸಿದರು. ಕೇವಲ ನೂರು ಅಶ್ವಮೇಧ ಯಾಗಗಳನ್ನು ಮಾಡಿ ಇಂದ್ರನಾಗಿರುವಿಯೇ ಹೊರತು ಮತ್ತೆ ಬೇರೆಯಲ್ಲವು. ಎಲೆವೋ ಮೂಢನೆ! ಆ ಇಂದ್ರಪಟ್ಟವೂ ಪರಾಧೀನವೆಂಬುದನ್ನರಿಯೆಯಾ? ಈ ಋಷಿಗಳೆಲ್ಲರೂ ನಿನ್ನನ್ನು ವೇದವಾಕ್ಯಗಳಿಂದ ಸ್ತುತಿಸುವರು. ಕೇವಲ ಸುಖಾಪೇಕ್ಷಿಗಳಾದ ಇವರು ಆರೀತಿ ಸ್ತುತಿಸಿದುದರಿಂದೇನಾಯಿತು? ಎಲೈ ವಿಷ್ಣುವೆ ! ನೀನು ಪಕ್ಷಪಾತದಿಂದ, ಸ್ವಾರ್ಥಪರಾಯಣತೆ

ಯಿಂದ ಇದು ಹಿತ, ಇದು ಅಹಿತ ಎಂಬುದನ್ನರಿಯದೆ ಎಂತಹ ಅಕಾರ್ಯವನ್ನು ಮಾಡಿರುವೆ! ಇಚ್ಛಾಯುಕ್ತನಾದ ನೀನೂ ಕೇವಲ ಬಾಲಕನಂತೆ ಕೆಲವರನ್ನು ಬದುಕಿಸುತ್ತಲೂ, ಕೆಲವರನ್ನು ನಾಶಗೊಳಿಸುತ್ತಲೂ ಇರುವೆಯಲ್ಲ! ನೀನೇ ಹೀಗಿರುವಲ್ಲಿ ಉಳಿದ ದೇವತೆಗಳ ಪಾಡೇನು? ಮಾಡಬಾರದ ಕೆಲಸಗಳನ್ನು ಮಾಡಿದರೆ ಆಗಬಾರದ ಫಲಗಳೇ ಸಂಭವಿಸುವುವೆಂಬುದರಲ್ಲಿ ಸಂಶಯವಿಲ್ಲವು. ಕೇಳು; ಎಲೈ ದೇವತೆಗಳಿರಾ! ನೀವೂ ಕೇಳಿರಿ! ಯಾವನಿಂದ ಕಾರ್ಯಸಿದ್ಧಿಯಾಗುವುದೋ, ಯಾವನು ನಿಮ್ಮನ್ನು ಮಹಾ ವಿಷಭಯದಿಂದ ಸಂರಕ್ಷಿಸಿದನೋ, ಯಾವನಿಂದ ಮಹಾ ವಿಷ್ಣುವು ನೀಲವರ್ಣನನ್ನಾಗಿ ಮಾಡಲ್ಪಟ್ಟನೋ, ಇನ್ನಾವನಿಂದ ಚರಾಚರಾತ್ಮಕವಾದ ಪ್ರಪಂಚವು ಭಸ್ಮಮಾಡಲ್ಪಟ್ಟಿತೋ ಅಂತಹ ಗಣಪತಿಯನ್ನು ನೀವೆಲ್ಲರೂ ಪೂಜಿಸಿ ಇಷ್ಟಸಿದ್ಧಿಯನ್ನು ಪಡೆಯಬೇಕು.' ಇಂತೆಂದು ನುಡಿದ ಶಂಕರನ ಉಪದೇಶವನ್ನು ಆದರದಿಂದ ಕೇಳಿ ಮಹಾ ಗಣಪತಿಯನ್ನು ಶಾಸ್ತ್ರೋಕ್ತ ವಿಧಿಯಿಂದ ಪೂಜಿಸಿದರು.

# ಅಧ್ಯಾಯ ೧೧

## ಲಕ್ಷ್ಮಿಯ ಉದ್ಭವ ಮತ್ತು ವಿವಾಹ.

ಸೂತಪುರಾಣಿಕನು ಹೇಳುತ್ತಾನೆ:—ಎಲೈ ಶೌನಕಾದಿಗಳಿರಾ! ಕೇಳಿರಿ; ಗಣಪತಿಯು, ದೇವತೆಗಳು ಮಾಡಿದ ಪೂಜೆಯಿಂದ ಸಂತುಷ್ಟನಾಗಿ ವರವನ್ನಿತ್ತನು. ದಾನವರಾದರೊ 'ಅಯ್ಯೋ! ಗಣಪತಿಯಂತೆ, ಅವನಪೂಜೆಯಂತೆ! ಏಕೆ ಪೂಜಿಸಬೇಕು? ಈಶ್ವರನ ನುಡಿಗಳಂತೆ ಆಚರಿಸಬೇಕೆಂಬುದು ಶಾಸ್ತ್ರವಿಧಿಯೋ? ನಮ್ಮ ಕುಲದೇವತೆಯು ಶಾಂಕರಿಯು. ಆಕೆಯನ್ನೇ ಪೂಜಿಸುವೆವು'. ಎಂದು ಹೇಳಿ ಶಾಂಕರಿಯನ್ನೇ

ಪೂಜಿಸಿದರು. ಬಳಿಕ ದೇವದಾನವರೆಲ್ಲರೂ ಕೂಡಿ ಪುನಃ ಕ್ಷೀರಸಾಗರ ವನ್ನು ಮಥಿಸಿದರು. ಆಗ ಅಮೃತಪೂರ್ಣನಾಗಿಯೂ ದೇವತೆ ಗಳ ಕಾರ್ಯಸಿದ್ಧಿಗೋಸ್ಕರವಾಗಿಯೂ ಚಂದ್ರನು ಉದಯಿಸಿದನು. ಎಂದು ನುಡಿದ ಸೂತಮಹರ್ಷಿಯ ಮಾತುಗಳನ್ನು ಕೇಳಿ ಶೌನಕಾ ದಿಗಳು 'ಮಹಾತ್ಮನೆ! ಕ್ಷೀರಾರ್ಣವದಲ್ಲಿ ದೇವಗಜವೇ ಮೊದಲಾದ ವಸ್ತುಗಳು ಇರುವುವೆಂದು ನಿನ್ನಿಂದಲೇ ಕೇಳಿದ್ದೆವು. ಆದರೆ ಚಂದ್ರನು ಹೇಗೆ ಬಂದನು? ಇವನಾರು? ಈ ವಿಷಯವನ್ನು ಕೇಳಲು ಕುತೂ ಹಲರಾಗಿರುವೆವು. ಇದನ್ನು ಕೇಳಿದಬಳಿಕ ಮುಂದಿನ ಕಥೆಯನ್ನು ಹೇಳುವವನಾಗು' ಎಂದು ಬೆಸಗೊಂಡರು. ಆಗ ಸೂತನು ಹೇಳು ತ್ತಾನೆ. ಅಯ್ಯಾ ಋಷಿಗಳಿರಾ! ಈ ಚಂದ್ರನು ಅತ್ರಿಪತ್ನಿಯಾದ ಅನುಸೂಯಾದೇವಿಯ ಮಗನು; ಅಲ್ಲದೆ ಅಪೋಮಯನೂ ಆಗಿ ರುವನು. ಚಂದ್ರನು ಕ್ಷೀರಸಾಗರ ಮಥನವನ್ನು ನೋಡಿ ಸಂತಸ ಗೊಂಡನು. ಆ ಕ್ಷೀರಾರ್ಣವವೂ ತನ್ನಂತೆಯೇ ಅಪೋಮಯನಾದ ಚಂದ್ರನನ್ನು ನೋಡಿ ಸಂತಸಗೊಂಡಿತು. ಬಳಿಕ ಚಂದ್ರನು ಕ್ಷೀರ ಸಾಗರವನ್ನು ಪ್ರವೇಶಿಸಿದನು. ಆದುದರಿಂದಲೇ ಕ್ಷೀರಸಾಗರ ಮಥನ ಕಾಲದಲ್ಲಿ ಚಂದ್ರನುದ್ಭವಿಸಿದನು. ಇಂತು ಚಂದ್ರನುದ್ಭವಿ ಸಿದೊಡನೆಯೇ ದೇವತೆಗಳು ಗರ್ಗ ಮಹರ್ಷಿಯನ್ನು ಕುರಿತು ಆ ಚಂದ್ರನ ಬಲವನ್ನು ಕೇಳಿದರು. ಆ ಗರ್ಗಾಚಾರ್ಯನು 'ಎಲೈ ದೇವತೆಗಳಿರಾ! ಕೇಂದ್ರಸ್ಥಾನವನ್ನು ಆಕ್ರಮಿಸಿರುವ ಗ್ರಹಗಳಲ್ಲೆಲ್ಲ ಚಂದ್ರಗ್ರಹವು ಶ್ರೇಷ್ಠವಾದುದು, ಮತ್ತು ಸಿದ್ಧಿಪ್ರದವಾದುದು. ಗುರು, ಬುಧ, ಸೂರ್ಯ, ಶುಕ್ರ, ಶನಿ ಮತ್ತು ಅಂಗಾರಕರೆಂಬುವರು ಉದ್ಭವಿಸುವುದಕ್ಕೆ ಪೂರ್ವವೇ ಈ ಚಂದ್ರನು ಹುಟ್ಟಿದನು. ಈ ಚಂದ್ರನು ಹುಟ್ಟಿದ ಮುಹೂರ್ತವು ಗೋಮಂತವೆಂದು ಹೆಸರುಳ್ಳ ದ್ದಾಗಿ ಜಯಪ್ರದವಾಗಿರುವುದು' ಎಂದು ನುಡಿದನು. ಬಳಿಕ ದೇವತೆ ಗಳೂ, ದಾನವರೂ ಪರಶಿವನ ಮತ್ತು ಮಹಾ ಗಣಪತಿಯ ನಾನಾವಿಧ ಚಪ್ಪಾಳೆಯನ್ನು ಮಾಡುತ್ತಾ ಅದ್ಭುತವಾಗಿ ಗರ್ಜಿಸುತ್ತಾ ಮರ ಳಿಯೂ ಕ್ಷೀರಾರ್ಣವವನ್ನು ಮಥಿಸಲಾರಂಭಿಸಿದರು. ಪರಶಿವ

ಗಣಪತಿಯುರ ನಾಮೋಚ್ಚಾರಣೆಯನ್ನು ಮಾಡುತ್ತಿದ್ದ ದೇವದಾನವರ ಬಲವು ಇಮ್ಮಡಿಯಾಗಲು, ಅವರು ಅತಿ ಸಂತೋಷದಿಂದ ಕಡಿಯಲಾರಂಭಿಸಿದರು. ಆಗ ದೇವತೆಗಳ ಕಾರ್ಯಸಿದ್ಧಿಗೋಸುಗ ಕಪಿಲ ವರ್ಣವಾಗಿಯೂ ಕೆಚ್ಚಲಿನ ಭಾರದಿಂದ ಮೆಲ್ಲಮೆಲ್ಲನೆ ಬರುತ್ತಿರುವುದಾಗಿಯೂ ಇರುವ ಸುರಭಿಯು ಉದ್ಭವಿಸಿದಳು. ಇಂತು ಉದ್ಭವಿಸಿದ ಮಹಾ ಪ್ರಭಾಶಾಲಿಯಾದ ಸುರಭಿಯನ್ನು ನೋಡಿದ ದೇವತೆಗಳೂ, ದಾನವರೂ ಅತಿಶಯವಾದ ಪುಷ್ಪವೃಷ್ಟಿಯನ್ನು ಸುರಿಸಿದರು. ಆ ಸಮಯದಲ್ಲಿ ಶಂಖ, ಪಟಹ, ತುತ್ತೂರಿಗಳೇ ಮೊದಲಾದ ವಾದ್ಯಧ್ವನಿಗಳುಂಟಾದವು. ಬಳಿಕ ದೇವತೆಗಳು ಅನೇಕ ಬಣ್ಣಗಳಿಂದ ಕೂಡಿದ ಸಹಸ್ರಾರು ಗೋವುಗಳಿಂದ ಸಮೇತಳಾದ ಸುರಭಿಯನ್ನು ದಡದ ಒಳಿ ಕರೆತಂದರು. ಆಗ ಮಹರ್ಷಿಗಳೆಲ್ಲರೂ ದೇವದಾನವರನ್ನು ಕುರಿತು 'ಅಯ್ಯಾ! ಈ ಕಾಮಧೇನು ಮತ್ತು ಮನೋಹರವಾದ ಈ ಗೋವ್ಗಳು ಇವುಗಳೆಲ್ಲವನ್ನೂ ಮಹಾ ಬ್ರಾಹ್ಮಣರಾದ ನಮಗೆ ಸಂತೋಷದಿಂದ ದಾನಮಾಡಬೇಕು.' ಎಂದು ಬೇಡಿದರು. ಈ ಋಷಿಗಳ ಯಾಚನೆಗೊಳಪಟ್ಟು ದೇವದಾನವರು ಆ ಗೋವ್ಗಳನ್ನು ಶಿವಪ್ರೀತ್ಯರ್ಥವಾಗಿ ದಾನಮಾಡಿದರು. ಬಳಿಕ ಮಹಾತ್ಮರಾದ ಋಷಿಗಳು ದೇವತೆಗಳ ಕಾರ್ಯಸಿದ್ಧಿಗಾಗಿಯೂ, ದಾನವರ ವಿನಾಶಾರ್ಥವಾಗಿಯೂ ಪವಿತ್ರವಾದ ಪುಣ್ಯಾಹವನ್ನು ಮಾಡಿದರು.

ಇಂತು ಮಹರ್ಷಿಗಳೆಲ್ಲರೂ ಪುಣ್ಯಾಹವನ್ನು ನಡೆಸಿದಬಳಿಕ ದೇವತೆಗಳು ಪುನಃ ಮಥನಮಾಡಲುಪಕ್ರಮಿಸಿದರು. ಆಗ ಹಿಂದೆ ಕಳೆದುಹೋಗಿದ್ದ ಕಲ್ಪವೃಕ್ಷ, ಪಾರಿಜಾತ, ಸಂತಾನಾದಿ ಮಹಾ ವೃಕ್ಷಗಳು ಆವಿರ್ಭವಿಸಿದುವು. ಗಂಧರ್ವ ನಗರದಂತಿರುವ ಆವೃಕ್ಷಗಳನ್ನೊಂದೆಡೆಯಿಟ್ಟು ಮರಳಿ ಮಥನ ಮಾಡಲು ಕೋಟಿ ಸೂರ್ಯರಂತೆ ಪ್ರಕಾಶಿಸುತ್ತಿರುವದಾಗಿಯೂ, ಮಹಾ ರತ್ನಗಳಲ್ಲಿ ಅತಿ ಶ್ರೇಷ್ಠವಾದುದೂ ಆದ ಕೌಸ್ತುಭವು ಹುಟ್ಟಿತು. ಇದರೊಂದಿಗೆ ಚಿಂತಾಮಣಿಯೆಂಬ ರತ್ನವೂ ಹುಟ್ಟಲು ದೇವತೆಗಳು ಕೌಸ್ತುಭ

ಮಣಿಯನ್ನು ಮಹಾವಿಷ್ಣುವಿಗರ್ಪಿಸಿದರು. ಪುನಃ ಮಥನಮಾಡಲು ಉಚ್ಚೈಶ್ರವಸ್ಸೂ ಐರಾವತವೂ ಹುಟ್ಟಿದುದಲ್ಲದೇ ನಲವತ್ತೆಂಟು ಶ್ವೇತಗಜರತ್ನಗಳು ಉದ್ಭವಿಸಿದವು. ಮರಳಿಯೂ ಮಥನಮಾಡಲು ಇನ್ನೂ ಅನೇಕ ವಸ್ತುಗಳು ದೊರಕಿದವು, ಮತ್ತೂ ಮಥನ ಮಾಡಲು, ಯಾವಳನ್ನು ಬ್ರಹ್ಮವಿದರು ' ಅನ್ವೀಕ್ಷಿಕಿಯೆಂತಲೂ ಇನ್ನು ಕೆಲವರು ಬ್ರಹ್ಮವಿದ್ಯೆಯೆಂತಲೂ ಮತ್ತೆ ಕೆಲವರು ಸಿದ್ಧಿ, ಬುದ್ಧಿ, ಆಶಾ ಎಂದೂ ಇನ್ನೂ ಕೆಲಯೋಗಿಗಳು ವೈಷ್ಣವಿಯೆಂದೂ ಕರೆವರೋ, ಅಂತಹ ಮಾಯಾರೂಪಿಣಿಯಾದ ಮಹಾಲಕ್ಷ್ಮಿಯು ಉದ್ಭವಿಸಿದಳು. ಗೌರವರ್ಣದಿಂದ ಕೂಡಿದವಳಾಗಿಯೂ ಷೋಡಶ ಕಳಾಪರಿಪೂರ್ಣಳಾದ ಯುವತಿಯಂತೆಯೂ, ಎರಡು ಕೈಗಳಲ್ಲಿಯೂ ಹಿಡಿದ ಕಮಲಗಳನ್ನುಳ್ಳವಳಾಗಿಯೂ, ಸ್ವಚ್ಛವಾದ ದಂತಪಙ್ತಿ ಯಿಂದ ಹಸನ್ಮುಖಳಾದವಳೂ, ವಿಚಿತ್ರ ವಸ್ತ್ರಾಭರಣಗಳನ್ನು ಧರಿಸಿ ದವಳಾಗಿಯೂ, ಇರುವ ಮಹಾಲಕ್ಷ್ಮಿಯು ಗೀಯಮಾನ ವೈಭವ ಳಾಗಿದ್ದಳು. ಮನೋಹರವಾದ ತುಟಿಗಳುಳ್ಳವಳೂ, ಸಂಪಿಗೆಯ ಹೂವಿನಂತೆ ನಾಸಿಕವುಳ್ಳವಳೂ ಕಮಲದ ಎಸಳಿನಂತೆ ಕಂಗಳುಳ್ಳ ವಳಾಗಿಯೂ, ಸಣಿಸಿಹೋದ ಮಧ್ಯಪ್ರದೇಶವುಳ್ಳವಳಾಗಿಯೂ, ಹಾರನೂಪುರಾದಿ ಅನೇಕ ಆಭರಣಗಳಿಂದಲಂಕೃತಳಾಗಿಯೂ, ಶುಭ್ರ ವಾದ ಶ್ವೇತಗಜಾರೂಢಳಾಗಿಯೂ, ಚಾಮರವೀಜಿತಳೂ ಕಮಲ ಮುಖಿಯೂ ಛತ್ರಧರಳೂ, ಪಾರಿಜಾತ ಮಲ್ಲಿಕಾ ಮಾಲಿಕೆಗಳನ್ನು ಧರಿಸಿದವಳಾಗಿಯೂ, ಇರುವ ಮಹಾ ಲಕ್ಷ್ಮಿಯನ್ನು ಕಂಡು ದೇವದಾನವರು ಔತ್ಸುಕ್ಯಭರಿತರಾದರು. ಆ ಬಳಿಕ ಜಗನ್ಮಾತೆಯೂ ಮಹಾ ಸತಿಯೂ ಆದ ಮಹಾ ಲಕ್ಷ್ಮಿಯು ದೇವತೆಗಳನ್ನು ಮಕ್ಕ ಳನ್ನು ಕಾಣುವ ಕರುಣಾದೃಷ್ಟಿಯಿಂದ ಕಂಡಳು. ಲಕ್ಷ್ಮಿಯ ಕಟಾ ಕ್ಷಕ್ಕೆ ಪಾತ್ರರಾಗುತ್ತಲೇ ದೇವತೆಗಳು ರಾಜಕಳೆಯನ್ನುಳ್ಳವರಾ ದರು. ಅನಂತರದಲ್ಲಿ ಲಕ್ಷ್ಮಿಯು ತಮಾಲಶ್ಯಾಮಲವರ್ಣನಾಗಿಯೂ, ಮನೋಹರವಾದ ಕಪೋಲ ನಾಸಿಕಗಳುಳ್ಳವನೂ, ಶ್ರೀವತ್ಸಕೌಸ್ತು ಭಧಾರಿಯಾಗಿಯೂ, ಅಂದವಾದ ಶರೀರವುಳ್ಳವನೂ, ಆದ ಮಹಾ

ವಿಷ್ಣುವನ್ನು ಕಂಡು ಗಜದಿಂದ ಇಳಿದು ನಗುನಗುತ್ತಾ ತನ್ನ ಕೈಯಲ್ಲಿದ್ದ ವನಮಾಲೆಯನ್ನು ಆತನ ಕಂಠಕ್ಕೆ ಹಾಕಿದಳು. ವಿವಾಹಿತರಾದ ಲಕ್ಷ್ಮೀನಾರಾಯಣರನ್ನು ಕಂಡ ದೇವತೆಗಳೂ, ದಾನವರೂ, ಸಿದ್ಧ, ಚಾರಣ, ಕಿನ್ನರ, ಅಪ್ಸರ ಗಣಗಳೂ ಅಪಾರವಾದ ಆನಂದಸಾಗರದಲ್ಲಿ ಮುಳುಗಿ ತೇಲಾಡಿದರು. ಸಕಲ ಭೂತಗಣಗಳೂ ಆನಂದಗೊಂಡವು. ಶಂಖ, ಪಟಹ, ಆನಕ, ಗೋಮುಖ, ಭೇರಿ ಮುಂತಾದ ವಾದ್ಯಗಳೂ ಘೋರ್ಗರೆದವು. ತುಂಬುರ ನಾರದಾದಿ ಗಾಯಕರು ಮಹಾ ವಿಷ್ಣುವನ್ನು ತಮ್ಮ ಮನೋರಂಜಕವಾದ ಗಾಯನದಿಂದ ಸಂತೋಷಗೊಳಿಸಿದರು.

# ಅಧ್ಯಾಯ ೧೨

## ಅಮೃತೋತ್ಪತ್ತಿ—ಮೋಹಿನಿಯ ಅವತಾರ.

ಸೂತನು ಹೇಳುತ್ತಾನೆ:—ಕೇಳಿರೈ ಋಷಿಗಳಿರಾ! ಲಕ್ಷ್ಮೀಸ್ವಯಂವರವಾದನಂತರ ದೇವದಾನವರೆಲ್ಲರೂ ಸರ್ವೇಶ್ವರೇಶ್ವರನಾದ ಪರಶಿವನನ್ನು ನಮಸ್ಕರಿಸಿ ಪುನಃ ಅಮೃತಾರ್ಥವಾಗಿ ಕ್ಷೀರಾರ್ಣವವನ್ನು ಮಥಿಸಲುಪಕ್ರಮಿಸಿದರು. ಇಂತು ಮಥಿಸುತ್ತಿರಲು ಮೃತ್ಯುವನ್ನು ಜಯಿಸುವವನಾಗಿಯೂ, ಯುವಕನಾಗಿಯೂ ಇರುವ ಧನ್ವಂತರಿಯು ಅಮೃತಕಲಶವನ್ನು ಹಿಡಿದುಕೊಂಡು ಉದ್ಭವಿಸಿದನು. ಧನ್ವಂತರಿಯು ಕೈಯಲ್ಲಿದ್ದ ಅಮೃತ ಕಲಶವನ್ನು ನೋಡಿ ದಾನವರು, ಅಪಹರಿಸಬೇಕೆಂದು ಮನದೆರೆದರು. ಬಳಿಕ ದಾನವರಲ್ಲಿ ಅತಿ ಚತುರನಾದ ವೃಷಪರ್ವನು ಧನ್ವಂತರಿಯ ಕೈಯಲ್ಲಿದ್ದ ಕಲಶವನ್ನು ಕಸಿದುಕೊಂಡು ಓಡಿದನು. ಆಗ ದಾನವರೆಲ್ಲರೂ ಅದ್ಭುತವಾಗಿ ಅರಚುತ್ತಾ ಆ ವೃಷಪರ್ವನ ಹಿಂದೆ ಓಡಿದರು.

ವೃಷಪರ್ವನು ಅಮೃತಕಲಶವನ್ನು ಅಪಹರಿಸಿಕೊಂಡು ಹೋಗಲು, ದೇವತೆಗಳೆಲ್ಲರೂ ರೋಷಾವಿಷ್ಟರಾಗಿ ದಾನವರೊಡನೆ ಯುದ್ಧಮಾಡಲುದ್ಯುಕ್ತರಾದರು. ಆಗ ದಾನವೇಶ್ವರನಾದ ಬಲಿಯು ದೇವತೆಗಳನ್ನು ಕುರಿತು 'ಅಯ್ಯಾ! ಏತಕ್ಕೆ ನಮ್ಮನ್ನು ಹಿಂಬಾಲಿಸುವಿರಿ? ನಾವು ಈ ಅಮೃತದಿಂದ ತೃಪ್ತರಾಗಿರುವೆವು. ನಮಗಿನ್ನೇನೂ ಬೇಡವು. ಸಂತೋಷಯುಕ್ತರಾಗಿ ಸ್ವರ್ಗಕ್ಕೆ ತೆರಳಿರಿ. ಹಿಂದೆ ನಮ್ಮೊಡನೆ ನೀವು ಏತಕ್ಕಾಗಿ ಸ್ನೇಹವನ್ನು ಬೆಳಸಿದಿರೆಂಬುದು ಈಗ ತಿಳಿಯಿತು. ಇನ್ನು ನಿಮ್ಮ ಸಹವಾಸವು ಸಾಕು. ಸ್ವಾರ್ಥಪರಾಯಣರಾದ ನೀವು ಸ್ವಕಾರ್ಯಸಿದ್ಧಿಗಾಗಿ ಎಂತಹ ಅಕಾರ್ಯವನ್ನಾದರೂ ಮಾಡುವಿರಿ. ಹೇಡಿಗಳೂ, ಮೂರ್ಖವಾದಿಗಳೂ, ನ್ಯಾಯಾನ್ಯಾಯವಿವರ್ಜಿತರೂ, ಆದ ನೀವು ನಮ್ಮಂತಹರೊಡನೆ ಸಹವಾಸ ಮಾಡಲು ಯೋಗ್ಯರಲ್ಲವು. ತೆರಳಿರಿ, ಎಂದನು. ಇಂತು ನುಡಿದ ಬಲಿಯ ಮಾತುಗಳನ್ನು ಕೇಳಿ ದೇವತೆಗಳು ಭಗ್ನಮನೋರಥರಾಗಿ ಹಿಂತಿರುಗಿ ಮಹಾ ವಿಷ್ಣುವನ್ನು ಪ್ರಾರ್ಥಿಸಿದರು. ವಿಷ್ಣುವು 'ಅಯ್ಯಾ ದೇವತೆಗಳಿರಾ! ದುಃಖಿಸಬೇಡಿರಿ. ಆ ಅಮೃತ ಕಲಶವನ್ನು ನಾನು ತಂದುಕೊಡುವೆನು. ನೀವಿಲ್ಲಿಯೇ ಇರಿ.' ಎಂದು ಸಂತೈಸಿದನು. ಬಳಿಕ ಮಹಾ ವಿಷ್ಣುವು ಮನೋಹರವಾದ ಮೋಹಿನಿಯ ವೇಷವನ್ನು ಧರಿಸಿ ದೈತ್ಯರ ಮುಂಗಡೆಹೋದನು. ಇಷ್ಟರಲ್ಲಿಯೇ ದಾನವರಲ್ಲಿ ಒಬ್ಬರಿಗೊಬ್ಬರಿಗೆ ಅಮೃತ ವಿಭಾಗಾರ್ಥವಾಗಿ ಕಲಹವು ಹುಟ್ಟಿತು. ಆಗಲಾ ದೈತ್ಯೇಂದ್ರನಾದ ಬಲಿಯೂ, ಮಿಕ್ಕ ದೈತ್ಯರೂ ಯುವತಿಯಾಗಿಯೂ, ರೂಪ, ಲಾವಣ್ಯ, ಹಾವ, ಭಾವ, ವಿಲಾಸಗಳಿಂದ ಕೂಡಿದವಳಾಗಿಯೂ, ಸುಮಧ್ಯಮೆಯೂ, ಕಮಲಮುಖಿಯೂ, ಸರ್ವಭೂತ ಮನೋರಮೆಯೂ, ನಸುನಗೆಯಿಂದ ಕೂಡಿದವಳೂ, ಆದ ಮೋಹಿನಿಯನ್ನು ಕಂಡು, ಮೋಹನಾಸ್ತ್ರದಿಂದ ಸಿಲ್ಲಿಸಲ್ಪಟ್ಟ ಸಾಲಭಂಜಿಕೆಗಳಂತೆ ನೋಡಲಾರಂಭಿಸಿದರು. ಆಗಲಾ ಬಲಿಯು ಮನೋಹರೆಯಾದ ಮೋಹಿನಿಯನ್ನು ಕುರಿತು 'ಎಲೌ ಭಾಗ್ಯಶಾಲಿನಿ! ನಮ್ಮಲ್ಲಿ ಈ ಅಮೃತವನ್ನು ಹಂಚುವ ಸಮರ್ಥ

ರಾರೂ ಇಲ್ಲವು. ಎಲೌ ಸುಮಧ್ಯಮೆ! ನನ್ನ ಆಜ್ಞಾನುಸಾರವಾಗಿ ಅಮೃತವನ್ನು ಶೀಘ್ರವಾಗಿ ಹಂಚುವಳಾಗು.' ಎಂದನು. ಬಲಿಯ ಮಾತುಗಳನ್ನು ಕೇಳಿ ಮೋಹಿನಿಯು 'ದೈತ್ಯೇಂದ್ರ! ಬುದ್ಧಿಶಾಲಿಗಳಾದ ಪುರುಷರು ಹೆಂಗಸರಲ್ಲಿ ವಿಶ್ವಾಸವನ್ನಿಡಬಾರದು. ಸ್ತ್ರೀಯರಿಗೆ ಸುಳ್ಳೂ, ಸಾಹಸವೂ, ಮಾಯೆಯೂ, ಮೂರ್ಖತ್ವವೂ, ಅತಿಲೋಭವೂ, ಅಶೌಚವೂ, ನಿಘೃಣತ್ವವೂ, ಸ್ವಭಾವಗುಣಗಳು. ಇಷ್ಟೇ ಅಲ್ಲದೆ ಸ್ನೇಹರಾಹಿತ್ಯವೂ, ಧೂರ್ತತೆಯೂ, ಸ್ತ್ರೀಯರಿಗೆ ತತ್ವತಃ ಸಹಜವಾದ ಗುಣಗಳು. ಈ ಗುಣಗಳು ಪರಸ್ತ್ರೀಯರಿಗೆ ಮಾತ್ರವೆಂದು ತಿಳಿಯತಕ್ಕುದಲ್ಲವು. ನಿಮ್ಮ ಸ್ತ್ರೀಯರಿಗೂ ಉಂಟೆಂದು ತಿಳಿಯಬೇಕು. ಅಯ್ಯಾ ಬಲಿಚಕ್ರವರ್ತಿಯೇ! ಕೇಳು. ಪ್ರಪಂಚದಲ್ಲಿ ನಾಯಿಗಳನ್ನು ತೋಳಗಳೂ, ಮೊಟ್ಟೆಗಳನ್ನು ಕಾಗೆಗಳೂ, ಹೇಗೆ ಹಿಂಸಿಸುವುವೋ ಹಾಗೆಯೇ ಸ್ತ್ರೀಯರು ಪುರುಷರನ್ನು ಹಿಂಸಿಸುವರು. ಅದೂ ಅಲ್ಲದೆ ನಾನಾರೆಂಬುದು ನಿಮಗೆ ತಿಳಿಯದು. ಹೀಗಿರುವಲ್ಲಿ ನನಗೂ ನಿಮಗೂ ಸ್ನೇಹವೆಂಬುದು ಹೇಗೆ ಬೆಳೆಯುವುದು? ಆದುದರಿಂದ ಇದು ಮಾಡತಕ್ಕ ಕಾರ್ಯ ಇದು ಅಕಾರ್ಯ ಎಂಬುದನ್ನು ವಿಚಾರಿಸಿ ನನಗೆ ಈ ಕಾರ್ಯವನ್ನು ಆಜ್ಞಾಪಿಸಿ' ಎಂದಳು. ಬಳಿಕ ಬಲಿಯು 'ಸುಂದರಿ! ನೀನು ಹೇಳಿದ ಸ್ತ್ರೀಯರು ಕೇವಲ ವರಟರೂ, ಗ್ರಾಮ್ಯರೂ ಆಗಿರುವರು. ಅಂತಹರು ಒರಟು ಪುರುಷರಿಗೆ ತಕ್ಕವರು. ಇಂತಹ ಸ್ತ್ರೀಯರಲ್ಲಿ ನೀನು ಸೇರುವುದಿಲ್ಲ. ಮಂಗಳಾಂಗಿ! ಹೆಚ್ಚಾಗಿ ಹೇಳುವುದೇನು? ನಾನು ಹೇಳುವಹಾಗೆ ಮಾಡು. ಇದಿಕೊ ಅಮೃತ ಕಳಶವು ಇಲ್ಲಿರುವುದು' ಎಂದನು. ಆಗಲಾ ಮೋಹಿನಿಯು 'ಪ್ರಭುವೆ! ನಿನ್ನ ಆಜ್ಞಾನುಸಾರವಾಗಿ ಅಮೃತವನ್ನು ಹಂಚುವೆನು' ಎಂದು ಹೇಳಲು ದಾನವರೆಲ್ಲರೂ ಒಪ್ಪಿದರು. ಬಳಿಕ ಮೋಹಿನಿಯು ದಾನವರನ್ನು ಕುರಿತು 'ಎಲೈ ದಾನವರಿರಾ! ನೀವೆಲ್ಲರೂ ಕೃತಾರ್ಥರು, ಅದೃಷ್ಟಶಾಲಿಗಳು. ಆದುದರಿಂದ ಇಂದಿನ ರಾತ್ರಿ ಉಪವಾಸ ವ್ರತವನ್ನು ಮಾಡಿ ಶುಭಕರವಾದ ವ್ರತಗಳನ್ನಾಚರಿಸಿ ನಾಳೆಯ ದಿನ ಪಾರಣೆಗೆ ಅಮೃತವನ್ನು ಸ್ವೀಕರಿಸಿರಿ. ಮತ್ತು

ಕೇಳಿರಿ ಬುದ್ಧಿವಂತರು ನ್ಯಾಯವಾಗಿ ಆರ್ಜಿಸಿದ ದ್ರವ್ಯದಲ್ಲಿ ಹತ್ತ. ನೆಯ ಒಂದು ಭಾಗವನ್ನು ಶಿವಪ್ರೀತ್ಯರ್ಥವಾಗಿ ದಾನಮಾಡಬೇಕು' ಎಂದಳು. ಇಂತೆಂದು ನುಡಿದ ಮೋಹಿನಿಯ ಮಾತಿಗೆ ದೈತ್ಯರೆಲ್ಲರೂ ತಲೆದೂಗಿದರು.

ಕೇಳಿರೈ ಋಷಿಗಳಿರಾ! ಆ ಕ್ಷಣದಲ್ಲಿಯೇ ಪ್ರವೀಣನಾದ ಮಾಯಾಸುರನು ಮನೋಹರಗಳಾದ ಭವನಗಳನ್ನು ನಿರ್ಮಿಸಿದನು. ನೀತಿಕೋವಿದರಾದ ದಾನವರು ಸ್ನಾನಾಹ್ನೀಕಾದಿಗಳನ್ನು ತೀರಿಸಿ ಕೊಂಡು ಅಮೃತ ಕಲಶವನ್ನು ಮುಂದಿಟ್ಟುಕೊಂಡು, ಸಂತೋಷ ದಿಂದ ಜಾಗರಣೆಯನ್ನು ಮಾಡಿದರು. ಬಳಿಕ ಸೂರ್ಯನು ಉದ ಯಿಸಲು ಅವರೆಲ್ಲರೂ ಪ್ರಾತಃಸ್ನಾನವನ್ನು ಮಾಡಿ ಅಮೃತವನ್ನು ಪಾನಮಾಡಲು ಸಾಲುಗಟ್ಟಿ ಕುಳಿತರು. ರಾಹು ಕೇತುಗಳೇ ಮೊದ ಲಾದ ಕೋಟ್ಯಂತರ ಸಂಖ್ಯೆಯುಳ್ಳ ದೈತ್ಯರು ಅಮೃತಪಾನದಲ್ಲಿ ಆಸಕ್ತಿಯುಳ್ಳವರಾದರು. ಬಳಿಕ ಅಮೋಘವಾದ ಕಾಂತಿಯುಳ್ಳವ ಳಾಗಿಯೂ, ಜಗನ್ಮಂಗಳಕರಳಾಗಿಯೂ, ಮಂಗಳಸ್ವರೂಪಳಾ ಗಿಯೂ, ಅಮೃತ ಕಲಶವನ್ನು ಹಿಡಿದವಳಾಗಿಯೂ ಇರುವ ವಿಷ್ಣು ಮೋಹಿನಿಯು, ಇಂದ್ರಾದಿ ದೇವತೆಗಳು ಬರುತ್ತಿರುವುದನ್ನು ಕಂಡು, ದೈತ್ಯರನ್ನು ಕುರಿತು ಹೀಗೆಂದಳು. 'ಅಯ್ಯಾ ದಾನವರಿರಾ! ಈ ದೇವ ತೆಗಳು ಅತಿಥಿಗಳಾಗಿ ಬಂದಿರುವರು. ಅತಿಥಿಗಳು ಸಕಲಕ್ಕೂ ಸಾಧ ನಭೂತರು. ಅತಿಥಿ ಸತ್ಕಾರವನ್ನು ಯಾರು ತಮ್ಮ ಶಕ್ತ್ಯಾನುಸಾರ ಮಾಡುವರೋ ಅವರೇ ಧನ್ಯರು. ಅವರೇ ಲೋಕವನ್ನುಳುಹು ವವರು. ಕೇವಲ ಸ್ವಾರ್ಥಪರಾಯಣರಾಗಿ ತಮ್ಮ ಸುಖವೇ ಸುಖ ವೆಂದು ಹಿಗ್ಗುವವರು ಕ್ಲೇಶಭಾಗಿಗಳಾಗುವರೆಂಬುದರಲ್ಲಿ ಸಂಶಯವಿ ಲ್ಲವು. ನನ್ನ ಮಾತಿನಲ್ಲಿ ನಿಜಾಂಶವಿದ್ದರೆ ಈ ದೇವತೆಗಳಿಗೆ ಯಥಾ ಶಕ್ತಿಯಿಂದ ಅಮೃತವನ್ನು ದಾನಮಾಡತಕ್ಕದ್ದು' ಎಂದಳು. ಇಂತು ನುಡಿದ ಮೋಹಿನಿಯ ಮಾತುಗಳನ್ನು ಕೇಳಿ ದಾನವರೆಲ್ಲರೂ ದಾನ ಕ್ಕಾಗಿ ದೇವತೆಗಳನ್ನು ಆಹ್ವಾನಿಸಿದರು. ದೇವತೆಗಳೆಲ್ಲರೂ ಸಾಲು

ಗಟ್ಟಿ ಕುಳಿತರು. ಆಗ ಮೋಹಿನಿಯು ದಾನವರನ್ನು ಕುರಿತು 'ಎಲೈ ದಾನವರಿರಾ! ಮೊದಲು ಅತಿಥಿಸತ್ಕಾರ ಮಾಡಬೇಕೆಂದು ವೇದಗಳೂ, ಶ್ರುತಿಗಳೂ ಸಾರುತ್ತಿವೆ. ನೀವಾದರೋ ವೇದಪರರೂ ಶೃತಿಪರರೂ ಆಗಿರುವಿರಿ. ಆದುದರಿಂದಲೇ ಬಲಿ ಮುಖ್ಯರಾದ ದಾನವರಿರಾ! ಯಾರಿಗೆ ಮೊದಲು ಅಮೃತವನ್ನು ಕೊಡಲಿ ನಿಮಗೋ? ದೇವತೆಗಳಿಗೋ?' ಎಂದು ಕೇಳಿದಳು. ಆಗ ದೈತ್ಯರೆಲ್ಲರೂ 'ಸುಂದರೀ! ನಿನಗೆ ಹೇಗೆ ತೋರುವುದೋ ಹಾಗೆ ಮಾಡು. ನಮ್ಮೆಲ್ಲರಿಗೂ ನೀನು ಸ್ವಾಮಿನಿ' ಎಂದರು. ಬಳಿಕ ವಿಷ್ಣು ಮೋಹಿನಿಯು ತನ್ನ ಬೆಡಗನ್ನು ತೋರಿಸುತ್ತಾ ಮೆಲ್ಲಮೆಲ್ಲನೆ ಹಾರನೂಪುರ ಶಬ್ದಗಳಿಂದಕೂಡಿ ಅಮೃತ ಕಲಶವನ್ನು ಹಿಡಿದುಕೊಂಡು, ದೇವತೆಗಳಿಗೆಮಾತ್ರ ಅಮೃತವನ್ನೆರದಳು. ಇದನ್ನು ಕಂಡ ದಾನವರು ಬಾಯಾರಿಕೆಯಿಂದ ಬೊಬ್ಬಿಟ್ಟರು. ಬಲಿಯೇ ಮೊದಲಾದ ದಾನವರು ಏನೂ ಹೇಳಲಾರದೆ ಧ್ಯಾನಪರರಾದರು. ಆಗ ರಾಹು ಕೇತುಗಳೆಂಬ ಅಸುರರು ದೇವತೆಗಳ ವೇಷವನ್ನು ಧರಿಸಿಕೊಂಡು ಅಮೃತಪಾನಾಸಕ್ತರಾಗಿ ದೇವಪಙ್ಕ್ತಿಯನ್ನು ಸೇರಿದರು. ಇವರು ಅಮೃತವನ್ನು ಕುಡಿಯುವುದರಲ್ಲಿಯೇ ಸೂರ್ಯ ಚಂದ್ರರು ಇವರನ್ನು ಗುರ್ತಿಸಿ, ವಿಷ್ಣುವಿಗೆ ತಿಳಿಸಿದರು. ಆಗಲಾ ಮಹಾ ವಿಷ್ಣುರೂಪಿಣಿಯಾದ ಮೋಹಿನಿಯು ರಾಹುವಿನ ಶಿರಸ್ಸನ್ನು ಚಕ್ರಾಯುಧದಿಂದ ತರಿದಳು. ಆ ಶಿರಸ್ಸು ಗಗನಕ್ಕೆ ಹಾರಿತು. ಕಬಂಧವು ಭೂಮಿಯಮೇಲೆ ಬಿದ್ದಿತು. ಅಜೇಯನಾದ ರಾಹುವಿನ ಕಬಂಧವು ಭೂಮಿಗೆ ಬಿದ್ದೊಡನೆಯೇ ಬೆಟ್ಟಗುಡ್ಡಗಳಿಂದ ಕೂಡಿದ ವಸುಂಧರೆಯು ಚೂರ್ಣವಾದುದಲ್ಲದೆ ಚರಾಚರಾತ್ಮಕವಾದೀ ಪ್ರಪಂಚವೇ ತಹತಹಿಸಿತು. ಕೇತುವಾದರೋ ಧೂಮರೂಪವನ್ನು ಹೊಂದಿ ವಿಷ್ಣು ಭಯದಿಂದ ಬೇಸತ್ತು, ತಾನು ಸ್ವೀಕರಿಸಿದ್ದ ಅಮೃತವನ್ನು ಚಂದ್ರನಿಗೆ ಕೊಟ್ಟು ಅಂತರ್ಧಾನವಾದನು. ಅಯ್ಯಾ ಋಷಿಗಳಿರಾ! ಈ ಕಾರ್ಯಗಳೆಲ್ಲವೂ ದೇವತೆಗಳ ಕಾರ್ಯಸಿದ್ಧಿಗೋಸುಗವೂ ದೈತ್ಯರವಿನಾಶಾರ್ಥವಾಗಿಯೂ ನಡೆದವು. ದೇವದಾನವರಿಬ್ಬರೂ ಸೇರಿ ಸಮುದ್ರಮಥನ ಮಾಡಿದರು.

ಕಾರ್ಯ ಸಿದ್ಧಿಯಾದರೋ ದೇವತೆಗಳ ಕೈಸೇರಿತು. ದಾನವರು ಭಗ್ನ ಮನೋರಥರಾದರು. ಆದುದರಿಂದ ಅದೃಷ್ಟವಿಲ್ಲದೆ ಯಾವ ಕೆಲಸವೂ ಕೈಗೂಡಲಾರದು. ಮಹಾ ವಿಷ್ಣುವು ಈ ರೀತಿ ಅಮೃತವನ್ನು ದೇವತೆಗಳಿಗೆ ಕೊಟ್ಟು ತೆರಳಿದಬಳಿಕ ಮೋಹಾವೃತರಾದ ದಾನವರು ಆ ದೇವತೆಗಳೊಡನೆ ಯುದ್ಧಮಾಡಲು ಅನೇಕ ಶಸ್ತ್ರಾಸ್ತ್ರಯುತರಾದರು.

## ಅಧ್ಯಾಯ ೧೩

### ದೇವಾಸುರರ ಯುದ್ಧ—ಶಿವಪೂಜಾ ಮಹಿಮೆ.

ಬಳಿಕ ದಾನವರು ದೇವತೆಗಳೊಡನೆ ಯುದ್ಧಮಾಡಲಾಸಕ್ತರಾಗಿ, ಸಿಂಹ ಶಾರ್ದೂಲಾದಿ ವಾಹನಗಳನ್ನೇರಿಕೊಂಡು ಭಯಂಕರವಾದ ರಣನಾದವನ್ನು ಮಾಡುತ್ತ ಯುದ್ಧಕ್ಕೆ ಸಿದ್ಧರಾದರು. ಆ ಸಮಯದಲ್ಲಿ ಮಹಾತ್ಮನಾಗಿಯೂ, ಮಹಾ ಬಲಪರಾಕ್ರಮಶಾಲಿಯೂ, ಬುದ್ಧಿಶಾಲಿಯಾಗಿಯೂ ಇರುವ ವೈರೋಚನಿಯು ವಿಮಾನವನ್ನೇರಿಕೊಂಡು ದೇವತೆಗಳನ್ನು ಸೋಲಿಸಲೋಸುಗ ಬಂದು ನಿಂತನು. ಆಗ ವೃಷಪರ್ವನು ಬಲಿಚಕ್ರವರ್ತಿಯನ್ನು ಕುರಿತು 'ಬುದ್ಧಿವಂತರಾದವರು ಯಾವಾಗಲೇ ಆಗಲಿ, ಸೋತವನಾಗಿಯೂ, ತುಚ್ಛನಾಗಿಯೂ, ಇರುವ ಶತ್ರುವಿನೊಡನೆ ಸ್ನೇಹವನ್ನು ಬೆಳಿಸಬಾರದು. ಹಾಗೆ ಮಾಡಿದ್ದೇಆದರೆ ವಿಪತ್ತು ಸಂಭವಿಸುವುದು. ಅದರಲ್ಲಿಯೂ ಪೂರ್ವದಿಂದಲೂ ಶತ್ರುವಾಗಿಯೇ ಇದ್ದವನೊಡನೆ ಎಂದಿಗೂ ಸ್ನೇಹವನ್ನು ಬೆಳಿಸಲೇಬಾರದು. ಅಯ್ಯಾ! ಬಲಿಯೇ! ಕಾರ್ಯಾಕಾರ್ಯಗಳನ್ನರಿಯದೆ ಹೇಡಿಯಾದ ಈ ದೇವೇಂದ್ರನೊಡನೆ ಸ್ನೇಹವನ್ನು ಬೆಳಿಸಿ ನಮ್ಮೆಲ್ಲರನ್ನೂ ಕ್ಲೇಶಕ್ಕೆ ಗುರಿಮಾಡಿರುವೆ' ಎಂದನು. ವೃಷಪರ್ವನಂದ ಮಾತಿಗೆ ಬಲಿಯು ತಲೆ ತಗ್ಗಿಸಿದನು. ಬಳಿಕ ಎಲ್ಲ ದಾನವರೂ

ಶಸ್ತ್ರಾಸ್ತ್ರಗಳಿಂದ ಕೂಡಿದವರಾಗಿ ಯುದ್ಧ ಸನ್ನದ್ಧರಾದರು. ದೇವತೆಗಳೂ ಸಮಸ್ತ ಆಯುಧಗಳನ್ನು ಸಜ್ಜುಗೊಳಿಸಿಕೊಂಡು ದಾನವರೊಡನೆ ಯುದ್ಧಮಾಡಲು ಮುಂದರೆದರು. ಆಗ ಘೋರವಾದ ದೇವದಾನವರ ಯುದ್ಧವು ಬಹಳವಾಗಿ ನಡೆಯಿತು. ದೇವತೆಗಳು ಲೋಕೇಶ್ವರೇಶ್ವರನಾದ ಶಂಕರನನ್ನು ನಮಸ್ಕರಿಸಿ ವಿಷ್ಣುವಿನಿಂದ ಪ್ರೇರಿತರಾಗಿ ದಾನವರೊಡನೆ ಯುದ್ಧಮಾಡಲುಪಕ್ರಮಿಸಿದರು. ಆಗ ದಶದಿಕ್ಕುಗಳೂ ಬಾಣಗಳ ಚಟಚಟ ಶಬ್ದದಿಂದ ತುಂಬಿಹೋದವು. ದಾನವರೆಲ್ಲರೂ ನಿಮಿಷಮಾತ್ರದಲ್ಲಿ ದೇವಬಾಣಗಳಿಂದ ಹತರಾಗಿ ಬಿದ್ದರು. ಆಗ ಶಂಖ, ಪಟಹ, ರಣಭೇರಿಯೇ ಮೊದಲಾದ ವಾದ್ಯಧ್ವನಿಗಳು ಭೂಮಿಯಲ್ಲಿಯೂ ಪ್ರತಿಧ್ವನಿತವಾದವು. ಆಗಲಾ ಬಲಿಯೇ ಮೊದಲಾದ ಅಸುರರು ದೇವತೆಗಳೊಡನೆ ದ್ವಂದ್ವಯುದ್ಧವನ್ನು ಮಾಡಲಾರಂಭಿಸಿದರು. ಆಗ ಚಂದ್ರನೊಡನೆ ರಾಹುವು ಯುದ್ಧಮಾಡಿ ಸೋಲಿಸಿ ಆವನಲ್ಲಿದ್ದ ಅಮೃತವನ್ನು ಕುಡಿದನು. ರಾಹುವಿನ ಈ ವಿಪರೀತ ಕಾರ್ಯವನ್ನು ನೋಡಿ ಮಹಾದೇವನು ಅವನನ್ನು ಕುರಿತು, 'ಅಯ್ಯಾ ರಾಹುವೇ ! ಸಕಲ ಭೂತಗಳಿಗೂ ನಾನು ಒಡೆಯನು. ರಾಕ್ಷಸರಿಗೆಲ್ಲಾ ನಾನು ಒಡೆಯನೆಂಬುದನ್ನರಿಯೆಯಾ? ಆದುದರಿಂದ ನನ್ನ ಆಜ್ಞಾನುಸಾರ, ಈ ಚಂದ್ರನನ್ನು ಬಿಟ್ಟು, ನೀನು ಕುಡಿದಿರುವ ಅಮೃತವನ್ನು ಹಿಂದಕ್ಕೆ ಕೊಟ್ಟುಬಿಡು.' ಎಂದನು. ಆಗ ರಾಹುವು ಶಂಕರನನ್ನು ನಮಸ್ಕರಿಸಿ ಹಾಗೆಯೇ ಮಾಡಿದನು. ಬಳಿಕ ಸದಾಶಿವನು ಚಂದ್ರನನ್ನು ತನ್ನ ಶಿರಸ್ಸಿನಲ್ಲಿ ಧರಿಸಿದವನಾದನು. ಆಗ ಚಂದ್ರನಿಗೆ ಅನೇಕ ಶಿರಸ್ಸುಗಳು ಹುಟ್ಟಿದವು. ಶಂಕರನು ಈ ಶಿರಸ್ಸುಗಳೆಲ್ಲವನ್ನೂ ತರಿದು ಮುಂಡಮಾಲೆಯನ್ನು ಮಾಡಿ ದೇವತೆಗಳ ಕಾರ್ಯಸಿದ್ಧಿಗೋಸ್ಕರ ತನ್ನ ಕಂಠದಲ್ಲಿ ಧರಿಸಿದವನಾದನು. ಹಿಂದೆ ಶಂಕರನು ವಿಷಪಾನಮಾಡಿದುದರಿಂದ ನೀಲಕಂಠನಾಗಿದ್ದನು. ಈಗ ಮುಂಡಮಾಲಾಧಾರಿಯಾದನು. ಈ ಮುಂಡಮಾಲೆಯನ್ನು ಧರಿಸಿಕೊಂಡು ತ್ರಿಪುರಾಸುರನನ್ನು ಸಂಹರಿಸಿದ ಜಗದೇಕಬಂಧುವಾದ ಪರಶಿವನು ಬಹಳವಾಗಿ ಪ್ರಕಾಶಿಸಿದನು. ಮಹಾ ಪರಾಕ್ರಮಶಾಲಿಯಾದ

ಗಜಾಸುರನು ಯಾವನಿಂದ ಹತನಾದನೋ, ಯಾವನಿಂದ ಗಂಗೆಯು ಶಿರಸ್ಸಿನಲ್ಲಿ ಧರಿಸಲ್ಪಟ್ಟಳೋ ಇನ್ನ್ಯಾವನಿಂದ ಚಂದ್ರನು ಚೂಡಾಮಣಿಯಾಗಿ ಮಾಡಲ್ಪಟ್ಟನೋ, ಅಂತಹ ಪರಶಿವನನ್ನು, ವೇದಗಳೂ, ಶೃತಿಶತಗಳೂ, ಪುರಾಣಗಳೂ ಅಖಂಡವಾಗಿ ಹೊಗಳುತ್ತಿರುವುವು. ಇಂತಹ ಶಂಭುವನ್ನು ಮತಾಚಾರ್ಯರೆಂದು ಕರೆಯಿಸಿಕೊಳ್ಳುವ ನರರು ನಾನಾಗಮ ಭೇದಗಳಿಂದ ವರ್ಣಿಸಿ ಬೇರೆಬೇರೆ ಧರ್ಮಗಳನ್ನು ಹೇಳಿ ಮೂಕರಾಗಿರುವರು.

ಕೇಳಿರೈ! ಮನುಜರು ವೇದಗಳಿಂದ ತಿಳಿಯಲ್ಪಡತಕ್ಕವನಾಗಿಯೂ, ಪರಮಾತ್ಮನೂ, ಆದ ಪರಶಿವನನ್ನು ಬಿಟ್ಟು ಮೂಢರಾಗುವರು. ಈ ಬ್ರಹ್ಮಾಂಡ ಗೋಲಕರೂಪನೇ ತಾನಾಗಿ, ಚರಾಚರಾತ್ಮಕವಾದೀ ಪ್ರಪಂಚವನ್ನು ಸೃಷ್ಟಿಸಿ, ಪಾಲಿಸಿ, ಲಯಮಾಡುವ, ವೇದಾಂತವೇದ್ಯನಾದ ಶುಭಕರನಾದ ಶಂಕರನನ್ನು ಜನರು ಅಜ್ಞಾನದಿಂದ ತಿಳಿಯುವುದಿಲ್ಲ. ಶ್ರೀಮಂತನೇ ಆಗಲಿ, ದರಿದ್ರನೇ ಆಗಲಿ, ಉತ್ತಮನೇ ಆಗಲಿ, ಅಧಮನೇ ಆಗಲಿ, ಶಿವನಲ್ಲಿ ಭಕ್ತಿಯನ್ನಿಟ್ಟಿದ್ದೇ ಆದಲ್ಲಿ ಶಿವನಂತೆಯೇ ಮಹಾತ್ಮನಾಗುವನೆಂಬುದರಲ್ಲೇನು ಸಂಶಯವಿರುವುದು? ಯಾರು ಇತರರು ಮಾಡಿದ ಶಿವಲಿಂಗ ಮೂರ್ತಿಯ ಪೂಜೆಯನ್ನು ನೋಡಿ ಸಂತಸಗೊಳ್ಳುವರೋ, ಅಂತಹರೂ ಶಿವಸಾಯುಜ್ಯವನ್ನು ಪಡೆಯುವರು. ಯಾರು, ಕಾರ್ತೀಕ ಮಾಸದಲ್ಲಿ ಶಿವಲಿಂಗಕ್ಕೆ ದೀಪ ಮಾಲಿಕೆಗಳನ್ನರ್ಪಿಸುವರೋ, ಅಂತಹರು ಸಾವಿರಾರು ಯುಗಗಳ ಸ್ವರ್ಗ ಸುಖವನ್ನನುಭವಿಸುವರು. ಯಾರು ಶಿವದೇವಾಲಯಗಳಲ್ಲಿ ಹಿಪ್ಪೇ ಎಣ್ಣೆಯಿಂದ ದೀಪಗಳನ್ನು ಉರಿಸುತ್ತಾರೆಯೋ, ಅಂತಹರು ಶಿವಲೋಕದಲ್ಲಿ ಶಿವನಂತೆ ಚಿರಾಯುಗಳಾಗುವರು. ತುಪ್ಪದ ದೀಪಗಳನ್ನು ಶಿವದೇವಾಲಯಗಳಲ್ಲಿ ಶಿವಪ್ರೀತ್ಯರ್ಥವಾಗಿ ಅರ್ಪಿಸುವ ಪುಣ್ಯಶಾಲಿಯು, ಕುಲಕೋಟಿಯನ್ನು ಉದ್ಧರಿಸುವನು. ಇದು ಸತ್ಯವು. ಸುಗಂಧ ದ್ರವ್ಯಗಳಿಂದಲೂ, ದಿವ್ಯವಾದ ಪುಷ್ಪಗಳಿಂದಲೂ ಸದಾಶಿವನನ್ನರ್ಚಿಸುವ ಮಹಾತ್ಮನು ಶಿವ ಸಾಯುಜ್ಯ

ವನ್ನು ಪಡೆಯುತ್ತಾನೆ. ಲಿಂಗಪೂಜಾ ನಿರುತನಾದ ನರನು ಸಾಕ್ಷಾತ್ ರುದ್ರ ಸ್ವರೂಪನೆಂಬುದರಲ್ಲಿ ಲೇಶಮಾತ್ರವೂ ಸಂಶಯವಿಲ್ಲವು. ಅಯ್ಯಾ ! ಋಷಿಗಳಿರಾ !! ಯಾರು, ಶಿವಪೂಜಾ ಕಾಲಗಳಲ್ಲಿಯೂ, ಪರ್ವಕಾಲಗಳಲ್ಲಿಯೂ, ರುದ್ರಾಕ್ಷಿಯನ್ನು ಧರಿಸುವರೋ, ಅಂತಹರು ಅನಂತವಾದ ಪುಣ್ಯವನ್ನು ಅನುಭವಿಸುವರು. ಶಿವನಿಂದ ಹೇಳಲ್ಪಟ್ಟ ರುದ್ರಾಕ್ಷಿ ಭೇದವನ್ನು ಹೇಳುವೆನು ಕೇಳಿರಿ. ರುದ್ರಾಕ್ಷಿಗಳಲ್ಲಿ ಒಂದು ಮುಖದಿಂದ, ಹದಿನಾರು ಮುಖಗಳ ವರೆವಿಗೂ ಇರುವುವು. ಇವುಗಳಲ್ಲಿ ಏಕಮುಖ ರುದ್ರಾಕ್ಷಿಯೂ, ಪಂಚಮುಖ ರುದ್ರಾಕ್ಷಿಯೂ ಶ್ರೇಷ್ಠವಾದವುಗಳು. ಯಾರು ಏಕಮುಖ ರುದ್ರಾಕ್ಷಿಗಳನ್ನು ಧರಿಸುವರೋ ಅಂತಹರು, ರುದ್ರಲೋಕವನ್ನು ಹೊಂದುವರು. ರುದ್ರಾಕ್ಷಧಾರಣೆಯನ್ನು ಮಾಡಿಕೊಂಡು, ಜಪ, ತಪ, ಯೋಗ, ದಾನ ಶಿವಪೂಜೆಗಳನ್ನು ಮಾಡಿದ್ದೇ ಆದರೆ ಅವು ಅನಂತವಾಗುವುವು. ಅಯ್ಯಾ! ಹೆಚ್ಚಾಗಿ ಹೇಳುವುದರಿಂದೇನು ಫಲವು? ಕೇಳಿರಿ. ನಾಯಿಯ ಕೊರಳಿನಲ್ಲಿ ರುದ್ರಾಕ್ಷಿಯಿದ್ದದ್ದೇ ಆದರೆ, ಅದೂ ಶಂಕರನ ಸಾಯುಜ್ಯವನ್ನು ಪಡೆಯುವುದೆಂದಮೇಲೆ, ಜ್ಞಾನಿಗಳು ರುದ್ರಾಕ್ಷಿಗಳನ್ನು ಧರಿಸಿದರೆ ಅವರಿಗೆ ಇನ್ನೆಂತಹ ಫಲವುಂಟಾಗುವುದೆಂಬುದನ್ನು ನೀವೇ ಯೋಚಿಸಿರಿ. ರುದ್ರಾಕ್ಷಧಾರಣೆಯಿಂದ ಪಾಪಕ್ಷಯವಾಗುವುದು. ಯಾವನು ಮಂತ್ರಪೂರ್ವಕವಾಗಿ ವಿಭೂತಿಯಿಂದ ತ್ರಿಪುಂಡ್ರವನ್ನು ಧರಿಸುವನೋ, ಅಂತಹನು ರುದ್ರಲೋಕವನ್ನು ಹೊಂದುತ್ತಾನೆಂಬುದರಲ್ಲಿ ಸಂಶಯವಿಲ್ಲವು. ಯಾವನ ಲಲಾಟದಲ್ಲಿ ಮೂರು ವಿಭೂತಿಯ ಗೆರೆಗಳು ಕಾಣುತ್ತವೆಯೋ ಅವನು ಸಾಕ್ಷಾತ್ ಶೈವನು. ಅವನ ದರ್ಶನದಿಂದ ಪಾಪಕ್ಷಯವಾಗುವುದು. ಶೈವರು ಏಳಾಗಲಿ, ಐದಾಗಲಿ, ಒಂಭತ್ತಾಗಲಿ, ಜಟೆಗಳನ್ನು ವಿಧಿವತ್ತಾಗಿ ಬಿಡುತ್ತಾರೆಯೋ, ಅಂತಹರು ಶಿವಸಾಯುಜ್ಯವನ್ನು ಹೊಂದುವರು. ಆದರೆ ವಿಶೇಷವಾಗಿ ರುದ್ರಾಕ್ಷಿಧಾರಣೆಯನ್ನೂ, ಶಿವಭಕ್ತಿಯನ್ನೂ ಮಾಡಲೇಬೇಕು. ಶಿವಪೂಜೆಯನ್ನು ಮಾಡುವ ಮನುಜನು, ಸ್ವಲ್ಪವೇ ಆಗಲಿ, ಅಖಂಡವಾಗಿಯೇ ಆಗಲಿ ಮಾಡಿದರೆ ನಿರಂತರವೂ ಶಿವನಲ್ಲಿ

ಸೇರಿ ಸುಖಿಸುವನು. ಅಂತಹನು ನೀಚವಾದ ಒಂದುಕೋಟಿ ಕುಲಗಳನ್ನಾದರೂ ಉದ್ಧರಿಸಿಬಿಡುವನು. ಆದುದರಿಂದ ಶಿವನನ್ನು ಬಿಟ್ಟರೆ ಇನ್ನಾವ ದೈವವೂ ಇಲ್ಲ. ಶಾಸ್ತ್ರಗಳಲ್ಲಿ ಯಾವುವು ಹೇಳಲ್ಪಡುತ್ತವೆಯೋ ಅವೆಲ್ಲಕ್ಕೂ ಲಿಂಗಮೂರ್ತಿಯೇ ಕಾರಣನು. ಶಿವನೇ ದಾತೃವು; ಶಿವನೇ ಸ್ರಷ್ಟನು; ಶಿವನೇ ಸಂತೋಷಪಡುವವನು; ಈ ಪ್ರಪಂಚವೆಲ್ಲವೂ ಶಿವಶಕ್ತಿಯಿಂದಾವೃತವಾಗಿರುವುದು. ಶಿವಮಂತ್ರವು ಎಂತಹ ಭಯಂಕರವಾದ ವಿಪತ್ತನ್ನಾದರೂ ಹೊಡೆದಟ್ಟುವುದು. ಆದುದರಿಂದ ಸಾಕ್ಷಾತ್ ಲಿಂಗ ಮೂರ್ತಿಯಾದ ಶಂಕರನನ್ನು ಸ್ಮರಿಸಿರಿ.

ಇಂತೆಂದು ನುಡಿಯುತ್ತಿರುವ ಸೂತಪುರಾಣಿಕನನ್ನು ಕುರಿತು ಶೌನಕಾದಿಗಳು 'ಮಹಾತ್ಮಾ! ನಿನ್ನ ಅನುಗ್ರಹದಿಂದ ಶಿವಮಹಾತ್ಮೆಯನ್ನು ಕೇಳಿದೆವು. ಈಗ ದೇವಾಸುರರ ಯುದ್ಧ ವೃತ್ತಾಂತವನ್ನು ದಯವಿಟ್ಟು ಹೇಳು.' ಎನಲು ಸೂತನು ಹೇಳಲು ಉಪಕ್ರಮಿಸಿದನು. ಅಯ್ಯಾ ಋಷಿಗಳಿರಾ! ದಾನವರು, ದೇವತೆಗಳನ್ನು ಸೋಲಿಸಿ ಓಡಿಸಿದರು. ಆಗ ದೇವತೆಗಳೆಲ್ಲರೂ, ಪರಮಾತ್ಮನಾದ ಶಂಭುವನ್ನು ಮೊರೆಹೊಕ್ಕರು. ಶಂಕರನ ಅನುಗ್ರಹವನ್ನು ಪಡೆದು ಪುನಃ ಯುದ್ಧ ಮಾಡಲುಪಕ್ರಮಿಸಿದರು. ಈ ಯುದ್ಧವು ಬಹಳ ಘೋರವಾಗಿ ನಡೆಯಿತು. ರಕ್ತ ಮಾಂಸಗಳು ಪ್ರವಾಹಗಟ್ಟಿ ಹರಿಯಲಾರಂಭಿಸಿದವು. ಶಾಕಿನೀ ಢಾಕಿನೀ ಗಣಗಳೂ, ಸಾವಿರಾರು ಯಕ್ಷಿಣೀ ಗಣಗಳೂ ಪರಸ್ಪರ ಸಂತೋಷದಿಂದ ಈ ರಕ್ತಮಾಂಸ ನದಿಗಳಲ್ಲಿ ಮೆರೆದವು. ಬಳಿಕ ದೇವೇಂದ್ರನಿಗೂ, ಬಲಿಚಕ್ರವರ್ತಿಗೂ ಭಯಂಕರವಾದ ಯುದ್ಧವಾಯಿತು. ದೇವೇಂದ್ರನು ಬಲಿಯನ್ನು ತನ್ನ ವಜ್ರಾಯುಧದಿಂದ ಹೊಡೆದನು. ಬಲಿಯು ಆ ಹೊಡೆತದಿಂದ ಗತಪ್ರಾಣನಾಗಿ ನೆಲಕ್ಕೆ ಬಿದ್ದನು. ಬಲಿಯು ಬಿದ್ದುದನ್ನು ನೋಡಿ ರೋಷಗೊಂಡ ವೃಷಪರ್ವನು, ಪರ್ವತಗಳಮೇಲೆ ಮಳೆ ಸುರಿಯುವಂತೆ ಇಂದ್ರನಮೇಲೆ ಬಾಣವೃಷ್ಟಿಯನ್ನು ಸುರಿಸಿದನು. ಆಗ ಇಂದ್ರನಿಗೂ ವೃಷಪರ್ವನಿಗೂ ಘೋರವಾದ ಯುದ್ಧವು ನಡೆಯಿತು.

ಮಹಾ ಪರಾಕ್ರಮಶಾಲಿಯಾದ ಇಂದ್ರನು ವೃಷಪರ್ವನನ್ನು ಲೀಲೆಯಿಂದ ಕೆಡುಹಿದನು. ಆಗ ದೇವತೆಗಳು ಶಿವಲಿಂಗಪ್ರಸಾದದಿಂದ ಜಯಲಕ್ಷ್ಮಿಯನ್ನು ಪಡೆದವರಾದರು. ಆಗ ದೈತ್ಯರಲ್ಲಿ ಅತಿ ಕ್ರೂರನಾದ ಕಾಲನೇಮಿಯೆಂಬುವನು, ಸಿಂಹಾರೂಢರಾದ ಅನೇಕ ದೈತ್ಯರಿಂದೊಡಗೂಡಿ, ದೇವತೆಗಳಿದ್ದೆಡೆಗೆ ಬಂದನು. ಇಂತು ಬಂದ ಕಾಲನೇಮಿಯನ್ನು ಕಂಡ ದೇವತೆಗಳೆಲ್ಲರೂ ಬಹಳವಾಗಿ ಭಯಗೊಂಡರು. ಬಳಿಕ ಕಾಲನೇಮಿಯೊಡನೆ ಯುದ್ಧಮಾಡಲು ನಿಶ್ಶಕ್ತರಾದ ದೇವತೆಗಳು ವಿಷ್ಣುವನ್ನು ಪ್ರಾರ್ಥಿಸಿದರು. ಆಗ ವಿಷ್ಣುವು ಗರುಡಾರೂಢನಾಗಿ ಅಂತರಿಕ್ಷದಲ್ಲಿ ಪ್ರತ್ಯಕ್ಷನಾದನು. ಆಗ ಕಾಲನೇಮಿಯು ಮಹಾತ್ಮನಾದ ವಿಷ್ಣುವನ್ನು ಕುರಿತು 'ಎಲೈ ಮಹಾನುಭಾವನೇ! ನೀನು ಯಾರು? ವರೇಣ್ಯ ರೂಪನಾಗಿಯೂ, ಶಂಖಚಕ್ರಾದ್ಯಾಯುಧಗಳನ್ನು ಹಿಡಿದವನಾಗಿಯೂ ಇರುವ ನೀನು ಯಾರು? ಎಲೈ ಪ್ರಭುವೇ! ನೀನು ಇಲ್ಲಿಗೆ ಪತಕ್ಕಾಗಿ ಬಂದಿರುವೆ? ದಯವಿಟ್ಟು ತಿಳಿಸು ಎಂದನು. ಆಗಲಾ ವಿಷ್ಣುವು 'ಕೇಳೈ ಕಾಲನೇಮಿಯೇ! ನಾನೇ ವಿಷ್ಣುವೆಂಬುವನು. ದೇವತೆಗಳ ಪಕ್ಷವನ್ನು ವಹಿಸಿ ನಿನ್ನೊಡನೆ ಯುದ್ಧ ಮಾಡಲು ಬಂದಿರುವೆನು. ನೀನು ಸ್ಥಿರವಾಗಿ ನಿಲ್ಲು. ನಿನ್ನನ್ನು ಕ್ಷಣಮಾತ್ರದಲ್ಲಿ ಸದೆಬಡಿಯುವೆನು' ಎಂದನು. ಆಗಲಾ ಕಾಲನೇಮಿಯು. 'ಅಯ್ಯಾ! ನೀನೇ ದೇವತೆಗಳೊಡೆಯನಾಗಿದ್ದರೆ, ಸ್ಥಿರವಾಗಿ ನಿಲ್ಲು. ನಿನ್ನೊಡನೆ ಯುದ್ಧಮಾಡಲು, ಬಹಳ ಆಸಕ್ತನಾಗಿರುವೆನು' ಎಂದನು. ಆಗ ಮಹಾ ವಿಷ್ಣುವು, 'ಎಲೈ ಕಾಲನೇಮಿಯೇ! ನಾನು ಭೂಮಿಯಮೇಲಾದರೂ ನಿಂತು ಯುದ್ಧಮಾಡುವೆನು. ಅಂತರಿಕ್ಷದಲ್ಲಿಯಾದರೂ ನಿಂತು ಯುದ್ಧ ಮಾಡುವೆನು. ನಿನಗೆ ಬೇಕಾದಹಾಗೆ ಯುದ್ಧ ಮಾಡು. ಅಂತು ಯುದ್ಧವು ಅಪ್ರಶಸ್ತವಾಗದಿದ್ದರೆ ಸರಿ' ಎಂದನು. ಆಗಲಾ ಮಹಾಬಲಪರಾಕ್ರಮಶಾಲಿಯಾದ ಕಾಲನೇಮಿಯು ಹಾಗೆಯೇ ಆಗಲೆಂದು ಸಮ್ಮತಿಸಿ, ಅರ್ಬುದ ಸಂಖ್ಯೆಯುಳ್ಳ ತನ್ನ ಸೈನ್ಯದಿಂದೊಡಗೂಡಿ ಶಸ್ತ್ರಾಸ್ತ್ರ ಸಮನ್ವಿತನಾದನು.

# ಅಧ್ಯಾಯ ೧೪

## ಕಾಲನೇಮಿಗೂ, ವಿಷ್ಣುವಿಗೂ ಯುದ್ಧ.

ಕೇಳಿರೈ ! ಆ ಬಳಿಕ ವಿಷ್ಣುವಿಗೂ, ದೈತ್ಯರಿಗೂ ಅದ್ಭುತವಾದ ಯುದ್ಧವು ನಡೆಯಿತು. ಈ ಯುದ್ಧದಲ್ಲಿ ದೈತ್ಯರು ಹತ್ತಿಕೊಂಡಿದ್ದ, ರೆಕ್ಕೆಗಳಿಂದ ಕೂಡಿದ ಸಿಂಹಗಳು, ವಿಷ್ಣು ವಾಹನನಾದ ಗರುಡನನ್ನು ಪರುಚಿದವು. ಗರುಡನಾದರೋ ಆ ಸಿಂಹಗಳನ್ನು ಖಂಡ ಖಂಡವಾಗಿ ಸೀಳಿದನು. ವಿಷ್ಣುವು ದಾನವರನ್ನು, ತನ್ನ ಚಕ್ರಾಯುಧದಿಂದ ಅಸ್ಥಿಮಾತ್ರಾವಶಿಷ್ಟರನ್ನಾಗಿ ಮಾಡಿದನು. ಇಂತು ತನ್ನ ಸೇನೆಯು ಭೂಪತನವಾದುದನ್ನು ನೋಡಿದ ಕಾಲನೇಮಿಯು, ಕೋಪದಿಂದ ಕೆರಳಿ ವಿಷ್ಣುವನ್ನು ಅದ್ಭುತವಾದ ತ್ರಿಶೂಲದಿಂದ ಹೊಡೆದನು. ವಿಷ್ಣುವು ಆ ತ್ರಿಶೂಲವನ್ನು ಲೀಲೆಯಿಂದ ಹಿಡಿದು, ಅದೇ ತ್ರಿಶೂಲದಿಂದಲೇ ಕಾಲನೇಮಿಯು ಮೂರ್ಛೆ ಹೋಗುವಂತೆ ಹೊಡೆದನು. ಬಳಿಕ ಕಾಲನೇಮಿಯು ಮೂರ್ಛೆಯಿಂದೆಚ್ಚೆತ್ತು, ತನ್ನ ಮುಂಗಡೆಯೇ ನಿಂತಿದ್ದ ಮಹಾ ವಿಷ್ಣುವನ್ನು ಕುರಿತು 'ಎಲೈ ವೀರನೇ ! ನಿನ್ನೊಡನೆ ಕಾದಾಡುವುದಿಲ್ಲ. ನನಗೆ ಈ ಲೋಕದ ಆಸೆಯೂ ಇಲ್ಲ. ಬ್ರಹ್ಮನು ಹೇಳಿದಂತೆ, ಈ ಯುದ್ಧದಲ್ಲಿ ಯಾರು ಯಾರು ಮೃತಿಯನ್ನೈದುವರೋ ಅವರೆಲ್ಲರೂ ಅಕ್ಷಯವಾದ ಸ್ವರ್ಗ ಸುಖವನ್ನನುಭವಿಸುವರು. ಆದರೇನಾಯಿತು ? ಅವರೆಲ್ಲರೂ ಮರಳಿ ಈ ಸಂಸಾರ ಮಹಾಕೂಪದಲ್ಲಿ ಬಿದ್ದು ನರಳುವರು. ಆದುದರಿಂದ ಎಲೈ ಸ್ವಾಮಿಯೇ ! ನಾನು ಈ ಯುದ್ಧಾಂಗಣದಲ್ಲಿ ಸಾಯಲಾರೆನು. ನನಗೆ ಇನ್ನೊಂದು ಜನ್ಮದಲ್ಲಿ ವೈರಭಾವದಿಂದ ಪರಮಪದವಾದ ಕೈವಲ್ಯವನ್ನು ದಯಪಾಲಿಸು' ಎಂದನು. ಇಂತೆಂದ ಕಾಲನೇಮಿಗೆ ವಿಷ್ಣುವು ಅಭಯವನ್ನಿತ್ತು ಅಂತರ್ಧಾನನಾದನು. ಕಾಲನೇಮಿಯು ಶಲ್ಯರೂಪದಿಂದ ಅಂತರ್ಧಾನನಾದಬಳಿಕ ದೇವತೆಗಳು ನಿಶ್ಚಿಂತರಾದರು.

ಇತ್ತಲಾ ಮಹೇಂದ್ರನು, ಅರ್ಥಶಾಸ್ತ್ರಪರನಾಗಿ, ಯುದ್ಧದಲ್ಲಿ ಸೋತುಬಿದ್ದಿರುವ, ದುಃಖಿತರಾದ ದಾನವರನ್ನು ಹಿಂಸಿಸಲುಪಕ್ರಮಿಸಿದನು. ದೈತ್ಯರಿಗೆ ಯಮಸ್ವರೂಪನಾದ ಇಂದ್ರನು, ಭೀತರಾಗಿಯೂ, ನಿಶ್ಶಕ್ತರಾಗಿಯೂ ಇರುವ ರಾಕ್ಷಸರನ್ನು ಕೊಲ್ಲುತ್ತಿರಲು ಮಹಾತ್ಮನಾದ ನಾರದನು, ಆ ಇಂದ್ರನಿಗೆ ಸಮಾಧಾನ ಹೇಳುವನದೆಂತೆನೆ:—'ಎಲೈ ಇಂದ್ರನೇ! ಯುದ್ಧಪರಾಜಿತರಾದ ದಾನವರನ್ನು ಏಕೆ ಕೊಲ್ಲುವೆ? ಕೇಳು, ಯಾರು, ಭೀತರಾಗಿಯೂ, ಪ್ರಪನ್ನರಾಗಿಯೂ ಇರುವವರನ್ನು ಮದಾಂಧತೆಯಿಂದ ಹಿಂಸಿಸುತ್ತಾರೆಯೊ ಅಂತಹರು ಬ್ರಹ್ಮಘಾತಿಗಳೆಂದು ತಿಳಿ. ಆದುದರಿಂದ ಈ ದೈತ್ಯರ ಹಿಂಸೆಯನ್ನು ಮನಸ್ಸಿನಲ್ಲಿಯೂ ಎಣಿಸಬೇಡ.' ಇಂತು ನುಡಿದ ನಾರದನ ಮಾತನ್ನು ಅಂಗೀಕರಿಸಿದ ಇಂದ್ರನು ಸಕಲದೇವತೆಗಳಿಂದೊಡಗೂಡಿ ಅಮರಾವತಿಯನ್ನು ಸೇರಿದನು. ಯಕ್ಷ, ಕಿನ್ನರ, ವಿದ್ಯಾಧರರೇ ಮೊದಲಾದ ಸಕಲ ದೇವತೆಗಳು ಅಮೃತ ಲಾಭದಿಂದ ಬಹಳವಾಗಿ ಸಂತೋಷಪಟ್ಟರು. ಅನಂತರದಲ್ಲಿ, ದೇವ ಋಷಿಗಳೂ ಬ್ರಹ್ಮ ಋಷಿಗಳೂ ಇಂದ್ರನನ್ನು ದೇವಿಯೊಡನೆ ಅಮರಾವತಿಯಲ್ಲಿ ಪಟ್ಟಾಭಿಷಿಕ್ತನನ್ನಾಗಿ ಮಾಡಿದರು. ಇಂತು ಇಂದ್ರನು ಶಿವಪ್ರಸಾದದಿಂದ ವಿಜಯವನ್ನು ಹೊಂದಿದನು. ದೈತ್ಯರಾದರೋ ದೇವತೆಗಳಿಂದ ಹತರಾಗಿ, ಕಳೆದುಳಿದವರು ಅತಿಶ್ರಮದಿಂದ ಪಾತಾಳವನ್ನು ಹೊಂದಿದರು. ದೈತ್ಯ ಗುರುವಾದ ಶುಕ್ರನು ತನ್ನ ಶಿಷ್ಯರಿಂದೊಡಗೂಡಿ ತಪಸ್ಸನ್ನು ಮಾಡಲು ಹೊರಟುಹೋಗಿದ್ದನು. ತಪಶ್ಚರ್ಯದಲ್ಲಿದ್ದ ಶುಕ್ರಾಚಾರ್ಯನಿಗೆ ಈ ದೇವದಾನವರ ಯುದ್ಧ ಸಮಾಚಾರವು ತಿಳಿಯಲಿಲ್ಲವು. ಬಳಿಕ ದಾನವರೆಲ್ಲರೂ ಮ್ಲಾನವದನರಾಗಿ ತಮ್ಮ ಗುರುವಾದ ಶುಕ್ರನಲ್ಲಿಗೆ ಹೋದರು. ಆಗ ಬಲಿಯು ಪೂರ್ವ ವೃತ್ತಾಂತವೆಲ್ಲವನ್ನೂ ಗುರುವಿಗೆ ನಿವೇದಿಸಿದನು. ಭಾರ್ಗವನು ಅತಿಯಾಗಿ ಚಿಂತಿಸಿ ಮೃತಜೀವ ಮಂತ್ರದಿಂದ ಮೃತರಾಗಿದ್ದ ದಾನವರನ್ನು ಬದುಕಿಸಿದನು. ಆಗ ದಾನವರೆಲ್ಲರೂ ನಿದ್ದೆಯಿಂದ ಎಚ್ಚೆತ್ತವರಂತೆ ಎದ್ದು ಕುಳಿತರು. ಬಳಿಕ ಬಲಿಯು ಶುಕ್ರಾಚಾರ್ಯನನ್ನು ಕುರಿತು 'ಗುರು

ವರ್ಯಾ! ದೇವತೆಗಳಿಂದ ಪರಾಜಿತನಾದ ನಾನು ಬದುಕಿಫಲವೇನು?' ಎಂದು ಹೇಳಿ ಬಹಳವಾಗಿ ದುಃಖಿಸಿದನು. ಅದನ್ನು ಕೇಳಿ ಶುಕ್ರನು ಬಲಿ ಮುಖ್ಯರಾದ ದೈತ್ಯರನ್ನು ಸಮಾಧಾನಗೈಯುತ್ತಾ, 'ಎಲೈ ಬಲಿಯೇ! ಯುದ್ಧದಲ್ಲಿ ಯಾವನು ಶಸ್ತ್ರಗಳ ಘಾತಿಯಿಂದ ಮೃತಿಯನ್ನೈದುವನೋ, ಅಂತಹನು ವೀರನೆಂಬ ಸ್ವರ್ಗವನ್ನು ಹೊಂದುವನೆಂಬುದರಲ್ಲಿ ಲೇಶಮಾತ್ರವೂ ಸಂಶಯವಿಲ್ಲವು. ಇದು ವೇದಾನುಶಾಸನವು. ಪ್ರಮಾಣವು ಮತ್ತು ಶುಭಕರವಾದುದು' ಎಂದು ನುಡಿದು ಅಪರ ಕಾರ್ಯ ಸಿದ್ಧಿಗೋಸುಗ ತೀವ್ರವಾದ ತಪಶ್ಚರ್ಯೆಯಲ್ಲಿ ನಿರತನಾದನು. ಬಲಿ ಚಕ್ರವರ್ತಿಯು ದೈತ್ಯರೊಂದಿಗೆ ಪಾತಾಳಲೋಕವನ್ನು ಸೇರಿ ಸುಖದಿಂದ ರಾಜ್ಯವಾಳುತ್ತಿದ್ದನು.

## ಅಧ್ಯಾಯ ೧೫

### ಇಂದ್ರನು ಬ್ರಹ್ಮಹತ್ಯಾದೋಷಿಯಾದುದು.

ದೇವಾಸುರ ಯುದ್ಧ ವೃತ್ತಾಂತವನ್ನು ನುಡಿದು ಸುಮ್ಮನಾದ ಸೂತನನ್ನು ಕುರಿತು ಶೌನಕಾದಿಗಳು ಕೇಳಲುಪಕ್ರಮಿಸಿದರದೆಂತೆನೆ:—'ಅಯ್ಯಾ ಋಷಿಪುಂಗವನೇ! ಇಂದ್ರನು ಗುರುವನ್ನು ತೊರೆದು ರಾಜ್ಯವನ್ನು ಹೇಗೆ ಹೊಂದಿದನು? ಇಂದ್ರನು ಗುರುವನ್ನು ತಿರಸ್ಕರಿಸಿದುದರಿಂದಲ್ಲವೆ, ರಾಜ್ಯಭ್ರಷ್ಟನಾದುದು? ಗುರುವಿನಿಂದಲೇ ರಾಜ್ಯವನ್ನು ಪಡೆಯಬೇಕಾಗಿತ್ತಲ್ಲವೆ? ಇಂತಿರುವಲ್ಲಿ ದೇವೇಂದ್ರನು ಯಾರ ದೆಶೆಯಿಂದ ಚಿರಕಾಲ ರಾಜ್ಯವನ್ನಾಳಿದನು? ಇದನ್ನು ಕೇಳಲು ಕುತೂಹಲವುಳ್ಳವರಾಗಿರುವೆವು, ದಯವಿಟ್ಟು ಹೇಳುವವನಾಗು' ಎಂದು ನುಡಿದ ಶೌನಕಾದಿಗಳನ್ನು ಕುರಿತು ಸೂತ ಮುನಿಯು ಹೇಳುತ್ತಾನೆ. ಕೇಳಿರೈ! ಇಂದ್ರನು ಬೃಹಸ್ಪತಿಯಿಲ್ಲದೆಯೇ ಸ್ವಲ್ಪಕಾಲ ರಾಜ್ಯವಾಳಿದನು. ಆಗ ಇಂದ್ರನು

ವಿಶ್ವಕರ್ಮನ ಮಗನಾದ ವಿಶ್ವರೂಪನನ್ನು ತನ್ನ ಪುರೋಹಿತನನ್ನಾಗಿ ಮಾಡಿದನು. ಆ ವಿಶ್ವಕರ್ಮನು ಮನುಷ್ಯಲೋಕದಿಂದ ಬರುತ್ತಿದ್ದ ಆಹುತಿಯನ್ನು ಇಂದ್ರನಿಗೆ ತಿಳಿಯದಂತೆಯೇ, ದೇವತೆಗಳಿಗೆ ಆಕ್ರೋಶದಿಂದಲೂ, ನವಗ್ರಹಗಳಿಗೆ ಮಧ್ಯಸ್ಥವಾಗಿಯೂ, ದೈತ್ಯರಿಗೆ ಶಾಂತಿಯಿಂದಲೂ ಹಂಚುತ್ತಿದ್ದನು. ಹೀಗೆಯೇ ಆಚರಿಸುತ್ತಿರಲು, ಒಂದಾನೊಂದು ದಿನ ಮಹೇಂದ್ರನು ಈ ವಿಶ್ವರೂಪನ ಚರ್ಯೆಯನ್ನು ಗುರುಲಾಘವದಿಂದ ಕಂಡುಹಿಡಿದನು. ಅಷ್ಟೇ ಅಲ್ಲದೆ 'ಈ ನನ್ನ ಪುರೋಹಿತನು, ದೈತ್ಯರ ಕಾರ್ಯ ಸಿದ್ಧಿಗಾಗಿ ಅವಧಾನ ಕೊಡುತ್ತಲಿರುವನು. ಇವನು ಇತರರಿಗೆ ಉಪಕಾರಿಯು. ನನಗೆ ಶತ್ರುವು' ಎಂಬುದಾಗಿ ತಿಳಿದುಕೊಂಡು, ತನ್ನ ವಜ್ರಾಯುಧದಿಂದ ಅವನ ತಲೆಯನ್ನು ತರಿದನು. ತಕ್ಷಣವಲ್ಲಿಯೇ ಬ್ರಹ್ಮವಧೆಯಾಯಿತು. ವಿಶ್ವರೂಪನು ಯಾವ ಮುಖದಿಂದ ಅಮೃತಪಾನ ಮಾಡಿದ್ದನೋ ಆ ಮುಖದಿಂದ ಕಪಿಂಜಲಗಳೂ, ಯಾವ ಮುಖದಿಂದ ಸುರಾಪಾನ ಮಾಡಿದ್ದನೋ, ಆ ಮುಖದಿಂದ ಕಲವಿಂಕಗಳೂ ಹುಟ್ಟಿದವು. ಮತ್ತೊಂದು ಮುಖದಿಂದ ತಿತ್ತಿರಗಳು ಜನಿಸಿದವು. ಇಂತು ಮಂದಭಾಗಿಯಾದ ಇಂದ್ರನಿಂದ ವಿಶ್ವರೂಪನು ಹತನಾದನು. ಆಗ ಯಾರಿಂದಲೂ ನಿರ್ವಹಿಸಲಸದಳವಾದ ಬ್ರಹ್ಮಹತ್ಯೆಯು ಇಂದ್ರನನ್ನು ಮುತ್ತಿತು. ಬ್ರಹ್ಮಹತ್ಯೆ, ಸುರಾಪಾನ, ಗುರುಪತ್ನೀಗಮನ, ಇತ್ಯಾದಿ ಮಹಾ ಪಾಪಗಳನ್ನು ಮಾಡುವವರಿಗಿದೇ ಫಲವು. ಬಳಿಕ ತ್ರಿಶಿರವು ಇಂದ್ರನನ್ನು ನುಂಗಲು ಬಂದಿತು. ಇದನ್ನು ಕಂಡು ಮಹೇಂದ್ರನು ಓಡಲಾರಂಭಿಸಲು ಅದೂ ಹಿಂಬಾಲಿಸಿತು. ಆಗ ಇಂದ್ರನು ನೀರಿನಲ್ಲಿ ಮುಳುಗಿಕೊಂಡನು. ಬ್ರಹ್ಮಹತ್ಯೆಯ ಭಯದಿಂದಲೂ, ತ್ರಿಶಿರದ ಭಯದಿಂದಲೂ ಇಂದ್ರನು ನೂರು ವರ್ಷಗಳ ಕಾಲ ನೀರಿನಲ್ಲಡಗಿಕೊಂಡಿದ್ದನು.

ಆಗ ದೇವರಾಜ್ಯವು ಅರಾಜವಾಯಿತು. ಆಬಳಿಕ ದೇವತೆಗಳೂ, ತಪಸ್ವಿಗಳಾದ ಋಷಿಗಳೂ ಚಿಂತಾನ್ವಿತರಾದರು. 'ಮೂರು

ಲೋಕಗಳೂ, ಆಪತ್ತಿನಿಂದ ತುಂಬಿಹೋದವು. ಯಾವ ರಾಷ್ಟ್ರ ದಲ್ಲಿ ಬ್ರಹ್ಮಘಾತುಕನು ನಿರ್ಭಯನಾಗಿರುವನೋ, ಅಲ್ಲಿ ಸಾಧುಗ ಳಿಗೂ ಅಕಾಲಮರಣವು ಸಂಭವಿಸುವುದು. ಎಲ್ಲಿ ರಾಜನು ಪಾಪಿ ಷ್ಠನಾಗಿರುವನೋ ಅಲ್ಲಿ ದುರ್ಭಿಕ್ಷವೂ, ಅಕಾಲಮರಣವೂ, ಉಪ ದ್ರವಗಳೂ ಇರುವುವು. ಅಂತಹ ದೇಶದಲ್ಲಿನ ಪ್ರಜೆಗಳ ವಿನಾಶಾರ್ಥ ವಾಗಿ ಅನೇಕ ಅನರ್ಥಗಳು ಸಂಭವಿಸುತ್ತವೆ. ಆದುದರಿಂದ ರಾಜನು ಧರ್ಮನಿಷ್ಠನಾಗಿಯೂ, ಗುರುಭಕ್ತಿಯುಳ್ಳವನಾಗಿಯೂ ಇರ ಬೇಕು. ದೇವೇಂದ್ರನು ಮಾಡಿದ ಪಾಪದಿಂದ ಮೂರು ಲೋಕ ಗಳೂ ಉಪದ್ರವಗಳಿಂದ ತುಂಬಿದವು. ಇಂತೆಂದು ನುಡಿದ ಸೂತ ನನ್ನು ಕುರಿತು ಶೌನಕಾದಿಗಳು 'ಅಯ್ಯಾ ಮುನಿಯೇ ಇಂದ್ರನು ನೂರು ಅಶ್ವಮೇಧಯಾಗಗಳನ್ನು ಮಾಡಿಯೇ ಅಲ್ಲವೇ ದೇವರಾಜ್ಯ ವನ್ನು ಹೊಂದಿದುದು ? ಹೀಗಿರುವಲ್ಲಿ ಇಂದ್ರನಿಗೆ ಈ ಘೋರವಾದ ವಿಘ್ನವು ಹೇಗೆ ಬಂದಿತು' ಎಂದು ಕೇಳಿದರು. ಆಗ ಸೂತನು ಹೇಳು ತ್ತಾನೆ. 'ಕೇಳಿರಯ್ಯಾ ! ಮುನಿಗಳಿರಾ !! ಈ ಪ್ರಪಂಚದಲ್ಲಿ ಮನು ಜರು, ದಾನವರು, ದೇವತೆಗಳು ಎಂಬಿವರು ಕರ್ಮದಿಂದಲೇ ಸುಖ ದುಃಖಗಳನ್ನು ಪಡೆಯುವರು. ಈ ಇಂದ್ರನಾದರೋ ಅದ್ಭುತವಾದ ಜುಗುಪ್ಸೆಯನ್ನುಂಟುಮಾಡುವ ಕರ್ಮವನ್ನಾಚರಿಸಿರುವನು. ಗುರು ವನ್ನು ತಿರಸ್ಕರಿಸಿದನು. ವಿಶ್ವರೂಪನನ್ನು, ವಧಿಸಿದನು ; ಗುರುಪತ್ನಿ ಯಲ್ಲಿ ರಮಿಸಿದನು. ಈ ಕರ್ಮವಿಪಾಕದಿಂದ ಇಂದ್ರನು ಅಂತಹ ದುರ್ಗತಿಯನ್ನು ಹೊಂದಿದನು. ದುಷ್ಕರ್ಮವನ್ನಾಚರಿಸಿದೊಡ ನೆಯೇ, ಶಾಸ್ತ್ರೋಕ್ತವಿಧಿಯಿಂದ, ತಕ್ಕ ಪ್ರಾಯಶ್ಚಿತ್ತವನ್ನು ಮಾಡಿ ಕೊಳ್ಳಬೇಕು. ಇಲ್ಲದಿದ್ದರೆ ಮಹಾಪಾತಕದಲ್ಲಿ ಬೀಳುವನು. ಕೇಳಿರೈ! ಮನುಜರು ತಾವು ಮಾಡುವ ತ್ರಿಕಾಲಾಹ್ನಿಕಾದಿಗಳಿಂದ ಪಾಪಗ ಳನ್ನು ಕಳೆದುಕೊಳ್ಳುತ್ತಾರೆ. ಇವರು ಪುಣ್ಯತರವಾದ ಲೋಕಗ ಳನ್ನೂ ಹೊಂದುವರು. ಈ ಇಂದ್ರನಾದರೋ ತಾನು ಆಚರಿಸಿದ ದುಷ್ಕರ್ಮಕ್ಕೆ ತಕ್ಕ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳಲಿಲ್ಲವು. ಆದುದರಿಂದಲೇ ಅದಕ್ಕೆ ತಕ್ಕ ಫಲವನ್ನು ಹೊಂದಿದನು. ಈ ವಿಷಯ

ವಂತಿರಲಿ. ಕೇಳಿರಯ್ಯಾ! ಆ ಬಳಿಕ ಲೋಕಪಾಲಕರೆಲ್ಲರೂ ಸೇರಿ, ಬೃಹಸ್ಪತಿಯಲ್ಲಿಗೆ ಬಂದು, ತಮ್ಮ ರಾಜ್ಯವು ಅನಾಯಕವಾಗಿರುವುದನ್ನೂ, ಇಂದ್ರನ ಸ್ಥಿತಿಗತಿಗಳನ್ನೂ ಹೇಳಿಕೊಂಡರು. ಆಗ ಗುರುವು ಚಿಂತಾಕ್ರಾಂತನಾಗಿ, ದೇವತೆಗಳೊಡಗೂಡಿ ಇಂದ್ರನಡಗಿದ್ದ ಸರೋವರದ ಬಳಿಗೆ ಬಂದನು. ಆ ಬಳಿಕ ಬೃಹಸ್ಪತಿಯು ತಾನಾಗಿಯೇ ಇಂದ್ರನನ್ನು ಕರೆದಪನಾದನು. ಇಂದ್ರನಾದರೋ ತೀರದಲ್ಲಿಯೇ ಹೊಂಚು ಹಾಕುತ್ತಿದ್ದ ತ್ರಿಶಿರನನ್ನೂ, ಬ್ರಹ್ಮಹತ್ಯೆಯನ್ನೂ ನೋಡಿ ಭಯಗೊಂಡು, ಅಲ್ಲಿಂದಲೇ ಗುರುವನ್ನು ಕುರಿತು ಹೇಳುತ್ತಾನೆ. 'ಗುರುವರ್ಯ ಅಜ್ಞಾನದಿಂದ ನಾನು ಮಾಡಿದ ದುಷ್ಕೃತ್ಯ ಫಲವನ್ನನುಭವಿಸುತ್ತಿರುವೆನು. ಪ್ರಭುವಾದ ಗುರುವೇ! ನಾನೀಗೇನು ಮಾಡಬೇಕೆಂಬುದನ್ನು ದಯವಿಟ್ಟು ಹೇಳುವವನಾಗು' ಎಂದು ನುಡಿದ ಇಂದ್ರನನ್ನು ಕುರಿತು ಬೃಹಸ್ಪತಿಯು 'ಎಲೆವೋ ಇಂದ್ರನೇ! ನಿನ್ನ ದುಷ್ಕರ್ಮಕ್ಕೆ ಇದೇ ಫಲವು. ನನ್ನನ್ನು ತೊರೆದು ಯಾವ ಭೋಗವನ್ನು ಪಡೆಯಬೇಕೆಂದಿದ್ದೆಯೋ, ಆ ಭೋಗವನ್ನು ಈಗ ಅನುಭವಿಸು. ಇನ್ನು ಬ್ರಹ್ಮಹತ್ಯೆಗಾದರೋ, ಸ್ಮೃತಿಕರ್ತೃಗಳು ಆವ ಪ್ರಾಯಶ್ಚಿತ್ತವನ್ನೂ ವಿಧಿಸಿಲ್ಲವು. ಅಜ್ಞಾನದಿಂದಾಚರಿಸಿದ ಪಾಪಕ್ಕೆ ಪ್ರಾಯಶ್ಚಿತ್ತವುಂಟು. ಜ್ಞಾನವಿದ್ದರೂ ಪಾಪವನ್ನು ಮಾಡಿದವನಿಗೆ ಪ್ರಾಯಶ್ಚಿತ್ತವೇ ಇಲ್ಲವು. ಅವನು ನರಕವನ್ನು ಅನುಭವಿಸಿಯೇ ತೀರಬೇಕು. ಜ್ಞಾನದಿಂದಲೂ, ಇಷ್ಟದಿಂದಲೂ, ಮಾಡಿದ ಪಾಪಕ್ಕೆ ವಿಷಯ ಭೇದಗಳಿಂದ ಪ್ರಾಯಶ್ಚಿತ್ತವು ವಿಧಿಸಲ್ಪಡುವುದು. ಅದೆಂತೆನೆ:—ಬದುಕಿರುವ ವರೆವಿಗೂ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳುವುದು. ಅಯ್ಯಾ ಇಂದ್ರನೇ! ಬ್ರಾಹ್ಮಣನೂ, ಪಂಡಿತನೂ, ಪುರೋಹಿತನೂ ಆದ ವಿಶ್ವರೂಪನನ್ನು ಕೊಂದೆಯಲ್ಲವೆ? ಇದಕ್ಕೆ ಪ್ರತಿಕ್ರಿಯೆಯೆಲ್ಲಿಯದು? ಆದುದರಿಂದ ನೀನು ಈ ನೀರಿನಲ್ಲಿಯೇ ಬಿದ್ದಿರು. ಎಲೆವೋ ಮದಾಂಧನೇ! ಬ್ರಾಹ್ಮಣ ವಧೆಯನ್ನು ಮಾಡಿದ ನಿನಗೆ ನೂರು ಅಶ್ವಮೇಧ ಯಾಗಗಳ ಫಲವೆಂಬುದು ಆಗಲೇ ನಶ್ವರವಾಯಿತು' ಎಂದನು. ಆಗ ದೇವೇಂದ್ರನು

ಬಹಳವಾಗಿ ಚಿಂತಿಸಿ, ಗುರುವನ್ನು ಕುರಿತು 'ಗುರುವೇ! ಸಕಲ ಋಷಿಗಳಿಂದೊಡಗೂಡಿದವನಾಗಿ ಅಮರಾವತಿಗೆ ಹಿಂತಿರುಗಿ ದೇವತೆಗಳ ಕಾರ್ಯ ಸಿದ್ಧಿಗೋಸ್ಕರ, ಯಾರು ನಿನ್ನ ಪ್ರೀತಿಗೆ ಪಾತ್ರನಾಗಿರುವನೋ ಅವನನ್ನು ಇಂದ್ರನನ್ನಾಗಿ ಮಾಡು. ನಾನು ಈ ಬ್ರಹ್ಮಹತ್ಯೆಯಿಂದ ಬದುಕಿದ್ದರೂ ಸತ್ತಂತೆಯೇ ಸರಿ' ಎಂದು ಹೇಳಿ ಸುಮ್ಮನಾದನು.

ಬಳಿಕ ದೇವತೆಗಳು ಅಮರಾವತಿಗೆ ಹಿಂತಿರುಗಿ ಆಲೋಚಿಸುತ್ತಿರಲು ಅಮಿತದ್ಯುತಿಯುಳ್ಳ ನಾರದನಲ್ಲಿಗೆ ಬಂದನು. ಇಂತು ಬಂದ ನಾರದನನ್ನು ದೇವತೆಗಳು ಅರ್ಘ್ಯಪಾದ್ಯಾದಿಗಳಿಂದ ಸತ್ಕರಿಸಿ ಇಂದ್ರನ ವೃತ್ತಾಂತವನ್ನೂ, ಅರಾಜಕವಾದ ಅಮರಾವತೀ ವೃತ್ತಾಂತವನ್ನೂ ವಿಜ್ಞಾಪಿಸಿಕೊಂಡರು. ಆಗ ನಾರದಮುನಿಯು 'ಎಲೈ ದೇವತೆಗಳಿರಾ! ಭೂಲೋಕದಲ್ಲಿ ನಹುಷನು, ನೂರು ಅಶ್ವಮೇಧ ಯಾಗಗಳನ್ನು ಮಾಡಿರುವನು. ಅವನನ್ನು ಇಂದ್ರನನ್ನಾಗಿ ಮಾಡಿರಿ' ಎಂದು ಹೇಳಿದನು. ನಾರದನ ನುಡಿಗಳನ್ನು ಕೇಳಿದ ಶಚೀದೇವಿಯು ಬಹಳವಾಗಿ ಚಿಂತಿಸಿದಳು. ಬಳಿಕ ದೇವತೆಗಳೆಲ್ಲರೂ ಆ ನಹುಷನನ್ನು ಕರೆತಂದು ಇಂದ್ರಾಸನದಲ್ಲಿ ಕುಳ್ಳಿರಿಸಿ, ಅಭಿಷೇಕವನ್ನು ಮಾಡಿದರು. ಇಂತು ಅಭಿಷಿಕ್ತನಾದ ನಹುಷನು ಸಿಂಹಾಸನಾರೂಢನಾಗಿ ಸಕಲರಿಂದಲೂ ಸ್ತುತಿಸಲ್ಪಟ್ಟು ವೈಭವವುಳ್ಳವನಾದನು. ಬಳಿಕ ಆ ನಹುಷನು ಶಚೀದೇವಿಯನ್ನು ಬಯಸಿ ಇಂತೆಂದನು 'ಎಲೈ ದೇವತೆಗಳಿರಾ! ಇದೇನು, ಶಚೀದೇವಿಯು ನನ್ನ ಸನ್ನಿಧಿಗೆ ಬರಲಿಲ್ಲವಲ್ಲ. ನೀವೀಗಲೇ ಹೋಗಿ ಆಕೆಯನ್ನು ಕರೆದುಕೊಂಡು ಬನ್ನಿರಿ' ಎಂದು ನುಡಿಯಲು ಮಹಾ ಬುದ್ಧಿಶಾಲಿಯಾದ ಬೃಹಸ್ಪತಿಯು ಶಚೀದೇವಿಯಿದ್ದೆಡೆಗೆ ಬಂದು 'ಮಂಗಳಕರಳಾದ ಶಚೀದೇವಿಯೇ! ಇಂದ್ರನ ದುಷ್ಕಾರ್ಯದಿಂದ ನಹುಷನನ್ನು ಕರೆತಂದಿರುವೆವು. ರಾಜ್ಯಾರ್ಥವಾಗಿ ನೀನು ರಾಣಿಯಾಗು' ಎಂದನು. ಅಕಲ್ಮಷನಾದ ಬೃಹಸ್ಪತಿಯ ನುಡಿಗಳನ್ನು ಕೇಳಿ ಶಚಿಯು 'ಅಯ್ಯಾ ಗುರುವೆ!

ಆ ನಹುಷನು ನೂರು ಅಶ್ವಮೇಧ ಯಾಗಗಳನ್ನು ಸಂಪೂರ್ಣವಾಗಿ ಮಾಡದೆಯೇ ಇಂದ್ರ ಸಿಂಹಾಸನವನ್ನೇರಿರುವನ . ಅವನು ನನ್ನನ್ನು ಹೊಂದಲು ಅರ್ಹನಾಗುವನೆ ? ನೀವೇ ಯೋಚಿಸಿರಿ. ಒಂದುವೇಳೆ ಆ ನಹುಷನು ಪರಸ್ತ್ರೀಯಲ್ಲಿ ಆಸಕ್ತಿಯುಳ್ಳವನಾದರೆ ಅವನೇ ಇಲ್ಲಿಗೆ ಬರಲಿ,' ಎಂದಳು. ಬಳಿಕ ಬೃಹಸ್ಪತಿಯು ಶಚೀದೇವಿಯ ನುಡಿಗಳನ್ನು ಅಂಗೀಕರಿಸಿ, ನಹುಷನಲ್ಲಿಗೆ ಬಂದು, ಆ ವೃತ್ತಾಂತವನ್ನು ತಿಳಿಸಿದನು. ಆಗ ನಹುಷನು ಯಾವ ವಾಹನವನ್ನೇರಿಕೊಂಡು ಸುಂದರಿಯಾದ ಶಚೀದೇವಿಯಲ್ಲಿಗೆ ಹೋಗಬೇಕೆಂಬುದನ್ನು ಯೋಚಿಸಿ ಯಾವುದೂ ಬಗೆಹರಿಯದೆ, ಮಹರ್ಷಿಗಳಿಂದ ಪಲ್ಲಕ್ಕಿಯನ್ನು ಹೊರಿಸಿಕೊಂಡು ಅಲ್ಲಿಗೆ ಹೊರಟನು. ಆ ಋಷಿಗಳು ನಿದಾನವಾಗಿ ಹೋಗುತ್ತಿರಲು ಕಾಮಾವಿಷ್ಟನಾದ ನಹುಷನು 'ಸರ್ಪಸರ್ಪ' ಎಂದು ಮುನಿಗಳನ್ನು ಗದರಿಸತೊಡಗಿದನು. ಆಗಲಾ ಪಲ್ಲಕ್ಕಿಯನ್ನು ಹೊರುತ್ತಿದ್ದವರಲ್ಲಿ ಒಬ್ಬನಾದ ಅಗಸ್ತ್ಯನು ಬಹಳವಾಗಿ ಕೋಪಗೊಂಡು 'ಎಲವೋ ! ನೀನು ಬ್ರಾಹ್ಮಣರೆಂಬ ಭಯವೂ ಇಲ್ಲದೆ ಅವಮಾನಗೊಳಿಸುತ್ತಿರುವೆಯಲ್ಲ! ಆದುದರಿಂದ ನೀನು ಸರ್ಪವಾಗು' ಎಂದು ಶಪಿಸಿದನು. ಆಕ್ಷಣದಲ್ಲಿಯೇ ನಹುಷನು ಅಜಗರವಾಗಿ ಪಲ್ಲಕ್ಕಿಯಿಂದ ಭೂಮಿಗೆ ಬಿದ್ದನು. ಋಷಿಗಳ ಶಾಪವು ದುರತಿಕ್ರಮವಲ್ಲವೆ ? ಕೇಳಿರೈ ! ವಿಪ್ರರನ್ನು ಅವಮಾನಗೊಳಿಸಿದವರ ಗತಿಯೂ ಹೀಗೆಯೇ ಸರಿ. ಆದುದರಿಂದ ಅಪ್ರಮತ್ತರಾದ ನರರು, ಉನ್ನತವಾದ ಪದವಿಯನ್ನು ಹೊಂದಿದರೆ ಅರಿಷಡ್ವರ್ಗ ದೂರರಾಗಬೇಕಲ್ಲದೆ, ಆ ಪದವಿಯನ್ನು ಉಳಿಸಿಕೊಳ್ಳಲು ಬೇಕಾದುದನ್ನು ಯೋಚಿಸಬೇಕು, ಹಾಗೆ ಯೋಚಿಸದೆ ಬ್ರಾಹ್ಮಣರನ್ನು ಅವಮಾನಗೊಳಿಸಿದುದರಿಂದ ನಹುಷನು ಸರ್ಪವಾಗಿ ಅರಣ್ಯದಲ್ಲಿ ಬಿದ್ದನು. ಆಗ ಅಮರಾವತಿಯು, ಪುನಃ ಅರಾಜಕವಾಯಿತು.

ಬಳಿಕ ದೇವತೆಗಳೆಲ್ಲರೂ 'ಅಯ್ಯೋ ! ಈ ನಹುಷನಿಂದ ಎಂತಹ ವಿಪತ್ತು ಸಂಭವಿಸಿತು. ಈ ದುರಾತ್ಮನು ಸ್ವರ್ಗಲೋಕದಲ್ಲಿಯೂ,

ಮರ್ತ್ಯಲೋಕದಲ್ಲಿಯೂ ಇಲ್ಲದೆ ಅರಣ್ಯದ ಪಾಲಾದನಲ್ಲ! ಸತ್ಪುರುಷ ರನ್ನು ತಿರಸ್ಕಾರಮಾಡಿದಾಗಲೇ ಅನಂತವಾದ ಪುಣ್ಯಗಳು ನಶಿಸಿ ಹೋಗುವುವಲ್ಲವೆ?' ಎಂದು ಚಿಂತಿಸಲಾರಂಭಿಸಿದರು. ಆಗ ನಾರ ದನು ಅಲ್ಲಿಗೆ ಬರಲು ದೇವತೆಗಳು 'ಅಯ್ಯಾ ಮುನಿಯೇ! ಭೂಲೋಕ ದಲ್ಲಿ ಶತಯಾಗಗಳನ್ನು ಮಾಡಿರುವವರಿನ್ನಾರಾದರೂ ಇದ್ದರೆ ಹೇಳು' ಎಂದು ಕೇಳಿದರು. ನಾರದನು ಯಯಾತಿಯನ್ನು ಕರೆದುಕೊಂಡು ಬನ್ನಿರೆಂದು ಉತ್ತರವನ್ನಿತ್ತನು. ಅದರಂತೆಯೇ ದೇವತೆಗಳು ಯಯಾತಿ ಯನ್ನು ಕರೆತಂದು ಇಂದ್ರನನ್ನಾಗಿ ಮಾಡಿದರು. ಪಟ್ಟಾಭಿಷಿಕ್ತ ನಾದ ಯಯಾತಿಯನ್ನು ಕುರಿತು ನಾರದಮುನಿಯು 'ಅಯ್ಯಾ ಯಯಾತಿಯೇ! ನೀನು ನೂರೊಂದು ಯಾಗಗಳನ್ನು ಮಾಡಿರುವೆ. ಆದುದರಿಂದಲೇ ಅಮರಾವತೀರಾಜನಾಗಿರುವೆ. ಅದು ಹಾಗಿರಲಿ. ನಿನ್ನ ಹಿಂದೆ ನಹುಷನು ಸತ್ಪುರುಷರನ್ನು ಅವಮಾನಗೊಳಿಸಿ ಸರ್ಪ ವಾಗಿ ಭೂಮಿಗೆ ಬಿದ್ದನು. ರಾಜೇಂದ್ರ! ಮನುಜರು ತಮ್ಮ ಪುರಾ ಕೃತಪುಣ್ಯವಿಶೇಷದಿಂದಲೂ, ಅದೃಷ್ಟದಿಂದಲೂ ಶ್ರೇಷ್ಠವಾದ ಪದವಿ ಯನ್ನು ಹೊಂದಿದರೆ, ಮೂಢರಾಗಿ ಶುಭಾಶುಭಗಳನ್ನು ನೋಡದೆ ಘೋರವಾದ ನರಕಮಹಾಕೂಪದಲ್ಲಿ ಬೀಳುವರು. ಆದುದರಿಂದ ನೀನು ಯುಕ್ತಾಯುಕ್ತವಿವೇಚನೆಯನ್ನು ಮಾಡಿ, ಈ ಇಂದ್ರಪದವಿ ಯನ್ನು ಉಳಿಸಿಕೊಳ್ಳಬೇಕು,' ಎಂದು ನುಡಿದನು. ನಾರದನ ನುಡಿ ಗಳನ್ನು ಕೇಳಿ ಯಯಾತಿಯು 'ಎಲೈ ನಾರದನೇ! ನಾನೆಂದರೇನು? ನರಕವನ್ನನುಭವಿಸುವದೆಂದರೇನು? ಮಿತವಾಗಿ ಅಲ್ಪಸ್ವಲ್ಪವಾದ ಪುಣ್ಯಕರ್ಮಗಳಿಗೆ ವಿಘ್ನವುಂಟಾಗಬಹುದು. ನಾನಾದರೊ, ಎಲ್ಲ ವನ್ನೂ ಸ್ವಲ್ಪವಾಗಿಯೇ ಮಾಡಿರುವೆನು. ಕೇಳು; ಅನ್ನದಾನಗಳಿಂದ ಕೂಡಿದ ಮಹಾದಾನಗಳನ್ನು ಮಾಡಿದೆನು. ಭೂದಾನಸಹಿತವಾದ ಗೋದಾನಗಳನ್ನು ಮಾಡಿರುವೆನು. ಇಷ್ಟೆಯಲ್ಲದೆ ತಿಳಿದವರು ಯಾವ ಯಾವ ದಾನಗಳನ್ನು ಶ್ರೇಷ್ಠಗಳೆಂದು ಹೇಳುವರೋ ಅವುಗಳನ್ನೆಲ್ಲ ವನ್ನೂ ಮಾಡಿರುವೆನು. ಯಜ್ಞಗಳಾದರೋ, ವಾಜಪೇಯ, ಅತಿ ರಾತ್ರ, ಜ್ಯೋತಿಷ್ಟೋಮ, ರಾಜಸೂಯಾದಿ ಮಹಾಯಾಗಗಳನ್ನು

ಮಾಡಿದುದೂ ಅಲ್ಲದೆ ಇಷ್ಟಿಯನ್ನೂ ಸಹ ಗೈದಿರುವೆನು. ದೇವದೇವನಾದ ಜಗದೀಶ್ವರನು ಅನೇಕಸಲ ನಾನು ಮಾಡಿದ ಯಜ್ಞದಿಂದ ಸಂತುಷ್ಟನಾಗಿ ವರವನ್ನು ದಯಪಾಲಿಸಿರುವನು. ಅಯ್ಯಾ ಮುನಿಯೆ! ಇನ್ನೂ ಕೇಳು; ಮಹಾತ್ಮನಾದ ಗಾಲವನಿಗೆ ಮಾಧವೀ ಎಂಬ ಕನ್ನಿಕೆಯನ್ನು ದಾನಮಾಡಿರುವೆನು. ಆ ಗಾಲವ ಋಷಿಯು ಗುರುದಕ್ಷಿಣೆಗೋಸ್ಕರ ನಾಲ್ವರು ಕನ್ನಿಕೆಯರನ್ನು ಕೊಟ್ಟಿರುವೆನು. ಎಲೈ ದೇವತೆಗಳಿರಾ! ನಾನು ಹೀಗೆಯೇ ಎಷ್ಟೋ ಪುಣ್ಯಗಳನ್ನು ಮಾಡಿರುವೆನು.' ಎನಲು ದೇವತೆಗಳು ಆ ಯಯಾತಿಯನ್ನು ಕುರಿತು,—'ಮಹಾತ್ಮನಾದ ಯಯಾತಿರಾಯನೇ! ಹೇಳು! ಹೇಳು! ಕೇಳಲತಿ ಕುತೂಹಲವುಳ್ಳವರಾಗಿರುವೆವು. ದಯವಿಟ್ಟು ಹೇಳು' ಎಂದು ಬೇಡಿದರು. ಆಗಲಾ ಯಯಾತಿಯು ತಾನು ಮಾಡಿದ ಸಕಲಪುಣ್ಯಗಳನ್ನು ವ್ಯಾಸನು ಪುರಾಣಗಳನ್ನು ಬರೆದು ಮುಗಿಸಿದಂತೆ ಸಮಗ್ರವಾಗಿ ಬಿತ್ತರಿಸಿದನು. ಪುಣ್ಯಕಥನವು ನಿಶ್ಶೇಷವಾಗುತ್ತಲೇ ಪುಣ್ಯಹೀನನಾಗಿ ಯಯಾತಿಯು ಭೂಮಿಗೆ ಬಿದ್ದನು. ಅಂತು ಇಂತು ಅಮರಾವತಿಯು ಪುರಳಿ ಅರಾಜಕವಾಯಿತು. ಆಗ ಋಷಿಗಳೂ, ಯಕ್ಷ, ಗಂಧರ್ವ, ವಿದ್ಯಾಧರ, ಕಿನ್ನರ, ಪನ್ನಗರೇ ಮೊದಲಾದವರು ಚಿಂತಾನ್ವಿತರಾದರು.

## ಅಧ್ಯಾಯ ೧೭

### ವೃತ್ರಾಸುರನ ಜನನ—ದಧೀಚಿಯ ಆತ್ಮದಾನ

ಸೂತನು ಹೇಳುತ್ತಾನೆ:—ಕೇಳಿರೈ! ದೇವಲೋಕವು ಅರಾಜಕವಾಗಲು, ಶಚೀದೇವಿಯು, ಧರ್ಮಯುಕ್ತವಾದ ಕೆಲವು ಮಾತುಗಳನ್ನು ದೇವತೆಗಳಿಗಾಗಿ ಹೇಳುತ್ತಾಳೆ. 'ಅಯ್ಯಾ! ದೇವತೆಗಳಿರಾ !! ಸುಮ್ಮನೆ ಯೋಚಿಸುವುದರಿಂದೇನು ಫಲವು. ವಿಚಕ್ಷಣರಾದ ನೀವು

ನಿಮ್ಮ ಪ್ರಭುವಾದ ಇಂದ್ರನನ್ನು ಕರೆತನ್ನಿರಿ. ಆತನು ನಿರ್ದೋಷಿಯು. ವಿಶ್ವರೂಪನು ಕಾರಣವಿಲ್ಲದೆ ಹತನಾಗಲಿಲ್ಲ. ಅವನು ಸಾಯಲು ಅನೇಕ ಕಾರಣಗಳುಂಟು. ಅಯ್ಯಾ ಬೃಹಸ್ಪತಿಯೇ! ನನ್ನ ಪತಿಯು ಅಜ್ಞಾನದಿಂದ ನಿನ್ನನ್ನು ತಿರಸ್ಕರಿಸಿದುದು ಸತ್ಯವು. ಆದರೆ ನೀನು ಆ ತಿರಸ್ಕಾರವನ್ನು ಮಾಡಿದ ಮಾತ್ರಕ್ಕೆ ಆತನನ್ನು ಶಪಿಸಿರುವೆ. ಆದುದರಿಂದ ನಿನ್ನನ್ನೀಗ ಶಪಿಸುವೆನು. ನೀನು ಸಿರಸ್ತನಾಗಿದ್ದರೂ ಅವಸಾನ ಪರನಾಗು. ನಿನ್ನ ಮನೆಯಲ್ಲಿ ಯಾವನೋ ಒಬ್ಬ ಪುಣ್ಯಾತ್ಮನು ಹುಟ್ಟುವನು. ಆತನು ನಿನಗೆ ಸರಿಯಾದ ಗತಿಯನ್ನು ಹುಟ್ಟಿಸುವನು. ನನ್ನ ಪತಿಯು ಜೀವಂತನಾಗಿರುವಾಗಲೇ ಆ ಯಯಾತಿ, ಮತ್ತು ನಹುಷರನ್ನು ಕರೆತಂದೆಯಲ್ಲವೆ? ಹಾಗೆಯೇ ನಿನ್ನ ಮಗನೂ ನೀನು ಬದುಕಿರುವಾಗಲೇ ಹಾಗೆ ಮಾಡುವನು. ಇದನ್ನು ಚೆನ್ನಾಗಿತಿಳಿ. ನಡೆ, ಇಂದ್ರನನ್ನು ಕರೆತಂದು ಪಟ್ಟಾಭಿಷಿಕ್ತನನ್ನಾಗಿಮಾಡು. ತಡೆಮಾಡಿದುದೇ ಆದರೆ, ಮರಳಿಯೂ ಶಾಪವನ್ನು ಕೊಡುವೆನು.' ಶಚೀದೇವಿಯು ಇಂತು ನುಡಿದೊಡನೆಯೇ ಬೃಹಸ್ಪತಿಯು ಭಯಗೊಂಡು ದೇವತೆಗಳಿಂದೊಡಗೂಡಿ ಇಂದ್ರನು ಅಡಗಿಕೊಂಡಿದ್ದ ಸರೋವರದಬಳಿಗೆ ಬಂದನು. ಬಳಿಕ ದೇವತೆಗಳು ಇಂದ್ರನನ್ನು ಕರೆದು ನಮಸ್ಕರಿಸಿದರು. ಆಗಲಾ ಇಂದ್ರನು ಬೃಹಸ್ಪತಿಯೇ ಮೊದಲಾದ ದೇವತೆಗಳನ್ನು ಕುರಿತು, 'ಎಲೈ ದೇವತೆಗಳಿರಾ! ನೀವೇತಕಿಲ್ಲಿಬಂದಿರುವಿರಿ? ಘೋರವಾದ ಬ್ರಹ್ಮಹತ್ಯಾ ದೋಷದಿಂದ ನರಳುತ್ತಾ ಅದರ ವಿಮೋಚನೆಗಾಗಿ ತಪಸ್ಸನ್ನುಮಾಡುತ್ತಿರುವ ನನ್ನಿಂದ ನಿಮಗೇನೂ ಪ್ರಯೋಜನವಾಗಲಾರದು.' ಎಂದನು. ಇಂದ್ರನೆಂದ ಮಾತುಗಳನ್ನು ಕೇಳಿ ದೇವತೆಗಳು, 'ಎಲೈ ಸ್ವಾಮಿಯೇ! ನೀನು ಹೀಗೆನ್ನಬಾರದು. ನೀನಾಡುವುದು ಮತ್ತೊಬ್ಬರಿಗೆ ಉಪಕಾರ ಮಾಡುದು. ನಮಗೆ ಅಪಕಾರವಾದುದು. ಆ ವಿಶ್ವರೂಪನು ಹತನಾದುದರಿಂದಲ್ಲವೆ, ಈ ಬ್ರಹ್ಮಹತ್ಯೆ ಎಂಬುದು, ನಿನ್ನನ್ನು ಪೀಡಿಸುತ್ತಿರುವುದು? ಅವನು, ದೇವತೆಗಳ ನಾಶಕ್ಕೂ; ದಾನವರ ವೃದ್ಧಿಗೂ, ಯಾಗವನ್ನು ಮಾಡಿದನು. ಆದುದರಿಂದಲೇ ಅವನು ನಿನ್ನಿಂದ ಹತ

ನಾದುದು. ಇದು ನಿನ್ನ ದೋಷವಲ್ಲ. ನಿರ್ದೋಷಿಯಾದ ನಿನ್ನನ್ನು ಅಮರಾವತಿಗೆ ಕರೆದುಕೊಂಡು ಹೋಗಲು ನಾವಿಲ್ಲಿಗೆ ಬಂದಿರುವೆವು. ಈ ಬ್ರಹ್ಮಹತ್ಯೆಗೆ ನಾವು ಸಮಾಧಾನ ಹೇಳುವೆವು.' ಎಂದು ವಿಜ್ಞಾಪಿಸಿಕೊಂಡು ಆ ಬ್ರಹ್ಮಹತ್ಯೆಗೆ, ಭೂಮಿ, ಸ್ತ್ರೀ, ನೀರು, ವೃಕ್ಷ ಎಂಬ ನಾಲ್ಕು ಸ್ಥಾನಗಳನ್ನು ಕಲ್ಪಿಸಿಕೊಟ್ಟು, ಅಲ್ಲಿಗೆ ಹೋಗೆಂದು ಬೇಡಿಕೊಂಡರು. ಆಗ ಬ್ರಹ್ಮಹತ್ಯೆಯು ಸಮಾಧಾನಗೊಂಡಿತು. ಬಳಿಕ ಇಂದ್ರನು ಪಾಪರಹಿತನಾಗಿ ದೇವರಾಜ್ಯವನ್ನು ಅನುಭವಿಸಲು ಯೋಗ್ಯನಾದನು. ಇಂತು ಪಾಪರಹಿತನಾದ ಇಂದ್ರನನ್ನು, ಋಷಿಗಳು ಸಂತೋಷದಿಂದ ಅಮರಾವತಿಯಲ್ಲಿ ಪಟ್ಟಾಭಿಷಿಕ್ತನನ್ನಾಗಿ ಮಾಡಿದರು. ಆಗ ವಾಯುವು ಮಂಗಳಕರವಾಗಿ ಬೀಸತೊಡಗಿದನು. ನದಿಗಳು ಅಮೃತಪ್ರವಾಹದಿಂದ ಹರಿಯಲಾರಂಭಿಸಿದವು; ಪ್ರಪಂಚವು ಆನಂದಗೊಂಡಿತು. ಮನಸ್ವಿಗಳ ಮನವು ನಿರ್ಮಲವಾಯಿತು. ಎಲ್ಲೆಲ್ಲಿಯೂ, ಶಾಂತಿಯು ನೆಲೆಗೊಂಡಿತು. ಅಮರಾವತೀ ಪಟ್ಟಣದ ಪ್ರಜೆಗಳು, ತಮ್ಮ ಪ್ರಭುವಿನ ಅಭ್ಯುದಯವನ್ನು ನೋಡಿ ನಲಿದಾಡಿ ಅನೇಕ ವಾದ್ಯಧ್ವನಿಗಳಿಂದ ದಿಗಂತರಗಳನ್ನು ತುಂಬಿದರು.

ಇತ್ತ ವಿಶ್ವಕರ್ಮನು ಇಂದ್ರನ ಅಭ್ಯುದಯವನ್ನೂ, ತನ್ನ ಮಗನ ಮೃತಿಯನ್ನೂ ನೋಡಿ ಅತಿಯಾಗಿ ಖತಿಗೊಂಡು, ಲೋಕಪಿತಾಮಹನಾದ ಬ್ರಹ್ಮನನ್ನು ಕುರಿತು ತಪವನ್ನಾಚರಿಸಿದನು. ತಪಸ್ಸಿನಿಂದ ಪ್ರತ್ಯಕ್ಷನಾದ ಬ್ರಹ್ಮನು ವಿಶ್ವಕರ್ಮನನ್ನು ಕುರಿತು ವರವನ್ನು ಕೇಳುವಂತೆ ಆಜ್ಞಾಪಿಸಿದನು. ಆ ವಿಶ್ವಕರ್ಮನಾದರೋ ದೇವತೆಗಳ ವಿನಾಶಕರವಾದ ವರವನ್ನು ಬೇಡಿದನದೆಂತೆನೆ: 'ಎಲೈ ಬ್ರಹ್ಮನೇ! ನನ್ನ ತಪಸ್ಸಿನಿಂದ ನೀನು ಸಂತುಷ್ಟನಾಗಿದ್ದುದೇ ಆದರೆ, ಮೃತಿಯನ್ನೈದಿರುವ ನನ್ನ ಮಗನನ್ನು ಜೀವಂತನನ್ನಾಗಿ ಮಾಡು' ಇಂತು ಬೇಡಿದ ವಿಶ್ವಕರ್ಮನಿಗೆ ಬ್ರಹ್ಮನು ಹಾಗೆಯೇ ಆಗಲೆಂದು ಹೇಳಿ ಅಂತರ್ಧಾನವಾದನು. ಆ ಕ್ಷಣದಲ್ಲಿಯೇ ವರದಾನದ ಮಹಿಮೆಯಿಂದ ವಿಶ್ವರೂಪನು ಪುನಃ ಬದುಕಿ ವೃತ್ರನೆಂಬ ನಾಮಧೇಯದಿಂದ

ಪ್ರತಿದಿನವೂ ನೂರು ಬಾಣಗಳ ಉದ್ದದಷ್ಟು ಬೆಳೆಯಲಾರಂಭಿಸಿದನು. ಆಗ ಪಾತಾಳಲೋಕದಲ್ಲಿದ್ದ ಅಸುರರೆಲ್ಲರೂ ದೇವಲೋಕಕ್ಕೆ ಬಂದು ದೇವತೆಗಳನ್ನು ಘಾತಿಸಿದರು. ಅವರಲ್ಲನೇಕರು ಮೃತರಾಗಲು ಭೃಗುಮಹರ್ಷಿಯು ತನ್ನ ಮಂತ್ರಶಕ್ತಿಯಿಂದವರೆಲ್ಲರನ್ನೂ ಬದುಕಿಸಿದನು. ಬಳಿಕ ದೇವತೆಗಳೂ ಋಷಿಗಳೂ ಬೃಹಸ್ಪತಿಯನ್ನು ಮುಂದುಮಾಡಿಕೊಂಡು ಬ್ರಹ್ಮನಲ್ಲಿಗೆ ಬಂದು ನಡೆದ ವೃತ್ತಾಂತವನ್ನು ಹೇಳಿದರು. ಆಗ ಬ್ರಹ್ಮನು 'ಅಯ್ಯಾ ದೇವತೆಗಳಿರಾ! ವಿಶ್ವಕರ್ಮನು ನಿಮ್ಮ ವಿನಾಶಾರ್ಥವಾಗಿಯೇ ಈ ವೃತ್ರಾಸುರನನ್ನು ಪಡೆದಿರುವನು. ಹಾಗಿದ್ದರೂ ಅವನೊಡನೆ ನೀವು ಯುದ್ಧಮಾಡಿರಿ' ಎಂದು ನುಡಿದು ಸುಮ್ಮನಾದನು. ಬ್ರಹ್ಮನಂದಮಾತನ್ನು ಕೇಳಿ ದೇವತೆಗಳು 'ಎಲೈ ಬ್ರಹ್ಮನೇ! ನಾವು ಯುದ್ಧಮಾಡಲು ಸಮರ್ಥರಾಗಿಲ್ಲವು. ಇಂದ್ರನು ರಾಜ್ಯದಲ್ಲಿ ಅಭಿಷಿಕ್ತನಾದನಂತರ ಆಯುಧಗಳೇತಕ್ಕೆಂದು ನಾವು, ಅವುಗಳನ್ನು ದಧೀಚಿಯ ಆಶ್ರಮದಲ್ಲಿ ಬಿಟ್ಟು ಬಂದೆವು. ಈಗೇನುಮಾಡಬೇಕೆಂಬುದೇ ತೋರದಿರುವುದು.' ಎಂದರು. ಆಗ ಬ್ರಹ್ಮನು 'ಅದರೇನು? ದಧೀಚಿಯ ಆಶ್ರಮಕ್ಕೆ ಹೋಗಿ ಅವುಗಳನ್ನು ತೆಗೆದುಕೊಂಡು ಬನ್ನಿರಿ' ಎಂದು ಹೇಳಲು ದೇವತೆಗಳೆಲ್ಲರೂ ದಧೀಚಿಯ ಆಶ್ರಮಕ್ಕೆ ಬಂದರು. ಅಲ್ಲಿಯಾದರೋ ಯಾವ ಆಯುಧವೂ ಕಾಣಲಿಲ್ಲವು. ಆಗ ಅವರು ಬಹಳ ಚಿಂತಾಕ್ರಾಂತರಾಗಿ ಪುನಃ ಬ್ರಹ್ಮನಲ್ಲಿಗೆ ಬಂದು ಪ್ರಾರ್ಥಿಸಲು ಬ್ರಹ್ಮನು 'ಎಲೈ ಇಂದ್ರನೇ! 'ನೀನು ದಧೀಚಿಯ ಅಸ್ಥಿಗಳನ್ನು ಬಾಣಗಳಿಗಾಗಿ ಯಾಚಿಸು. ಮಹಾತ್ಮನಾದ ಆ ಮುನಿಯು ಅನುಗ್ರಹಿಸುವನು' ಎಂದನು. ಇಂತೆಂದ ಬ್ರಹ್ಮನ ನುಡಿಗಳನ್ನು ಕೇಳಿ ಇಂದ್ರನು ನಡುಗುತ್ತಾ 'ಮಹಾತ್ಮ! ಹಿಂದೆ, ದೇವತೆಗಳ ಕಾರ್ಯಸಿದ್ಧಿಗಾಗಿ ವಿಶ್ವರೂಪನನ್ನು ಕೊಂದೆನು. ಆಗ ಇವರೆಲ್ಲರೂ ನನ್ನನ್ನು ಪಾಪಿಷ್ಠನನ್ನಾಗಿ ಮಾಡಿದರು. ಗುರುವಾದ ಬೃಹಸ್ಪತಿಯೂ ನನ್ನನ್ನು ಅಲಕ್ಷ್ಯಮಾಡಿ ಶಪಿಸಿದನು. ಅನಂತರದಲ್ಲಿ ಅದೃಷ್ಟವಶಾತ್ ನಿಜಮಂದಿರವನ್ನು ಸೇರಿದೆನು. ಈಗಲಾದರೋ ದಧೀಚಿಯ ಪ್ರಾಣವನ್ನು ತೆಗೆದು ಆತನ

ಅಸ್ಥಿಗಳನ್ನು ಪಡೆದು ಪುನಃ ಪಾಪಿಷ್ಠನಾಗೆಂದು ನುಡಿಯುತ್ತಿರುವೆ. ಯಲ್ಲಾ ! ಇದು ನನ್ನಿಂದಾಗದು.' ಎಂದನು. ಆಗ ಬ್ರಹ್ಮನು ಇಂದ್ರನಿಗೆ ಅನೇಕ ವಿಧವಾದ ಸಮಾಧಾನಗಳನ್ನು ಹೇಳಿ ದಧೀಚಿಯ ಆಶ್ರಮಕ್ಕೆ ಕಳುಹಿಸಿದನು.

ಬಳಿಕ ಇಂದ್ರಾದಿ ದೇವತೆಗಳು ದಧೀಚಿಯ ಆಶ್ರಮಕ್ಕೆ ಬಂದರು. ಅಲ್ಲಿಯಾದರೋ ಮಹಾ ತಪಸ್ವಿಯಾದ ದಧೀಚಿಯು ತಪವನ್ನಾಚರಿಸುತ್ತಿದ್ದನು. ಕ್ರೂರ ಮೃಗಗಳೂ, ಸಾಧು ಮೃಗಗಳೂ ಸ್ನೇಹದಿಂದ ನಲಿದಾಡುತ್ತಿದ್ದವು. ಇಂತಹ ಮಹಿಮಾಸ್ಪದವಾದ ತಪೋವನಕ್ಕೆ ಬಂದ ದೇವತೆಗಳು, ಆ ಮಹಾತ್ಮನಾದ ದಧೀಚಿಯನ್ನು ನಮಸ್ಕರಿಸಿದರು. ಆಗ ಇಂದ್ರನು ಸಾಷ್ಟಾಂಗ ಪ್ರಣಾಮವನ್ನು ಮಾಡಿ 'ಎಲೈ ಮುನಿಪುಂಗವನೇ ! ಮೂರು ಲೋಕಗಳಲ್ಲಿಯೂ ನಿನ್ನಂತಹ ದಾನಶೀಲನಿನ್ನಾರೂ ಇಲ್ಲವು. ಆದುದರಿಂದ ನಾವಿಲ್ಲಿಗೆ ಬಂದಿರುವೆವು.' ಎನಲು ದಧೀಚಿಯು 'ಅಯ್ಯಾ ಇಂದ್ರಾದಿ ದೇವತೆಗಳಿರಾ ! ನೀವೇತಕ್ಕಾಗಿ ಇಲ್ಲಿಗೆ ಬಂದಿರುವಿರಿ. ಅದನ್ನು ನಿಶ್ಶಂಕೆಯಿಂದ ಹೇಳಿರಿ. ನೀವು ಕೇಳಿದುದನ್ನು ಕೊಡಲು ಸಿದ್ಧನಾಗಿರುವೆನು. ಮಾತಿಗೆ ತಪ್ಪಿ ನಡೆಯುವುದಿಲ್ಲವೆಂದು ತಿಳಿಯಿರಿ' ಎಂದನು. ಆಗಲಾ ಸ್ವಾರ್ಥಪರಾಯಣರಾದ ದೇವತೆಗಳು 'ಮಹಾನುಭಾವನೇ ! ನಮ್ಮ ಯಾಚನೆಯು ಬಹಳ ಭೀಕರವಾದುದು. ನೀನು ಅಭಯವನ್ನೀಯುವುದಾದರೆ ಬಿನ್ನವಿಸಿಕೊಳ್ಳುವೆವು. ಎಲೈ ಸುವ್ರತನೇ ! ನೀನು ಏನುಬೇಕಾದರೂ ಕೊಡುವಷ್ಟು ಸಮರ್ಥನಾಗಿರುವೆ. ಅದುದರಿಂದಲೇ ನಿನ್ನಡಿದಾವರೆಗಳಿಗೆರಗಿ ಯಾಚಕರಾಗಿ ಬಂದಿರುವೆವು. ಕಾಪಾಡು ! ಕಾಪಾಡು !!' ಎಂದರು. ಬಳಿಕ ದಧೀಚಿಯು ದೇವತೆಗಳಿಗೆ ಅಭಯವನ್ನೀಯಲು ಅವರು ಆತನ ಅಸ್ಥಿಗಳನ್ನು ಬೇಡಿದರು. ಮಹಾ ದಾನಶೀಲನಾದ ದಧೀಚಿ ಮುನಿಯು ಹಾಗೆಯೇ ಆಗಲೆಂದು ಹೇಳಿ ತನ್ನ ಪತ್ನಿಯಾದ ಸುವರ್ಚಸಾ ದೇವಿಯನ್ನು ಕುರಿತು 'ದೇವಿ! ಈ ದೇವತೆಗಳು ದೈತ್ಯನಿಧನಕ್ಕಾಗಿ ನನ್ನ ಅಸ್ಥಿಗಳನ್ನು ಬೇಡುತ್ತಿರು

ವರು. ಆದುದರಿಂದ ನಾನು ಸದ್ಯದಲ್ಲಿಯೇ ಈ ಕಳೇಬರವನ್ನು ಬಿಟ್ಟು ಬ್ರಹ್ಮಲೋಕಕ್ಕೆ ಹೋಗುವೆನು. ನೀನು ಚಿಂತಿಸಬೇಡ. ನೀನೂ ಪಾತಿವ್ರತ್ಯವನ್ನು ಕಾಪಾಡಿಕೊಂಡು ನನ್ನನ್ನು ಸೇರು' ಎಂದು ಹೇಳಿ ಬಹಳವಾಗಿ ಸಮಾಧಾನ ಗೊಳಿಸಿದನು. ಅನಂತರದಲ್ಲಿ ಆ ಮುನಿಪುಂಗವನು ತನ್ನ ಆಶ್ರಮದಲ್ಲಿದ್ದ ದೇವತಾ ಸನ್ನಿಧಿಯಲ್ಲಿ ನಿಜ ದೇಹವನ್ನು ಬಿಟ್ಟು ಬ್ರಹ್ಮಲೋಕವನ್ನು ಕುರಿತು ತೆರಳಿದನು. ಇಂತು ಪರೋಪಕಾರಿಯೂ, ಶಿವಭಕ್ತನೂ, ಶಿವದೀಕ್ಷಾಪರನೂ ಆದ ದಧೀಚಿ ಮುನಿಯು ದೇವಕಾರ್ಯಕ್ಕಾಗಿ ಸ್ವಾಭಿಮಾನವನ್ನು ತೊರೆದು ತನ್ನ ಕಳೇಬರವನ್ನು ಬಿಟ್ಟುಬಿಟ್ಟನು.

## ಅಧ್ಯಾಯ ೧೭

### ವೃತ್ರಾಸುರನ ಕಥೆ ಮತ್ತು ವಧೆ—ಬಲಿಯು ಯುದ್ಧ ಸನ್ನದ್ಧನಾಗುವಿಕೆ

ಬಳಿಕ ದೇವತೆಗಳೆಲ್ಲರೂ, 'ಈ ದಧೀಚಿಯ ಅಸ್ಥಿಗಳನ್ನು ಹೊರ ತೆಗೆಯುವುದು ಹೇಗೆ' ಎಂದು ಬಹಳವಾಗಿ ಯೋಚಿಸಿದರು. ಆಗ ಬುದ್ಧಿಶಾಲಿಯಾದ ಇಂದ್ರನು ಸುರಭಿಯನ್ನು ಕುರಿತು 'ಎಲೌ ಸುರಭಿಯೇ! ನೀನು ಈ ದಧೀಚಿಯ ದೇಹವನ್ನು ನೆಕ್ಕುವವಳಾಗು' ಎಂದಾಜ್ಞಾಪಿಸಿದನು. ಸುರಭಿಯಾದರೋ ಆ ದಧೀಚಮಹರ್ಷಿಯ ದೇಹವನ್ನು ನೆಕ್ಕಿ ನಿರ್ಮಾಂಸವನ್ನಾಗಿ ಮಾಡಿದಳು. ಅನಂತರದಲ್ಲಿ ಇಂದ್ರಾದಿ ದೇವತೆಗಳು ಆ ಮುನಿಯ ಮೂಳೆಗಳಿಂದ ವಜ್ರಾಯುಧವೇ ಮುಂತಾದ ಅನೇಕ ಆಯುಧಗಳನ್ನು ಮಾಡಿಕೊಂಡು ತಮ್ಮ ವೈರಿಗಳಾದ ದೈತ್ಯರೊಡನೆ ಯುದ್ಧಮಾಡಲು ಮನದೆರೆದರು. ಇತ್ತ ದಧೀಚಪತ್ನಿಯಾದ ಸುವರ್ಚಸೆಯು, ದೇವತೆಗಳು

ಮಾಡಿದುದೆಲ್ಲವನ್ನೂ ನೋಡಿ ರೋಷಗೊಂಡು ಅವರನ್ನು 'ನೀವಿಂದಿನಿಂದ ಅಪುತ್ರಸಂತರಾಗಿರಿ.' ಎಂದು ಶಪಿಸಿ ಅಶ್ವತ್ಥವೃಕ್ಷ ಮೂಲಕ್ಕೆ ಬಂದು ತನ್ನ ಹೊಟ್ಟೆಯನ್ನು ಬಗೆದುಕೊಂಡಳು. ಆಗ ಮಹಾ ತೇಜಸ್ವಿಯೂ, ಸಾಕ್ಷಾತ್ ರುದ್ರಾವತಾರನೂ ಆದ ಪಿಪ್ಪಲಾದನೆಂಬ ಮುನಿಯು ಜನಿಸಿದನು. ಈ ಪಿಪ್ಪಲಾದನಿಗೆ ಮಹಾಸತಿಯಾದ ಸುವರ್ಚಸೆಯು 'ಎಲೈ ಭಾಗ್ಯಶಾಲಿಯೇ ! ನೀನು ಈ ಅಶ್ವತ್ಥ ವೃಕ್ಷದಲ್ಲಿಯೇ ಇದ್ದುಕೊಂಡು ಸಕಲರಿಗೂ ಇಷ್ಟ ಫಲಗಳನ್ನು ಕೊಡುತ್ತ ಇರುವವನಾಗು' ಎಂದು ಹೇಳಿ ಕಳೇಬರವನ್ನು ತೊರೆದು ಪತಿಸಾನ್ನಿಧ್ಯವನ್ನು ಸೇರಿದಳು. ಬಳಿಕ ದೇವತೆಗಳೆಲ್ಲರೂ ಬೃಹಸ್ಪತಿಯನ್ನು ಪುರಸ್ಕರಿಸಿ ಭೂಲೋಕಕ್ಕೆಬಂದು ವೃತ್ರನನ್ನು ಯುದ್ಧಕ್ಕೆ ಕರೆದರು. ಮಹಾ ತೇಜಸ್ವಿಯಾದ, ವಿಶ್ವಕರ್ಮನ ಮಗನಾದ ವೃತ್ರಾಸುರನು ದೈತ್ಯಸೇನೆಯಿಂದೊಡಗೂಡಿ ಸಮರಾಂಗಣಕ್ಕೆ ಬಂದನು. ಉಭಯಪಕ್ಷಗಳಲ್ಲಿಯೂ ರಣವಾದ್ಯ ಧ್ವನಿಗಳು ಅತ್ಯದ್ಭುತವಾಗಿ ಭೋರ್ಗರೆದವು. ದೇವಾಸುರರು ಒಬ್ಬರನ್ನೊಬ್ಬರು ಬಲವಾಗಿ ಹೊಡೆಯಲಾರಂಭಿಸಿದರು. ಈ ಯುದ್ಧ ಸಮಾರಂಭವು ಮೂರು ಲೋಕಗಳನ್ನೂ ನಡುಗಿಸಿತು. ಅಸುರರು ದೇವತೆಗಳನ್ನು ಬಹಳವಾಗಿ ಪೀಡಿಸಿದರು. ಆಗ ಆಕಾಶದಿಂದ ನಕ್ಷತ್ರಗಳುದುರುವಂತೆ ಶಿರಸ್ಸುಗಳುದುರಿದವು. ಈ ಯುದ್ಧವು ಭೂಲೋಕದ ಮಧ್ಯಪ್ರದೇಶದಲ್ಲಿ ನಡೆಯಿತು. ಈ ಯುದ್ಧದಲ್ಲಿ ನಮುಚಿಯು ಇಂದ್ರನೊಡನೆ ಯುದ್ಧ ಮಾಡಿದನು. ಇಂದ್ರನು ಆ ನಮುಚಿಯನ್ನು ವಜ್ರಾಯುಧದಿಂದ ಹೊಡೆದನು. ಹಾಗೆ ಹೊಡೆದರೂ ಅವನಿಗೇನೂ ಆಗಲಿಲ್ಲವು. ಆಗ ದೇವದಾನವರು ಇಂದ್ರನನ್ನು ಹಾಸ್ಯಮಾಡಿದರು. ಆಗ ಇಂದ್ರನು ಅತಿಯಾಗಿ ರೋಷಗೊಂಡು ಆ ನಮುಚಿಯನ್ನು ಗದೆಯಿಂದ ಹೊಡೆದನು. ಗದೆಯು ಪುಡಿಪುಡಿಯಾಯಿತು. ಆ ಗದೆಯ ಪೆಟ್ಟಿನಿಂದ ನಮುಚಿಯ ಕವಚವು ಕೆಳಗೆ ಬಿದ್ದಿತು. ಇಂದ್ರನು ಪುನಃ ಅನೇಕ ಬಾಣಗಳಿಂದ ನಮುಚಿಯನ್ನು ಹೊಡೆದನು. ಅದೂ ನಿಷ್ಫಲವಾಯಿತು. ಆಗ ನಮುಚಿಯು ಕಿಲಕಿಲನೆ ನಗುತ್ತ ಹೊಡೆಯದೆಯೇ ನಿಂತಿದ್ದನು.

ಇಂದ್ರನಾದರೋ ಏನು ಮಾಡಬೇಕೆಂಬುದನ್ನರಿಯದೆ ಚಿಂತಿಸತೊಡಗಿದನು. ಆಗ ಆಕಾಶವಾಣಿಯು 'ಅಯ್ಯಾ ಇಂದ್ರನೇ! ಈ ದುಷ್ಟನು ಹೀಗೆ ಸಾಯುವುದಿಲ್ಲ. ಸಮುದ್ರದ ನೊರೆಯಿಂದ ಹೊಡೆ. ಇವನ ಜೀವಿತವು ಕೊನೆಗಾಣುವುದು' ಎಂದಿತು. ಬಳಿಕ ಇಂದ್ರನು ಸಮುದ್ರದಬಳಿಗೆ ಹೋಗಿ ನೊರೆಯನ್ನು ತೆಗೆದುಕೊಂಡುಬಂದು ಆ ನಮುಚಿಯನ್ನು ಹೊಡೆಯಲು ಅವನು ಮೃತನಾದನು. ನಮುಚಿಯು ಸಾಯಲು ದೇವತೆಗಳೆಲ್ಲರೂ ಸಂತೋಷಭರಿತರಾದರು. ಋಷಿಗಳೆಲ್ಲರೂ ದೇವೇಂದ್ರನನ್ನು ಶ್ಲಾಘಿಸಿದರು. ನಮುಚಿಯು ಸತ್ತುದುದನ್ನು ನೋಡಿ ದೈತ್ಯರು ರೋಷಗೊಂಡು ದೇವತೆಗಳೊಡನೆ ಘೋರವಾದ ಯುದ್ಧವನ್ನು ಮಾಡಿದರು. ಈ ಯುದ್ಧದಲ್ಲಿ ವೃತ್ರಾಸುರನು ರಣಾಂಗಣದಲ್ಲಿ ಬಂದು ನಿಂತನು.

ಕೇಳಿರೈ! ಮಹಾ ಪರಾಕ್ರಮಶಾಲಿಯಾದ ವೃತ್ರಾಸುರನು ಬಂದೊಡನೆಯೇ ದೇವತೆಗಳೆಲ್ಲರೂ ಭೂಮಿಗೆ ಬಿದ್ದರು. ಈರೀತಿ ಎಲ್ಲರೂ ಭೀತಿಗೊಂಡಿರಲು ಪರಾಕ್ರಮಶಾಲಿಯಾದ ಇಂದ್ರನು ಐರಾವತವನ್ನೇರಿಕೊಂಡು ವೃತ್ರನನ್ನು ಎದುರಿಸಲಾರದೆ ಲೋಕಶಂಕರನಾದ ಶಂಕರನನ್ನು ಮನಸ್ಸಿನಲ್ಲಿಯೇ ಚಿಂತಿಸುತ್ತಾ ಜಯ ಕಾಮುಕನಾಗಿ ಶಿವಲಿಂಗವನ್ನರ್ಚಿಸಲು ಮನದೆರೆದನು. ಆಗ ಬೃಹಸ್ಪತಿಯು ತನ್ನ ಶಿಷ್ಯನಾದ ಇಂದ್ರನನ್ನು ಕುರಿತು 'ದೇವೇಂದ್ರ! ಶನಿತ್ರಯೋದಶೀ ವ್ರತವೆಂಬ ಒಂದು ವ್ರತವುಂಟು. ಈ ವ್ರತವನ್ನು ಮಾಡುವುದರಿಂದ ಲಿಂಗರೂಪಿಯಾದ ಶಂಕರನು ಇಷ್ಟಸಿದ್ಧಿಯನ್ನುಂಟುಮಾಡುವನು. ಎಂದನು. ಗುರುವಚನವನ್ನು ಕೇಳಿ ಇಂದ್ರನು ಶನಿತ್ರಯೋದಶೀ ವ್ರತ ಪೂಜಾ ವಿಧಾನವನ್ನು ಕೇಳಿದನು. ಆಗ ಬೃಹಸ್ಪತಿಯು ಹೇಳುತ್ತಾನೆ. 'ಕೇಳೈ ದೇವೇಂದ್ರ! ಕಾರ್ತೀಕಮಾಸದ ಶುಕ್ಲಪಕ್ಷ ತ್ರಯೋದಶೀ ಶನಿವಾರ ಶಿವನನ್ನರ್ಚಿಸಬೇಕು. ಆದಿನ ಸಂಧ್ಯಾಕಾಲದಲ್ಲಿ ಶಿವನು ಪೂಜೆಯಿಂದ ಸಂತಸಗೊಳ್ಳುವನು. ಮಧ್ಯಾಹ್ನಕಾಲದಲ್ಲಿ ಸ್ನಾನಮಾಡಿ, ತಿಲಾಮಲಕ, ಗಂಧ ಪುಷ್ಪಾಕ್ಷತೆಗಳಿಂದ ಶಿವನ

ನ್ನಾರಾಧಿಸಬೇಕು. ಅನಂತರದಲ್ಲಿ ಪ್ರದೋಷಕಾಲದಲ್ಲಿ ಸ್ಥಾವರ ಲಿಂಗವನ್ನರ್ಚಿಸಬೇಕು. ಕೇಳು, ಜನಗಳಿರುವ ಸ್ಥಳದಲ್ಲಿಯಾಗಲಿ, ಜನರಹಿತವಾದ ಸ್ಥಳದಲ್ಲಿಯೇ ಆಗಲಿ, ಅರಣ್ಯದಲ್ಲಿಯಾಗಲಿ, ತಪೋವನದಲ್ಲಿಯಾಗಲಿ ಇರುವ ಲಿಂಗಮೂರ್ತಿಯನ್ನು ವಿಶೇಷ ಭಕ್ತಿಯಿಂದ ಪೂಜಿಸಬೇಕು. ತಪೋವನಲಿಂಗವನ್ನಾರಾಧಿಸುವುದರಿಂದುಂಟಾಗುವ ಫಲವು ಅವರ್ಣನೀಯವಾದುದು. ಆದುದರಿಂದ ಬುದ್ಧಿವಂತರು ತಪೋವನಲಿಂಗವನ್ನು ಪೂಜಿಸಬೇಕು. ಪೂಜಿಸುವುದಕ್ಕೆ ಮೊದಲು ನದಿಯಲ್ಲಿ ಸ್ನಾನಮಾಡಬೇಕು. ನದಿಗಳಲ್ಲಿ ಗಂಗಾನದಿಯು ಅತಿ ಶ್ರೇಷ್ಠವಾದುದು. ಈ ನದಿಯಲ್ಲಿ ಸ್ನಾನಮಾಡಿದರೆ ಸಕಲ ಪಾಪಗಳೂ ನಾಶವಾಗುವವು. ಇಂತು ಸ್ನಾನವನ್ನಾಚರಿಸಿ ಸಹಸ್ರ ದೀಪಗಳನ್ನು ಶಿವಲಿಂಗಕ್ಕರ್ಪಿಸಿ ಷೋಡಶೋಪಚಾರಗಳಿಂದ ಪೂಜಿಸಬೇಕು. ಪೂಜಾನಂತರದಲ್ಲಿ ಪರಶಿವನ ನೂರೆಂಟು ನಾಮಗಳನ್ನು ಹೇಳಿ ಸ್ತೋತ್ರಮಾಡುತ್ತಾ ನೂರೆಂಟು ಪ್ರದಕ್ಷಿಣ ನಮಸ್ಕಾರಗಳನ್ನು ಮಾಡಬೇಕು. ಆದುದರಿಂದೆಲೈ ಇಂದ್ರನೇ! ನೀನು ಈಪ್ರದೋಷ ವ್ರತವನ್ನಾಚರಿಸಿದ ಬಳಿಕ ವೃತ್ರನೊಡನೆ ಯುದ್ಧಮಾಡು. ಜಯಶೀಲನಾಗುವೆ. ಈ ವೃತ್ರಾಸುರನು ಸಾಮಾನ್ಯನಲ್ಲನು. ಹಿಂದೆ ಈತನು ಪರಶಿವನನ್ನು ಕುರಿತು ಗಂಧಮಾದನ ಪರ್ವತದಲ್ಲಿ ಘೋರವಾದ ತಪಸ್ಸನ್ನು ಮಾಡಿದನು. ಇವನು ಹಿಂದಿನ ಜನ್ಮದಲ್ಲಿ ಚಿತ್ರರಥನೆಂಬ ರಾಜನಾಗಿದ್ದನು. ಇವನು ತಪವನ್ನಾಚರಿಸಿದ ಸ್ಥಳಕ್ಕೆ ಚೈತ್ರವನವೆಂದು ಹೆಸರಾಯಿತು. ಈ ವನವು ಕೈಲಾಸಕ್ಕೆ ಸಮೀಪದಲ್ಲಿಯೇ ಇರುವುದು. ಈ ವನದಲ್ಲಿ ಷಡೂರ್ಮಿಗಳಿಲ್ಲವು. ಆದುದರಿಂದಲೇ ಮಂಗಳಕರವಾಗಿರುವುದು. ಬಳಿಕ ಶಂಕರನು ಚಿತ್ರರಥನ ತಪಸ್ಸಿಗೆ ಮೆಚ್ಚಿ ಇಷ್ಟಬಂದಂತೆ ಹೋಗಬಹುದಾಗಿರುವ ವಿಮಾನವನ್ನು ಕೊಟ್ಟನು. ಈ ವಿಮಾನದಲ್ಲಿ ಚಿತ್ರರಥನು ದೇಶದೇಶಗಳನ್ನು ಬೆಟ್ಟಗುಡ್ಡಗಳನ್ನೂ ಸುತ್ತುತ್ತಿದ್ದನು.

ಹೀಗಿರಲೊಂದುದಿನ ಆ ಚಿತ್ರರಥನು ಕೈಲಾಸಕ್ಕೆ ಬಂದನು. ಅಲ್ಲಿಯಾದರೋ ಅನೇಕ ಶಿವಗಣಗಳಿಂದತುಂಬಿದ ಸಭೆಯಲ್ಲಿ ಅರ್ಧಾಂ

ಗವನ್ನಲಂಕರಿಸಿದ ದೇವಿಯೊಂದಿಗೆ ಸುಖಾಸೀನನಾಗಿದ್ದ ಪರಶಿವನನ್ನು ಕಂಡನು. ಇಂತು ಕಂಡು ಶಂಕರನನ್ನು ಕುರಿತು 'ಎಲೈ ಮಹಾದೇವನೇ! ನಾವು ವಿಷಯಲಂಪಟರಾದರೂ ಲಜ್ಜೆಯಿಂದ ಸ್ತ್ರೀಸೇವನೆಯನ್ನು ಮಾಡುವುದಿಲ್ಲವು. ಇಂತಹುದರಲ್ಲಿ ದೇವ ವರೇಣ್ಯನಾದ ನೀನು ಸ್ತ್ರೀಯನ್ನು ಸೇವಿಸುತ್ತಿರುವೆಯಲ್ಲ!' ಎಂದನು. ಆಗ ಶಂಕರನು ಹಾಸ್ಯದಿಂದ 'ನಾನು ಕಾಲಕೂಟ ಮಹಾ ವಿಷವನ್ನು ಪಾನ ಮಾಡಿದೆನು. ಅದು ಇತರರಿಂದ ಸಾಧ್ಯವಾದುದಲ್ಲ. ಇಂತಹ ನನ್ನನ್ನು ಈ ಚಿತ್ರರಥನು ಹಾಸ್ಯಮಾಡುತ್ತಿರುವನಲ್ಲ' ಎಂದನು. ಪಾರ್ವತಿಯೂ ಸುಮ್ಮನಿರದೆ ಆ ಚಿತ್ರರಥನನ್ನು ಕುರಿತು 'ಎಲವೋ ಮೂಢನೇ! ನನ್ನೊಡನೆ ಕುಳಿತಿರುವ ಶಂಕರನನ್ನು ಹಾಸ್ಯಮಾಡಿದೆಯಲ್ಲವೆ? ನೀನು ಮಾಡಿದ ದುಷ್ಕರ್ಮಕ್ಕೆ ತಕ್ಕ ಫಲವನ್ನು ಅನುಭವಿಸುವೆ. ಚಿತ್ತ ಶುದ್ಧಿಯುಳ್ಳ ಸಾಧುಗಳನ್ನು ಹಾಸ್ಯಮಾಡುವವನು, ದೇವತೆಯಾಗಲಿ, ಮನುಷ್ಯನಾಗಲಿ ಅಂತಹವನು ಅಧಮನೆಂಬುದರಲ್ಲಿ ಸಂಶಯವಿಲ್ಲವು. ಎಲವೋ ದುರಾತ್ಮನೇ! ಮಹಾನುಭಾವರಾಗಿಯೂ, ವೇದಗರ್ಭರಾಗಿಯೂ ಇರುವ ಈ ಸನಕಾದಿಗಳು ಜ್ಞಾನವಿಲ್ಲದೆ, ಮೂಢರಾಗಿ ಶಂಕರನನ್ನು ಪೂಜಿಸುವರಲ್ಲವೆ? ನೀನೊಬ್ಬನೇ ಜ್ಞಾನಿಯಷ್ಟೆ. ಇಂತಹ ದುರಹಂಕಾರಿಯಾದ ನೀನು ದೈತ್ಯನಾಗು' ಎಂದು ಶಪಿಸಿದಳು. ತಕ್ಷಣದಲ್ಲಿಯೇ ಚಿತ್ರರಥನು ಭೂಮಿಗೆ ಬಿದ್ದನು. ಬಳಿಕ ಈತನು ವಿಶ್ವಕರ್ಮನ ತಪಶ್ಚರ್ಯೆಯಿಂದ ವೃತ್ರಾಸುರನಾಗಿ ಜನಿಸಿರುವನು. ನಾನು ಹೇಳಿದ ಪ್ರದೋಷ ವ್ರತವನ್ನು ಆಚರಿಸಿ, ಶಿವನನ್ನು ಸಂತೋಷಗೊಳಿಸಿ ಈ ದೈತ್ಯನನ್ನು ಕೊಲ್ಲುವವನಾಗು' ಇಂತೆಂದ ಗುರುವನ್ನು ಕುರಿತು ಇಂದ್ರನು 'ಗುರುವರ್ಯಾ! ಪ್ರದೋಷವ್ರತದ ಉದ್ಯಾಪನೆಯ ಕ್ರಮವನ್ನು ತಿಳಿಸುವವನಾಗು' ಎಂದು ಕೇಳಿದನು. ಆಗಲಾ ಬೃಹಸ್ಪತಿಯು ಹೇಳುತ್ತಾನೆ. 'ಬುದ್ಧಿಶಾಲಿಯಾದ ಇಂದ್ರನೇ! ಕೇಳು. ಕಾರ್ತೀಕ ಮಾಸದ ತ್ರಯೋದಶೀ ಶನಿವಾರದದಿನ ವ್ರತದಉದ್ಯಾಪನೆಯನ್ನು ಮಾಡಬೇಕು. ಈ ದಿನದಲ್ಲಿ ಬೆಳ್ಳಿಯಲ್ಲಿ ಪೀಠಸಹಿತವಾದ ವೃಷಭವನ್ನು ಮಾಡಿ, ಸುವರ್ಣದಿಂದ ಪಾರ್ವತೀ

ಸಮೇತನಾದ ಶಂಕರನನ್ನು ನಿರ್ಮಿಸಿ ಅದರಮೇಲಿಡಬೇಕು. ಬಳಿಕ ಬಿಲ್ವದಳಗಳಿಂದಾತನನ್ನು ಪೂಜಿಸಿ ವಸ್ತ್ರವನ್ನು ಹೊದಿಸಬೇಕು ಹೀಗೆ ಮಾಡಲು ಮೊದಲು ಪಂಚಾಮೃತ ಸ್ನಾನಮಾಡಿಸಬೇಕು. ಅನಂತರದಲ್ಲಿ ಜಾಗರಣೆಯನ್ನು ಮಾಡುತ್ತಾ ಅನೇಕ ವಿಧವಾಗಿ ಮುಕ್ಕಣ್ಣನಾದ ಶಂಕರನನ್ನು ಪೂಜಿಸಬೇಕು. ಜಾಗರಣೆಯನ್ನು ಮನೆಯಲ್ಲಿಯಾಗಲಿ, ದೇವಾಲಯದಲ್ಲಿಯೇ ಆಗಲಿ ಆಚರಿಸಬೇಕು. ಇಂತು ಆಚರಿಸಿದ್ದೇ ಆದಪಕ್ಷದಲ್ಲಿ ಉಮಾರಮಣನು ಪ್ರಸನ್ನನಾಗು ವನು.' ಎಂದು ನುಡಿದ ಗುರುವಿನ ಮಾತಿನಂತೆ, ಇಂದ್ರನು ಶನಿತ್ರ ಯೋದಶೀ ವ್ರತವನ್ನು ಆಚರಿಸಿದನು.

ಬಳಿಕ ಇಂದ್ರನು ಮಹಾ ತೇಜಸ್ವಿಯಾದ ವೃತ್ರಾಸುರನೊಂದಿಗೆ ಯುದ್ಧಮಾಡಲು ಪಕ್ರಮಿಸಿದನು. ಆಗ ದೇವದಾನವರಿಗೆ ಭಯಂಕ ರವಾದ ದ್ವಂದ್ವಯುದ್ಧವು ನಡೆಯಿತು. ಈ ಯುದ್ಧದಲ್ಲಿ ವ್ಯೋಮ ನು ಅತಿ ಕೋಪಿಷ್ಠನಾದ ಅಗ್ನಿಯೊಡನೆಯೂ, ಮಹಾದಂಷ್ಟ್ರನು, ವರುಣ ಮತ್ತು ವಾಯುವಿನೊಡನೆಯೂ ಯುದ್ಧಮಾಡಿದರು. ಆಗ ದೇವತೆಗಳು ಜಯಶೀಲರಾದರು. ದಾನವರು ದಿಕ್ಕೆಟ್ಟು ಓಡಲಾರಂ ಭಿಸಿದರು. ವೃತ್ರಾಸುರನು ಓಡಿಹೋಗುತ್ತಿರುವ ದಾನವರನ್ನು ಕುರಿತು ಹೇಳುತ್ತಾನೆ. 'ಎಲೈ ದಾನವರಿರಾ! ಅದ್ಭುತವಾದ ರಣಾಂ ಗಣವನ್ನು ಬಿಟ್ಟು ಪಲಾಯನ ಪರಾಯಣರಾದುದೇಕೆ? ಹೇಡಿಗಳಂತೆ ಓಡಿಹೋಗುವುದು ನಿಮ್ಮ ಧರ್ಮವಲ್ಲವು. ನಿಮ್ಮ ನಿಮ್ಮ ಪರಾಕ್ರ ಮವನ್ನು ತೋರಿಸಿರಿ. ಯುದ್ಧವನ್ನು ಮಾಡಲೇಬೇಕೆಂದು ನಿಶ್ಚಯಿ ಸಿಕೊಳ್ಳಿರಿ. ಗದೆಗಳಿಂದಲೂ, ಖಡ್ಗಗಳಿಂದಲೂ, ಶಕ್ತಿತೋಮರ ಮು ದ್ಗರಗಳಿಂದಲೂ ದೇವತೆಗಳನ್ನು ಕೊಂದು ನಲಿದಾಡಿರಿ.' ಎಂದ ವೃತ್ರಾಸುರನ ನುಡಿಗಳನ್ನು ಕೇಳಿ ಓಡಿಹೋಗುತ್ತಿದ್ದ ದೈತ್ಯರೆಲ್ಲರೂ ದೇವತೆಗಳೊಡನೆ ಯುದ್ಧಮಾಡಿದರು. ಆದರೆ ಅದು ಫಲಕಾರಿಯಾ ಗಲಿಲ್ಲವು. ಅನೇಕ ದೈತ್ಯರು, ವೃತ್ರಾಸುರನಿಂದ ತಮ್ಮ ಸೇನೆಯು ನಾಶವಾಗುತ್ತಿರುವುದನ್ನು ನೋಡಿ ಅತಿ ಚಿಂತಾನ್ವಿತರಾದರು. ಬಳಿಕ

ದಾನವರೆಲ್ಲರೂ ಭಯಗೊಂಡು ದೇವತೆಗಳನ್ನು ಎದುರಿಸಲಾರದೆ ಕಂಗೆಟ್ಟು ಓಡಲಾರಂಭಿಸಿದರು. ಆಗ ಮಹಾ ಬಲಶಾಲಿಯಾದ ವೃತ್ರಾಸುರನು ಅವರೆಲ್ಲರನ್ನೂ ಧಿಕ್ಕರಿಸಿ 'ಎಲೈ ಪುಲೋಮಂತನೇ ! ಮಹಾಭಾಗನಾದ ವೃಷಪರ್ವನೇ ! ಎಲೈ ಧೂಮ್ರಾಕ್ಷ, ಮಹಾಕಾಳ, ವೃಕಾಸುರಾದಿ ದೈತ್ಯರಿರಾ! ನಿಮಗೆ ನಮಸ್ಕಾರವು. ಅಯ್ಯಾ ಪರಾಕ್ರಮಿಗಳಿರಾ ! ಮನಸ್ವಿಗಳಾದ ಕ್ಷತ್ರಿಯರಿಗೆ ಸಿಗುವ ರಣಾಂಗಣವನ್ನೂ, ವೀರಸ್ವರ್ಗವನ್ನೂ ಬಿಟ್ಟು ಓಡಿಹೋಗುವಿರೇಕೆ ? ಯಾರು ಯುದ್ಧಾಂಗಣದಲ್ಲಿ ಮಡಿಯುತ್ತಾರೆಯೋ ಅಂತಹರು ಪರಮಪದವನ್ನೈದುವರು. ಬುದ್ಧಿಶಾಲಿಗಳಾಗಿಯೂ, ಪರಾಕ್ರಮಿಗಳಾಗಿಯೂ ಇರುವವರು ಅಂತು ಇಂತು ರಣಾಂಗಣದಲ್ಲಿಯೇ ಮರಣವನ್ನು ಬಯಸುವರು, ಕೇಳಿರೈ ! ಯಾರು ರಣಾಂಗಣವನ್ನು ಬಿಟ್ಟು ಓಡುತ್ತಾರೆಯೋ ಅಂತಹರು ಶಾಶ್ವತವಾದ ಘೋರ ನರಕವನ್ನು ಅನುಭವಿಸುತ್ತಾರೆ ಎಂಬುದರಲ್ಲಿ ಸಂಶಯವಿಲ್ಲವು. ಯಾರು ತಮಗೋಸುಗವಾಗಿಯಾಗಲಿ, ಬ್ರಾಹ್ಮಣನ ಪ್ರಯೋಜನಕ್ಕಾಗಲಿ, ತಮ್ಮ ಸೇವಕನಿಗಾಗಲಿ ಯುದ್ಧಮಾಡುತ್ತಾರೆಯೋ ಅವರು ಮಹಾ ಪಾತಕಿಗಳೆಂಬುದರಲ್ಲಿ ಸಂಶಯವಿಲ್ಲವು. ಯಾರು ಗೋವುಗಳಿಗೋಸುಗವೂ ತಮ್ಮ ಸ್ವಾಮಿಗೋಸುಗವೂ, ಸಾಯುತ್ತಾರೆಯೋ ಅವರು ಪುಣ್ಯಶಾಲಿಗಳಾಗುವರು. ತೀರ್ಥಸ್ನಾನ, ವೇದಾಧ್ಯಯನ, ಯಜ್ಞ, ದೇವತಾರ್ಚನಾದಿಗಳನ್ನು ಮಾಡಿದವರಿಗೂ ಇಂತಹ ಪರಮಪದವು ದೊರಕುವುದಿಲ್ಲ. ಇದನ್ನು ಸಕಲಶಾಸ್ತ್ರಗಳೂ ಸಾರುತ್ತಿರುವುವು. ಆದುದರಿಂದೆಲೈ ದಾನವರಿರಾ ! ನೀವು ಸ್ವಲ್ಪವೂ ಹಿಂಜರಿಯದೆ ಈ ದೇವತೆಗಳೊಡನೆ ಯುದ್ಧಮಾಡಿರಿ. ಹಿಂದೋಡಿದುದೇ ಆದರೆ, ಅಧರ್ಮಿಷ್ಠರೂ, ಬ್ರಹ್ಮಘಾತಿಗಳೂ, ಗುರುನಿಂದಾಪರರೂ ಯಾವ ನರಕವನ್ನನುಭವಿಸುವರೋ ಅದೇ ನರಕವನ್ನು ನೀವೂ ಅನುಭವಿಸುವಿರೆಂಬುದರಲ್ಲಿ ಸಂಶಯವಿಲ್ಲವು. ಆದುದರಿಂದ ನೀವೀಧರ್ಮವನ್ನರಿತು ಪರಾಕ್ರಮದಿಂದ ಯುದ್ಧಮಾಡಿರಿ.' ಇಂತು ನುಡಿದ ವೃತ್ರಾಸುರನ ಧರ್ಮಯುಕ್ತವಾದ ನುಡಿಗಳನ್ನು ಕೇಳಿ ದೈತ್ಯರೆಲ್ಲರೂ ಸಕಲ

ಲೋಕಗಳಿಗೂ ಭಯವನ್ನುಂಟುಮಾಡುವಂತೆ ಮಹಾ ಘೋರ ಯುದ್ಧವನ್ನು ಮಾಡಿದರು.

ಆಗ ವೃತ್ರಾಸುರನು ದೇವತೆಗಳಿಂದೊಡಗೂಡಿರುವ ಇಂದ್ರನನ್ನು ಕುರಿತು 'ಎಲೈ ಇಂದ್ರನೇ! ಕೇಳು; ಧರ್ಮಯುಕ್ತವಾದ ನನ್ನ ನುಡಿಗಳನ್ನು ಕೇಳು. ನೀನು ನನ್ನ ಅಣ್ಣನಾದ ವಿಶ್ವರೂಪನನ್ನು ಕೊಂದು ಅದರ ಫಲವನ್ನು ಆಗಲೇ ಹೊಂದಿರುವೆಯಷ್ಟೆ? ಯಾರು ಮೂಢರಾಗಿಯೂ, ಧರ್ಮ ಬಹಿಷ್ಕೃತರಾಗಿಯೂ, ಸಂಕಲ್ಪ ರಹಿತರಾಗಿಯೂ ಇಷ್ಟಸಿದ್ಧಿಯನ್ನು ಬಯಸುವರೋ ಅವರಿಗೆ ಎಂದೆಂದಿಗೂ ಇಷ್ಟಸಿದ್ಧಿಯಾಗಲಾರದು. ಚನ್ನಾಗಿ ಯೋಚಿಸು. ನೀನು ನನ್ನ ಭ್ರಾತೃ ಘಾತಿಯು. ಆದುದರಿಂದಲೇ ನಾನು ನಿನ್ನನ್ನು ಈ ಯುದ್ಧದಲ್ಲಿ ಕೊಲ್ಲುವೆನು. ಸ್ಥಿರವಾಗಿ ನಿಲ್ಲು. ಧರ್ಮ ಯುದ್ಧವನ್ನು ಮಾಡು. ಓಡಿಹೋಗಬೇಡ' ಎಂದನು. ಆಗ ಇಂದ್ರನು ಅತಿಯಾಗಿ ರೋಷಗೊಂಡು ಐರಾವತವನ್ನು ಹತ್ತಿಕೊಂಡು ವೃತ್ರಾಸುರನನ್ನು ಎದುರಿಸಿದನು. ಆ ಸಮಯದಲ್ಲಿ ವೃತ್ರಾಸುರನು 'ಅಯ್ಯಾ ದೇವೇಂದ್ರನೇ! ನೀನು ಮೊದಲು ನನ್ನನ್ನು ಹೊಡೆ. ಬಳಿಕ ನಾನು ನಿನ್ನನ್ನು ಘಾತಿಸುವೆನು' ಎಂದನು. ಆಗ ಇಂದ್ರನು ಕೋಪದಿಂದ ಕೆಂಡವಾಗಿ ಅದ್ಭುತವಾದ ಗದೆಯನ್ನು ತೆಗೆದುಕೊಂಡು ವೃತ್ರಾಸುರನನ್ನು ಹೊಡೆದನು. ವೃತ್ರಾಸುರನು ಆ ಗದೆಯನ್ನು ಲೀಲಾಜಾಲವಾಗಿ ಹಿಡಿದು ಅದರಿಂದಲೇ ಇಂದ್ರನನ್ನು ಹೊಡೆದನು. ಆ ಪೆಟ್ಟಿನಿಂದ ಇಂದ್ರನು ಗಜಸಮೇತನಾಗಿ ನೆಲಕ್ಕೆ ಬಿದ್ದನು. ದೇವೇಂದ್ರನು ನೆಲಕ್ಕೆ ಬಿದ್ದೊಡನೆಯೇ ವೃತ್ರಾಸುರನು ದೇವತೆಗಳೆಲ್ಲರನ್ನೂ ಕುರಿತು 'ಅಯ್ಯಾ ದೇವತೆಗಳಿರಾ! ನಿಮ್ಮ ಸ್ವಾಮಿಯಾದ ಇಂದ್ರನನ್ನು ಅಮರಾವತಿಗೆ ಕರೆದೊಯ್ಯಿರಿ' ಎಂದನು. ದೇವತೆಗಳು ಗಡಗಡನೆ ನಡುಗುತ್ತಾ ಇಂದ್ರನನ್ನೆತ್ತಿಕೊಂಡು ರಣಾಂಗಣವನ್ನು ಬಿಟ್ಟು ಅಮರಾವತಿಯನ್ನು ಸೇರಿದರು. ಆಗ ವೃತ್ರಾಸುರನು ಅದ್ಭುತವಾಗಿ ಕುಣಿಯಲಾರಂಭಿಸಿದನು. ಈ ಅಸುರನ

ಕುಣಿತದಿಂದ ಭೂಮಿಯು ನಡುಗಿತು. ಸ್ಥಾವರಜಂಗಮ ಪ್ರಪಂಚ ವೆಲ್ಲವೂ ಭಯಗೊಂಡಿತು. ಇತ್ತ ಬ್ರಹ್ಮನು ಇಂದ್ರನ ಪರಾಜಯವ ನ್ನರಿತು ಅಮರಾವತಿಗೆ ಬಂದನು. ಆಗ ಬ್ರಹ್ಮನು ತನ್ನ ಕಮಂಡ ಲೋದಕದಿಂದಾತನನ್ನು ಎಚ್ಚರಗೊಳಿಸಿದನು. ಬ್ರಹ್ಮನ ಅನುಗ್ರಹ ದಿಂದ ಚೇತರಿಸಿಕೊಂಡ ಇಂದ್ರನು ತನ್ನೆದುರಿನಲ್ಲಿಯೇ ನಿಂತಿದ್ದ ಬ್ರಹ್ಮ ನನ್ನು ನೋಡಿ ಲಜ್ಜಾನ್ವಿತನಾದನು. ಆಗ ಬ್ರಹ್ಮನು ಇಂದ್ರನನ್ನು ಸಂತೈಸಿ ಇಂತೆಂದು ನುಡಿದನು. 'ಅಯ್ಯಾ ಇಂದ್ರನೇ! ಕೇಳು. ಈ ವೃತ್ರಾಸುರನು ಬ್ರಹ್ಮಚರ್ಯಪರನು. ತಪಸ್ಸಿನಿಂದ ಜನಿಸಿರು ವವನು. ತಪಸ್ವಿಯಾದೀತನನ್ನು ತಪಸ್ಸಿನಿಂದಲೇ ಪರಾಜಿತನನ್ನಾಗಿ ಮಾಡಬೇಕೇ ಹೊರತು ಮತ್ತಾವುದರಿಂದಲೂ ಸಾಧ್ಯವಾಗಲಾರದು. ಆದುದರಿಂದ ನೀನೂ ಬ್ರಹ್ಮಚರ್ಯನಿಷ್ಠನಾಗಿ ತಪವನ್ನಾಚರಿಸು' ಎಂದು ನುಡಿದ ಬ್ರಹ್ಮನ ಮಾತಿನಂತೆ ಆ ಇಂದ್ರನು ಗುರುವಾದ ಬೃಹಸ್ಪತಿಗೆ ತಿಳಿಸದೆಯೇ, ಪರಶಿವನನ್ನು ಸ್ತುತಿ ವಚನಗಳಿಂದ ಸ್ತೋತ್ರ ಮಾಡಿದನು. ವಿಷಯಲಂಪಟನಾದ ಇಂದ್ರನು ಸ್ವಕಾರ್ಯ ಸಿದ್ಧಿಗಾಗಿಯಲ್ಲವೆ ಸ್ತುತಿಸಿದುದು. ರಾಗದ್ವೇಷಾದಿಗಳಿಂದ ಕೂಡಿ ದವರೂ, ಸಂಸಾರಾಸಕ್ತರೂ, ಶಿವಭಕ್ತರಾದರೂ ಪರಮೇಶ್ವರನ ಅನುಗ್ರಹಕ್ಕೆ ಪಾತ್ರರಾಗುವುದಿಲ್ಲವು. ನಿರ್ಮಲಚಿತ್ತವುಳ್ಳವರಾ ಗಿಯೂ, ಅಹಂಕಾರಶೂನ್ಯರಾಗಿಯೂ ಇರುವ ಭಕ್ತರಿಗೆ ಶಂಕರನು ಪ್ರಸನ್ನನಾಗುವನೆಂಬುದರಲ್ಲಿ ಸಂಶಯವಿಲ್ಲವು. ಇಂದ್ರನಾದರೋ, ರಾಗದ್ವೇಷಾದಿಗಳಿಂದ ಕೂಡಿದವನು. ಇಂತಹನು ಪರಶಿವನನ್ನು ಸ್ತುತಿಸಿದರೆ ಆತನು ಪ್ರಸನ್ನನಾಗುವನೇ? ಆಗಲೇ ಇಲ್ಲವು. ಸ್ವಕಾರ್ಯ ಧುರಂಧರನಾಗಿರುವ ಇಂದ್ರನು ಬಹಳವಾಗಿ ಸ್ತುತಿ ಸಲು, ಸಕಲವನ್ನೂ ಅರಿತ ಭೂತಭಾವನನಾದ ಪರಶಿವನು ಲಿಂಗ ರೂಪದಿಂದಲೇ ಇಂದ್ರನನ್ನು ಕುರಿತು 'ಎಲೈ ಇಂದ್ರನೇ! ಈ ವೃತ್ರಾಸುರನು ಹಿಂದೆ ಚಿತ್ರರಥನೆಂಬ ರಾಜನಾಗಿದ್ದನು. ಪಾರ್ವ ತಿಯ ಶಾಪದಿಂದ ಅಸುರ ಯೋನಿಯಲ್ಲಿ ಜನಿಸಿರುವನು. ಆದುದ ರಿಂದ ನೀನು ಈ ವೃತ್ರನನ್ನು ಕೊಲ್ಲಲು ತಪವನ್ನಾಚರಿಸು' ಎಂದನು.

ಬಳಿಕ ಇಂದ್ರನು ಶಿವನಾಜ್ಞೆಯಂತೆ ಸಮಯವನ್ನು ನಿರೀಕ್ಷಿಸುತ್ತ, ಆ ವೃತ್ರನ ಸಮೀಪದಲ್ಲಿಯೇ ಸಾವಿರ ವರ್ಷಗಳವರೆವಿಗೂ ನಿಯಮದಿಂದಿದ್ದನು. ಗುರುವಾದ ಬೃಹಸ್ಪತಿಯು ಇಂದ್ರಾಜ್ಞೆಯಿಂದ ವೃತ್ರ ವಧೆಗೆ ಸಮಯವನ್ನು ನಿರೀಕ್ಷಿಸುತ್ತಿದ್ದನು.

ಇಂತಿರಲೊಂದು ದಿನ ದಾನವಪುಂಗವನಾದ ವೃತ್ರಾಸುರನು ಆಕಸ್ಮಿಕವಾಗಿ ನರ್ಮದಾನದಿಯ ಬಳಿಗೆ ಬಂದನು. ದಾನವರೂ ಇವನನ್ನು ಹಿಂಬಾಲಿಸಿದರು. ಈ ವೃತ್ರನು 'ಇಂದ್ರನು ಸೋತು, ಅಮರಾವತಿಗೆ ಓಡಿದನು. ಇನ್ನು ನನ್ನನ್ನು ಜಯಿಸುವ ಧೀರ ನಾರು ? ನಾನೇ ಶೂರನೂ ವೀರನೂ ಆಗಿರುವೆನು' ಎಂದುಕೊಂಡು ಮೆರೆಯುತ್ತಿದ್ದನು. ಕೇಳಿರೈ ಋಷಿಗಳಿರಾ ! ವೃತ್ರಾಸುರನು ನರ್ಮದಾ ನದೀ ತೀರಕ್ಕೆ ಬಂದ ದಿನವು ಪ್ರದೋಷ ವ್ರತದ್ದಾಗಿದ್ದಿತು. ಇದೇ ಸಮಯವೆಂದರಿತು ದೇವೇಂದ್ರನು ಭಕ್ತಿಶ್ರದ್ಧಾದಿಗಳಿಂದ ಆ ನರ್ಮದಾ ನದೀ ತೀರದಲ್ಲಿದ್ದ ಓಂಕಾರೇಶ್ವರ ಲಿಂಗವನ್ನು ಪೂಜಿಸಿದನು. ಶನಿಪ್ರದೋಷವ್ರತ ಮಹಾತ್ಮ್ಯೆಯಿಂದಲೂ, ಶಂಕರನ ವರ ಪ್ರಸಾದದಿಂದಲೂ ಇಂದ್ರನು ಪರಾಕ್ರಮಶಾಲಿಯಾದನು. ಬಲಿಷ್ಠನಾದ ವೃತ್ರನಾದರೋ ವ್ರತವನ್ನಾಚರಿಸದೆ, ಶುಂಡನೆಂಬ ದೈತ್ಯನಿಂದ ಬೋಧಿಸಲ್ಪಟ್ಟವನಾಗಿ ನಿದ್ರಿಸಿದನು. ವೃತ್ರಾಸುರನು ಮಾಡಿದ್ದ ಪುಣ್ಯವೆಲ್ಲವೂ, ವ್ರತವನ್ನು ಆಚರಿಸದಿರುವುದರಿಂದ ನಿರ್ನಾಮವಾಯಿತು. ಇಷ್ಟೆಯಲ್ಲದೆ ಶಿವಸತಿಯಾದ ಶಾಂಭವಿಯ ಶಾಪದಿಂದ ವೃತ್ರಾಸುರನು ಭಗ್ನ ಮನೋರಥನಾದನು. ಇಂದ್ರನು ಈ ದೈತ್ಯನಿಂದ ಆಚರಿಸಿದುದನ್ನು ನೋಡಿ ಮೆಲ್ಲನೆ ಅವನೊಡನೆ ಯುದ್ಧ ಮಾಡಲು ಹೋದನು. ಆಗ ದೈತ್ಯರು ಇಂದ್ರನನ್ನು ನೋಡಿ ಅವನೊಡನೆ ಯುದ್ಧಮಾಡಲುಪಕ್ರಮಿಸಿದರು. ಬಳಿಕ ದೇವತೆಗಳೆಲ್ಲರೂ ಇಂದ್ರನಿಗೆ ಸಹಾಯಭೂತರಾದರು. ದೇವತೆಗಳಿಗೂ ದಾನವರಿಗೂ ಘೋರವಾದ ಯುದ್ಧವು ನಡೆಯಿತು. ಈ ದೇವದಾನವರ ಯುದ್ಧವು ಅತಿ ಭಯಂಕರವಾಗಿ ಅಂದಿನ ರಾತ್ರಿಯೇ ನಡೆಯಿತು. ಆಗ ದಾನವ

ಸಿಂಹನಾದ ವೃತ್ರಾಸುರನು ತೀಕ್ಷ್ಣವಾದ ತ್ರಿಶೂಲವನ್ನು ತೆಗೆದು ಕೊಂಡು ಇಂದ್ರನ ಮುಂಗಡೆ ಬಂದು ಅದ್ಭುತವಾಗಿ ಗರ್ಜಿಸಿದನು. ವೃತ್ರಾಸುರನ ಗರ್ಜನೆಯಿಂದ ಮೂರು ಲೋಕಗಳೂ ನಡುಗಿ ಹೋದವು. ಇಂದ್ರನಾದರೋ ಐರಾವತವನ್ನೇರಿಕೊಂಡು ಛತ್ರ ಚಾಮರಗಳಿಂದ ವೀಜಿತನಾಗಿ ಚಂದ್ರಮಂಡಲದಂತೆ ಶೋಭಿಸುತ್ತಾ ದೈತ್ಯ ಪುಂಗವನಾದ ವೃತ್ರಾಸುರನನ್ನು ನೋಡಿ, 'ಎಲೈ ವೃತ್ರಾಸು ರನೇ! ತಪೋಬಲದಿಂದ ಕೂಡಿ ಅಜೇಯನಾಗಿರುವೆನೆಂದು ಹಿಗ್ಗಿ ಮೆರೆಯಬೇಡ. ಈಗ ನನ್ನೊಡನೆ ಸ್ಥಿರವಾಗಿ ನಿಂತು ಯುದ್ಧಮಾಡು ಎಂದನು. ಇಂದ್ರನ ಮಾತನ್ನು ಕೇಳಿದ ವೃತ್ರಾಸುರನು 'ಎಲೈ ಇಂದ್ರನೇ! ಮೊದಲು ನೀನು ನನ್ನನ್ನು ಹೊಡೆ. ಅನಂತರದಲ್ಲಿ ನಾನು ನಿನ್ನನ್ನು ಘಾತಿಸುವೆನು.' ಎಂದನು. ಆಗ ಇಂದ್ರನು ತನ್ನ ವಜ್ರಾಯುಧದಿಂದ ವೃತ್ರನನ್ನು ಹೊಡೆದನು. ಪರಾಕ್ರಮಶಾಲಿ ಯಾದ ವೃತ್ರನು ಅದನ್ನು ನಿವಾರಿಸಿದನು. ಬಳಿಕ ಇಂದ್ರನು ಗುರು ಪ್ರೇರಣೆಯಿಂದ ಗದಾಯುಧವನ್ನು ತೆಗೆದು ಬಲವಾಗಿ ವೃತ್ರನಮೇಲೆ ಬೀಸಿದನು. ವೃತ್ರನು ಅದನ್ನು ಲೀಲಾಜಾಲವಾಗಿ ಹಿಡಿದುಕೊಂ ಡನು. ಆಗ ದೇವೇಂದ್ರನು ಅತಿ ಚಿಂತಾಸ್ಪಿತನಾದನು. ಈ ಪ್ರಕಾ ರವಾಗಿ ಚಿಂತಿಸುತ್ತಿರುವ ದೇವೇಂದ್ರನನ್ನು ವೃತ್ರಾಸುರನು ಗದುರಿ ಸುತ್ತಾ ನುಡಿದನದೆಂತೆನೆ: 'ಎಲೈ ದೇವೇಂದ್ರನೇ! ಹಿಂದೆ ನೀನು ಆಚರಿಸಿದ ಜಿಗುಪ್ಸೆಯನ್ನುಂಟುಮಾಡುವ ದುಷ್ಕರ್ಮವನ್ನು ಮರೆತು ಬಿಟ್ಟೆಯೋ? ಗೌತಮಋಷಿಯ ಶಾಪದಿಂದ ಸಹಸ್ರನೇತ್ರನಾದುದ್ದು ಮರೆತುಬಿಟ್ಟೆಯಲ್ಲವೇ? ಎಲವೋ ಇಂದ್ರನೇ! ಯಾರು ಶೂರರಾಗಿ ಇಂದ್ರಿಯ ಗ್ರಾಮಗಳನ್ನು ನಿಯಮವಾಗಿ ಇಟ್ಟುಕೊಂಡಿರುತ್ತಾ ರೆಯೋ, ಅಂತಹರೇ ಈ ಯುದ್ಧದಲ್ಲಿ ಜಯವನ್ನು ಹೊಂದುತ್ತಾರೆಯೇ ಹೊರ್ತು, ನಿನ್ನಂತಹ ಪಾಪಿಗಳು ಜಯವನ್ನು ಹೊಂದುವುದಿಲ್ಲ. ರಣಧೀರರಾದ ಪುಣ್ಯವಂತರಿಗೆ ರಣರಂಗವು ಆಟದ ಬಯಲಾಗಿರುತ್ತದೆ. ನಿನ್ನಂತಹ ಪಾಪಿಷ್ಟರಿಗೆ ಮಹಾ ಘೋರವಾಗಿ ಪರಿಣಮಿಸುವುದೆಂಬು ದರಲ್ಲಿ ಸಂಶಯವಿಲ್ಲವು.' ಎಂಬೀಪ್ರಕಾರವಾಗಿ ಗದುರಿಸುತ್ತಿರಲು

ದೇವೇಂದ್ರನು ತೀಕ್ಷ್ಣವಾಗಿಯೂ ಮಿಂಚಿಗೆ ಸಮನಾಗಿಯೂ ಇರುವ ತ್ರಿಶೂಲವನ್ನು ತೆಗೆದುಕೊಂಡು, ವೃತ್ರಾಸುರನನ್ನು ಹೊಡೆದನು. ಇಂತು ಇಂದ್ರನು ಮಹತ್ತರವಾದ ತ್ರಿಶೂಲದಿಂದ ಹೊಡೆಯಲು ಮಹಾದ್ಭುತ ಪರಾಕ್ರಮಶಾಲಿಯಾದ ವೃತ್ರಾಸುರನು ಪ್ರಳಯಕಾಲದ ರುದ್ರನಂತೆ ಕೋಪಗೊಂಡನು. ಆಗ ದೇವೇಂದ್ರನು ವೃತ್ರನನ್ನು ಕೊಲ್ಲಲು ಬಂದನು. ವೃತ್ರಾಸುರನು ತನ್ನನ್ನು ಕೊಲ್ಲಲು ಬರುತ್ತಿರುವ ಇಂದ್ರನನ್ನು ನೋಡಿ ಭಯಂಕರವಾಗಿ ಗರ್ಜಿಸಿದನು. ಇಂತು ಗರ್ಜಿಸಲು ಇಂದ್ರನೂ ಗಡಗಡನೆ ನಡುಗಿದನು. ಅನಂತರದಲ್ಲಿ ವೃತ್ರಾಸುರನು ತನ್ನ ಅಗಾಧವಾದ ಬಾಯನ್ನು ತೆಗೆದು ಇಂದ್ರನನ್ನು ನುಂಗಲು ಉದ್ಯುಕ್ತನಾಗಿ, ಐರಾವತದಿಂದಲೂ ವಜ್ರಾಯುಧದಿಂದಲೂ ಕಿರೀಟದಿಂದಲೂ ಕೂಡಿರುವ ಇಂದ್ರನನ್ನು ಕ್ಷಣಮಾತ್ರದಲ್ಲಿಯೇ ನುಂಗಿ, ಭಯಂಕರವಾಗಿ ಗರ್ಜಿಸುತ್ತಾ ಕುಣಿಯಲಾರಂಭಿಸಿದನು. ಆಗ ನೋಡುತ್ತಿರುವ ದೇವತೆಗಳೆಲ್ಲರೂ ಹಾ! ಹಾ! ಕಾರವನ್ನು ಮಾಡಿದರು. ಆ ಸಮಯದಲ್ಲಿ ಭೂಕಂಪವಾಯಿತು. ಸಹಸ್ರ ಸಂಖ್ಯಾಕವಾದ ಉಲ್ಕಗಳು ಉದುರಿದವು. ಜಂಗಮಸ್ಥಾವರ ಪ್ರಪಂಚವೆಲ್ಲವೂ ಕತ್ತಲಿಂದಾವರಿಸಲ್ಪಟ್ಟಿತು. ಇಂತು ಕುಣಿಯುತ್ತಲಿದ್ದ ವೃತ್ರಾಸುರನು ಅತಿಪ್ರಭಾಶಾಲಿಯಾದನು.

ಈ ಪ್ರಕಾರವಾಗಿ ವೃತ್ರಾಸುರನು ಇಂದ್ರನನ್ನು ನುಂಗಿದುದನ್ನು ತಿಳಿದ, ದೇವಬ್ರಾಹ್ಮಣರೆಲ್ಲರೂ ಬಂದು ಅವನಿಂದಾಚರಿಸಲ್ಪಟ್ಟ ಕಾರ್ಯಗಳನ್ನು ಬ್ರಹ್ಮನಲ್ಲಿ ಹೇಳಿದರು. ಬ್ರಹ್ಮನಾದರೋ ಇಂದ್ರನ ಅವಸ್ಥೆಯನ್ನು ಕೇಳಿ ವ್ಯಸನವನ್ನು ಹೊಂದಿ 'ಆಹಾ! ಮಹೇಂದ್ರನಿಗೆ ಅದ್ಭುತವಾದ ವ್ಯಸನವು ಹೇಗೆ ಸಂಭವಿಸಿತು' ಎಂದು ಯೋಚಿಸುತ್ತಾ ದೇವತೆಗಳಿಂದೊಡಗೂಡಿ ಶ್ರೇಷ್ಠವಾದ ತಪಸ್ಸಿನಿಂದ ಗಿರೀಶನಾದ ಪರಶಿವನನ್ನು ಸಂತೋಷಗೊಳಿಸಿ ಸ್ತುತಿಸಲಾರಂಭಿಸಿದನದೆಂತೆನೆ:—'ಎಲೈ ಬ್ರಹ್ಮ, ವಿಷ್ಣು, ಮಹೇಶ್ವರಾತ್ಮಕನಾದ ಲಿಂಗಮೂರ್ತಿಯೇ! ನಿನಗೆ ನಮಸ್ಕಾರವು! ವಿಶ್ವರೂಪನೇ, ದೇವನೆ,

ವಿರೂಪಾಕ್ಷನೇ! ನಿನಗೆ ಅನಂತ ನಮಸ್ಕಾರಗಳು. ಎಲೈ ಲೋಕೇಶನೆ ತ್ರಿಲೋಕೇಶನೆ! ವೃತ್ರಾಸುರನಿಂದ ನುಂಗಲ್ಪಟ್ಟ ದೇವೇಂದ್ರನನ್ನು ಕಾಪಾಡು! ಕಾಪಾಡು!' ಈ ಪ್ರಕಾರವಾಗಿ ಬ್ರಹ್ಮನು ಸ್ತುತಿಸು ತ್ತಿರಲು, ಆಕಾಶವಾಣಿಯು ಎಲ್ಲರಿಗೂ ಕೇಳಿಸುವಂತೆ ಸಕಲರಿಗೂ ಹಿತವನ್ನುಂಟುಮಾಡುವ ಲಿಂಗಪೂಜಾ ವಿಧಾನವನ್ನು ಹೇಳಲುಪಕ್ರ ಮಿಸಿ, ಇಂದ್ರನಿಂದ ಮಾಡಲ್ಪಟ್ಟ ಪ್ರದೋಷವ್ರತದಲ್ಲಿನ ದೋಷವನ್ನು ನುಡಿಯಿತು. 'ಎಲೈ ಬ್ರಹ್ಮಾದಿ ದೇವತೆಗಳಿರಾ! ಇಂದ್ರನು ಈಶ್ವರ ನನ್ನರ್ಚಿಸಿದ ನಿರ್ಮಾಲ್ಯವನ್ನು ಸದಾಶಿವನ ಪಾಣಿಪಟ್ಟವನ್ನು ಅವುಗಳ ನೆರಳನ್ನು ಪ್ರದಕ್ಷಿಣ ನಮಸ್ಕಾರವನ್ನು ಗೈಯ್ಯುವುದರಲ್ಲಿ ದಾಟಿ ಬಿಟ್ಟನು. ಹೀಗೆಯೇ ಯಾವ ಮೂಢರು ಶಿವಲಿಂಗದ ಪಾಣಿಪಟ್ಟದ ನೆರಳನ್ನಾಗಲಿ ನಿರ್ಮಾಲ್ಯವನ್ನಾಗಲಿ ದಾಟುತ್ತಾರೆಯೋ, ಅಂತಹರು ದಂಡಿಸಲ್ಪಡಬೇಕೆಂಬುದರಲ್ಲಿ ಸಂದೇಹವೇ ಇಲ್ಲವು. ಆದುದರಿಂದ ಎಲೈ ದೇವತೆಗಳಿರಾ! ಗಣಗಳಲ್ಲಿ ಮುಖ್ಯನಾದ ಚಂಡನಿಂದ ಹೇಳ ಲ್ಪಟ್ಟ ವಿಧಿಯಲ್ಲಿ ಪ್ರದಕ್ಷಿಣ ಪೂರ್ವಕವಾದ ಲಿಂಗಾರ್ಚನೆಯನ್ನು, ಶ್ರೇಯಸ್ಸನ್ನು ಪಡೆಯಬೇಕೆಂಬ ಬುದ್ಧಿಯಿಂದ, ಕಾರ್ಯ ದೀಕ್ಷಾ ಪರರಾದ ನೀವು ನಿತ್ಯವೂ ಸಕಲ ಪಾಪ ವಿನಾಶಾರ್ಥವಾಗಿ ಮಾಡ ಬೇಕು.' ಎಂದು ನುಡಿದ ಬಳಿಕ ಬ್ರಹ್ಮಾದಿದೇವತೆಗಳು ಮಂಗಳಕರ ವಾದ ಆಕಾಶವಾಣಿಯನ್ನು ಅಂಜಲಿಬದ್ಧರಾಗಿ ಕೇಳಿಕೊಂಡರು. 'ಎಲೌ ಮಂಗಳಕರಳೆ! ಲಿಂಗಾರ್ಚನೆಯನ್ನು ಮಾಡುವ ಕ್ರಮವು ಹೇಗೆ? ಸಾಯಂಕಾಲದಲ್ಲಿಯೂ ಮಧ್ಯಾಹ್ನಕಾಲದಲ್ಲಿಯೂ ಪರಶಿವ ಲಿಂಗವನ್ನು ಹೇಗೆ ಪೂಜಿಸಬೇಕು? ಮಧ್ಯಾಹ್ನ ಕಾಲದಲ್ಲಿಯೂ ಪ್ರಾತಃಕಾಲದಲ್ಲಿಯೂ, ಸಂಧ್ಯಾಕಾಲದಲ್ಲಿಯೂ ಯಾವ ಯಾವ ಪುಷ್ಪಗಳಿಂದ ಸದಾಶಿವ ಲಿಂಗವನ್ನರ್ಚಿಸಬೇಕು.' ಎಂದು ಬಿನ್ನವಿಸಿ ಕೊಂಡಾ ದೇವತೆಗಳನ್ನು ಕುರಿತು, ಆಕಾಶವಾಣಿಯು 'ಎಲೈ ದೇವತೆ ಗಳಿರಾ! ಕರವೀರ, ಅರ್ಕ, ಬೃಹತಿ, ದತ್ತೂರಿ, ಬಿಲ್ವಪತ್ರೆಯು, ಪುನ್ನಾಗ ಬಿಕುಳ, ನಾಗಕೇಸರ (ನಾಗಕನ್ನಿಕೆ ಹೂವು) ಬ್ರಹ್ಮೋತ್ಪಲ, ಕದಂಬ, ಮಂದಾರ ಇವೇ ಮೊದಲಾದವುಗಳೂ, ಸೂರ್ಯಕಾಂತಿ

ಪುಷ್ಪಗಳೂ, ಕಮಲಗಳೂ ಪ್ರಾತರ್ಮಧ್ಯಾಹ್ನ ಸಾಯಂಕಾಲಗಳ ಶಿವಪೂಜೆಗೆ ಯಾವಾಗಲೂ ಪವಿತ್ರಗಳಾದವುಗಳು. ಆಯ್ಯಾ ದೇವತೆಗಳಿರಾ; ಕೇಳಿರಿ! ಮಧ್ಯಾಹ್ನ ಕಾಲದ ಲಿಂಗಪೂಜೆಯಲ್ಲಿ ಜಾಜಿಯ ಹೂವನ್ನು ಮಲ್ಲಿಗೆಯ ಹೂವನ್ನು, ಮೋಗರಕ ನೀಲಪುಷ್ಪಗಳನ್ನೂ ಕುಟಜ, ಕರ್ಣಿಕಾರ ಕೌಸುಂಭ, ಕೆಂಪು ಕಮಲ ಇವೇ ಮೊದಲಾದವುಗಳಿಂದ ಪೂಜಿಸಬೇಕು. ಸಾಯಂಕಾಲದಲ್ಲಿ, ಮೋಗರಕ ಪುಷ್ಪಗಳಿಂದ ಮಾತ್ರವೇ ಪೂಜಿಸಬೇಕು. ಇಂತು ಅರ್ಚನ ಬೇಧಗಳನ್ನು ತಿಳಿದುಕೊಂಡು ಶಿವಪೂಜಾ ವಿಧಾನವನ್ನರಿತ ವಿಧಿಜ್ಞರು ಸದಾಕಾಲದಲ್ಲಿಯೂ ಪೂಜೆಯನ್ನು ಮಾಡಬೇಕು. ಯಾರಾದರೆ, ವೃಷಭವನ್ನಾಗಲಿ ಪೀಠಿಕಾಂತರಿತನಾಗಿಯೇ ಆಗಲಿ, ಪ್ರದಕ್ಷಿಣೆಯನ್ನು ಮಾಡುತ್ತಾನೆಯೋ, ಅವನು ನರಕವನ್ನನುಭವಿಸುವನು. ಎಲೈ ದೇವತೆಗಳಿರಾ! ಈ ಇಂದ್ರನಾದರೋ, ಶಿವಲಿಂಗಾರ್ಚನ ವಿಧಿಯಲ್ಲಿ ರಜೋಗುಣ ಯುಕ್ತನಾಗಿ ಮಾಡಬಾರದೆ ಇರುವ ರೀತಿಯಲ್ಲಿ ಪ್ರದಕ್ಷಿಣೆಯನ್ನು ಮಾಡಿದನು. ಆದುದರಿಂದಲೇ ಆ ಲಿಂಗಪೂಜೆಯು ವ್ಯರ್ಥವಾಯಿತು. ಲಿಂಗಪೂಜೆಯು ನಿಷ್ಫಲವಾದೊಡನೆಯೇ ವೃತ್ರಾಸುರನು ಗಜಸಹಿತನಾದ ಇಂದ್ರನನ್ನು ನುಂಗಿಬಿಟ್ಟನು. ಆದುದರಿಂದ ಎಲೈ ದೇವತೆಗಳಿರಾ! ಇಂದ್ರನು ಹೇಗೆ ಮುಕ್ತನಾಗಬೇಕೋ ಹಾಗೆ ಮಾಡಿರಿ. ಮಹಾ ರುದ್ರವನ್ನು ಪಠನ ಮಾಡುವದರಿಂದಲೂ, ಏಕಾದಶೀ ರುದ್ರಾಭಿಷೇಕದಿಂದ ಶಿವಲಿಂಗವನ್ನು ಅರ್ಚಿಸುವುದರಿಂದಲೂ ಇಂದ್ರನು ಬಿಡುಗಡೆಯಾಗುವನೆಂಬುದರಲ್ಲಿ ಸ್ವಲ್ಪವೂ ಸಂಶಯವಿಲ್ಲವು.' ಎಂದು ನುಡಿದ ಆಕಾಶವಾಣಿಯ ಮಾತುಗಳನ್ನು ಕೇಳಿ, ದೇವತೆಗಳು ಪ್ರಯತ್ನಪೂರ್ವಕವಾಗಿ ರುದ್ರ ಸೂಕ್ತಿಗಳಿಂದಲೂ, ಏಕಾದಶಿ ರುದ್ರಾಭಿಷೇಕದಿಂದಲೂ ಶಿವನನ್ನು ಅರ್ಚಿಸಿದರು. ಋಷಿಗಳಾದರೋ ಪ್ರತಿದಿನವೂ ದಶಾಂಶದಿಂದ ಹವನ ಹೋಮಾದಿಗಳನ್ನು ಮಾಡಿದರು. ಈ ಪ್ರಕಾರವಾಗಿ ದೇವತೆಗಳು, ಋಷಿಗಳು, ಜಪಗಳನ್ನು, ಶಿವಲಿಂಗ ಪೂಜೆಯನ್ನು, ಹವನ ಹೋಮಾದಿಗಳನ್ನು, ಇಂದ್ರನ ಬಿಡುಗಡೆಗಾಗಿ ಮಾಡಲು, ಮಹಾನುಭಾವನಾದ ಪರಶಿವನ ವರಪ್ರಸಾದದಿಂದ

ಇಂದ್ರನು ವೃತ್ರಾಸುರನ ಕುಕ್ಷಿಯನ್ನು ಸೀಳಿಕೊಂಡು ಈಚೆಗೆ
ಬಂದನು. ಇಂತು ಮಹೇಂದ್ರನು ಹೆಮ್ಮೆಯಿಂದ ಗಜವಜ್ರ, ಕಿರೀಟ
ಕುಂಡಲಗಳಿಂದಲೂ, ಸಂಪದ್ಯುಕ್ತನಾಗಿಯೂ ವೃತ್ರಾಸುರನ ಹೊಟ್ಟೆ
ಯಿಂದ ಈಚೆಗೆ ಬಂದುದನ್ನು ನೋಡಿ ದುಂದುಭಿಗಳೂ, ಅನೇಕ
ಶಂಖಗಳೂ ನಾದಿಸಲ್ಪಟ್ಟವು. ಗಂಧರ್ವ, ಅಪ್ಸರ, ಯಕ್ಷ, ಮತ್ತು
ಋಷಿಗಳೇ ಮೊದಲಾದವರೆಲ್ಲರೂ ಸಂತೋಷ ಭರಿತರಾದರು. ಇಷ್ಟೆ
ಯಲ್ಲದೆ ಇಂದ್ರನ ವಿಮೋಚನೆಯಾದ ಕ್ಷಣದಲ್ಲಿಯೇ ಸಕಲರಿಗೂ
ಮಹಾನಂದ ಉಂಟಾಯಿತು. ಆ ಬಳಿಕ ಇಂದ್ರಪತ್ನಿಯಾದ
ಶಚೀದೇವಿಯು ಇಂದ್ರ ವಿಮೋಚನೆಯಾದ ಸ್ಥಳಕ್ಕೆ ಬಂದವಳಾದಳು.
ಆಗಲಾ ಋಷಿಗಳೆಲ್ಲರೂ ಇಂದ್ರನಿಗೆ ಪುಣ್ಯಾಹವನ್ನುಮಾಡಿ ಶಚೀ
ದೇವಿಯೊಡನೆ ಪಟ್ಟಾಭಿಷೇಕ ಮಾಡಿದರು.

ಆಗ ಭೂಮಿಯು ಮಂಗಳಕರವಾಯಿತು. ಬ್ರಾಹ್ಮಣೋತ್ತ
ಮರೆಲ್ಲರೂ ಸಂತೋಷ ಭರಿತರಾದರು. ದಿಕ್ಕುಗಳೆಲ್ಲವೂ ಪ್ರಸನ್ನತೆ
ಯನ್ನು ಹೊಂದಿದವು. ಆಕಾಶವು ನಿರ್ಮಲವಾಯಿತು. ಅಗ್ನಿಗ
ಳೆಲ್ಲವೂ ಶಾಂತವಾದವು. (ಅಗ್ನಿಗಳಾವುವೆಂದರೆ ಗಾರ್ಹ್ಯಪತ್ಯ –
ಆಹವನೀಹ – ದಾಕ್ಷಿಣೇಯ) ಮಹಾತ್ಮರ ಮನಸಗಳೆಲ್ಲವೂ ಶಾಂತ
ಭಾವವನ್ನು ಹೊಂದಿದವು. ಇಂತು ಮಹೋತ್ಸವವು ನಡೆಯುತ್ತಿ
ರುವಲ್ಲಿ ಬ್ರಹ್ಮಹತ್ಯೆಯಿಂದಾವೃತವಾಗಿಯೂ ಪಾಪಿಷ್ಠವಾಗಿಯೂ
ಭಯಾನಕವಾಗಿಯೂ ಇರುವ ವೃತ್ರಾಸುರನ ದೇಹವು ಗಂಗಾ
ಯಮುನಾ ನದಿಗಳ ಮಧ್ಯ ಪ್ರದೇಶದಲ್ಲಿ ಬಿದ್ದಿದ್ದಿತು. ಈ ಸ್ಥಳಕ್ಕೆ
'ಅಂತರ್ವೇದೀ' ಎಂದು ಹೆಸರು. ಇತ್ತ ದೈತ್ಯರೆಲ್ಲರೂ ಪಾತಾಳ
ಲೋಕವಾಸಿಯಾದ ಬಲಿಯಲ್ಲಿಗೆ ಬಂದು ಇಂದ್ರ ವಿಜಯವನ್ನು ಬಿತ್ತ
ರಿಸಿದರು. ದೈತ್ಯರ ಬಿನ್ನಪವನ್ನು ಕೇಳಿ ಬಲಿಯು ಅತಿ ರೋಷಾನ್ವಿತ
ನಾಗಿ ತನ್ನ ಗುರುವಾದ ಶುಕ್ರನನ್ನು ಕುರಿತು ಇಂದ್ರನನ್ನು ಗೆಲ್ಲುವ
ಬಗೆ ಹೇಗೆಂದು ಕೇಳಿದನು. ಆಗ ಶುಕ್ರನು 'ಅಯ್ಯಾ ಬಲಿಯೇ!
ನೀನು ಒಂದು ರಥವನ್ನು ಪಡೆದ ಹೊರತು ಇಂದ್ರನನ್ನು ಜಯಿಸ

ಲಾಗದು. ಆದುದರಿಂದ ರಥಾರ್ಥವಾಗಿ ಮಹಾ ಯಜ್ಞವನ್ನು ಗೈಯ್ಯುವವನಾಗು. ಅದರಿಂದ ನಿನಗೆ ಜಯವುಂಟಾಗುವುದು ' ಎಂದು ಹೇಳಿದನು. ಭೃಗುಮಹರ್ಷಿಯೂ ಹಾಗೆಯೇ ಹೇಳಲು ಬಲಿಚಕ್ರವರ್ತಿಯು ಯಜ್ಞವನ್ನು ಮಾಡಲುದ್ಯುಕ್ತನಾಗಿ ಯಜ್ಞ ಯೋಗ್ಯಗಳಾದ ಯಾವ ಯಾವ ದ್ರವ್ಯಗಳಿರುವವೋ ಅವುಗಳನ್ನೆಲ್ಲ ವನ್ನೂ ಶೇಖರಿಸಿಕೊಂಡು ಜಾಗ್ರತೆಯಾಗಿ ಯಜ್ಞಮಾಡಲು ಉಪಕ್ರಮಿಸಿದನು. ದೈತ್ಯ ಗುರುವಾದ ಶುಕ್ರನು ಯಜ್ಞವನ್ನು ಮಾಡಿಸಿದನು. ದೀಕ್ಷಾಬದ್ಧನಾದ ಬಲಿಯು ಹವ್ಯವಾಹನನಲ್ಲಿ ಹೋಮಗೈದನು. ಇಂತು ಹೋಮಮಾಡುತ್ತಿರುವಲ್ಲಿ ಆ ಬಲಿಚಕ್ರವರ್ತಿಯು ಪರಮಾದ್ಭುತವಾದ ಶ್ವೇತವರ್ಣಗಳಾದ ಕುದುರೆಗಳಿಂದ ಕೂಡಿರುವುದಾಗಿಯೂ ಮಹಾ ಪ್ರಭಾಶಾಲಿಯಾದ ಸಿಂಹವನ್ನೊಳಗೊಂಡಿರುವ ಧ್ವಜ ಸಹಿತವಾಗಿಯೂ ಇರುವ ಶಸ್ತ್ರಾಸ್ತ್ರಗಳನ್ನೊಳಗೊಂಡಿರುವ ರಥವನ್ನು ಪಡೆದವನಾದನು. ಬಳಿಕ ಬಲಿಚಕ್ರವರ್ತಿಯು ಅಮೋಘವಾದ ಆ ರಥವನ್ನು ಪಡೆದವನಾಗಿ ಶುಕ್ರನಿಂದ ಪ್ರೇರೇಪಿಸಲ್ಪಟ್ಟು ಅವಭೃತ ಸ್ನಾನವನ್ನು ಮಾಡಿದನು. ಅನಂತರದಲ್ಲಿ ರಥವನ್ನು ಪೂಜಿಸಿ ದೈತ್ಯರಿಂದೊಡಗೂಡಿ ಇಂದ್ರನೊಡನೆ ಯುದ್ಧ ಮಾಡಲು ಸ್ವರ್ಗಕ್ಕೆ ಬಂದನು. ಆಗ ಅಮರಾವತೀ ಪಟ್ಟಣವು ದೈತ್ಯರಿಂದ ತುಂಬಿತು. ಇದನ್ನು ನೋಡಿ ದೇವತೆಗಳೆಲ್ಲರೂ ಚಿಂತಾಕ್ರಾಂತರಾಗಿ ಬೃಹಸ್ಪತಿಯನ್ನು ಕುರಿತು ' ಎಲೈ ಮಹಾ ಭಾಗ್ಯಶಾಲಿಯಾದ ಬೃಹಸ್ಪತಿಯೇ ! ಮಹಾ ಘೋರರಾಗಿಯೂ, ಯುದ್ಧ ವಿಶಾರದರಾಗಿಯೂ, ಇರುವ ದೈತ್ಯಶ್ರೇಷ್ಠರು ಯುದ್ಧಮಾಡಲಿಷ್ಟವುಳ್ಳವರಾಗಿ ಬಂದಿರುವರಲ್ಲ ! ' ಎಂದು ನುಡಿದರು. ಆಗ ಬೃಹಸ್ಪತಿಯು, ದೇವತೆಗಳನ್ನು ಕುರಿತು ' ಅಯ್ಯಾ ದೇವತೆಗಳಿರಾ ! ಈ ಬಲಿ ಮುಖ್ಯರಾದ ದೈತ್ಯರು ತಪಸ್ಸಿನಿಂದಲೂ ಪರಾಕ್ರಮದಿಂದಲೂ ಕೂಡಿರುವರು. ಅದೂ ಅಲ್ಲದೆ ಭೃಗುಮಹರ್ಷಿಯಿಂದ ಉಪದೇಶಿಸಲ್ಪಟ್ಟಿರುವರು. ಆದುದರಿಂದ ಇವರನ್ನು ಗೆಲ್ಲಲಸಾಧ್ಯವು' ಎಂದು ನುಡಿದನು. ಇಂತೆಂದು ನುಡಿದ ಬೃಹಸ್ಪತಿಯ ಮಾತುಗಳನ್ನು ಕೇಳಿ,

ದೇವತೆಗಳೆಲ್ಲರೂ ಲಜ್ಜಾನ್ವಿತರಾದರು. ಇಂದ್ರನಾದರೋ ಬುದ್ಧಿ ಶೂನ್ಯನಾಗಿ ಚಿಂತಿಸುತ್ತಾ ಕುಳಿತನು.

# ಅಧ್ಯಾಯ ೧೮

## ವಾಮನಾವತಾರ—

### ಬಲಿಯು ವಾಮನನಿಗೆ ಭೂದಾನ ಮಾಡುವುದು.

ಸೂತನು ಹೇಳುತ್ತಾನೆ:— ಕೇಳಿರೈ ಋಷಿಗಳಿರಾ! ಈ ಪ್ರಕಾರವಾಗಿ ಬಲಿಯು ಯಜ್ಞದಿಂದಲಭಿಸಿದ, ಅದ್ಭುತ ವಿಮಾನಾ ರೂಢನಾಗಿ ದೈತ್ಯಸೇನೆಗಳಿಂದ ಅಮರಾವತಿಗೆ ಬಂದಮೇಲೆ, ದೇವ ರಾಜನಾದ ಇಂದ್ರನು, ಗುರುವಾದ ಬೃಹಸ್ಪತಿಯನ್ನು ಕುರಿತು 'ಎಲೈ ಬೃಹಸ್ಪತಿಯೇ! ಈ ದೈತ್ಯರು ತಪಸ್ಸಿನಿಂದ ಅತಿ ಪರಾಕ್ರಮಿ ಗಳಾಗಿ ಗೆಲ್ಲಲಸಾಧ್ಯರಾಗಿರುವರೆಂದು ನುಡಿದೆಯಲ್ಲಾ! ಈಗ ಇವ ರೊಡನೆ ಯುದ್ಧಮಾಡದೆಯೇ ಕ್ಲೇಶದಿಂದ ತಪ್ಪಿಸಿಕೊಳ್ಳಲು ಏನು ಮಾಡಬೇಕೆಂಬುದನ್ನು ಹೇಳು' ಎಂದು ಕೇಳಿದನು. ಆಗ ಬೃಹ ಸ್ಪತಿಯು 'ಅಯ್ಯಾ ದೇವೇಂದ್ರನೇ! ಹಾಗೆ ಮಾಡಬೇಕಾದರೆ ಸಕುಟುಂಬ, ಸಪರಿವಾರದಿಂದೊಡಗೂಡಿ ನಾವೆಲ್ಲರೂ ಅಮರಾವತಿ ಯನ್ನು ಬಿಟ್ಟು ಇನ್ನೆಲ್ಲಿಗಾದರೂ ಹೊರಟು ಹೋಗಬೇಕು' ಎಂದು ಉತ್ತರವಿತ್ತನು. ಆಕ್ಷಣವೇ ಇಂದ್ರನು ಆಮೆಯ ರೂಪವನ್ನು ಧರಿಸಿ ಹೊರಟನು. ಯಮನು ಕಾಗೆಯಾಗಿಯೂ, ಕುಬೇರನು ಕೊಕ್ಕರೆ ಯಾಗಿಯೂ, ಅಗ್ನಿಯು ಪಾರಿವಾಳವಾಗಿಯೂ, ಈಶಾನ್ಯನು ಕಪ್ಪೆ ಯಾಗಿಯೂ, ನೈರುತ್ಯಿಯು ಕಪೋತನಾಗಿಯೂ, ವರುಣನು ಕಪಿಂಜ ಲನಾಗಿಯೂ ವಾಯುದೇವನು ಪಾರಿವಾಳನಾಗಿಯೂ ವೇಷಗಳನ್ನು ಧರಿಸಿಕೊಂಡು ಕಶ್ಯಪಾಶ್ರಮಕ್ಕೆ ಬಂದು ತಮ್ಮ ತಾಯಿಯಾದ ಅದಿತಿ ಯಲ್ಲಿ ತಮ್ಮ ದುಃಖವನ್ನು ಹೇಳಿಕೊಂಡು ದೈತ್ಯರು ಆಚರಿಸಿ ದ್ದೆಲ್ಲವನ್ನೂ ಬಣ್ಣಿಸಿದರು. ಆಗ ಅದಿತಿಯು ಪುತ್ರವಾತ್ಸಲ್ಯದಿಂದ ಅಪ್ರಿಯವಾದೀ ಸಮಾಚಾರವನ್ನು ಕೇಳಿ ಅತಿಯಾಗಿ ಖತಿಗೊಂಡು,

ತನ್ನ ಪತಿಯಾದ ಕಶ್ಯಪ ಬ್ರಹ್ಮನಲ್ಲಿಗೆ ಬಂದು ನುಡಿದಳೆಂತೆನೆ:—'ಎಲೈ ಕಶ್ಯಪ ಬ್ರಹ್ಮನೇ! ದೈತ್ಯರಿಂದ ಪರಾಜಿತರಾದ ನಿನ್ನ ಮಕ್ಕಳಾದೀ ದೇವತೆಗಳು ಅಮರಾವತೀ ಪಟ್ಟಣವನ್ನು ಬಿಟ್ಟು ನಿನ್ನ ಆಶ್ರಮಕ್ಕೆ ಬಂದಿರುವರು. ಇಂತು ಬಂದಿರುವ ನಿನ್ನ ಮಕ್ಕಳನ್ನು ಕಾಪಾಡು! ಕಾಪಾಡು!' ಇಂತು ನುಡಿದ ತನ್ನ ಸತಿಯನ್ನು ಕುರಿತು, ಕಶ್ಯಪ ಬ್ರಹ್ಮನು ಎಲೌ! ಮಂಗಳಕರಳೇ! ಈ ದೈತ್ಯರನ್ನು ಸಾಮಾನ್ಯ ವಾದ ತಪಸ್ಸಿನಿಂದ ಗೆಲ್ಲಲು ಸಾಧ್ಯವಲ್ಲ. ಅವರನ್ನು ಗೆಲ್ಲಬೇಕಾದರೆ ಉಗ್ರವಾದ ತಪಸ್ಸನ್ನೇ ಮಾಡಬೇಕು. ಆದುದರಿಂದೆಲೌ ಪತಿ ವ್ರತೆಯೇ! ಶೀಘ್ರವಾಗಿ, ದೇವತೆಗಳ ಕಾರ್ಯಸಿದ್ಧಿಗೋಸುಗ ಉಗ್ರ ವಾದ ತಪಸ್ಸನ್ನಾಚರಿಸುವವಳಾಗು.

ಎಲೌ ಮಹಾಭಾಗ್ಯಳೇ! ಕೇಳು! ವಿಷ್ಣುಪ್ರೀತ್ಯರ್ಥವಾಗಿ, ಭಾದ್ರಪದ ಮಾಸದಲ್ಲಿ ಏಕಾದಶೀ ವ್ರತವನ್ನು ಮಾಡಿ ಹನ್ನೆರಡು ತಿಂಗ ಳುಗಳಾದ ಮೇಲೆ ಭಕ್ತಿಯಿಂದ ಉದ್ಯಾಪನೆಯನ್ನು ಮಾಡುವವ ಳಾಗು. ಇದರಿಂದ ಶ್ರೀಮನ್ನಾರಾಯಣನು ಪ್ರಸನ್ನನಾಗುವನು. ಈ ವ್ರತವನ್ನು ನೀನು ಆಚರಿಸಿ ಕಾರ್ಯಸಿದ್ಧಿಯನ್ನು ಪಡೆ 'ಎಂದನು. ಆಗ ಅದಿತಿಯು ಏಕಾದಶೀ ವ್ರತವನ್ನು ಬಹಳ ಭಕ್ತಿಯಿಂದ ಆಚರಿಸಿದಳು. ವ್ರತದಿಂದ ಸಂತುಷ್ಟನಾದ ಮಹಾ ವಿಷ್ಣುವು, ವರ್ಷದ ಕೊನೆಯಲ್ಲಿ ಶ್ರವಣ ನಕ್ಷತ್ರಯುಕ್ತವಾದ ದ್ವಾದಶೀದಿನದಲ್ಲಿ ಅದಿತಿಗೆ ಪ್ರತ್ಯಕ್ಷ ನಾದನು. ಇಂತು ಪ್ರತ್ಯಕ್ಷನಾದ ವಟುರೂಪಧರನಾಗಿಯೂ ಕಮಲದ ಎಸಳಿನಂತೆ ಕಣ್ಣುಗಳುಳ್ಳವನಾಗಿಯೂ, 'ಅತಸೀ ಪುಷ್ಪ ದಂತೆ ಕಾಂತಿಯುಳ್ಳವನಾಗಿಯೂ, ದ್ವಿಭುಜಗಳನ್ನುಳ್ಳವನಾಗಿಯೂ ವನಮಾಲಾಧಾರಿಯಾಗಿಯೂ, ಲಕ್ಷ್ಮೀರಮಣನಾಗಿಯೂ ಇರುವ ಮಹಾ ವಿಷ್ಣುವನ್ನು ಕಂಡ ಅದಿತಿಯು ಗಂಡನಾದ 'ಕಶ್ಯಪ ನಿಂದೊಡಗೂಡಿ ಸ್ತುತಿಸಿದಳದೆಂತೆನೆ. 'ಎಲೈ ಮಹಾ ವಿಷ್ಣುವೇ! ಕಾರಣಗಳಿಗೆಲ್ಲಾ ಕಾರಣನಾದ ನಿನಗೆ ನಮಸ್ಕಾರವು! ವಿಶ್ವಾತ್ಮ ನಾಗಿಯೂ, ವಿಶ್ವವನ್ನೆಲ್ಲವನ್ನೂ ಸೃಜಿಸುವವನಾಗಿಯೂ, ಚಿದಾತ್ಮ ನಾಗಿಯೂ ಇರುವ ನಿನಗೆ ನಮಸ್ಕಾರವು! ವರೇಣ್ಯರೂಪನಾಗಿಯೂ,

ಪರಾತ್ಪರನಾಗಿಯೂ ಶ್ರೇಷ್ಠವಾದ ಆತ್ಮಸ್ವರೂಪನಾಗಿಯೂ ಇರುವ, ನಿನಗೆ ಅನಂತ ನಮಸ್ಕಾರಗಳು! ಎಲೈ ದೇವನೆ! ಸರ್ವವನ್ನೂ ತಿಳಿದ ನಿನಗೆ ನಮಸ್ಕಾರವು.' ಇಂತು ಅತಿ ಭಕ್ತಿಯಿಂದ ಪ್ರಾರ್ಥಿಸಿದ ಅದಿತಿಯನ್ನು ಕುರಿತು ಮಹಾ ವಿಷ್ಣುವು ನಸುನಗುತ್ತಾ, 'ಎಲೌ! ಅದಿತಿಯೇ! ನಿನ್ನ ತಪಸ್ಸಿಗೆ ಮೆಚ್ಚಿ, ಇದಿಗೋ ಈ ರೂಪದಿಂದ, ಪ್ರಸನ್ನನಾಗಿರುವೆನು' ಎಂದನು. ಆಗ ಅದಿತಿಯು ಆತನನ್ನು ಕುರಿತು 'ಎಲೈ ದೇವನೆ! ಕೇಳು; ದೇವತೆಗಳೆಲ್ಲರೂ, ಮಹಾ ಬಲ ಶಾಲಿಗಳಾದ ದಾನವರಿಂದ ಸೋಲಿಸಲ್ಪಟ್ಟಿರುವರು. ಎಲೈ ಜನಾ ರ್ದನನೇ! ಶರಣುಹೊಕ್ಕಿರುವ ಅವರನ್ನು ಕಾಪಾಡು' ಎಂದು ಬೇಡಿ ಕೊಂಡಳು.

ಹೀಗೆಂದು ಬೇಡಿಕೊಂಡ ಅದಿತಿಯ ಬಿನ್ನಪವನ್ನು ಕೇಳಿ ವಿಷ್ಣುವು, ದೇವತೆಗಳು ಮಾಡಿದ ಕಾರ್ಯಗಳನ್ನೂ ಬಲಿಯೇ ಮೊದ ಲಾದ, ದಾನವರು ಆಚರಿಸಿದ ಕಾರ್ಯವನ್ನೂ ತಿಳಿದು ದೇವತೆಗಳು ಹೇಗೆ ಜಯಶಾಲಿಗಳಾಗುವರು? ದಾನವರು ಹೇಗೆ ಪರಾಜಿತರಾಗು ವರು? ಎಂದು ಯೋಚಿಸಿ ತನ್ನ ಗದೆಯನ್ನು ಕುರಿತು 'ಎಲೈ ಮಹಾ ಭಾಗ್ಯಳೇ! ಹೋಗು. ಹೋಗಿ ಜಾಗ್ರತೆಯಾಗಿ ಆ ವಿರೋಚನ ಪುತ್ರ ನಾದ ಬಲಿಯನ್ನು ಕೊಂದು ಬಾ' ಎಂದು ಆಜ್ಞಾಪಿಸಿದನು. ಆಗ ಗದೆಯು ಎಲೈ ಸ್ವಾಮಿಯೇ! ಮಹಾತ್ಮನಾದ ಈ ಬಲಿಯು ಬ್ರಾಹ್ಮ ಣ್ಯನಲ್ಲವೆ? ಆದುದರಿಂದ ನಾನಿವನನ್ನು ಕೊಲ್ಲಲು ಅಶಕ್ಯಳಾಗಿ ರುವೆನು.' ಎಂದು ನುಡಿಯಿತು. ಆಗಲಾ ಮಧುಸೂದನನು ತನ್ನ ಸುದರ್ಶನ ಚಕ್ರವನ್ನು ಕುರಿತು 'ಎಲೈ! ಸುದರ್ಶನನೇ! ಜಾಗ್ರತೆ ಯಾಗಿ ಹೋಗಿ ಬಲಿಯನ್ನು ಕೊಂದು ಬಾ' ಎಂದು ಹೇಳಲು, ಸುದರ್ಶನ ಚಕ್ರವು 'ಎಲೈ ಪ್ರಭುವೆ! ನೀನು ಹೇಗೆ ಬ್ರಾಹ್ಮಣ್ಯನೋ ಹಾಗೆಯೇ ಈ ದಾನವ ಶ್ರೇಷ್ಠನಾದ ಬಲಿಯೂ ಬ್ರಾಹ್ಮಣ್ಯನೆಂಬು ದರಲ್ಲಿ ಸಂಶಯವಿಲ್ಲವು. ಆದುದರಿಂದ ಈತನನ್ನು ಕೊಲ್ಲಲು ನನ್ನಿಂದ ಆಗುವದಿಲ್ಲ' ಎಂದು ನುಡಿಯಿತು. ಅನಂತರದಲ್ಲಿ ಮಹಾ ವಿಷ್ಣುವು ತನ್ನ ಶಾರ್ಙ್ಗವೆಂಬ ಧನುಸ್ಸಿಗೆ ಆಜ್ಞಾಪಿಸಲು, ಆ ಶಾರ್ಙ್ಗಧನಸ್ಸೂ

ಬಲಿಯನ್ನು ಕೊಲ್ಲಲು ಹಿಂಜರಿಯಿತು. ಆಗಲಾವಿಷ್ಣುವು ಆಶ್ಚರ್ಯ ಪಟ್ಟವನಾಗಿ ಬಹಳವಾಗಿ ಚಿಂತಿಸಿದನು. ಎಂದು ಸೂತನು ನುಡಿಯಲು, ಶೌನಕಾದಿ ಮಹರ್ಷಿಗಳ ಗುಂಪಿನಲ್ಲಿದ್ದ ಅತ್ರಿಮುನಿಯು ಆತನನ್ನು ಕುರಿತು 'ಅಯ್ಯಾ! ಸೂತ ಮಹರ್ಷಿಯೇ! ಆಗ ದಾನವರೇನು ಮಾಡುತ್ತಿದ್ದರು' ಎಂದು ಪ್ರಶ್ನಿಸಿದನು. ಸೂತನು ಹೇಳುತ್ತಾನೆ. ಕೇಳಿರೈ ಋಷಿಗಳಿರಾ! ಬಳಿಕ ಬಲಿಯೇ ಮೊದಲಾದ ದಾನವರೆಲ್ಲರೂ ದೇವೇಂದ್ರನೊಡನೆ ಯುದ್ಧಮಾಡಲಿಷ್ಟವುಳ್ಳವರಾಗಿ ಸ್ವರ್ಗದಿಂದ ಅಮರಾವತೀ ಪಟ್ಟಣಕ್ಕೆ ಹೋಗಿ ರಮ್ಯವಾದಾಪಟ್ಟಣದಲ್ಲಿ ಗರ್ಜಿಸಲಾರಂಭಿಸಿದರು. ಈ ಬಲಿಯೇ ಮೊದಲಾದವರು ಇಂದ್ರಾದಿ ದೇವತೆಗಳು ನಾನಾ ರೂಪಧಾರಿಗಳಾಗಿ ಅಮರಾವತಿಯನ್ನು ಬಿಟ್ಟು ಕಶ್ಯಪಾಶ್ರಮಕ್ಕೆ ತೆರಳಿರುವರೆಂಬ ವಿಷಯವನ್ನರಿಯರು. ಆ ಬಳಿಕ ದಾನವರೆಲ್ಲರೂ ಪಟ್ಟಣದ ಪ್ರಾಕಾರವನ್ನು ಹತ್ತಿ ಇಂದ್ರನನ್ನು ಕೊಲ್ಲಬೇಕೆಂದು ಪ್ರವೇಶಮಾಡಲು, ಅಮರಾವತೀ ಪಟ್ಟಣವು ಶೂನ್ಯವಾಗಿರುವುದನ್ನು ಕಂಡರು. ಈ ಪ್ರಕಾರವಾಗಿ ಶೂನ್ಯವಾಗಿದ್ದ ಅಮರಾವತಿಯನ್ನು ನೋಡಿ ಅತಿ ಸಂತಸಗೊಂಡರು. ಆಗ ಇಂದ್ರಾಸನದಲ್ಲಿ ಬಲಿಯು ದೈತ್ಯ ಗುರುವಾದ ಶುಕ್ರನಿಂದ ಪಟ್ಟಾಭಿಷಿಕ್ತನಾದನು. ಈ ಪ್ರಕಾರವಾಗಿ ಬಲಿಯು ಅಮರಾವತೀ ರಾಜನಾಗಿ, ನಾಗರಿಂದಲೂ, ಅಸುರ ಸಮೂಹಗಳಿಂದಲೂ ಸೇವಿಸಲ್ಪಟ್ಟವನಾಗಿ ಮಹೇಂದ್ರನಂತೆ ಪರಮ ವೈಭವದಿಂದ ಪ್ರಕಾಶಿಸಿದನು. ಮಹಾತ್ಮನಾದೀ ಬಲಿಯು, ಸಕಲ ಭೂತಗಳಿಗೂ ದಾನದಾತನಾದನು. ಯಾಚಕರು ಯಾವುದನ್ನು ಬಯಸುವರೋ ಆ ಬಯಕೆಗಳನ್ನೆಲ್ಲವನ್ನೂ ಪೂರೈಸುತ್ತಿದ್ದನು. ಎಂದು ನುಡಿದ ಸೂತನನ್ನು ಕುರಿತು ಶೌನಕಾದಿ ಮಹರ್ಷಿಗಳು 'ಎಲೈ ಮಹಾ ಭಾಗನಾದ ಸೂತನೇ! ದೇವೇಂದ್ರನು ಯಾರಿಗೂ ಯಾವಾಗಲೂ ದಾನಮಾಡುತ್ತಿರಲಿಲ್ಲವಲ್ಲಾ? ಈ ಬಲಿಯು ದಾನದಾತನಾದುದು ಹೇಗೆಂಬುದನ್ನು ವಿವರವಾಗಿ ಹೇಳು' ಎಂದು ಕೇಳಲು, ಸೂತನು ಹೇಳುತ್ತಾನೆ : ಕೇಳಿರೈ ಋಷಿಗಳಿರಾ! ಮನುಜರು

ಪ್ರಯತ್ನಪೂರ್ವಕವಾಗಿ ಸ್ವಲ್ಪವಾದ ಪುಣ್ಯವನ್ನು ಮಾಡಿದರೂ, ಅದು ಪುಣ್ಯವೇ ಆಗಿರಲಿ, ಪಾಪವೇ ಆಗಿರಲಿ ಶುಭವಾದುದೇ ಆಗಿರಲಿ, ಅಶುಭವಾದುದೇ ಆಗಲಿ ಅದನ್ನು ಮಹತ್ತರವೆಂದು ಪ್ರಾಜ್ಞರು ತಿಳಿಯತಕ್ಕದ್ದು. ಇಂದ್ರನಾದರೋ ಕೇವಲ ಭೋಗದಲ್ಲಾಸಕ್ತನಾಗಿ ನೂರು ಅಶ್ವಮೇಧ ಯಾಗಗಳನ್ನು ಮಾಡಿ ಅಮರಾವತೀ ರಾಜ್ಯವನ್ನು ಪಡೆದನು. ದೇವೇಂದ್ರನು ಕೇವಲ ಆ ನೂರು ಅಶ್ವಮೇಧ ಯಾಗಗಳ ಪುಣ್ಯಫಲವನ್ನು ಹೊಂದಿದನೆಂದು ತಿಳಿಯಿರಿ. ಈ ಪುಣ್ಯಫಲವು ನಶಿಸಿಹೋದೊಡನೆಯೇ ಭೂಮಿಗಿಳಿಯುವನು. ಆದರೆ ದಾನಶೀಲರಿಗೆ ಪುನರಾವೃತ್ತಿರಹಿತವಾದ ಸ್ವರ್ಗವು ಲಭಿಸುವುದು. ಆದುದರಿಂದ ದಾನಕ್ಕಿಂತಲೂ ಪ್ರಪಂಚದಲ್ಲಿ ಇನ್ನಾವುದೂ ಹೆಚ್ಚಿನದಿಲ್ಲ. ಈ ದಾನದಿಂದಲೇ ಸಂಸಾರಬಂಧನವಿಮೋಚನೆಯಾಗುವುದು. ದಾನಮಾಡುವುದರಿಂದ ಜ್ಞಾನ ಉಂಟಾಗುವುದು. ಜ್ಞಾನದಿಂದ ಮೋಕ್ಷವು ದೊರಕುವುದೆಂಬುದರಲ್ಲಿ ಸಂಶಯವಿಲ್ಲ. ಮೋಕ್ಷವು ದೊರಕಿದಮೇಲೆ ಸದಾಶಿವನಲ್ಲಿ ಭಕ್ತಿಯುಂಟಾಗುವುದು. ಪ್ರಸನ್ನಾತ್ಮನಾದ ಸದಾಶಿವನು ಎಲ್ಲವನ್ನೂ ಕೊಡುವನು. ಜಗದೇಕಬಂಧುವಾದ ಶಂಭುವು ಸ್ವಲ್ಪವಾದ ಸೇವೆಯಿಂದಲೇ ಸಂತುಷ್ಟನಾಗುವನು. ಎಲೈ ಋಷಿಗಳಿರಾ! ಕೇಳಿರಿ ಇದಕ್ಕೊಂದು ಇತಿಹಾಸವನ್ನು ಹೇಳುವೆನು.

ಕಳ್ಳನಾಗಿಯೂ, ಮಹಾ ಪಾಪಿಷ್ಠನಾಗಿಯೂ, ದೇವಬ್ರಾಹ್ಮಣರನ್ನು ನಿಂದಿಸುವವನಾಗಿಯೂ, ಪರರ ಹೆಂಡರಲ್ಲಿ ಆಶೆಯುಳ್ಳವನಾಗಿಯೂ ಇದ್ದ ಒಬ್ಬ ಕಳ್ಳನಿದ್ದನು. ಒಂದಾನೊಂದುದಿನ ಪಾಪಿಯಾದ ಕಳ್ಳನು ಮೋಸದಿಂದಲೂ, ಪಾಪಕಾರ್ಯಗಳಿಂದಲೂ ಹಣವನ್ನು ಸಂಪಾದಿಸಿದನು. ಆ ಬಳಿಕ ವೇಶ್ಯೆಯಬಳಿಗೆ ಹೋಗುವುದಕ್ಕೆ, ಹೂವು, ಗಂಧ, ತಾಂಬೂಲಾದಿಗಳನ್ನು ತೆಗೆದುಕೊಂಡವನಾದನು. ಈ ಕಳ್ಳನು ವಸ್ತ್ರಹೀನನಾಗಿ ಒಂದು ಕೌಪೀನವನ್ನು ಮಾತ್ರ ಧರಿಸಿದ್ದರೂ ಕಾಣುತ್ತಿದ್ದನು. ತನ್ನ ಕೈಯಲ್ಲಿ ತಾನು ತಂದಿದ್ದ ಹೂವು,

ಗಂಧ, ತಾಂಬೂಲಾದಿಗಳನ್ನು ಹಿಡಿದುಕೊಂಡವನಾಗಿ ವೇಶ್ಯೆಯ ಮನೆಯನ್ನು ಕುರಿತು ಓಡಲು ತಕ್ಷಣದಲ್ಲಿಯೇ ಎಡವಿಬಿದ್ದನು. ಇಂತು ಬಿದ್ದೊಡನೆಯೇ ದುಃಖದಿಂದ ಕೂಡಿದವನಾಗಿ ಮೂರ್ಛಾಕ್ರಾಂತನಾದನು. ಭೂಮಿಗೆ ಬಿದ್ದೊಡನೆಯೇ ಕಳ್ಳನಿಗೆ ಪೂರ್ವ ಸುಕೃತದಿಂದ ಬುದ್ಧಿಯು ಹುಟ್ಟಿತು. ಆಗಲಾ ಕಳ್ಳನು ಬಹಳವಾಗಿ ದುಃಖಿಸಿ ವೈರಾಗ್ಯವನ್ನು ಹೊಂದಿದನು. ಅನಂತರದಲ್ಲಿ ಭೂಮಿಯಲ್ಲಿ ಬಿದ್ದಿದ್ದ ಹೂ, ಗಂಧ, ತಾಂಬೂಲಾದಿಗಳನ್ನು ನೋಡಿ ಶಿವಾರ್ಪಣವೆಂದು ನುಡಿದನು. ಸ್ವಲ್ಪ ಹೊತ್ತಾದ ಬಳಿಕ ಅವನು ಮೃತನಾದನು. ಆಗ ಯಮಭಟರು, ಅವನನ್ನು ಯಮಾಲಯಕ್ಕೆ ಕರೆತಂದರು. ಲೋಕ ಭಯಂಕರನಾದ ಯಮನು ಈ ಕಳ್ಳನನ್ನು ನೋಡಿ 'ಎಲವೋ! ನೀನು ಮಹಾ ಪಾಪಿಯು! ಮಂದಬುದ್ಧಿಯುಳ್ಳವನು! ನಿನ್ನನ್ನು ಮಹತ್ತರವಾದ ನರಕಗಳಲ್ಲಿ ಬೇಯಿಸುತ್ತೇನೆ,' ಎಂದು ನುಡಿಯಲು, ಆ ಕಳ್ಳನು ಯಮಧರ್ಮರಾಜನ ಮಾತುಗಳನ್ನು ಕೇಳಿ 'ಎಲೈ ಪ್ರಭುವೆ! ನಾನಾವುದೊಂದು, ಪಾಪಕೆಲಸಗಳನ್ನೂ ಮಾಡಿದವನಲ್ಲ. ನನ್ನ ಸುಕೃತಗಳನ್ನು ಯಥಾವಿಧಿಯಾಗಿ ವಿಮರ್ಶನೆ ಮಾಡುವವನಾಗು.' ಎಂದು ನುಡಿದನು. ಆ ಕಳ್ಳನ ಮಾತನ್ನು ಕೇಳಿ ಅಲ್ಲಿಯೇ ನಿಂತಿದ್ದ ಚಿತ್ರಗುಪ್ತನು ಅವನನ್ನು ಕುರಿತು 'ಎಲೈ ನರನೇ! ನೀನು ಭೂಮಿಗೆ ಬಿದ್ದಾಗ ಪ್ರಾಣಪ್ರಯಾಣ ಸಮಯದಲ್ಲಿ ಪರಶಿವನಿಗೋಸುಗ ಹೂ, ಗಂಧ, ತಾಂಬೂಲಾದಿಗಳನ್ನರ್ಪಿಸಿರುವೆ. ಈ ಕರ್ಮ ವಿಪಾಕದಿಂದ ನೀನು ಮೂರು ಘಳಿಗೆಗಳ ವರೆವಿಗೂ ಇಂದ್ರ ಪದವಿಯನ್ನು ಹೊಂದುವೆ.' ಎಂದನು. ಬಳಿಕ ಕಳ್ಳನು ದೇವೇಂದ್ರನ ಅರಮನೆಗೆ ಕರೆತರಲ್ಪಟ್ಟನು. ಆಗಲಾ ಬೃಹಸ್ಪತಿಯು ಇಂದ್ರನನ್ನು ಕುರಿತು 'ಎಲೈ ಇಂದ್ರನೆ! ನನ್ನ ಆಜ್ಞಾನುಸಾರವಾಗಿ, ಈ ಕಳ್ಳನು ನಿನ್ನ ಸಿಂಹಾಸನದಲ್ಲಿ ಮೂರು ಘಳಿಗೆಗಳ ಕಾಲ ಇರತಕ್ಕವನು' ಎಂದನು. ಗುರುವಚನದಂತೆ ಇಂದ್ರನು ಸಿಂಹಾಸನವನ್ನು ಕಳ್ಳನಿಗೆ ಬಿಟ್ಟುಕೊಟ್ಟನು. ಬಳಿಕ ಇಂದ್ರಪದವಿಯಲ್ಲಿ ಅಭಿಷಿಕ್ತನಾಗಿ ಇಂದ್ರಾಸನದಲ್ಲಿ ಕುಳಿತಿರುವ ಕಳ್ಳನನ್ನು

ಕುರಿತು ನಾರದನು 'ಎಲೈ ಇಂದ್ರನೇ! ಶುಭಕರವಾದ ಈ ರಾಜಧಾನಿಗೆ ರಾಜನಾದ ನೀನು ರಾಣಿಯಾದ ಶಚೀದೇವಿಯನ್ನು ಬಿಟ್ಟಿರಬಹುದೆ?' ಎಂದು ನುಡಿದನು. ನಾರದನ ಮಾತುಗಳನ್ನು ಕೇಳಿ ಕಳ್ಳನು 'ಬುದ್ಧಿಶಾಲಿಯಾದ ನಾರದನೇ! ಶಚೀದೇವಿಯಿಂದ ನನಗಾಗತಕ್ಕ ಕಾರ್ಯವಾವುದೂ ಇಲ್ಲವು.' ಎಂದನು. ಆ ಬಳಿಕ ಮಹಾಯಶಸ್ವಿಯಾದ ಶಿವಭಕ್ತನಾದ ಕಳ್ಳನು, ದಾನಮಾಡಲುಪಕ್ರಮಿಸಿದನು. ಅಗಸ್ತ್ಯನಿಗೆ ಐರಾವತವನ್ನೂ, ವಿಶ್ವಾಮಿತ್ರನಿಗೆ ಉಚ್ಚೈಶ್ರವಸ್ಸೆಂಬ ಪಟ್ಟದ ಕುದುರೆಯನ್ನೂ, ವಸಿಷ್ಠನಿಗೆ ಕಾಮಧೇನುವನ್ನೂ ಗಾಲವನಿಗೆ ಚಿಂತಾಮಣಿಯೆಂಬ ರತ್ನವನ್ನೂ, ಕೌಂಡಿನ್ಯನಿಗೆ ಕಲ್ಪವೃಕ್ಷವನ್ನೂ, ಇಂದ್ರನ ಅರಮನೆಯನ್ನೂ ದಾನಮಾಡಿದನು. ಹೀಗೆಯೇ ಅನೇಕ ವಿಧಗಳಾದ ರತ್ನಗಳನ್ನು ಶಿವಪ್ರೀತ್ಯರ್ಥವಾಗಿ ದಾನಮಾಡಿದನು. ಮೂರು ಘಳಿಗೆಗಳು ಕಳೆದಮೇಲೆ, ಪೂರ್ವಸ್ವಾಮಿಯಾದ ಇಂದ್ರನು ತನ್ನ ಸಿಂಹಾಸನವನ್ನು ಸ್ವೀಕರಿಸಿದನು. ಇಂತು ದುಷ್ಟಬುದ್ಧಿಯುಳ್ಳ ದೇವೇಂದ್ರನು ಸಿಂಹಾಸನದಲ್ಲಿ ಕುಳಿತುಕೊಂಡು ಶಚೀದೇವಿಯನ್ನು ಕುರಿತು 'ಎಲೌ ಮಂಗಳಕರಳೇ! ಇಂದ್ರ ಪದವಿಯನ್ನನುಭವಿಸಿದ ಆ ಕಳ್ಳನಿಂದ ಅನುಭವಿಸಲ್ಪಟ್ಟವಳಾಗಿರುವೆಯಲ್ಲವೆ? ಅದನ್ನೆಲ್ಲವನ್ನು ಯಥಾವಿಧಿಯಾಗಿ ಹೇಳುವಳಾಗು' ಎಂದನು. ಆಗ ಶಚೀದೇವಿಯು ಅವನನ್ನು ಕುರಿತು 'ಎಲೈ ಇಂದ್ರನೆ! ನೀನಾದರೋ ವಿಷಯಲಂಪಟನಾಗಿರುವೆ. ಪರದಾರಾಪಹಾರಕನೂ, ದುಷ್ಟಬುದ್ಧಿಯುಳ್ಳವನೂ, ಲೋಭಿಯೂ ಆಗಿರುವೆ. ಇಂದ್ರಪದವಿಗೆ ಬಂದವರೆಲ್ಲರೂ ನಿನ್ನಹಾಗೆಯೇ ಇರುವರೆಂದು ತಿಳದಿರುವಿಯಲ್ಲಾ! ನಿನ್ನ ಬುದ್ಧಿಯನ್ನು ಏನೆಂದು ಹೇಳಲಿ. ಶಿವಪ್ರಸಾದದಿಂದ ಪರಮಾರ್ಥಗಳನ್ನು ತಿಳಿದ ಮಹಾತ್ಮನಾದ ಕಳ್ಳನ ರೂಪಧಾರಿಯಾದ ಈ ಮಹಾನುಭಾವನು, ಶಿವನ ಪ್ರಸಾದದಿಂದಲೇ ಶ್ರೇಷ್ಠವಾದ ಸಕಲವನ್ನೂ ಹೊಂದಿದವನಾಗಿ ಇಂದ್ರ ಪದವಿಯನ್ನು ಹೊಂದಿದನಲ್ಲವೆ. ಕೇಳು; ಆ ಕಳ್ಳನು ಮೋಹಮಯವಾದ ರಾಜ್ಯ, ಕೋಶ, ಧನ, ಕನಕ, ವಸನಾದಿಗಳೇ ಮೊದಲಾದ ಪಾಶಗಳನ್ನು ಕಿತ್ತೊಗೆದು

ಎಲ್ಲಕ್ಕಿಂತಲೂ ಅಧಿಕವಾದ ಸಾಯುಜ್ಯವನ್ನು ಹೊಂದಿದನು.' ಎಂದಳು. ಶಚಿಯ ಮಾತುಗಳನ್ನು ಕೇಳಿ ಇಂದ್ರನು ಲಜ್ಜಾನ್ವಿತನಾದನು. ಆ ಬಳಿಕ ಗುರುವಾದ ಬೃಹಸ್ಪತಿಯನ್ನು ಕುರಿತು 'ಎಲೈ ಬೃಹಸ್ಪತಿಯೇ ! ಐರಾವತ ಉಚ್ಚೈಶ್ರವಸ್ಸೇ ಮೊದಲಾದ ರತ್ನಗಳು ಕಾಣುವುದೇ ಇಲ್ಲವಲ್ಲ. ಯಾರು ತೆಗೆದುಕೊಂಡುಹೋದರು' ಎಂದು ಕೇಳಿದನು. ಆಗ ಬೃಹಸ್ಪತಿಯು ಅವನನ್ನು ಕುರಿತು 'ಎಲೈ ಇಂದ್ರನೇ ! ಆ ಕಳ್ಳನು ತನಗೆ ಯೆಂದುವರೆವಿಗೂ ಇಂದ್ರಪಟ್ಟವಿದ್ದಿತೋ ಅದುವರೆವಿಗೂ ಐರಾವತಾದಿಗಳನ್ನು ಋಷಿಗಳಿಗೆ ದಾನವಾಗಿ ಕೊಟ್ಟುಬಿಟ್ಟನು. ಕೇಳು ; ಯಾರು ಉನ್ನತವಾದ ಪದವಿಯಲ್ಲಿದ್ದರೂ, ತನ್ನ ಪದವಿಯು ನಡಿಯುತ್ತಿದ್ದರೂ, ಅಪ್ರಮತ್ತರಾಗಿಯೂ, ಶಿವಧ್ಯಾನ ಪರಾಯಣರಾಗಿಯೂ, ಇರುವರೋ ಅವರೆಲ್ಲರೂ ಕರ್ಮಫಲವನ್ನು ಕಿತ್ತೊಗೆದು ಸಾಕ್ಷಾತ್ಪರಶಿವನ ಪ್ರೀತಿಗೆ ಪಾತ್ರರಾಗುತ್ತಾರೆ. ಬಳಿಕ ಕೇವಲ ಜ್ಞಾನಮಾರ್ಗವನ್ನೇ ಆಶ್ರಯಿಸಿಕೊಂಡು ಉನ್ನತವಾದ ಪದವಿಯನ್ನು ಹೊಂದುತ್ತಾರೆ.' ಎಂದನು. ಇಂತೆಂದು ನುಡಿದ ಬೃಹಸ್ಪತಿಯ ಮಾತುಗಳನ್ನು ಕೇಳಿ ಇಂದ್ರನು 'ಯಮನು ಸಕಲ ವೃತ್ತಾಂತವನ್ನು ಹೇಳಬಹುದು' ಎಂದುಕೊಂಡು ಗುರುವಾದ ಬೃಹಸ್ಪತಿಯಿಂದೊಡಗೂಡಿ ಯಮಲೋಕಕ್ಕೆ ಬಂದನು. ಅಲ್ಲಿಯಾದರೋ ಯಮನಿಂದ ಸತ್ಕರಿಸಲ್ಪಟ್ಟ ಇಂದ್ರನು ಅವನನ್ನು ಕುರಿತು 'ಎಲೈ ಯಮನೇ ! ದುರಾತ್ಮನಾದ ಕಳ್ಳನಿಗೆ ನನ್ನ ಪದವಿಯನ್ನು ಕೊಟ್ಟಿರುವೆಯಲ್ಲವೆ ? ಅವನಾದರೋ ಮಹತ್ತರವಾದ ಜಿಗುಪ್ಸೆಯನ್ನುಂಟುಮಾಡುವ ಕಾರ್ಯವನ್ನು ಮಾಡಿರುವನು. ನನ್ನ ಸಂಬಂಧವಾದ ರತ್ನಗಳಾವುವಿದ್ದವೋ, ಅವನ್ನೆಲ್ಲವನ್ನೂ ಯಾರಾರಿಗೋ ದಾನಮಾಡಿರುವನು. ನೀನು ಧರ್ಮರಾಜನೆಂಬ ಹೆಸರುಳ್ಳವನಾಗಿ ಈ ಕಳ್ಳನಿಗೆ ರಾಜ್ಯವನ್ನು ಹೇಗೆ ಕೊಟ್ಟೆ ? ನನ್ನ ರಾಜ್ಯವಿನಾಶಕ್ಕೋಸುಗವಾಗಿಯೇ ಇದನ್ನೆಲ್ಲವನ್ನೂ ಮಾಡಿರುವೆ. ಆದುದರಿಂದೆಲೈ ಯಮನೆ ! ಕಳೆದುಹೋಗಿರುವ ರತ್ನಗಳನ್ನು ಪುನಃ ತಂದು ಕೊಡು'. ಎಂದನು. ಇಂದ್ರನ ಮಾತುಗಳನ್ನು ಕೇಳಿ ಯಮನು

ಆ ಕಳ್ಳನನ್ನು ಕುರಿತು 'ಎಲೈ ಪಾಪಿಯೇ ! ಎಂತಹ ಕಾರ್ಯವನ್ನು ಮಾಡಿರುವೆ. ಎಲವೋ ಮೂಢನೇ! ಇಂದ್ರ ಪದವಿಯನ್ನು ಅನುಭವಿಸಲೋಸುಗ ನಿನ್ನನ್ನು ಇಂದ್ರನನ್ನಾಗಿ ಮಾಡಿದರೆ ಅಮರಾವತಿಯನ್ನು ದಾನಮಾಡಿರುವೆಯಾ? ಈಗ ನೀನು ಪರದ್ರವ್ಯವನ್ನು ಅಪಹರಿಸಿದ ಪಾಪಕ್ಕೆ ಗುರಿಯಾಗುವೆ. ಈ ಮಹತ್ತರವಾದ ಪಾಪದ ದೆಶೆಯಿಂದ ನೀನು ನರಕಕ್ಕೆ ಹೋಗುವೆ. ಎಲವೋ ದುರಾತ್ಮನೆ! ಶಾಸ್ತ್ರವಿರುದ್ಧವಾದ ಕೆಲಸವನ್ನು ಮಾಡಿರುವೆಯಾದಕಾರಣ ನಿನ್ನನ್ನು ದಂಡಿಸುತ್ತೇನೆ. ಆತ್ಮಜ್ಞಾನವುಳ್ಳವರನ್ನು ದಂಡಿಸುವವನು ಗುರುವು. ದುರಾತ್ಮರನ್ನು ದಂಡಿಸುವವನು ರಾಜನು. ನಾನಾದರೋ ಸಕಲ ಪಾಪಾತ್ಮರನ್ನೂ ದಂಡಿಸುತ್ತೇನೆಂಬುದರಲ್ಲಿ ಸಂಶಯವಿಲ್ಲವು.' ಎಂದು ನುಡಿದನು. ಆಗ ಚಿತ್ರಗುಪ್ತನು ನಸುನಗುತ್ತಾ ಯಮನನ್ನು ಕುರಿತು 'ಎಲೈ ಯಮನೆ! ಈ ಕಳ್ಳನು ನರಕಕ್ಕೆ ಹೇಗೆ ಹೋಗುತ್ತಾನೆ? ಈಶ್ವರ ಪ್ರೀತ್ಯರ್ಥವಾಗಿ ಅಗಸ್ತ್ಯನಿಗೆ ಐರಾವತವನ್ನೂ, ವಿಶ್ವಾಮಿತ್ರನಿಗೆ ಉಚ್ಚೈಶ್ರವಸ್ಸೆಂಬ ಪಟ್ಟದ ಕುದುರೆಯನ್ನೂ ಮಹಾತ್ಮನಾದ ಗಾಲವಮಹರ್ಷಿಗೆ ಪ್ರಕಾಶಮಾನವಾದ ಚಿಂತಾಮಣಿಯೆಂಬ ರತ್ನವನ್ನೂ, ದಾನವಾಗಿ ಕೊಟ್ಟಿರುವನು. ಆ ಕರ್ಮಫಲದ ದೆಶೆಯಿಂದಲೇ ಈ ಕಳ್ಳನು ಮೂರು ಲೋಕಗಳಲ್ಲಿಯೂ ಪೂಜಿಸಲ್ಪಡಬೇಕು. ಎಲೈ ಯಮನೇ ! ಶಿವೋದ್ದಿಶ್ಯವಾಗಿ ಸ್ವರ್ಗದಲ್ಲಿಯಾಗಲಿ, ಭೂಲೋಕದಲ್ಲಿಯಾಗಲಿ, ಯಾವನರಿಂದ ದಾನಮಾಡಲ್ಪಟ್ಟಿರುತ್ತದೆಯೋ ಅವೆಲ್ಲವೂ, ಅಕ್ಷಯವಾಗುವುವೆಂದು ತಿಳಿಯಬೇಕು. ಇದರಿಂದ ಕರ್ಮಪಾಶವೇ ಇರುವುದಿಲ್ಲವೆಂದು ಹೇಳಲ್ಪಡುತ್ತದೆ. ಆದುದರಿಂದ ಈಕಳ್ಳನಿಗೆ ನರಕವು ಕಾಣುವುದಿಲ್ಲ ಈ ಕಳ್ಳನ ಯಾವಯಾವ ಪಾತಕಗಳಿರುವವೋ ಅವುಗಳೆಲ್ಲವೂ, ಶಂಭು ಪ್ರೀತ್ಯರ್ಥವಾಗಿ ದಾನಮಾಡಿದುದರಿಂದ ಭಸ್ಮೀಭೂತವಾದವೆಂದು ತಿಳಿ. ಈಕಳ್ಳನಿಗೆ ಈಶ್ವರನ ಪ್ರಸಾದದಿಂದ ಸಕಲವೂ ಪುಣ್ಯವಾಗಿಯೇ ಸಂಭವಿಸಿತು.' ಎಂದನು. ಚಿತ್ರಗುಪ್ತನ ಮಾತುಗಳನ್ನು ಕೇಳಿದ ಯಮಧರ್ಮರಾಜನು ತಲೆ ತಗ್ಗಿದವನಾಗಿ, ನಸುನಗುತ್ತಾ ಇಂದ್ರನನ್ನು

ಕುರಿತು 'ಎಲವೋ ಇಂದ್ರನೆ! ರಾಜ್ಯಲಂಪಟನಾಗಿಯೂ, ಯಾಚಕ ನಾಗಿಯೂ ಇರುವ ನೀನು ದೇವತೆಗಳಿಗೆಲ್ಲರಿಗೂ ರಾಜನಲ್ಲವೆ? ಕೇವಲ ನೂರು ಅಶ್ವಮೇಧ ಯಾಗಗಳನ್ನು ಮಾಡಿದುದರಿಂದ ಒಂದೇಜನ್ಮ ವನ್ನು ಸಂಪಾದಿಸಿರುವೆ. ಆದುದರಿಂದೆಲೈ ಇಂದ್ರನೇ! ಅಗಸ್ತ್ಯಾದಿ ಮಹರ್ಷಿಗಳನ್ನು ಪ್ರಾರ್ಥಿಸುವುದರಿಂದಲೂ, ನಮಸ್ಕರಿಸುವುದರಿಂ ದಲೂ ಕಳೆದುಹೋಗಿರುವ ಗಜವೇ ಮೊದಲಾದ ರತ್ನಗಳನ್ನು ಹೊಂದಿ ಸುಖವಾಗಿರು' ಎಂದನು. ಯಮನ ಮಾತುಗಳನ್ನು ಕೇಳಿ ಇಂದ್ರನು 'ಹಾಗೆಯೇ ಆಗಲೆಂದು' ಹೇಳಿ ಸ್ವಾಮಿ ವಿವೇಕ ದೃಷ್ಟಿಯಿಂದ ಅಮ ರಾವತೀ ಪಟ್ಟಣಕ್ಕೆ ಹೋಗಿ ನಮ್ರಭಾವದಿಂದ ಋಷಿಗಳಿಗೆ ನಮ ಸ್ಕರಿಸಿ ಪಾರಿಜಾತವನ್ನು ತಿರಿದು ಸಂಪಾದಿಸಿದನು. ಹೀಗೆಯೇ, ಮಹಾನುಭಾವರಾದ ಋಷಿಗಳನ್ನು ಯಾಚಿಸುತ್ತಾ ರಾಜ್ಯವನ್ನೂ ಪಡೆದನು.

ಆಬಳಿಕ ಯಮನು ಕಳ್ಳನಿಗೆ ಪುನರ್ಜನ್ಮವನ್ನಿತ್ತನು. ಈ ಕಳ್ಳನು ಮಾಡಿದ ಕಿಂಚಿತ್ಕರ್ಮ ವಿಪಾಕದದೆಶೆಯಿಂದ ವಿರೋಚ ನನ ಮಗನಾಗಿ ಹುಟ್ಟಿದನು. ಈತನ ತಾಯಿಯು ಸುರಚಿಯೆಂಬು ವಳು, ಈ ಸುರಚಿಯು ವಿರೋಚನನ ಹೆಂಡತಿಯು, ಮತ್ತು ವೃಷಪ ರ್ವನ ಮಗಳು. ಮಹಾತ್ಮನಾದ ವಿರೋಚನನ ಮಗನೇ ಬಲಿ ಚಕ್ರವರ್ತಿಯು. ಕೇಳಿರೈ ಋಷಿಗಳಿರಾ! ಬಲಿಯು ಹುಟ್ಟಿದವೊದ ಲುಗೊಂಡು ಧರ್ಮದಾನಗಳಲ್ಲಿ ಮಹಾ ಬುದ್ಧಿಶಾಲಿಯಾದನು. ಈ ಬಲಿಯು ಸುರಚಿಯ ಗರ್ಭದಲ್ಲಿದ್ದುಕೊಂಡೇ ಬಣ್ಣಿಸಲಸಾಧ್ಯ ವಾದ ಎಂತಹ ಬುದ್ಧಿವಂತರಿಗೂ ಮಾಡಲಸಾಧ್ಯವಾದ ಕಾರ್ಯವನ್ನು ಮಾಡಿದನು. ಒಂದಾನೊಂದುದಿನ ಮಹೇಂದ್ರನು ಯಾಚಕನ ವೇಷ ವನ್ನು ಧರಿಸಿ ದೈತ್ಯೇಂದ್ರನಾದ ವಿರೋಚನನನ್ನು ಕೊಲ್ಲಲು ಅವನ ಗೃಹವನ್ನು ಸೇರಿ ಇಂತೆಂದನು. 'ಎಲೈ ವಿರೋಚನನೇ! ನಾನು ಯಾಚ ಕನಾದ ಬ್ರಾಹ್ಮಣನು. ಕೊಡೆಂದು ಬೇಡುವವನು. ನೀನಾದರೋ ಮೂರುಲೋಕಗಳಲ್ಲಿಯೂ ದಾನಮಾಡುವವರಲ್ಲಿ ಮನಸ್ವಿಯು.

ಎಲೈ ವಿರೋಚನನೇ ! ನಿನ್ನ ಚರಿತ್ರೆಯನ್ನೂ, ನಿನ್ನ ಕೀರ್ತಿಯನ್ನೂ, ಎಲ್ಲ ಸಭೆಗಳಲ್ಲಿಯೂ ವರ್ಣಿಸುತ್ತಾರೆ. ದೈತ್ಯೇಂದ್ರಾ ! ನಾನು ಯಾಚಕನು. ನೀನು ನನಗೆ ದಾನವನ್ನು ಮಾಡಲು ಅರ್ಹನಾಗಿರುವೆ.' ಎಂದನು. ಇಂತು ನುಡಿಯುತ್ತಿರುವ ಯಾಚಕ ಬ್ರಾಹ್ಮಣವೇಷಧಾರಿಯಾದ ಇಂದ್ರನನ್ನು ಕುರಿತು ವಿರೋಚನನು 'ಎಲೈ ಬ್ರಾಹ್ಮಣನೇ ! ನಿನಗೇನುಬೇಕು ? ಜಾಗ್ರತೆಯಾಗಿ ಹೇಳು' ಎಂದನು. ಆಗ ವಿಪ್ರರೂಪಿಯಾದ ಇಂದ್ರನು 'ಎಲೈ ವಿರೋಚನನೆ ! ನಿನಗಾವುದು ಅತ್ಯಂತ ಪ್ರೀತಿಪಾತ್ರವಾದ ವಸ್ತುವಿಧೆಯೋ ಅದನ್ನು ನನಗೆ ಕೊಡುವವನಾಗು' ಎಂದು ಹೇಳಿದನು. ಇಂತು ನುಡಿದ ಇಂದ್ರನ ಮಾತುಗಳನ್ನು ಕೇಳಿ ವಿರೋಚನನು 'ಅಯ್ಯಾ ಬ್ರಾಹ್ಮಣನೇ ! ನೀನಿಷ್ಟಪಡುವುದಾದರೆ ನನ್ನ ತಲೆಯನ್ನಾದರೂ ಕೊಡುವೆನು. ಅದೂ ಅಲ್ಲದೆ ಇತರರ ಪಾಲಾಗುವ ಈ ರಾಜ್ಯಸಂಪದವನ್ನಾದರೂ ಕೊಡುವೆನು. ಇದರಲ್ಲಿ ಸಂಶಯವಿಲ್ಲವು' ಎಂದು ನುಡಿದನು. ಆಗಲಾ ಇಂದ್ರನು ವಿರೋಚನನ್ನು ಕುರಿತು ವಿಮರ್ಶೆಮಾಡುತ್ತಾ 'ಎಲೈ ದೈತ್ಯೇಂದ್ರನೇ ಮುಕುಟದಿಂದ ಸೇವಿಸಲ್ಪಟ್ಟ ನಿನ್ನ ತಲೆಯನ್ನೇ ನನಗೆ ದಾನವಾಗಿ ಕೊಡು ' ಎಂದು ಬೇಡಿದನು. ಇಂದ್ರನು ನುಡಿದೊಡನೆಯೇ, ಮಹಾತ್ಮನಾದ ವಿರೋಚನನು, ಸಂತುಷ್ಟನಾಗಿ ಸ್ವಹಸ್ತದಿಂದಲೇ ತನ್ನ ತಲೆಯನ್ನು ಕತ್ತರಿಸಿ, ಸ್ವಹಸ್ತದಿಂದಲೇ ಇಂದ್ರನಿಗೆ ದಾನಮಾಡಿದನು. ಇವನ ತಂದೆಯಾದ ವಿಷ್ಣುಭಕ್ತನಾದರೋ ಯಾರಿಂದಲೂ ಮಾಡಲಶಕ್ಯವಾದ ದಾನವನ್ನು ಮಾಡಿರುವನು.

ಕೇಳಿರೈ ಋಷಿಗಳಿರಾ ! ದಾನಕ್ಕಿಂತಲೂ ಪ್ರಪಂಚದಲ್ಲಿ ಯಾವ ಶ್ರೇಷ್ಠವಾದ ಪುಣ್ಯವಿಲ್ಲವು. ದಾನ ಮಾಡುವವನು ಬಡವರಿಗೆ ದಾನ ಮಾಡಿದಲ್ಲಿ ಆ ದಾನವು ಮಹಾ ಪುಣ್ಯವಾಗಿ ಸಂಭವಿಸುವುದು. ಹೆಚ್ಚೇನು; ದಾನಕ್ಕಿಂತಲೂ ಹೆಚ್ಚಾದುದು ಮೂರು ಲೋಕಗಳಲ್ಲಿಯೂ ಇಲ್ಲವು. ದಾನದಲ್ಲಿಯಾದರೋ ಮೂರು ತರಹಗಳಿರುವುವು.

ಅವಾವುವೆಂದರೆ, ಸಾತ್ವಿಕ, ರಾಜಸ, ತಾಮಸವೆಂಬುದಾಗಿ ತ್ರಿಗುಣಾತ್ಮಕವಾದ ದಾನಗಳು. ಈ ವಿರೋಚನನಾದರೋ ಸಾತ್ವಿಕ ಲಕ್ಷಣವಾದ ದಾನವನ್ನೇ ಮಾಡಿದನು. ಮಹಾ ದಾನಶೀಲನಾದ ವಿರೋಚನನು, ಬ್ರಾಹ್ಮಣ ವೇಷಧಾರಿಯಾದ ಇಂದ್ರನಿಗೆ ತನ್ನ ತಲೆಯನ್ನು ಕತ್ತರಿಸಿ ದಾನಮಾಡಿದನು. ಬಳಿಕ ಅವನ ಕಿರೀಟವು ನೆಲಕ್ಕೆ ಬಿದ್ದಿತು. ಆ ಕಿರೀಟದಲ್ಲಿದ್ದ ಅತಿ ಪ್ರಕಾಶಮಾನಗಳಾದ ಮಣಿಗಳಾದರೋ ಏಕಪದ್ಯದಿಂದ ಬಿದ್ದವುಗಳಾಗಿ ದೈತ್ಯರಿಗೂ, ರಾಜರಿಗೂ, ಪನ್ನಗರಿಗೂ ಮಂಡಲಗಳಾಗಿ ಹುಟ್ಟಿದವು. ಕೇಳಿರೈ ಋಷಿಗಳಿರಾ! ಈ ವಿರೋಚನನು ಮಾಡಿದ ದಾನವು ಮೂರುಲೋಕಗಳಲ್ಲಿಯೂ ಹೊಗಳಲ್ಪಟ್ಟಿರುವುದು. ಈಗಲೂ ಕವಿಗಳು ಮಹಾತ್ಮನಾದ ವಿರೋಚನನ ದಾನವನ್ನು ಹೊಗಳುತ್ತಿರುವರು. ಈ ಕಳ್ಳನೇ ವಿರೋಚನನ ಮಗನಾಗಿ ಹುಟ್ಟಿದನು. ವಿರೋಚನನ ಹೆಂಡತಿಯಾದ ಸುರಚಿಯೂ, ತನ್ನ ಪತಿಯು ಸತ್ತನಂತರ ಪ್ರಾಣತ್ಯಾಗಮಾಡಿ ಪತಿಲೋಕವನ್ನೈದಿದಳು. ಆ ಬಳಿಕ ಈ ಕಳ್ಳನು ದೈತ್ಯ ಗುರುವಾದ ಶುಕ್ರನಿಂದ ತನ್ನ ತಂದೆಯ ರಾಜ್ಯದಲ್ಲಿ ಅಭಿಷಿಕ್ತನಾದನು. ಇವನು ರಾಜನಾದೊಡನೆಯೇ, ಮಹಾಬಲಪರಾಕ್ರಮಶಾಲಿಗಳಾದ ದೇವತೆಗಳೆಲ್ಲರೂ ಭಯಗೊಂಡು, ಹಿಂದೆಯೇ ಹೇಳಿದ ಪ್ರಕಾರ ನಾನಾ ವೇಷಧಾರಿಗಳಾಗಿ ಕಶ್ಯಪನ ಆಶ್ರಮವನ್ನು ಕುರಿತು ಹೊರಟರು. ಆಗಲಾ ಮಹಾ ಯಶಸ್ವಿಯಾದ ಬಲಿಯು, ಅಮರಾವತಿಯಲ್ಲಿ ದೇವೇಂದ್ರನಾದನು. ಮಹಾ ತಪಸ್ವಿಯಾದ ಈ ಬಲಿಯೂ ತನ್ನ ತಪೋಬಲದಿಂದಲೇ ಸೂರ್ಯನಾಗಿ ಪ್ರಕಾಶಿಸುತ್ತಿದ್ದನು. ಈಶಾನನಾಗಿ ಈಶಾನ್ಯದಿಕ್ಕನ್ನು ಪಾಲಿಸುತ್ತಿದ್ದನು. ನೈರುತನಾಗಿ ನೈರುತ ದಿಕ್ಕನ್ನೂ, ವರುಣನಾಗಿ, ವರುಣಲೋಕವನ್ನೂ ಪಾಲಿಸುತ್ತಿದ್ದನು. ಕುಬೇರನಾಗಿ ಕುಬೇರದಿಕ್ಕನ್ನೂ ಪಾಲಿಸುತ್ತಿದ್ದನು. ಈ ಪ್ರಕಾರವಾಗಿ ಆ ಬಲಿಯು ತಾನಾಗಿಯೇ ತ್ರಿಲೋಕಗಳನ್ನು ಅನುಭವಿಸುತ್ತಿದ್ದನು. ಅಯ್ಯಾ ಋಷಿಗಳಿರಾ! ಬಲಿಯು ದಾನಶೀಲನಾದುದು ಹೇಗೆಂದು ಕೇಳಿದಿರಲ್ಲಾ! ಕೇಳಿರಿ ಆತನು ತನ್ನ ಪೂರ್ವಜನ್ಮದಲ್ಲಿ

ಮಾಡಿದ ಶಿವಾರ್ಚನ ತತ್ಪರತೆಯಿಂದಲೂ, ಹಿಂದಿನ ಜನ್ಮದ ಅಭ್ಯಾಸ ದಿಂದಲೂ, ಮಹಾ ದಾನಶೀಲನಾದನು. ಒಂದಾನೊಂದು ದಿವಸ ಬಲಿಯು, ಭೃಗುಮಹರ್ಷಿಯಿಂದಲೂ, ದೈತ್ಯೇಂದ್ರರಿಂದಲೂ ಕೂಡಿ ಸಭಾಮಧ್ಯದಲ್ಲಿರಲು, ಶ್ರೀಮಂತನಾದ ಶಂಡಾಮರ್ಕರು ಅವನನ್ನು ಕುರಿತು 'ಎಲೈ ಬಲಿಯೇ ! ನೀವೆಲ್ಲರೂ, ಪಾತಾಳ ಲೋಕವನ್ನು ತ್ಯಜಿಸಿ ಇಲ್ಲಿಯೇ ನೆಲಗೊಳ್ಳುವವರಾಗಿರಿ. ಈ ಕೆಲಸವನ್ನು ತಡೆಮಾಡ ತಕ್ಕದ್ದಲ್ಲವು.' ಎಂದನು. ಆಗಲಾ ಭೃಗುಮಹರ್ಷಿಯ ಮಗನಾದ ಶುಕ್ರನು ನಸುನಗುತ್ತಾ ಬಲಿಯನ್ನು ಕುರಿತು 'ಎಲೈ ರಾಜನೇ ! ವಿವಿಧ ಯಜ್ಞಗಳನ್ನು ಮಾಡಿದವರಿಗೆ ಸ್ವರ್ಗಲೋಕವು ಲಭಿಸುವುದು. ಯಜ್ಞಮಾಡಿದವರೇ ಈ ಸ್ವರ್ಗದಲ್ಲಿ ವಾಸಮಾಡಬೇಕೇ ಹೊರ್ತು, ಇನ್ನಾರೂ ಇರಲು ಅರ್ಹರಲ್ಲವು' ಎಂದು ನುಡಿಯಲು, ಬಲಿಯು, 'ನಾನು ಯಾವ ಯಾವ ಸತ್ಕರ್ಮಗಳನ್ನು ಮಾಡಿರುವೆನೋ ಅದರ ದೆಸೆಯಿಂದೀ ಅಸುರರೆಲ್ಲರೂ ದೇವಲೋಕದಲ್ಲಿ ಶಾಶ್ವತವಾಗಿರಲಿ. ಈ ವಿಷಯದಲ್ಲಿ ಚರ್ಚಿಸಬೇಕಾದುದಿಲ್ಲವು' ಎಂದನು. ಇಂತು ನುಡಿದ ಬಲಿಯ ಮಾತುಗಳನ್ನು ಕೇಳಿ, ಭೃಗುನಂದನನಾದ ಶುಕ್ರನು ಬಲಿಯು ಹುಡುಗಾಟವಾಡುವನೆಂದು ತಿಳಿದು ಅವನನ್ನು ಕುರಿತು 'ಎಲೈ ! ಬಲಿಯೇ ! ನೀನು ಹೇಳಿದುದು ನನಗೆ ಇಷ್ಟವಾಗಿಲ್ಲವು. ಇಲ್ಲಿಯೇ ಇದ್ದುಕೊಂಡು ಎಲ್ಲವನ್ನೂ ಮಾಡಬೇಕೆಂದಿಷ್ಟಪಡುವೆ. ಅಶ್ವಮೇಧ ಯಾಗಗಳನ್ನು ನೂರು ಸಲ ಮಾಡಿದಹೊರ್ತು ನೀನೀ ಇಂದ್ರ ಪದವಿಗೆ ಬರಲಾರೆ. ಆದುದರಿಂದ ಕರ್ಮಭೂಮಿಯಾದ ಭೂಲೋಕಕ್ಕೆ ಹೋಗಿ ನೂರು ಅಶ್ವಮೇಧ ಯಾಗಗಳನ್ನು ಮಾಡು ವವನಾಗು.' ಎಂದು ಹೇಳಿದನು. ಬಲಿಯಾದರೋ ಹಾಗೆಯೇ ಆಗ ಲೆಂದು ದೈತ್ಯರಿಂದೊಡಗೂಡಿದವನಾಗಿ, ಸ್ವರ್ಗ ಲೋಕವನ್ನು ಬಿಟ್ಟು ಗುರುವಾದ ಶುಕ್ರನಿಂದಲೂ ಕೂಡಿದವನಾಗಿ ಭೂಲೋಕಕ್ಕೆ ಬಂದನು. ಆ ಬಳಿಕ ಸಕಲವಾದೀ ಭೂಮಂಡಲವನ್ನು ಗೆದ್ದು ನರ್ಮದಾನದಿಯ ತೀರದಲ್ಲಿರುವ ಮನೋಹರವಾದ ತೀರ್ಥವುಳ್ಳ ಗುರುಕುಲ್ಯವೆಂಬ ಕ್ಷೇತ್ರಕ್ಕೆ ಹೋಗಿ, ಬಹು ವಿಚಕ್ಷಣವಾಗಿ ಅಶ್ವಮೇಧ ಯಾಗ

ವನ್ನು ಮಾಡಿ ಬ್ರಾಹ್ಮಣರೇನು ಆಚಾರ್ಯರೇನು ಋತ್ವಿಜರೇನು ಇವರೇ ಮೊದಲಾದವರನ್ನು ಶುಕ್ರನಿಂದಲೇ ಕರೆಯಿಸಿ ಹದಿ ನಾರು ಯಾಗಗಳನ್ನು ಮಾಡಿದನು. ಆ ಬಳಿಕೆ ನೂರು ಅಶ್ವಮೇಧ ಯಾಗಗಳಿಗೂ ಧೀಕ್ಷಾಬದ್ಧನಾಗಿದ್ದ ಬಲಿಯು ಅಶ್ವಮೇಧ ಯಾಗಗ ಳನ್ನು ಪೂರ್ತಿಮಾಡಲುಪಕ್ರಮಿಸಿದನು.

ಬಲಿಯು ಯಾಗಸಮಾಪ್ತಿ ಮಾಡುವಷ್ಟರಲ್ಲಿಯೇ ಪೂರ್ವದಲ್ಲಿ ಅದಿತಿಯು ಮಾಡಿದ ಪ್ರಯತ್ನದಿಂದ ಸಂತುಷ್ಟನಾದ ವಿಷ್ಣುವು ಆಕೆಗೆ ವಟುರೂಪದಿಂದ ಪುತ್ರನಾದನು. ಆವಟುವು ಕಶ್ಯಪನಿಂದಲೂ, ಅದಿತಿಯಿಂದಲೂ, ಉಪನಯನ ಮಾಡಲ್ಪಟ್ಟನು. ಆಗ ಲೋಕ ಪಿತಾಮಹನಾದ ಬ್ರಹ್ಮನು ವಟುರೂಪಧಾರಿಯಾದ ವಿಷ್ಣುವಿಗೆ ಯಜ್ಞೋಪವೀತವನ್ನು ಕೊಟ್ಟನು. ಸೂರ್ಯನಾದರೊ, ದಂಡ ಕಾಷ್ಟಗಳನ್ನು ಕೊಟ್ಟನು. ಭೂದೇವಿಯು ಉಡುದಾರವನ್ನೂ, ಅದ್ಭುತವಾದ ಅಜಿನವನ್ನೂ ಎರಡು ಪಾದುಕೆಗಳನ್ನೂ ಮಹಾತ್ಮ ನಾದ ವಿಷ್ಣುವಿಗೆ ಕೊಟ್ಟಳು. ಆ ಬಳಿಕ ಶಿವಸತಿಯಾದ ಪಾರ್ವ ತಿಯು ಸಕಲ ಕಾರ್ಯಾರ್ಥ ಸಿದ್ಧಿಗಾಗಿ ವಟುರೂಪನಾದ ವಿಷ್ಣುವಿಗೆ ಭಿಕ್ಷೆಯನ್ನು ನೀಡಿದಳು. ಆಗ ಮಹಾವಿಷ್ಣುವು ಕಶ್ಯಪ ಮಹರ್ಷಿ ಯನ್ನೂ, ಅದಿತಿಯನ್ನೂ ನಮಸ್ಕರಿಸಿ ಮಹಾತೇಜಸ್ವಿಯಾಗಿ ಬಲಿಯ ಯಜ್ಞಶಾಲೆಯನ್ನು ಕುರಿತು ಹೊರಟನು. ಬಳಿಕ ವಟುರೂಪಧಾರಿ ಯಾದ ವಿಷ್ಣುವು ದೇವತೆಗಳ ಕಾರ್ಯ ಸಿದ್ಧಿಗೋಸುಗ ತನ್ನ ನಡಿಗೆ ಯಿಂದಲೇ ಭೂಲೋಕವೆಲ್ಲವನ್ನೂ ನಡುಗಿಸುತ್ತಾ ಸ್ವರ್ಗಕ್ಕೆ ಹೋದನು. ಅಲ್ಲಿಯಾದರೋ ಅನೇಕ ಸ್ತೋತ್ರಗಳಿಂದ ಸ್ತುತಿಸಲ್ಪಟ್ಟ ವನಾಗಿಯೂ ಜನಗಳಿಂದಲೂ, ಮುನಿಗಳಿಂದಲೂ, ದೇವಗಣಗಳಿಂದಲೂ ನಮಸ್ಕರಿಸಲ್ಪಟ್ಟವನಾಗಿ ಜಾಗ್ರತೆಯಾಗಿ ಹೋಗುತ್ತಾ ಬಲಿಚಕ್ರ ವರ್ತಿಯ ಯಾಗಶಾಲೆಗೆ ಬಂದನು. ವೇದಾಂತವೇದ್ಯನೂ ವಟುರೂಪ ಧಾರಿಯೂ ಆದ ವಿಷ್ಣುವು ಸಾಮವೇದವನ್ನು ಹಾಡುತ್ತಾ ಯಜ್ಞ ವಾಟದ ಬಾಗಲಲ್ಲಿ ನಿಂತು ಬಲಿಚಕ್ರವರ್ತಿಯು ಮಾಡುತ್ತಿದ್ದ ಅಶ್ವ

ಮೇಧ ಮಹಾ ಯಾಗವನ್ನು ನೋಡುತ್ತ ನಿಂತನು. ಸಾಮವೇದ ವನ್ನು ಹಾಡುತ್ತಿರುವುದನ್ನು ಕೇಳಿ ಬಲಿಚಕ್ರವರ್ತಿಯು ಶಂಡಾ, ಮರ್ಕರನ್ನು ಕುರಿತು 'ಎಲೈ ಶಂಡಾಮರ್ಕರಿರಾ! ಬ್ರಾಹ್ಮಣರು ಎಷ್ಟು ಜನಗಳಿರುವರೆಂಬುದನ್ನು ನೋಡಿರಿ' ಎಂದು ಆಜ್ಞಾಪಿಸಿದನು. ಬಳಿಕ ಶಂಡಾಮರ್ಕರಿಬ್ಬರೂ ಮಂಟಪದ್ವಾರದಲ್ಲಿದ್ದ ವಟುರೂಪಧಾರಿ ಯಾದ ವಿಷ್ಣುವನ್ನು ಕಂಡರು. ಆಗ ಅವರಿಬ್ಬರೂ ಜಾಗ್ರತೆಯಾಗಿ ಹಿಂತಿರುಗಿಬಂದು ಬಲಿಚಕ್ರವರ್ತಿಯ ಸನ್ನಿಧಿಯಲ್ಲಿ, ಆ ವಟುರೂಪ ಧಾರಿಯಾದ ವಿಷ್ಣುವನ್ನು ಹೊಗಳುತ್ತಾ 'ಎಲೈ ಬುದ್ಧಿಶಾಲಿಯೇ! ನಿನ್ನ ಸನ್ನಿಧಿಗೆ, ಯಾವನೋ ಒಬ್ಬ ಬ್ರಹ್ಮಚಾರಿಯು ಬಂದಿರುವನು. ಅವನೇತಕ್ಕಾಗಿ ಬಂದಿರುವನೆಂಬುದನ್ನು ನಾವರಿಯೆವು. ಆ ವಿಷಯ ವನ್ನು ನೀನೇ ತಿಳಿದುಕೊಳ್ಳುವವನಾಗು' ಎಂದು ನುಡಿದರು. ಶಂಡಾಮರ್ಕರ ಮಾತುಗಳನ್ನು ಕೇಳಿ ತಕ್ಷಣದಲ್ಲಿಯೇ ಬಲಿಚಕ್ರ ವರ್ತಿಯು, ಆ ವಟುವನ್ನು ನೋಡಲೋಸುಗ ಬಂದನು. ಬಳಿಕ ಬಲಿ ಚಕ್ರವರ್ತಿಯು ವಟುವನ್ನು ಕಂಡು ದಂಡಪ್ರಣಾಮಪೂರ್ವಕವಾಗಿ ನಮಸ್ಕರಿಸಿ ಕರದುಕೊಂಡುಬಂದು ತನ್ನ ಸಿಂಹಾಸನದಲ್ಲಿ ಕುಳ್ಳಿರಿಸಿ ಅರ್ಘ್ಯಪಾದ್ಯಾದಿಗಳಿಂದ ಸತ್ಕರಿಸಿ 'ಎಲೈ ಪ್ರಭುವೇ! ನೀನಾರು? ಯೆಲ್ಲಿಂದ ಬಂದಿರುವೆ? ಯಾರ ಮಗನು?' ಎಂದನು. ಇಂತು ನುಡಿದ ಬಲಿಚಕ್ರವರ್ತಿಯ ಮಾತುಗಳನ್ನು ಕೇಳಿ ಆ ವಟುವು ಮನ ಸ್ಸಿನಲ್ಲಿಯೇ ಯೋಚಿಸುತ್ತಾ ಹೇಳಲುಪಕ್ರಮಿಸಿದನು. 'ಅಯ್ಯಾ ರಾಜನೇ! ನೀನು ತ್ರಿಲೋಕೇಶನೇ ಹೌದು. ಮತ್ತೆಬೇರೆಯಾಗುವು ದಕ್ಕೆ ಅರ್ಹನಲ್ಲವು. ಕೇಳು; ನನ್ನ ಕುಲದಲ್ಲಿ ನ್ಯೂನತೆಯುಂಟಾದ ಪಕ್ಷದಲ್ಲಿ ಹಾಗೆ ನ್ಯೂನತೆಯುಂಟು ಮಾಡಿದವನು ಕುಪುರುಷನೆಂಬು ದಾಗಿ ಪ್ರಸಿದ್ಧಿಯನ್ನು ಪಡೆಯುವನು. ಎಲೈ ರಾಜನೇ! ನೀನಾ ದರೋ ನಿನ್ನ ಪೂರ್ವಜರಿಂದ ಮಾಡದೇ ಇರತಕ್ಕ ಯಾವ ಕೆಲಸಗ ಳುಂಟೋ, ಅವುಗಳೆಲ್ಲವನ್ನೂ ಮಾಡುತ್ತಲಿರುವೆ. ದೈತ್ಯರಲ್ಲಿ ಪ್ರಸಿದ್ಧ ರಾದ ಹಿರಣ್ಯಕಶಿಪಾದಿಗಳು ಒಂದು ಸಾವಿರ ವರುಷಗಳವರಿಗೂ ತಪ ಶ್ಚರ್ಯವನ್ನಾಚರಿಸಿದರು. ಅವರಲ್ಲಿ ಹಿರಣ್ಯಕಶಿಪುವಿನ ದೇಹವನ್ನು

ಮಹತ್ತರವಾದ ತಪಸ್ಸು ಕೃಶವಾಗಿತು. ಹಿರಣ್ಯಕಶಿಪುವಿನ ಸ್ಥಿತಿಯನ್ನು ಕಂಡು, ದೇವೇಂದ್ರನು ಅವನ ಪಟ್ಟಣಕ್ಕೆ ಬಂದನು. ಇಂತು ಬಂದೊಡನೆಯೇ ದೈತ್ಯ ಶತೃವಾದ ಈ ದೇವೇಂದ್ರನಿಂದ ಎಲ್ಲ ಅಸುರರೂ ಕೊಲ್ಲಲ್ಪಟ್ಟರು. ಎಲೈ ರಾಜನೇ! ಈ ಹಿರಣ್ಯಕಶಿಪುವಿನ ಹೆಂಡತಿಯ ಹೆಸರು ವಿಂಧ್ಯೆಯು. ಇಂದ್ರನು ಈಕೆಯನ್ನು ಎಳೆದು ಕೊಂಡುಹೋಗಲು ಪ್ರಯತ್ನಿಸಿ, ಕಾರ್ಯೋತ್ಸುಕನಾದ ನಾರದನಿಂದ ನಿವಾರಿಸಲ್ಪಟ್ಟನು. ಆ ಬಳಿಕ ಹಿರಣ್ಯಕಶಿಪುವು ತನ್ನ ಮನಸ್ಸಿನಲ್ಲಿದ್ದ ಫಲಗಳನ್ನೆಲ್ಲವನ್ನೂ ಈಶ್ವರನ ವರಪ್ರಸಾದದಿಂದಲೂ ತನ್ನ ತಪಶ್ಶಕ್ತಿಯಿಂದಲೂ ಪಡೆದನು.

ಕೇಳೈ ರಾಜನೆ! ಈ ವಿಂಧ್ಯೆಯ ಮಗನೇ ಪ್ರಹ್ಲಾದನು. ಈ ಪ್ರಹ್ಲಾದನ ಮಗನೇ ನಿಮ್ಮ ತಂದೆಯಾದ ವಿರೋಚನನು. ಈ ವಿರೋಚನನಾದರೋ ತನ್ನ ಶಿರೋದಾನದಿಂದ ದೇವೇಂದ್ರನನ್ನು ಸಂತಸಗೊಳಿಸಿದನು. ಅಯ್ಯಾ ಬಲಿಯೇ! ನೀನಾದರೋ ಆ ಮಹಾತ್ಮನಾದ ವಿರೋಚನನ ಮಗನು; ಬಹಳ ಕೀರ್ತಿಯನ್ನೂ ಸಂಪಾದಿಸಿರುವೆ; ನಿನ್ನ ಯಶಸ್ಸೆಂಬ ದೀಪದಿಂದ ದೇವತೆಗಳೆಲ್ಲರೂ ಪತಂಗದ ಹುಳುಗಳಂತೆ ಸುಟ್ಟುಹೋದರು. ಇಂದ್ರನನ್ನು ಸೋಲಿಸಿದವನೂ ನೀನೇ ಎಂಬುದರಲ್ಲಿ ಸಂಶಯವಿಲ್ಲ. ಎಲೈ ಮಹಾರಾಜ! ನಿನ್ನ ಚರಿತ್ರೆಯನ್ನೂ ಕೇಳಿರುವೆನು. ನಾನಾದರೋ ಬಹಳ ಅಲ್ಪಕನು. ಬ್ರಹ್ಮಚರ್ಯಾಶ್ರಮದಲ್ಲಿರುವವನು. ಒಂದು ಪರ್ಣಶಾಲೆಯನ್ನು ಕಟ್ಟಿಕೊಳ್ಳಲೋಸಗ ಸ್ವಲ್ಪ ಭೂಮಿಯನ್ನು ಕೊಡುವವನಾಗು. ದಯತೋರು' ಎಂಬೀಪ್ರಕಾರವಾಗಿ ನುಡಿದ ವಟುವೇಷಧಾರಿಯಾದ ವಿಷ್ಣುವಿನ ಮಾತುಗಳನ್ನು ಕೇಳಿ ಬಲಿಯು ಅವನನ್ನು ಕುರಿತು 'ಎಲೈ ವಟುವೆ! ನೀನು ಪಂಡಿತನಾಗಿ ಹಿಂದೆ ಯಾವ ಮಾತುಗಳನ್ನಾಡಿದೆಯೋ ಅವುಗಳನ್ನು ಕೇಳಿ ಯಥಾರ್ಥವಾಗಿಯೂ ಹುಡುಗಾಟಿಕೆಯಿಂದ ಮಾತನಾಡಿರುವೆ ಎಂದು ತಿಳಿದಿರುವೆನು. ಎಲೈ ಮಹಾ ಭಾಗನೇ! ನಿನಗೆ ಎಷ್ಟರವರಿವಿಗೆ ಭೂಮಿಯು

ಬೇಕೆಂಬುದನ್ನು ಜಾಗ್ರತೆಯಾಗಿ ಹೇಳುವವನಾಗು. ಮನಸ್ಸಿನಲ್ಲಿ ಯೋಚಿಸು. ಅದನ್ನು ಶೀಘ್ರವಾಗಿ ಕೊಡುವೆನು' ಎಂದನು. ಬಲಿಯ ಮಾತುಗಳನ್ನು ಕೇಳಿ ವಾಮನನು, ಮಧುರವಾದ ಮಾತುಗಳನ್ನಾಡಲುಪಕ್ರಮಿಸಿದನು. 'ಅಯ್ಯಾ ರಾಜನೇ! ಕೇಳು; ಬ್ರಾಹ್ಮಣರು ಎಷ್ಟು ಹೆಚ್ಚಾಗಿ ದಾನಮಾಡಿದರೂ ಸಂತುಷ್ಟರಾಗುವುದಿಲ್ಲವು. ಹಾಗೆ ಸಂತುಷ್ಟರಾದ ವಿಪ್ರರು ಕೇವಲ ವೇಷಧಾರಿಗಳು. ಇವರು ತಮ್ಮ ಸ್ವಧರ್ಮ ನಿರುತರಾಗಿಯೂ, ಡಂಭವಿಲ್ಲದವರಾಗಿಯೂ, ನಿರವಗ್ರಹಿಗಳಾಗಿಯೂ, ಮತ್ಸರವಿಲ್ಲದೇ ಇರುವವರಾಗಿಯೂ, ಕೋಪವನ್ನು ಜಯಿಸಿದವರಾಗಿಯೂ, ಇರುತ್ತಾರೆ. ಎಲೈ ಬುದ್ಧಿಶಾಲಿಯಾದ ಮಹಾರಾಜನೆ! ಇವರಿಂದಲೇ ಈ ಭೂಮಿಯು ನಿಂತಿರುವುದು. ಹೆಚ್ಚೇನು?' ನೀನಾದರೋ ಮೂರು ಲೋಕಗಳಲ್ಲಿಯೂ ಬಹಳವಾಗಿ ದಾನಮಾಡುವವನೆಂದು ಪ್ರಸಿದ್ಧಿಯನ್ನು ಹೊಂದಿರುವೆ. ಹಾಗೆ ಪ್ರಸಿದ್ಧಿಯನ್ನು ಹೊಂದಿದ್ದರೂ ನನಗೆ ನೀನೇನೂ ಹೆಚ್ಚಾಗಿ ಕೊಡಬೇಕಾದುದಿಲ್ಲವು. ಮೂರಡಿಯಷ್ಟು ಭೂಮಿಯನ್ನು ಮಾತ್ರ ಕೊಡುವವನಾಗು. ಹೆಚ್ಚಾಗಿ ಭೂಮಿಯನ್ನು ತೆಗೆದುಕೊಳ್ಳುವುದರಿಂದ ನನಗೇನು ಫಲವು? ಎಲೈ! ದೇವತೆಗಳನ್ನು ಸಂಹಾರಮಾಡುವ ಬಲಿಚಕ್ರವರ್ತಿಯೇ! ಕೇಳು; ನಾನು ಪ್ರವೇಶಮಾಡುವುದಕ್ಕೆ ಕಟ್ಟಲ್ಪಡುವ ಈ ಪರ್ಣಶಾಲೆಯು ಮೂರಡಿ ಭೂಮಿಯಿಂದಲೇ ಆಗುವುದು. ನನ್ನ ಶರೀರವೂ ಮೂರಡಿಗಳಿಂದಲೇ ತುಂಬುತ್ತೆಂಬುದರಲ್ಲಿ ಸಂಶಯವಿಲ್ಲವು. ಆದುದರಿಂದ ಎಲೈ ಬಲಿಯೇ! ನಿಜವಾಗಿಯೂ ನೀನು ದಾನಕರ್ತನಾಗಿರುವ ಪಕ್ಷದಲ್ಲಿ, ನಾನು ಕೇಳಿದ ಮೂರಡಿಗಳಿಗಾಗುವಷ್ಟು ಭೂಮಿಯನ್ನು ಕೊಡುವವನಾಗು.' ಇಂತೆಂದ ವಟುವಿನ ಮಾತುಗಳನ್ನು ಕೇಳಿ, ವಿರೋಚನನ ಮಗನಾದ ಬಲಿಯು, ಅವನನ್ನು ಕುರಿತು 'ಎಲೈ ಮಹಾಭಾಗನೇ! ಬೆಟ್ಟ, ಗುಡ್ಡ, ಕಾಡುಗಳಿಂದ ಕೂಡಿದ ಇಡೀ ಭೂಮಿಯನ್ನೇ ನಿನಗೆ ದಾನವಾಗಿ ಕೊಡುವೆನು. ನನ್ನಿಂದ ಕೊಡಲ್ಪಟ್ಟ ನನ್ನ ಸಂಬಂಧವಾದ ಈ ಭೂಮಿಯನ್ನು ತೆಗೆದು

ಕೊಳ್ಳುವವನಾಗು. ಎಲೈ ವಟುವೇ! ನೋಡು, ನೀನಾದರೋ ಯಾಚಕನು. ದೈತ್ಯರಲ್ಲಿ ದಾನವನ್ನು ಬೇಡುತ್ತಿರುವೆ. ಯಾಚಕನು ಅಲ್ಪಕನೇ ಆಗಲಿ, ದೊಡ್ಡವನೇ ಆಗಲಿ ಕೊಡುವದಾತನು ಎಲ್ಲವನ್ನೂ ವಿಮರ್ಶೆಮಾಡಿ ತನ್ನನ್ನು ನೋಡಿಕೊಂಡು ದಾನಮಾಡಬೇಕು. ಹಾಗೆ ದಾನಮಾಡುವವನು ಎಲ್ಲರಲ್ಲಿಯೂ ತನ್ನಂತೆಯೇ ಭಾವಿಸಿ ಉದಾರ ಸ್ವಭಾವವುಳ್ಳವನಾಗಿ ದಾನ ಮಾಡುತ್ತಾನೆ. ಆದುದರಿಂದ ಎಲೈ ವಟುವೇ! ಹಾಗೆ ತನ್ನಂತೆ ಭಾವಿಸದೆ ದಾನವನ್ನು ಗೈಯ್ಯದ ದಾತನಲ್ಲಿ ಮಂದಭಾಗ್ಯನಾದ ಯಾಚಕನು ಬೇಡಬಾರದು. ಇದಿಗೋ ಈಗ ನಾನು ಬೆಟ್ಟಗಳಿಂದಲೂ, ವನಗಳಿಂದಲೂ, ಪರ್ವತಗಳಿಂದಲೂ, ಸಮುದ್ರಗಳಿಂದಲೂ ಕೂಡಿದ, ಈ ಭೂಮಂಡಲವನ್ನು ನಿನಗೆ ದಾನವಾಗಿ ಕೊಡುವೆನು. ತೆಗೆದುಕೊಳ್ಳುವವನಾಗು' ಎಂದನು. ಬಲಿಯ ಮಾತುಗಳನ್ನು ಕೇಳಿ, ವಾಮನನು 'ಎಲೈ ಬಲಿಯೇ! ಮೂರು ಅಡಿಗಳಿಂದಲೇ ನಾನು ತೃಪ್ತನಾಗುವೆನು' ಎಂದು ಹೇಳಿದನು. ಇಂತೆಂದ ವಟುರೂಪಧಾರಿಯಾದ ವಿಷ್ಣುವಿನ ಮಾತುಗಳನ್ನು ಕೇಳಿ ಬಲಿಯು, 'ಎಲೈ ವಟುವೇ! ಮೂರು ಅಡಿಗಳಿಂದ ಅಲಂಕೃತವಾದ ನನ್ನಿಂದ ಕೊಡಲ್ಪಡುವ ಭೂಮಿಯನ್ನು ತೆಗೆದುಕೊಳ್ಳುವವನಾಗು' ಎಂದನು. ಆಗ ವಾಮನನು ನಸುನಗುತ್ತಾ 'ಎಲೈ ಸುವ್ರತನೆ! ಸಂಕಲ್ಪ ಪೂರ್ವಕವಾಗಿ ನಾನು ಕೇಳಿದ ಮೂರಡಿ ಭೂಮಿಯನ್ನು ಕೊಡಲು ಅರ್ಹನಾಗಿರುವೆ' ಎಂದನು. ಆಗಲಾ ಬಲಿಚಕ್ರವರ್ತಿಯು ಹಾಗೆಯೇ ಆಗಲೆಂದು ಒಪ್ಪಿಕೊಂಡು, ಕಶ್ಯಪನ ಮಗನಾದ ದೇವಋಷಿಗಳಿಂದ ಹೊಗಳಿಸಲ್ಪಟ್ಟ ವೈಭವವುಳ್ಳ ಮಹಾತ್ಮನಾದ ವಾಮನನನ್ನು ಅರ್ಘ್ಯಪಾದ್ಯಾದಿಗಳಿಂದ ಪೂಜಿಸಿ, ಯಾವಾಗ ದಾನವನ್ನು ಕೊಡಲು ಉದ್ಯುಕ್ತನಾದನೋ ಆಗಲೇ ದೈತ್ಯಗುರುವಾದ ಶುಕ್ರನು ಆ ಬಲಿಯನ್ನು ತಡೆದನು. ಇಂತು ಶುಕ್ರನು, ದಾನಮಾಡುತ್ತಲಿರುವ ಬಲಿಯನ್ನು ತಡೆದು 'ಎಲೈ ಬಲಿಯೆ! ವಟುರೂಪಧಾರಿಯಾದ ಈ ವಿಷ್ಣುವಿಗೆ ದಾನವನ್ನು

ಕೊಡತಕ್ಕದ್ದಲ್ಲವು. ಇಂದ್ರನಿಗೆ ಕ್ಷೇಮವನ್ನು ಉಂಟುಮಾಡ ಲೋಸುಗ ಈತನು ಬಂದಿರುವನು. ನಿನ್ನ ಯಜ್ಞಕ್ಕೆ ವಿಘ್ನವನ್ನು ಉಂಟುಮಾಡುವನು. ಆದುದರಿಂದ ಎಲೈ ಬಲಿಯೇ! ನೀನು ಖಂಡಿತವಾಗಿಯೂ ಅಧ್ಯಾತ್ಮದೀಪಕನಾದ ಈ ವಿಷ್ಣುವನ್ನು ಸತ್ಕ ರಿಸಬೇಡ. ಹಿಂದೆ ಈ ಮಹಾವಿಷ್ಣುವು ಮೋಹಿನೀ ರೂಪವನ್ನು ಧರಿಸಿ ದೇವತೆಗಳೆಲ್ಲರಿಗೂ ಅಮೃತವನ್ನು ಕೊಟ್ಟನು. ಈ ಅಮೃತ ವನ್ನು ಕುಡಿಯುಲೋಸಗ ದೇವತೆಗಳಗುಂಪಿನಲ್ಲಿ ಸೇರಿಕೊಂಡ ಮಹಾ ಪರಾಕ್ರಮಶಾಲಿಯಾದ ರಾಹುವನ್ನು ಕೊಂದನು. ಇವನಿಂದಲೇ ದಾನವರೆಲ್ಲರೂ ಹಿಂಸಿಸಲ್ಪಟ್ಟರು. ಮಹಾಬಲಶಾಲಿಯಾದ ಕಾಲ ನೇಮಿಯೂ ಇವನಿಂದಲೇ ಹತನಾದನು. ಆದುದರಿಂದ ಎಲೈ ಬಲಿಯೇ! ಇವನೇ ಮಹಾ ವಿಷ್ಣುವು. ವಿಶ್ವಪತಿಯು. ಮಹಾ ತ್ಮನೂ ಇವನೇ. ವಟುರೂಪಧಾರಿಯಾಗಿ ಬಂದಿರುವನು. ಆದುದರಿಂದ ಹಿತಾಹಿತಗಳನ್ನು ಚನ್ನಾಗಿ ವಿಮರ್ಶೆಮಾಡಿ ದಾನ ಮಾಡುವವನಾಗು' ಎಂದನು.

## ಅಧ್ಯಾಯ ೧೯

### ಬಲಿಯು ದಾನಮಾಡುವಿಕೆ - ವಿಷ್ಣುವು ವರವನ್ನೀಯುವಿಕೆ.

ಸೂತನು ಹೇಳುತ್ತಾನೆ:— ಕೇಳಿರೈ ಋಷಿಗಳಿರಾ! ಇಂತು ದೈತ್ಯಗುರುವಾದ ಶುಕ್ರನು ಬಲಿಚಕ್ರವರ್ತಿಗೆ ಬೋಧಿಸಲು, ಬಲಿಯು ಅವನನ್ನು ಕುರಿತು 'ಎಲೈ ಗುರುವೇ! ನೀನು ಹೇಳಿದ ಮಾತು ಗಳೆಲ್ಲವೂ ನನ್ನ ಹಿತಕ್ಕಾಗಿಯೇ ಹೇಳಿರುವೆ. ಆದರೆ ನೀನು ಹೇಳಿದ ಮಾತುಗಳು ನನ್ನ ಪ್ರೀತ್ಯರ್ಥವಾಗಿದ್ದರೂ, ನನಗದು ಅಹಿತ ವಾಗಿಯೇ ಇರುವುದು. ಈಗ ನಾನು ಈ ವಟುರೂಪಧಾರಿಯಾದ

ವಿಷ್ಣುವಿಗೆ, ಆತನು ಕೇಳಿರುವ ಭಿಕ್ಷೆಯನ್ನು ನೀಡುವೆನು. ಸರ್ವ ಕರ್ಮ ಫಲಸ್ವರೂಪಿಯಾದ ಈ ವಿಷ್ಣುವು ಸತ್ಪಾತ್ರನಾಗಿರುವನು. ಯಾರ ಹೃದಯದಲ್ಲಿ ವಿಷ್ಣುವು ನೆಲೆಗೊಂಡಿರುವನೋ, ಆತನು ಯಾವಾಗಲೂ ಪಾತ್ರತಮನು. ಯಾವ ವಿಷ್ಣುವಿನ ಸ್ಮರಣಮಾತ್ರದಿಂದಲೇ, ಎಲ್ಲವೂ ಪವಿತ್ರಗಳಾಗುತ್ತವೆಯೋ ಮತ್ತು ಯಾರಿಂದ ವೇದಗಳೂ, ಯಜ್ಞಗಳೂ, ಮಂತ್ರತಂತ್ರಾದಿಗಳೆಲ್ಲವೂ ಪೂರ್ಣತೆಯನ್ನು ಹೊಂದುತ್ತವೆಯೋ ಅಂತಹ ವಿಷ್ಣುವು ಇವನೆ. ಸರ್ವಾತ್ಮನಾದ ವಿಷ್ಣುವು ನನ್ನಲ್ಲಿ ಕೃಪೆಯಿಟ್ಟು ಉದ್ಧಾರಮಾಡಲೋಸುಗ ಬಂದಿರುವನೆಂಬುದರಲ್ಲಿ ಸಂಶಯವಿಲ್ಲವೆಂದು ತಿಳಿ' ಎಂದನು. ಬಲಿಯ ಮಾತುಗಳನ್ನು ಕೇಳಿ ಭೃಗುನಂದನನಾದ ಶುಕ್ರನು ಅತಿಯಾಗಿ ರೋಷಗೊಂಡು, ಧರ್ಮವತ್ಸಲನಾದ ಬಲಿಯನ್ನು ಶಪಿಸಲು ಉಪಕ್ರಮಿಸಿ, 'ಎಲೈ ಮಂದಬುದ್ಧಿಯುಳ್ಳ ಬಲಿಯೇ! ನನ್ನ ಮಾತುಗಳನ್ನು ನಿರಾಕರಿಸಿ ದಾನಮಾಡುವೆಯಲ್ಲವೆ? ಆದುದರಿಂದ ನೀನು ಗುಣಹೀನನಾಗಿ ನಿಶ್ರೀಕನಾಗು' ಎಂದು ನುಡಿದನು. ಇಂತು ಶುಕ್ರನು ಪರಮಾರ್ಥಜ್ಞನೂ, ಮಹಾತ್ಮನೂ, ಅಗಾಧವಾದ ತಿಳಿವಳಿಕೆಯುಳ್ಳವನೂ ತನ್ನ ಶಿಷ್ಯನೂ ಆದ ಬಲಿಯನ್ನು ಶಪಿಸಿ ತನ್ನ ಆಶ್ರಮಕ್ಕೆ ತೆರಳಿದನು. ಆಬಳಿಕ ವಿರೋಚನನ ಮಗನಾದ ಬಲಿಯು, ವಾಮನಮೂರ್ತಿಯನ್ನು ಅರ್ಘ್ಯಪಾದ್ಯಾದಿಗಳಿಂದರ್ಚಿಸಿ, ಆತನು ಕೇಳಿದ ಮೂರಡಿ ಭೂಮಿಯನ್ನು ಕೊಡಲುದ್ಯುಕ್ತನಾದನು. ಆಗ ತನ್ನ ಅರ್ಧಾಂಗಿಯಾದ ವಿಂಧ್ಯಾವಳಿಯೊಡನೆ ಕೂಡಿ ಬಲಿಯು ಆ ವಟುರೂಪ ಧಾರಿಯಾದ ವಿಷ್ಣುವಿಗೆ, ಸಂಕಲ್ಪ ಪೂರ್ವಕವಾಗಿಯೂ, ಶಾಸ್ತ್ರೋಕ್ತವಾಗಿಯೂ, ಭೂದಾನವನ್ನು ಮಾಡಿದನು. ಬಳಿಕ ಭಗವಂತನಾದ ವಿಷ್ಣುವು ಸಂಕಲ್ಪಮಾತ್ರದಿಂದಲೇ ಬೆಳೆದನು. ಇಂತು ಬೆಳೆದು ಒಂದೇ ಅಡಿಯಿಂದ ಸಕಲವಾದ ಭೂಮಿಯನ್ನೂ ಆಕ್ರಮಿಸಿದನು. ಆಗ ವಿಷ್ಣುವು ತ್ರಿವಿಕ್ರಮನಾದನು. ಈ ತ್ರಿವಿಕ್ರಮನಿಂದ ಜಗತ್ರಯಗಳೂ ಆಕ್ರಮಿಸಲ್ಪಟ್ಟವು. ಈತನ ಎರಡಡಿಗಳಿಂದಲೇ ಚರಾಚರಾತ್ಮಕವಾದ

ಪ್ರಪಂಚವೆಲ್ಲವೂ ಪೂರ್ಣವಾಯಿತು. ಆ ಬಳಿಕ ವಿಷ್ಣುವು ಮೊದಲಿನಂತೆಯೇ ವಟುಸ್ವರೂಪದಿಂದ ತನ್ನ ಆಸನದಲ್ಲಿ ಕುಳಿತುಕೊಂಡನು. ಸಿದ್ಧ, ಚಾರಣ, ಗಂಧರ್ವರೇ ಮೊದಲಾದ ದೇವತೆಗಳೂ, ಮುನಿಗಳೂ ಈ ವಟುರೂಪಧಾರಿಯಾದ, ಯಜ್ಞಪತಿಯಾದ, ವಿಷ್ಣುವನ್ನು ನೋಡಲೋಸುಗ ಬಂದರು. ಆಗ ಬ್ರಹ್ಮನು ಬಂದು ವಿಷ್ಣುವನ್ನು ಸ್ತುತಿಸಿದನು. ಇತರ ದೈತ್ಯರೂ ತ್ವರಾನ್ವಿತರಾಗಿ ಈ ಆಶ್ಚರ್ಯವನ್ನು ನೋಡಲು ಬಂದರು. ಇಂತು ಬಂದ ದೇವಾಸುರರಿಂದ ಕೂಡಿ, ಸಿಂಹಾಸನದಲ್ಲಿ ಕುಳಿತುಕೊಂಡ ವಟುವೇಷಧರನಾದ ವಿಷ್ಣುವು ಗರುಡನನ್ನು ಕುರಿತಿಂತೆಂದನು. 'ಎಲೈ ಗರುಡನೇ! ಈ ದೈತ್ಯನಾದ ಬಲಿಯು, ಕೇವಲ ಹುಡುಗಾಟಿಕೆಯಿಂದ ನನಗೆ ಮೂರಡಿ ಭೂಮಿಯನ್ನು ದಾನವಾಗಿ ಕೊಟ್ಟನು. ಈಗಲಾದರೋ ಎರಡಡಿಗಳನ್ನು ಮಾತ್ರ ತೆಗೆದುಕೊಂಡಿರುವೆನು. ಇನ್ನೊಂದಡಿ ಇರುವುದನ್ನು ಕೇಳಿ, ದುಷ್ಟಬುದ್ಧಿಯನ್ನುಳ್ಳ ಈ ಬಲಿಯು ಅದನ್ನು ಕೊಡದೇ ಇರುವನು. ಆದುದರಿಂದ, ಆ ಮೂರನೆಯ ಅಡಿಯನ್ನು ನೀನು ತೆಗೆದು ಕೊಳ್ಳುವವನಾಗು' ಎಂದು ನುಡಿಯಲು ಗರುಡನು, ವಿರೋಚನನ ಮಗನಾದ ಬಲಿಯನ್ನು ಕುರಿತಿಂತೆಂದನು. 'ಎಲವೋ ಮೂಢನಾದ ಬಲಿಯೇ! ಎಂತಹ ಜುಗುಪ್ಸೆಯನ್ನುಂಟುಮಾಡುವ ಕಾರ್ಯವನ್ನು ಮಾಡಿರುವೆ? ಅರ್ಥವನ್ನು ತಿಳಿಯದೆಯೇ, ನನ್ನ ಸ್ವಾಮಿಯಾದ ವಿಷ್ಣುವಿಗೆ ದಾನವನ್ನೇತಕ್ಕಾಗಿ ಕೊಟ್ಟೆ? ತುಚ್ಛನಾದ ನೀನು, ಔದಾರ್ಯದಿಂದ ಕಾರ್ಯಾಕಾರ್ಯಗಳನ್ನು ವಿಮರ್ಶೆಮಾಡಲಿಲ್ಲವೇಕೆ?' ಎಂದ ಗರುಡನ ಮಾತುಗಳನ್ನು ಕೇಳಿ ಬಲಿಯು, ಆತನನ್ನು ಕುರಿತು 'ಎಲೈ ಗರುಡನೇ! ನಾನು ಅಸಮರ್ಥನಾಗಿರುವೆನು. ಆದರೂ ಜಿಪುಣನಾಗುವುದಿಲ್ಲ. ಆವನಿಂದ ಯಾವನಿಂದ ಪ್ರಪಂಚವೆಲ್ಲವೂ ಮಾಡಲ್ಪಟ್ಟಿತೋ ಅಂತಹ ಮಹಾತ್ಮನಾದ ವಿಷ್ಣುವಿಗೆ ಏನನ್ನು ಕೊಡಲಿ? ಎಲೈ ಗರುಡನೆ! ನಾನು ಮಹಾತ್ಮನಾದ ವಿಷ್ಣುವಿನಿಂದ ಅಸಮರ್ಥನಾಗಿ ಮಾಡಲ್ಪಟ್ಟಿರುವೆನು' ಎಂದು ನುಡಿದನು. ಆಗಲಾ ಗರುಡನು ಬಲಿಯನ್ನು ಕುರಿತು 'ಎಲೈ ದೈತ್ಯೇಂದ್ರನಾದ ಬಲಿಯೇ!

ಈ ವಟುರೂಪನು ವಿಷ್ಣುವೆಂದು ತಿಳಿದಿದ್ದರೂ, ನಿನ್ನ ಗುರುವಾದ ಶುಕ್ರನಿಂದ ನಿವಾರಿಸಲ್ಪಟ್ಟಿದ್ದರೂ, ಈತನಿಗೆ ಭೂದಾನವನ್ನು ಕೊಟ್ಟು ಮರೆತುಬಿಟ್ಟೆಯಾ? ವಿಷ್ಣುವಿಗೆ ನೀನು ಕೊಡಬೇಕಾದ ಮೂರನೆಯ ಅಡಿಯನ್ನು ಕೊಡಲೇಬೇಕು. ಇಲ್ಲದಿದ್ದರೆ ನೀನು ನರಕದಲ್ಲಿ ಬೀಳುವೆ. ಎಲೆವೋ ಮೂಢನಾದ ಬಲಿಯೇ! ನಮ್ಮ ಸ್ವಾಮಿಗೆ ಕೊಡಬೇಕಾದ ಮೂರನೆಯ ಅಡಿಯನ್ನೇತಕ್ಕಾಗಿ ಕೊಡುವುದಿಲ್ಲ? ನಿನ್ನಿಂದ ಆ ಮೂರನೆಯ ಅಡಿಯನ್ನು ಬಲಾತ್ಕಾರದಿಂದಲಾದರೂ ತೆಗೆದುಕೊಳ್ಳುವೆನು.' ಎಂದು ಹೇಳುತ್ತ ಗರುಡನು ಆ ಮಹಾಸುರನನ್ನು ವಾರುಣಾಸ್ತ್ರಗಳಿಂದ ಬಂಧಿಸಿದನು. ತನ್ನ ಪತಿಯನ್ನು ಬಂಧಿಸಿರುವುದನ್ನು ಕಂಡ, ಬಲಿ ಪತ್ನಿಯಾದ ವಿಂಧ್ಯಾವಳಿಯು, ಒಂದು ಬಾಣವನ್ನೇರಿಸಿ, ವಾಮನನ ಮುಂದೆ ನಿಂತಳು. ಆಗ ವಾಮನನು ಆಕೆಯನ್ನು ಕುರಿತು, ನೀನು ಯಾರೆಂದು ಕೇಳಿದನು. ಬಳಿಕ ಅಸುರಾಧಿಪನಾದ ಪ್ರಹ್ಲಾದನು, 'ಈಕೆಯು ಬಲಿಪತ್ನಿಯಾದ ವಿಂಧ್ಯಾವಳಿಯು' ಎಂದನು. ಪ್ರಹ್ಲಾದನ ಮಾತುಗಳನ್ನು ಕೇಳಿ ವಾಮನನು, ಆ ವಿಂಧ್ಯಾವಳಿಯನ್ನು ಕುರಿತು, 'ಎಲೌ ವಿಂಧ್ಯಾವಳಿಯೇ! ನನ್ನಿಂದ ನಿನಗೇನಾಗಬೇಕು' ಎಂದು ಕೇಳಲು ವಿಂಧ್ಯಾವಳಿಯು ಹೇಳುತ್ತಾಳೆ. 'ಎಲೈ ವಿಷ್ಣುವೆ! ಈ ಗರುಡನು ನನ್ನ ಪತಿಯನ್ನು ಏತಕ್ಕಾಗಿ ಬಂಧಿಸಿರುವನೆಂಬುದನ್ನು ಜಾಗ್ರತೆಯಾಗಿ ತಿಳಿಸುವವನಾಗು' ಎಂದು ಕೇಳಲು ವಟುರೂಪಧಾರಿಯಾದ ವಿಷ್ಣುವು ಅವಳನ್ನು ಕುರಿತು, 'ಎಲೌ ವಿಂಧ್ಯಾವಳಿಯೇ! ನಿನ್ನ ಪತಿಯು ನನಗೆ ಮೂರಡಿ ಭೂಮಿಯನ್ನು ದಾನವಾಗಿ ಕೊಟ್ಟನಷ್ಟೆ! ಆಬಳಿಕ ನಾನು ಎರಡಡಿಯಿಂದಲೇ ತ್ರಿಲೋಕಗಳನ್ನು ಆಕ್ರಮಿಸಿಕೊಂಡೆನು. ಆದುದರಿಂದ ಎನ್ನೊಂದಡಿಯನ್ನು ನನಗೆ ಕೊಡಬೇಕು. ಆದುದರಿಂದಲೇ ನನ್ನಾಜ್ಞೆಯಿಂದ ಈ ಗರುಡನು ನಿನ್ನ ಪತಿಯನ್ನು ಬಂಧಿಸಿರುವನು' ಎಂದನು.

ಇಂತು ನುಡಿದ ವಿಷ್ಣುವನ್ನು ಕುರಿತು ವಿಂಧ್ಯಾವಳಿಯು ಎಲೈ ಪ್ರಭುವೆ! ನನ್ನ ಪತಿಯು ಅವನ ಮಾತಿನಂತೆಯೇ ಮೂರಡಿಗಳನ್ನು

ನಿನಗೆ ಕೊಡಲಿಲ್ಲವೆ? ಆದರೆ ನೀನು ತ್ರಿವಿಕ್ರಮನಾಗಿ ಮೂರು ಲೋಕಗಳನ್ನೂ ಆಕ್ರಮಿಸಿದೆಯಲ್ಲವೆ? ಆದುದರಿಂದ ನಮಗೆ ಸ್ವರ್ಗದಲ್ಲಿಯೇ ಆಗಲಿ, ಭೂಲೋಕದಲ್ಲಿಯೇ ಆಗಲಿ ಸ್ಥಳ ಹೀನವಾಯಿತು. ಎಲೈ ಜಗತ್ಪತಿಯೇ! ನಿನಗೆ ಏನನ್ನು ಕೊಡಬೇಕು?' ಎಂದಳು. ವಿಂಧ್ಯಾವಳಿಯ ಮಾತುಗಳನ್ನು ಕೇಳಿ ವಿಷ್ಣುವು ನಸುನಗುತ್ತಾ ಆಕೆಯನ್ನು ಕುರಿತು 'ಎಲೌ! ಪತಿವ್ರತೆಯೇ! ಈಗ ನನಗೆ ಕೊಡಬೇಕಾದ ಮೂರಡಿಗಳನ್ನು ಎಲ್ಲಿ ಕೊಡುವೆ? ಅದನ್ನು ಜಾಗ್ರತೆಯಾಗಿ ತಿಳಿಸುವವಳಾಗು' ಎಂದನು. ಆಗ ಪತಿವ್ರತೆಯಾದ ವಿಂಧ್ಯಾವಳಿಯು, ಅವನನ್ನು ಕುರಿತು ನುಡಿದಳದೆಂತೆನೆ: 'ಎಲೈ ಜಗದೇಕ ಬಂಧುವಾದ ನಾರಾಯಣನೆ! ನೀನಾದರೋ ತ್ರಿವಿಕ್ರಮರೂಪದಿಂದ ಮೂರು ಲೋಕಗಳನ್ನೂ ಆಕ್ರಮಿಸಿರುವೆಯಲ್ಲವೆ? ಅದೂ ಅಲ್ಲದೆ ಚರಾಚರಾತ್ಮಕವಾದ ಭೂಮಂಡಲವೆಲ್ಲವನ್ನೂ ಆಕ್ರಮಿಸಿರುವೆ. ಹೀಗಿರುವಲ್ಲಿ ನೀನು ಕೇಳಿದುದನ್ನು ನನ್ನ ಪತಿಯು ಹೇಗೆ ಕೊಡುವನು? ಆದುದರಿಂದ ಎಲೈ ವಿಷ್ಣುವೇ! ಅದನ್ನು ಮಾತ್ರ ಬಿಟ್ಟು ಬಿಡು. ನನ್ನ ಪತಿಯು ಹೇಳಿದಂತೆ ಮೂರಡಿಗಳನ್ನು ಕೊಡುವನೆಂಬುದರಲ್ಲಿ ಸಂಶಯವಿಲ್ಲವು. ನಿನ್ನ ಒಂದು ಪಾದವನ್ನು ನನ್ನ ತಲೆಯಮೇಲಿಡುವವನಾಗು. ಇನ್ನೊಂದಡಿಯನ್ನು ನನ್ನ ಮಗುವಿನ ತಲೆಯಮೇಲೆ ಇಡುವವನಾಗು. ಎಲೈ ಜಗನ್ನಾಥನೇ! ನಿನ್ನ ಮೂರನೆಯ ಅಡಿಯನ್ನು ನನ್ನ ಪತಿಯ ತಲೆಯಮೇಲೆ ಇಡುವವನಾಗು. ಈ ರೀತಿ ನಿನಗೆ ಮೂರಡಿಗಳನ್ನು ಕೊಡುವೆನು.' ಎಂದಳು. ಆಗ ವಿಷ್ಣುವು ವಿಂಧ್ಯಾವಳಿಯ ಮಾತುಗಳನ್ನು ಕೇಳಿ ಸಂತಸಗೊಂಡು, ವಿರೋಚನನ ಮಗನಾದ ಬಲಿಯನ್ನು ಕುರಿತು, 'ಎಲೈ ಬಲಿಯೇ! ನೀನು, ದೈತ್ಯರಿಂದೊಡಗೂಡಿ ಸುತಲವನ್ನು ತಡಮಾಡದೆ ಹೊರಟು ಚಿರಂಜೀವಿಯಾಗಿಯೂ, ಸುಖಿಯಾಗಿಯೂ ಇರು. ನೀನುಮಾಡಿದ ಕಾರ್ಯದಿಂದ ನಾನು ಸಂತುಷ್ಟನಾಗಿರುವೆನು. ದಾನಮಾಡುವವರಲ್ಲೆಲ್ಲಾ ನೀನೇ ಶ್ರೇಷ್ಠನಾಗಿರುವೆ. ಎಲೈ ಬಲಿಯೇ! ನೀನು ಮಂಗಳಕರವಾದ ವರವನ್ನು ಬೇಡು'

ನಿನಗಿಷ್ಟವಿರುವುದನ್ನೆಲ್ಲವನ್ನೂ ಕೊಡುವೆನು' ಎಂದನು. ಆಗ ಬಲಿಯು ಬಂಧವಿಮುಕ್ತನಾಗಿ, ವಿಷ್ಣುವಿನಿಂದ ಆಲಿಂಗಿಸಿಕೊಳ್ಳಲ್ಪಟ್ಟವ ನಾದನು. ಆ ಬಳಿಕ ಬಲಿಚಕ್ರವರ್ತಿಯು ನಾರಾಯಣನನ್ನು ಕುರಿತು 'ಎಲೈ ವಿಷ್ಣುವೇ! ಈ ಚರಾಚರಾತ್ಮಕವಾದ ಪ್ರಪಂಚ ವೆಲ್ಲವೂ ನಿನ್ನಿಂದ ಸೃಷ್ಟಿಯಾಗಿರುವುದು. ಆದುದರಿಂದ ಪ್ರಪಂಚ ಸಂಬಂಧವಾದುದನ್ನು ಸ್ವಲ್ಪವಾದರೂ ನಾನಿಷ್ಟಪಡುವುದಿಲ್ಲ. ಎಲೈ ದೇವನೆ! ನಿನ್ನ ಪಾದಕಮಲಗಳನ್ನು ಬಿಟ್ಟು ನನಗಿನ್ನೇನೂ ಬೇಕಾಗಿ ಲ್ಲವು. ಎಲೈ! ಜನಾರ್ದನನೆ! ಸದಾಕಾಲದಲ್ಲಿಯೂ, ನಿನ್ನ ಪಾದ ಕಮಲಗಳಲ್ಲಿ ಭಕ್ತಿಯಿರಲೆಂದು ಬೇಡುವೆನು ' ಎಂದನು. ಬಲಿಯ ಮಾತುಗಳನ್ನು ಕೇಳಿ ಭೂತಭಾವನನಾದ ನಾರಾಯಣನು ಅತಿ ಸಂತಸ ಗೊಂಡವನಾಗಿ ಅವನನ್ನು ಕುರಿತು 'ಎಲೈ ಬಲಿಯೇ! ನೀನು, ನಿನ್ನ ಜ್ಞಾತಿಗಳಿಂದಲೂ, ಬಂಧುವರ್ಗಗಳಿಂದಲೂ ಒಡಗೂಡಿದವನಾಗಿ ಸುತಲವನ್ನು ಕುರಿತು ಹೊರಡುವವನಾಗು, ಎಂದನು. ಆಗಲಾ ಬಲಿಯು ನಾರಾಯಣನನ್ನು ಕುರಿತು, 'ಎಲೈ ದೇವಾ! ಸುತಲದಲ್ಲಿ ನನಗೇನು ಕೆಲಸವು? ನಿನ್ನ ಸನ್ನಿಧಿಯಲ್ಲಿಯೇ ವಾಸಮಾಡಿಕೊಂಡಿ ರುವೆನು. ನೀನು ನನಗೆ ಇದನ್ನು ಬಿಟ್ಟು ಬೇರೆ ಆಜ್ಞೆಯನ್ನು ಕೊಡ ತಕ್ಕದ್ದಲ್ಲವು' ಎಂದನು. ಬಲಿಯ ಮಾತುಗಳನ್ನು ಕೇಳಿ ನಾರಾ ಯಣನು ಅತಿ ಕೃಪಾಪೂರ್ಣನಾಗಿ ಅವನನ್ನು ಕುರಿತು 'ಎಲೈ ಬಲಿ ಚಕ್ರವರ್ತಿಯೇ! ನಾನು ಸದಾಕಾಲದಲ್ಲಿಯೂ, ವೈಕುಂಠವನ್ನು ತ್ಯಜಿಸಿ, ನಿನ್ನ ಮನೆಯ ಬಾಗಿಲಿನಲ್ಲಿ ಕಾದು ವಾಸಮಾಡು ವೆನು. ಕೇಳು ಇದು ನಿನಗೆ ವರವಾಗಿ ವರದನಾದ ನಾನು ವರವನ್ನು ಕೊಟ್ಟಿರುವೆನು ' ಎಂದನು. ಆಗ ಬಲಿಯು ತನ್ನ ಬಂಧುವರ್ಗಗಳಿಂದಲೂ, ಅಸುರರಿಂದಲೂ, ಬಾಣನೇ ಮೊದಲಾದ ನೂರುಮಂದಿ ಮಕ್ಕಳೊಂದಿಗನಾಗಿ, ಸುತಲದಲ್ಲಿ ವಾಸಮಾಡಿ ಕೊಂಡು, ದಾತೃಗಳಿಗೆಲ್ಲರಿಗೂ ಸದ್ಗತಿಯನ್ನು ಕೊಡುವವನಾಗಿ ದ್ದನು. ಕೇಳಿರೈ! ಋಷಿಗಳಿರಾ! ಮೂರು ಲೋಕಗಳಲ್ಲಿದ್ದ ಯಾಚಕರೆ ಲ್ಲರೂ ಆ ದಾನಶೀಲನಾದ ಬಲಿಚಕ್ರವರ್ತಿಯ ಮನೆಗೆ ಬರುತ್ತಿದ್ದರು.

ಬಾಗಿಲಿನಲ್ಲಿ ನಿಂತಿದ್ದ ನಾರಾಯಣನು ಭುಕ್ತಿಗಾಗಿ ಇಷ್ಟಪಡುವ ಯಾಚಕರಿಗೂ, ಮುಕ್ತಿಮಾರ್ಗವನ್ನು ಇಷ್ಟಪಡುವ ಯಾಚಕರಿಗೂ, ಯಾರಿಗೆ ಯಜ್ಞಮಾಡುವುದರಲ್ಲಿ ಇಷ್ಟವೋ ಅಂತಹವರೆಲ್ಲರಿಗೂ ದಾನಮಾಡುತ್ತಿದ್ದನು. ಈ ಪ್ರಕಾರವಾಗಿ ಬಲಿಯು, ಹಿಂದಿನ ಜನ್ಮದಲ್ಲಿ ಅಶುದ್ಧವಾದ ಭೂಮಿಯಲ್ಲಿ ಬಿದ್ದ ಹೂ, ಗಂಧ, ತಾಂಬೂಲಗಳನ್ನು ಶಂಕರನಿಗೆ ಅರ್ಪಿಸಿದುದರಿಂದ ಈ ಜನ್ಮದಲ್ಲಿ ಪರಶಿವನ ಪ್ರಸಾದದಿಂದ ಈ ಪದವಿಗೆ ಬಂದನು. ಎಲೈ ಬ್ರಾಹ್ಮಣರಿರಾ ! ಶ್ರೇಷ್ಠವಾದ ಭಕ್ತಿಯಿಂದ ಪರಶಿವನಿಗೆ ಗಂಧ, ಪುಷ್ಪ ತಾಂಬೂಲಾದಿಗಳನ್ನು ಕೊಡುವುದರಿಂದ ಶಿವಸಾಯುಜ್ಯ ಉಂಟಾಗುವುದೆಂಬುದನ್ನು ಮರಳಿಯೂ ಹೇಳಬೇಕಾದುದೇನಿರುವುದು? ಕೇಳಿರೈ ಋಷಿಗಳಿರಾ! ಶಿವನಿಗಿಂತಲೂ ಪೂಜನೀಯರಾದವರು ಈ ಪ್ರಪಂಚದಲ್ಲಿ ಯಾರೂ ಇಲ್ಲವು. ಕೇಳಿರಿ! ಮೂಕರೇ ಆಗಲಿ, ಕುರುಡರೇ ಆಗಲಿ, ನಪುಂಸಕರೇ ಆಗಲಿ, ಜಡರೇ ಆಗಲಿ, ಜಾತಿಹೀನರೇ ಆಗಲಿ, ಚಂಡಾಲರೇ ಆಗಲಿ, ಶ್ವಪಚರೇ ಆಗಲಿ ಶಿವಭಕ್ತಿಯನ್ನು ಮಾಡಿದರೆ ಉತ್ತಮತರವಾದ ಗತಿಯನ್ನು ಹೊಂದುತ್ತಾರೆ. ಆದುದರಿಂದ ಬುದ್ಧಿವಂತರಾದವರು ಸದಾಶಿವನನ್ನು ಪೂಜಿಸಬೇಕು. ಎಲ್ಲೆಲ್ಲಿ ಜೀವವಿಧೆಯೋ ಅಲ್ಲೆಲ್ಲಾ ಶಿವನಿರುವನು. ಶಿವನಿಲ್ಲದೇ ಇರುವುದು ಏನಾದರೂ ಅಮಂಗಳವೇ ಸರಿ. ಕೇಳಿರೈ ಋಷಿಗಳಿರಾ! ಈ ಬ್ರಹ್ಮ, ವಿಷ್ಣು, ರುದ್ರರು, ಗುಣಗಳಿಂದ ಕೂಡಿದವರು. ಬ್ರಹ್ಮನು ರಜೋಗುಣದಿಂದ ಕೂಡಿರುವನು. ವಿಷ್ಣುವು ಸತ್ವಗುಣದಿಂದ ಕೂಡಿರುವನು. ಆದರೆ ಈಗ ಲಿಂಗಸ್ವರೂಪನಾದ ಮಹೇಶನು ಗುಣಾತೀತನು. ಆದುದರಿಂದ ಲಿಂಗಸ್ವರೂಪಿಯಾದ ಮಹಾದೇವನನ್ನು ಮುಮುಕ್ಷುಗಳು ಪೂಜಿಸಬೇಕು. ಭುಕ್ತಿಮುಕ್ತಿದಾಯಕರಲ್ಲಿ ಶಿವನನ್ನು ಬಿಟ್ಟರೆ ಇನ್ಯಾರೂ ಇಲ್ಲವು.

# ಅಧ್ಯಾಯ ೨೦

-++++++-

## ತಾರಕಾಸುರನ ಕಥೆ—ಪಾರ್ವತೀ ಜನನ.

ಋಷಿಗಳು ಕೇಳುತ್ತಾರೆ 'ಎಲೈ ಸೂತಪುರಾಣಿಕನೆ! ಬ್ರಹ್ಮನೂ ವಿಷ್ಣುವೂ, ರುದ್ರನೂ, ತ್ರಿಗುಣಗಳಿಂದ ಕೂಡಿದವರೆಂದು ಹೇಳಿದೆಯಲ್ಲವೆ? ಹೀಗಿರುವಲ್ಲಿ ಲಿಂಗರೂಪನಾದ ಪರಶಿವನು ಸತ್ವರಜಸ್ತಮೋಗುಣಾತೀತನಾದುದು ಹೇಗೆ ? ಸತ್ವರಜಸ್ತಮೋಗುಣಗಳಿಂದ ವ್ಯಾಪಿಸಲ್ಪಟ್ಟಿರುವ ಚರಾಚರಾತ್ಮಕವಾದೀ ಪ್ರಪಂಚವೆಲ್ಲವೂ ಮಾಯೆಯಿಂದ ಪೂರ್ಣವಾಗಿ ಕೂಡಿರುವಂತೆ ಕಾಣುವುದು. ಈ ಪ್ರಪಂಚವು ತ್ರಿಗುಣಗಳಿಂದ ಮಹತ್ತರವಾಗಿ ವ್ಯಾಪಿಸಲ್ಪಟ್ಟಿರುವುದೋ? ಅಥವಾ ಸ್ವಲ್ಪವಾಗಿ ವ್ಯಾಪಿಸಲ್ಪಟ್ಟಿರುವುದೋ? ಲಿಂಗವನ್ನು ಬಿಟ್ಟು, ಯಾತರಿಂದ ಈ ಪ್ರಕಾರವಾಗಿ ಕಾಣಿಸುವುದು? ಎಲೈ ಸೂತನೇ! ಈ ಪ್ರಪಂಚವು ಮಹತ್ತರವಾಗಿಯೂ, ಅಲ್ಪವಾಗಿಯೂ, ಕೃತಕವಾಗಿಯೂ, ಇರುವುದರಿಂದ ನಶ್ವರವಲ್ಲವೆ? ಎಲೈ ಸೂತನೇ! ಇದನ್ನೆಲ್ಲವನ್ನೂ ಚನ್ನಾಗಿ ವಿಮರ್ಶಿಸಿ ನಮ್ಮ ಸಂಶಯವನ್ನು ಪರಿಹಾರ ಮಾಡುವವನಾಗು. ನೀನು ವ್ಯಾಸನ ಪ್ರಸಾದದಿಂದ ಸಕಲವನ್ನೂ ಅರಿತಿರುವೆ. ನಿನ್ನನ್ನು ಬಿಟ್ಟರೆ ಹಾಗೆ ಸಕಲವನ್ನೂ ತಿಳಿದವರು ಇನ್ನಾರೂ ಇಲ್ಲವು. ಆದುದರಿಂದ ದಯವಿಟ್ಟು ಈ ವಿಷಯವನ್ನು ಹೇಳುವವನಾಗು.' ಇಂತೆಂದು ನುಡಿದ ಮಹರ್ಷಿಗಳ ಮಾತುಗಳನ್ನು ಕೇಳಿದ ಸೂತಪುರಾಣಿಕನು ನುಡಿದನದೆಂತೆನೆ: ಎಲೈ ಋಷಿಗಳಿರಾ ಕೇಳಿರಿ! ಪೂರ್ವದಲ್ಲಿ ವ್ಯಾಸಮಹರ್ಷಿಯನ್ನು ಶುಕನು 'ಎಲೈ ತಂದೆಯೇ! ನೀನು ಲಿಂಗರೂಪನಾದ ಆ ಶಂಭುವು ನಿರ್ಗುಣನೆಂದು ಹೇಳುವೆಯಲ್ಲವೆ? ಈ ವಿಷಯದಲ್ಲಿ ನನಗೆ ಸಂಶಯವಾಗಿರುವುದು. ಈ ಸಂಶಯವನ್ನು ಪರಿಹಾರಮಾಡುವವನಾಗು,' ಎಂದು ಕೇಳಲು ವ್ಯಾಸನು ಹೇಳುತ್ತಾನೆ. 'ಎಲೈ ವತ್ಸನೇ ಕೇಳು.

ನಂದಿಯು ಈ ವಿಷಯವನ್ನು ಅಗಸ್ತ್ಯನಿಂದ ಕೇಳಲ್ಪಟ್ಟವನಾಗಿ ಹೇಳಿದನು. ಆಗ ನಾನದನ್ನೆಲ್ಲವನ್ನೂ ಕೇಳಿರುವೆನು. ಎಲೈ ಶುಕನೇ! ಲಿಂಗಸ್ವರೂಪಿಯಾದ ಪರಮಾತ್ಮನಾದ ಪರಶಿವನನ್ನು ನಿರ್ಗುಣನೆಂದು ತಿಳಿ. ಶಾಶ್ವತಳಾಗಿಯೂ ಗುಣಾತೀತಳಾಗಿಯೂ, ಪರಾಶಕ್ತಿಯೂ ಆಗಿರುವ ಮಾಯೆಯೂ, ಹಾಗೆಯೇ ಇರುವಳೆಂದು ತಿಳಿಯುವವನಾಗು. ಪಾರಮಾರ್ಥಿಕವಾಗಿಯೂ, ಚರಾಚರಾತ್ಮಕವಾದ ನಶ್ವರವಾದ ಸತ್ವರಜಸ್ತಮೋಗುಣಗಳಿಂದ ಕೂಡಿರುವ ಈ ಪ್ರಪಂಚವೆಲ್ಲವೂ ಪರಾಶಕ್ತಿಯಿಂದಲೇ ಮಾಡಲ್ಪಟ್ಟಿತು. ನಿರಂಜನನಾದ ಪರಮಾತ್ಮನು ಲಿಂಗಸ್ವರೂಪನಾದ ಪರಶಿವನೊಬ್ಬನೆ. ಯಾವುದರಲ್ಲಿ ಸಕಲವೂ ಲೀನವಾಗುವುದೆಂದು ಹಿಂದೆ ಹೇಳಲ್ಪಟ್ಟಿತೋ ಆ ಲಿಂಗದಲ್ಲಿ ಪ್ರಕೃತಿಯೊಡಗೂಡಿದ ಸತ್ವರಜಸ್ತಮೋಗುಣಗಳೂ ನಾಶವಾಗುವುವು. ಆ ಲಿಂಗದಲ್ಲಿಯೇ ಪರಾಶಕ್ತಿಯೂ ಲಯವನ್ನು ಹೊಂದಿದಳು. ತ್ರಿಗುಣಕರ್ತಳಾದ ಪರಾಶಕ್ತಿಯೇ, ಸಕಲವೂ ಲೀನವಾಗುವ ಲಿಂಗದಲ್ಲಿ ಲೀನವಾದಳೆಂದಮೇಲೆ ತ್ರಿಗುಣಯುಕ್ತರಾದ ಬ್ರಹ್ಮ ವಿಷ್ಣು ಮಹೇಶ್ವರರೂ, ಲಿಂಗದಲ್ಲಿ ಲೀನವಾಗುವರೆಂದರ್ಥವು. ಎಲೈ ಮಹಾ ಭಾಗ್ಯನಾದ ಶುಕನೇ! ಶಿವನಾಜ್ಞೆಯಿಂದ ತ್ರಿಗುಣಗಳಿಂದ ಬದ್ಧವಾದ ಚರಾಚರಾತ್ಮಕವಾದೀ ಪ್ರಪಂಚವು, ಯಾವಲಿಂಗದಲ್ಲಿ ಲೀನವಾಯಿತೋ ಅಂತಹ ಲಿಂಗವನ್ನು ಪೂಜಿಸಬೇಕು.' ಎಂದು ಹೇಳಲು ಶುಕನು ಸುಮ್ಮನಾದನು. ಆದುದರಿಂದ ಎಲೈ ಋಷಿಗಳಿರಾ! ಲಿಂಗವು ಸಾಕ್ಷಾತ್ತಾಗಿ ಗುಣಾತೀತವೆಂದು ತಿಳಿಯಿರಿ. ಗುಣಗಳನ್ನೆಲ್ಲಾ ಲಯಮಾಡುವ ಲಿಂಗವು ಕೀರ್ತಿಸಲ್ಪಡುತ್ತದೆ. ಈಶ್ವರನು ಸುಖವನ್ನೂ ಕೊಡುವವನೆಂದು ಹೇಳುವುದಿಲ್ಲವೇ? ಎಲ್ಲರೂ, ಗುಣಾತೀತನಾದ ಪರಶಿವನು ಚರಾಚರಾತ್ಮಕವಾದೀ ಪ್ರಪಂಚವೆಲ್ಲಕ್ಕೂ ಆಶ್ರಯಭೂತನೆಂದು ಹೇಳುವದಿಲ್ಲವೇ? ಎಲೈ ಋಷಿಗಳಿರಾ! ಪರಶಿವನಿಗಿರುವ, ಎಲ್ಲ ಹೆಸರುಗಳೂ ಸಾರ್ಥಕವಾಗಿಯೇ ಇವೆ. ಪರಮೇಷ್ಠಿಯಾದ ಶಂಭುವಿನಿಂದ ಸಕಲವಾದೀ ಪ್ರಪಂಚವು ವ್ಯಾಪಿಸಲ್ಪಟ್ಟಿರುವುದು.

ಇಂತೆಂದು ನುಡಿದ ಸೂತಪುರಾಣಿಕನನ್ನು ಕುರಿತು ಶೌನಕಾದಿ ಮಹರ್ಷಿಗಳು 'ಎಲೈ ಸೂತನೆ! ಹಿಂದೆ, ದಕ್ಷಬ್ರಹ್ಮನ ಯಜ್ಞಕರ್ಮದಲ್ಲಿ, ಶಿವಸತಿಯಾದ ದಾಕ್ಷಾಯಣಿಯು, ಯಜ್ಞಕುಂಡದಲ್ಲಿ ಬಿದ್ದು ಅಂತರ್ಧಾನಳಾದಳಲ್ಲವೇ? ಆಕೆಯು ಪುನಃ ಯಾವಾಗ ಅವತರಿಸಿದಳು? ಪರಾಶಕ್ತಿಯು ಪರಶಿವನನ್ನು ಯಾವಾಗ ಕೂಡಿದಳು? ಎಲೈ ಸೂತನೇ! ಸಕಲವಾದ ಈ ವೃತ್ತಾಂತವನ್ನು ತಿಳಿಸುವವನಾಗು. ನಿನ್ನನ್ನು ಬಿಟ್ಟರೆ ನಮಗೆ ಶಿವ ಧರ್ಮಗಳನ್ನು ಹೇಳುವವರು ಮತ್ತಾರೂ' ಇಲ್ಲವು ಎಂದರು. ಆಗ ಸೂತಪುರಾಣಿಕನು ಹೇಳುತ್ತಾನೆ. ಕೇಳಿರೈ! ಯಾವಾಗ ದಾಕ್ಷಾಯಣಿಯು, ದಕ್ಷಬ್ರಹ್ಮನ ಯಜ್ಞಕುಂಡದಲ್ಲಿ ಬಿದ್ದು ಸುಟ್ಟುಹೋದಳೋ, ಆಗಲೇ ಪರಶಿವನೂ ಶಕ್ತಿಯಿಂದ ಅಗಲಿದವನಾಗಿ ಶ್ರೇಷ್ಠವಾದ ತಪವನ್ನಾಚರಿಸಿದನು. ಆಗಲಾ ವೃಷಭಧ್ವಜನು ಲೀಲೆಯಿಂದ ತಾಳಿದ ಶರೀರ ಉಳ್ಳವನಾಗಿ ನಂದಿ, ಭೃಂಗಿ, ಚಂಡ, ಮುಂಡಾದಿ ದಶಕೋಟಿ ಶಿವಗಣಗಳಿಂದೊಡಗೂಡಿ ಹಿಮವತ್ಪರ್ವತದಲ್ಲಿ ತಪವನ್ನಾಚರಿಸಿದನು. ಆ ಸಮಯದಲ್ಲಿ ಅವಿದ್ಯೆಯಿಂದ ದೈತ್ಯರು ಹುಟ್ಟಿದರು. ವಿಷ್ಣುವಿನಿಂದ ಬದ್ಧರಾದ ಬಲಿಯೇ ಮೊದಲಾದ ರಾಕ್ಷಸರು ಇಂದ್ರನಿಗೆ ಉಪದ್ರವವನ್ನುಂಟುಮಾಡಿದರು. ಅಲ್ಲದೆ ಮಹಾ ಭಯಂಕರರಾಗಿಯೂ, ಯಮಶರೀರದಂತೆ ಶರೀರ ಉಳ್ಳವರಾಗಿಯೂ, ದುಷ್ಟಸ್ವಭಾವವುಳ್ಳವರಾಗಿಯೂ, ಇರುವ ಅನೇಕ ರಾಕ್ಷಸರು ಪ್ರಜೆಗಳಿಗೆ ಹಿಂಸೆಯನ್ನುಂಟುಮಾಡಿದರು. ಈ ಮಧ್ಯದಲ್ಲಿ ನಮುಚಿಯ ಮಗನಾದ ತಾರಕಾಸುರನು ಉಗ್ರತರವಾದ ತಪಸ್ಸನ್ನಾಚರಿಸಿ ಬ್ರಹ್ಮನನ್ನು ಸಂತೋಷಗೊಳಿಸಿದನು. ಬ್ರಹ್ಮನೂ ತಾರಕಾಸುರನ ತಪಸ್ಸಿಗೆ ಮೆಚ್ಚಿದನು. ಆಗಲಾ ಬ್ರಹ್ಮನು ತಾರಕಾಸುರನನ್ನು ಕುರಿತು 'ಅಯ್ಯಾ ತಾರಕಾಸುರನೇ! ನಿನಗೆ ಮಂಗಳಕರವಾದ ವರವನ್ನು ಬೇಡಿಕೋ. ನಿನಗಿರುವ ಸಕಲ ಇಷ್ಟಗಳನ್ನು ಸಂಪೂರ್ಣಗೊಳಿಸುವೆನು' ಎಂದು ನುಡಿದನು. ಆಗ ತಾರಕಾಸುರನು ಎಲೈ ಬ್ರಹ್ಮನೇ ನೀನು ನನ್ನಲ್ಲಿ ಪ್ರಸನ್ನನಾಗಿದ್ದರೆ, ಅಮರತ್ವವನ್ನೂ ಸಾಯದೇ

ಇರುವಿಕೆಯನ್ನು ಯಾರಿಂದಲೂ ಗೆಲ್ಲಲಸಾಧ್ಯತೆಯನ್ನು ದಯಪಾಲಿಸುವವನಾಗು' ಎಂದನು. ಇಂತು ನುಡಿದ ದುರಾತ್ಮನಾದ ತಾರಕನನ್ನು ಕುರಿತು ಬ್ರಹ್ಮನು ನಸುನಗುತ್ತಾ 'ಎಲೈ ಅಸುರನೇ ! ನಿನಗೆ ಅಮರತ್ವವು ಹೇಗೆ ಬರುವುದು ? ಹುಟ್ಟಿದವರೆಲ್ಲರೂ ಸಾಯುತ್ತಿರುವಲ್ಲಿ ನಿನಗೆ ಅಜರತ್ವವು ಹೇಗೆ ಬರುವುದು ? ಯಾವಾಗಲಾದರೂ ಹುಟ್ಟಿದವನು ಸಾಯಲೇಬೇಕೆಂಬುದನ್ನು ತಿಳಿ ' ಎಂದನು. ಬಳಿಕ ತಾರಕಾಸುರನು, ನಸುನಗುತ್ತಾ 'ಎಲೈ ದೇವಾ ! ಅಜೇಯತ್ವವನ್ನಾದರೂ ಕೊಡು' ಎಂದು ಬೇಡಿದನು. ಆಗ ಬ್ರಹ್ಮನು 'ಎಲೈ ಪೂಜ್ಯನೇ! ನೀನು ಕೇಳಿದ ಅಜೇಯತ್ವವನ್ನು ಕೊಟ್ಟಿರುವೆನು. ಆದರೆ ಪ್ರಭಾಶಾಲಿಯಾದ ಯಾವನೋ ಒಬ್ಬ ಕುಮಾರನು ನಿನ್ನನ್ನು ಕೊಲ್ಲುವನು. ಇದನ್ನು ಚೆನ್ನಾಗಿತಿಳಿ ಎಂದು ವರವನ್ನು ನೀಡಲು ತಾರಕಾಸುರನು ಬ್ರಹ್ಮನನ್ನು ನಮಸ್ಕರಿಸಿ ತೆರಳಿದನು.

ಎಲೈ ಋಷಿಗಳಿರಾ ಕೇಳಿರಿ! ಬಳಿಕ ತಾರಕಾಸುರನು ಮಹಾಬಲಶಾಲಿಯಾಗಿ ದೇವತೆಗಳನ್ನೆಲ್ಲರನ್ನೂ ಯುದ್ಧಕ್ಕೋಸುಗ ಕರೆದು ಅವರೊಡನೆ ಯುದ್ಧಮಾಡಿದನು. ಆಗ ದೇವತೆಗಳು ಮುಚಕುಂದನನ್ನು ಆಶ್ರಯಿಸಿ ಜಯಶಾಲಿಗಳಾದರು. ಆದರೆ ತಾರಕಾಸುರನು ದೇವತೆಗಳನ್ನಲ್ಲಿಗೆ ಬಿಡದೆ ಸದಾಕಾಲದಲ್ಲಿಯೂ ಯುದ್ಧಮಾಡಲುಪಕ್ರಮಿಸಿದನು. ಆಗ ದೇವತೆಗಳೆಲ್ಲರೂ, 'ಯಾವಾಗಲೂ ಯುದ್ಧಮಾಡುತ್ತಿದ್ದರೆ ಶಾಂತಿಯೆಂಬುದು ಹೇಗುಂಟಾಗುವುದು ? ಎಂದು ಯೋಚಿಸಿ ಬ್ರಹ್ಮನಲ್ಲಿಗೆ ಹೋಗಿ ಅವನನ್ನು ಕುರಿತು, 'ಎಲೈ ಬ್ರಹ್ಮನೆ! ವಿಷ್ಣುವು ಪಾತಾಳದಲ್ಲಿ ಬಲಿಯೊಡನೆ ಇರುವನು. ದೈತ್ಯರಾದರೋ ನಮ್ಮನ್ನು ಬಹಳವಾಗಿ ಭಯಗೊಳಿಸುತ್ತಿರುವರು. ಈ ಭಯದಿಂದ ನಮ್ಮನ್ನು ಕಾಪಾಡಲು ಸಮರ್ಥನಾಗಿರುವೆ ಎಂದು ಸ್ತೋತ್ರಮಾಡಿದರು. ಆಗ ಆಕಾಶವಾಣಿಯು ಇಂದ್ರನೇ ಮೊದಲಾದ ದೇವತೆಗಳೆಲ್ಲರನ್ನೂ ಸಮಾಧಾನಗೊಳಿಸುತ್ತಾ 'ಎಲೈ ದೇವತೆಗಳಿರಾ! ನಾನು ಹೇಳುವ ಮಾತುಗಳನ್ನು ಜಾಗ್ರತೆಯಾಗಿ ಕಾರ್ಯತಃ ನಡಿಸುವರಾಗಿರಿ.

ಈಶ್ವರನಿಗೆ ಮಹಾ ಬಲಶಾಲಿಯಾದ ಮಗನು ಜನಿಸಿದರೆ ಆಗ ಆ ಕುಮಾರನು ಈ ತಾರಕಾಸುರನನ್ನು ಯುದ್ಧದಲ್ಲಿ ಕೊಲ್ಲುವನೆಂಬು ದರಲ್ಲಿ ಸಂಶಯವಿಲ್ಲ. ಯಾವ ಉಪಾಯದಿಂದಲಾದರೂ ಭಗವಂತ ನಾದ ಈಶ್ವರನು ಪತ್ನೀಪರಿಗ್ರಹವನ್ನು ಮಾಡುವಂತೆ ಯೋಚಿ ಸಿರಿ' ಎಂದಿತು. ದೇವತೆಗಳೆಲ್ಲರೂ ಆಕಾಶವಾಣಿಯ ಮಾತು ಗಳನ್ನು ಕೇಳಿ ಆಶ್ಚರ್ಯಗೊಂಡು, ಒಬ್ಬರಿಗೊಬ್ಬರು ಮಾತನಾಡಿ ಕೊಳ್ಳುತ್ತಾ, ಹಿಮವತ್ಪರ್ವತದ ತಪ್ಪಲಿಗೆ ಬಂದರು. ಬಳಿಕ ಬೃಹ ಸ್ಪತಿಯನ್ನು ಮುಂದುಮಾಡಿಕೊಂಡು, ಹಿಮವಂತನನ್ನು ಕುರಿತು ಇಂತೆಂದರು. 'ಎಲೈ ಮಹಾ ಭಾಗ್ಯಶಾಲಿಯಾದ ಹಿಮವಂತನೇ! ತಾರಕಾಸುರನು ನಮ್ಮನ್ನು ಪೀಡಿಸುತ್ತಿರುವನು. ಆದುದರಿಂದ ಈ ವಿಷಯದಲ್ಲಿ ನಮಗೆ ಸಹಾಯಮಾಡು. ನಮಗೆಲ್ಲರಿಗೂ ಶರಣ್ಯ ನಾಗು. ಇದಕ್ಕಾಗಿಯೇ ನಾವೆಲ್ಲರೂ, ಇಂದ್ರನಿಂದೊಡಗೂಡಿ ನಿನ್ನಲ್ಲಿಗೆ ಬಂದಿರುವೆವು.' ಇಂತೆಂದು ಬಿನ್ನವಿಸಿಕೊಳ್ಳುತ್ತಿರುವ ದೇವ ತೆಗಳನ್ನು ಕುರಿತು ಮಾತನಾಡುವುದರಲ್ಲಿ ಕುಶಲನಾದ ಹಿಮವಂತನು ಇಂದ್ರನನ್ನುದ್ದೇಶಿಸಿ ನಸುನಗುತ್ತಾ 'ಎಲೈ ದೇವತೆಗಳಿರಾ! ನಾವೆ ಲ್ಲರೂ ಮಹೇಂದ್ರನಿಂದ ಕ್ಷಮಿಸಲ್ಪಡದೇ ಹೋದೆವು. ಪಕ್ಷಹೀನ ರಾದ ನಾವು ದೇವತೆಗಳ ಕಾರ್ಯವನ್ನು ಹೇಗೆ ಮಾಡಬಲ್ಲೆವು? ರೆಕ್ಕೆಗ ಳಿಂದ ಕೂಡಿದವರಾಗಿದ್ದದ್ದೇ ಆಗಿದ್ದಲ್ಲಿ ಈ ತಾರಕಾಸುರನನ್ನು ಬಾಂ ಧವರಿಂದೊಡಗೂಡಿದವನನ್ನಾಗಿ ಕೊಲ್ಲುತ್ತಿದ್ದೆವು. ನಾನಾದರೋ ಪಕ್ಷಹೀನನು; ಅಚಲನು; ಹೀಗಿರುವಲ್ಲಿ ಯಾವಕೆಲಸವನ್ನು ಮಾಡಲಿ' ಎಂದು ನುಡಿದನು. ಆಗ ದೇವತೆಗಳು ಹಿಮವಂತನನ್ನು ಕುರಿತು 'ಅಯ್ಯಾ ಹಿಮವಂತನೇ! ದುರಾತ್ಮನಾದ ತಾರಕಾಸುರನನ್ನು ಕೊಲ್ಲ ಲು ನಾವೂ ಸಮರ್ಥರಲ್ಲವು. ನೀವೂ ಸಮರ್ಥರಲ್ಲವು. ಆದುದರಿಂದ ಈ ಕೆಲಸದಲ್ಲಿ ಯೋಚನೆ ಮಾಡುವವನಾಗು.' ಎಂದು ನುಡಿದರು. ಬಳಿಕ ಮಹಾ ತೇಜಸ್ವಿಯಾದ ಹಿಮವಂತನು, 'ಎಲೈ ದೇವತೆಗಳಿರಾ! ಯಾವ ಉಪಾಯದಿಂದ ತಾರಕಾಸುರನನ್ನ ಕೊಲ್ಲಲು ಅಪೇಕ್ಷಿಸುವಿರಿ? ಅದನ್ನು ಜಾಗ್ರತೆಯಾಗಿ ಹೇಳಿರಿ. ನಾನು ನನ್ನ ಕಾರ್ಯವನ್ನು ತಿಳಿದು

ಕೊಳ್ಳಬೇಕಲ್ಲವೇ ? ' ಎಂದನು. ದೇವತೆಗಳೆಲ್ಲರೂ ಆಕಾಶವಾಣಿಯು ಕಾರ್ಯಕಾರಣದಿಂದ ತಿಳಿಸಿದ ಸಕಲ ವೃತ್ತಾಂತವನ್ನೂ ಹೇಳಿದರು. ಇದನ್ನು ಕೇಳಿದ ಹಿಮವಂತನು ' ಎಲೈ ದೇವತೆಗಳಿರಾ! ಆಕಾಶವಾಣಿಯು ನುಡಿದ ಮಾತು ನಿಶ್ಚಯವು. ಈಶ್ವರನಿಗೆ ಜನಿಸುವ ಬುದ್ಧಿವಂತನಾದ ಕುಮಾರನಿಂದಲೇ ಈ ತಾರಕಾಸುರನು ಕೊಲ್ಲಲ್ಪಡತಕ್ಕವನು. ಆಗ ದೇವತೆಗಳೆಲ್ಲರಿಗೂ ಶುಭವುಂಟಾಗುವುದು. ಆದುದರಿಂದ ಆಕಾಶವಾಣಿಯು ಹೇಳಿದ್ದನ್ನು ಮಾಡುವವರಾಗಿರಿ. ಈಶ್ವರನು ನಿಮ್ಮಿಂದ ಹೇಗೆ ಪತ್ನೀಪರಿಗ್ರಹನಾಗುವನೋ, ಯೋಗ್ಯಳಾದ ಕನ್ಯೆಯು ಹೇಗೆ ದೊರಕುವಳೋ, ಅದನ್ನೀಗ ನಿರೀಕ್ಷಿಸಿರಿ' ಎಂದನು. ಇಂತೆಂದು ನುಡಿದ ಹಿಮವಂತನನ್ನು ಕುರಿತು ದೇವತೆಗಳೆಲ್ಲರೂ ನಸುನಗುತ್ತಾ 'ಎಲೈ ಹಿಮವಂತನೇ ! ಶಿವನಿಗೋಸುಗವಾಗಿಯೂ, ದೇವತೆಗಳ ಕಾರ್ಯಸಿದ್ಧಿಗೋಸುಗವಾಗಿಯೂ ನಿನ್ನಿಂದ ಕನ್ಯೆಯು ಜನಿಸಲ್ಪಡಬೇಕು. ಮಹಾ ಬುದ್ಧಿಶಾಲಿಯಾದ ನೀನು ದೇವತೆಗಳ ಮಾತನ್ನು ಶೀಘ್ರವಾಗಿ ನಡೆಸುವವನಾಗು. ಇದರಿಂದ ನೀನು ದೇವತೆಗಳಿಗೆ ಆಧಾರಭೂತನಾಗುವೆ ' ಎಂದರು.

ಬಳಿಕ ಗಿರಿರಾಜನು ದೇವತೆಗಳಿಂದೊಡಗೂಡಿ ತನ್ನ ಮನೆಗೆ ಬಂದು, ಪತ್ನಿಯಾದ ಮೇನೆಯನ್ನು ಕುರಿತು, 'ಎಲೌ ಪ್ರಿಯಳೇ ! ಇದಿಗೋ! ದೇವಕಾರ್ಯವು ಸನ್ನಿಹಿತವಾಗಿರುವುದು. ನೀನು ದೇವತೆಗಳಿಗೂ, ಋಷಿಗಳಿಗೂ, ತಪಸ್ವಿಗಳಿಗೂ ಶುಭವನ್ನುಂಟುಮಾಡುವ ಒಂದು ಹೆಣ್ಣು ಶಿಶುವನ್ನು ಹೆರಬೇಕು. ಹೆಂಗಸರಿಗೆ ಹೆಣ್ಣುಮಗುವಾದರೆ ಪ್ರಿಯವಾಗಿರುವುದಿಲ್ಲವು. ಆದರೂ ದೇವತೆಗಳ ಕಾರ್ಯಸಿದ್ಧಿಗಾಗಿ ನೀನೀಕಾರ್ಯವನ್ನು ಕೈಗೊಳ್ಳಬೇಕು. ' ಎಂದನು. ಆಗಲಾ ಮೇನೆಯು ನಸುನಗುತ್ತಾ 'ಎಲೈ ಪತಿಯೇ ! ನೀನು ಯಾವ ಮಾತನ್ನು ಹೇಳಿದೆಯೋ ನಾನೂ ಸಹ ಅದನ್ನೇ ಹೇಳುವೆನು ಕೇಳು. ಕನ್ಯೆಯು ಸ್ತ್ರೀಯರಿಗೆ ಮಾತ್ರವಲ್ಲದೆ ನರರಿಗೂ ದುಃಖವನ್ನುಂಟುಮಾಡುವಳು. ಆದುದರಿಂದ ನೀನಾಗಿಯೇ ಚನ್ನಾಗಿ ವಿಮರ್ಶಿಸಿ,

ಹೇಗೆ ಹಿತವಾಗುವುದೋ ಅದನ್ನು ಹೇಳುವವನಾಗು' ಎಂದಳು. ಆ ಬಳಿಕ ಪರಮ ಮೇಧಾವಿಯಾದಾ ಹಿಮವಂತನು ಪತ್ನಿಯಾದ ಮೇನೆಯನ್ನು ಕುರಿತು, 'ಎಲೌ ಪ್ರಿಯಳೇ! ಕೇಳು; ಯಾವಯಾವ ಪ್ರಕಾರದಿಂದ ಇತರರಿಗೆ ಉಪಕಾರವಾಗುತ್ತದೆಯೋ ಅಯಾ ಕಾರ್ಯಗಳನ್ನು ಪುರುಷನು ಮತ್ತು ಸ್ತ್ರೀಯು ಮಾಡತಕ್ಕದ್ದು' ಎಂದನು. ಇಂತು ಬೋಧಿಸಲ್ಪಟ್ಟ ಹಿಮವಂತನ ಪಟ್ಟಮಹಿಷಿಯಾದ ಮಹಾ ಭಾಗ್ಯಶಾಲಿಯಾದ ಮೇನೆಯು ಕನ್ಯಾಗರ್ಭವನ್ನು ಧರಿಸಿದಳು. ಮತ್ತು ಆ ಮೇನೆಯು, ಮಹಾ ವಿದ್ಯೆಯೆಂತಲೂ, ಮಹಾ ಮಾಯೆಯೆಂತಲೂ, ಮಹಾ ಮೇಧಾಸ್ವರೂಪಿಣಿಯೆಂತಲೂ, ರುದ್ರಕಾಳಿ, ಅಂಬೆ, ಸತಿ, ದಾಕ್ಷಾಯಣಿಯೆಂದು ಪ್ರಸಿದ್ಧಿಪಡೆದ ಶಿವಸತಿಯ ಶ್ರೇಷ್ಠವಾದ ವಿಭೂತಿಯನ್ನು ತನ್ನ ಜಠರದಲ್ಲಿ ಧರಿಸಿದಳು. ಆಗಲಾ ಯಕ್ಷಕಿನ್ನರರೇ ಮೊದಲಾದ ದೇವತೆಗಳೆಲ್ಲರೂ ಅಪಾರ ಭಾಗ್ಯಳಾದ ಮೇನೆಯನ್ನೂ, ಹಿಮವಂತನನ್ನೂ, ಸ್ತೋತ್ರ ಮಾಡಿದರು. ಗಂಧರ್ವರೆಲ್ಲರೂ ಗಾನ ಮಾಡಿದರು. ಅಪ್ಸರ ಗಣಗಳೆಲ್ಲವೂ ನರ್ತನವಾಡಿದವು. ದೇವತೆಗಳೆಲ್ಲರೂ ಪುಷ್ಪವೃಷ್ಟಿಯನ್ನು ಸುರಿಸಿದರು. ಆಗ ತ್ರಿಲೋಕಗಳೂ ಪ್ರಸನ್ನವಾದವು. ಕೇಳಿರೈ ಋಷಿಗಳಿರಾ! ಮಹಾ ಸತಿಯಾದ ಗಿರಿಜೆಯು ಯಾವಾಗ ಉದ್ಭವಿಸಿದಳೋ ಆಗಲೇ ದೈತ್ಯರೆಲ್ಲರೂ ಭಯಾಕ್ರಾಂತರಾದರು. ದೇವಗಣಗಳು ಮಹರ್ಷಿಗಳು ಚಾರಣರು ಸಿದ್ಧಗಣಗಳು ಸಂತೋಷವನ್ನು ಹೊಂದಿದರು.

# ಅಧ್ಯಾಯ ೨೧

## ಗಿರಿಜೆಯ ಶಿವಸೇವೆ—ಮನ್ಮಥ ದಹನ

ಸೂತನು ಹೇಳುತ್ತಾನೆ:—ಕೇಳಿರೈ ಋಷಿಗಳಿರಾ! ಜಗದಂಬೆಯು, ಗಿರಿಜೆಯೆಂಬ ನಾಮಧೇಯದಿಂದ, ಹಿಮವಂತನ ಗೃಹದಲ್ಲಿ

ಎಂಟು ವರ್ಷಗಳ ವರೆವಿಗೂ ಬೆಳೆದಳು. ಆಗಲಾಪರಶಿವನು ಹಿಮವತ್ಪ್ರಾಂತದಲ್ಲಿ, ವೀರಭದ್ರಾದಿ ಗಣಗಳಿಂದ ಕೂಡಿ ಶ್ರೇಷ್ಠವಾದ ತಪವನ್ನಾಚರಿಸಿದನು. ತಪವನ್ನಾಚರಿಸುತ್ತಿದ್ದ ಶಂಭುವಿನ ಪಾದಕಮಲಗಳ ದರ್ಶನೋತ್ಸುಕನಾದ, ಹಿಮವಂತನು ಗಿರಿಜೆಯೊಡನೆ ಅಲ್ಲಿಗೆ ಬಂದನು. ಇಂತು ಶಿವದರ್ಶನಕ್ಕಾಗಿ ಬರುತ್ತಲಿರುವ ಗಿರಿರಾಜನನ್ನು ಬಾಗಿಲಲ್ಲಿದ್ದ ನಂದಿಯು ತಡೆದನು. ಹಿಮವಂತನು ಒಂದು ಕ್ಷಣಕಾಲ ಅಲ್ಲಿಯೇ ನಿಂತು ನಂದಿಯನ್ನು ಪುನಃ ವಿಜ್ಞಾಪಿಸಿಕೊಂಡನು. ಆಗಲಾ ನಂದಿಯು ತನ್ನ ಸ್ವಾಮಿಯಾದ ಪರಶಿವನಲ್ಲಿಗೆ ಹೋಗಿ ಹಿಮವಂತನು ಆತನನ್ನು ನೋಡಬೇಕೆಂದು ಬಂದಿರುವನೆಂದು ಬಿನ್ನವಿಸಿ ಕೊಂಡನು. ನಂದಿಯ ವಿಜ್ಞಾಪನೆಯನ್ನು ಕೇಳಿ ಶಂಕರನು 'ಎಲೈ ನಂದಿಯೇ! ಗಿರಿರಾಜನನ್ನು ಕರೆದುಕೊಂಡು ಬರುವವನಾಗು' ಎಂದು ನುಡಿದನು. ನಂದಿಯಾದರೋ ಹಾಗೆಯೇ ಆಗಲೆಂದು ಹಿಮವಂತನನ್ನು ಶಂಕರನ ಬಳಿಗೆ ಕರೆತಂದನು. ಆಗಲಾ ಗಿರಿರಾಜನು ಸಕಲೇಶ್ವರನೂ, ಕಪರ್ದಿಯೂ, ಚಂದ್ರಕಲಾ ವಿಭೂಷಣನೂ, ವೇದಾಂತವೇದ್ಯನೂ, ಪರಮಾತ್ಮನೂ ಆದ ಪರಮೇಶ್ವರನು ತಪವನ್ನಾಚರಿಸುತ್ತಿರುವುದನ್ನು ನೋಡಿದನು. ಬಳಿಕ ಗಿರಿರಾಜನು ತಲೆಬಾಗಿ ನಮಸ್ಕರಿಸಿ, ಅಹೀನಸತ್ವನಾಗಿ, ಬಹಳವಾದ ಸಂತಸವನ್ನು ಹೊಂದಿ ಜಗದೇಕ ನಾಥನಾದ ಪರಶಿವನನ್ನು ಕುರಿತಿಂತೆಂದನು. 'ಎಲೈ ಮಹಾದೇವನೇ! ಶಂಕರನೇ! ನಿನ್ನನ್ನು ನೋಡಿದ ನಾನು ಬಹು ಭಾಗ್ಯವಂತನು. ಪ್ರತಿನಿತ್ಯವೂ ನಿನ್ನ ದರ್ಶನಕ್ಕಾಗಿ ಈ ನನ್ನ ಮಗಳಾದ ಪಾರ್ವತಿಯೊಡನೆ ಬರುವೆನು. ಅನುಜ್ಞೆಯನ್ನು ದಯಪಾಲಿಸು' ಇಂತು ಬಿನ್ನವಿಸಿಕೊಂಡ ಹಿಮವಂತನನ್ನು ಕುರಿತು ಶಂಕರನು 'ಎಲೈ ಗಿರಿರಾಜನೆ! ನೀನು, ನಿನ್ನ ಮಗಳನ್ನು ಮನೆಯಲ್ಲಿಯೇ ಬಿಟ್ಟು ನನ್ನ ದರ್ಶನಕ್ಕಾಗಿ ಬರಬೇಕು. ಇಲ್ಲದಿದ್ದಲ್ಲಿ ನನ್ನ ದರ್ಶನವು ಲಭ್ಯವಾಗುವುದಿಲ್ಲವು' ಎಂದನು. ಆಗ ಹಿಮವಂತನು 'ಎಲೈ ಮಹಾದೇವನೇ! ನನ್ನ ಮಗಳೊಡನೆ ನಿನ್ನ ದರ್ಶನವನ್ನೇಕೆ ಮಾಡಬಾರದೆಂಬುದನ್ನು ತಿಳಿಸುವವನಾಗು' ಎಂದು ಕೇಳಿದನು. ಇಂತು

ನುಡಿದಾಗ ಹಿಮವಂತನನ್ನು ಕುರಿತು ಪರಶಿವನು 'ಎಲೈ ಗಿರಿಯೇ! ಈ ನಿನ್ನ ಮಗಳು, ಚಾರುಭಾಷಿಣಿಯೂ; ಮನೋಹರಾಂಗಿಯೂ; ಸುಶ್ರೋಣಿಯೂ, ಆಗಿರುವುದರಿಂದ ನನ್ನ ಸಮೀಪಕ್ಕೆ ಕರತರಲ್ಪಡಲು ತಕ್ಕವಳಲ್ಲ' ಎಂದನು. ಆಗ ಗೌರಿಯು ತಪಸ್ವಿಯಾದ ಪರಶಿವ ನಾಡಿದ ನಿರಾಮಯವಾಗಿಯೂ, ನಿಷ್ಠುರವಾಗಿಯೂ ಇರುವ ಮಾತುಗಳನ್ನು ಕೇಳಿ, ಹಾಸ್ಯಮಾಡುತ್ತಾ, ಸದಾಶಿವನನ್ನು ಕುರಿತು ನುಡಿದಳದೆಂತೆನೆ: 'ಎಲೈ ಶಂಕರನೇ! ತಪಶ್ಶಕ್ತಿಯಿಂದ ಕೂಡಿದವ ನಾಗಿ, ಮಹತ್ತರವಾದ ತಪವನ್ನಾಚರಿಸುವೆ. ಮಹಾತ್ಮನಾದ ನಿನಗೆ ತಪವನ್ನು ಆಚರಿಸಬೇಕೆಂಬ ಬುದ್ಧಿಯು ಹುಟ್ಟಿರುವುದು. ಎಲೈ ದೇವನೇ! ನೀನು ಯಾರು? ಸೂಕ್ಷ್ಮಳಾದ ಪ್ರಕೃತಿಯಾರು? ಇದನ್ನು ವಿಮರ್ಶೆ ಮಾಡುವವನಾಗು' ಎಂದಳು. ಪಾರ್ವತಿಯ ಮಾತುಗಳನ್ನು ಕೇಳಿ ಶಂಭುವು ಅವಳನ್ನು ಕುರಿತು 'ಎಲಾ ಸುಭ್ರುವೇ! ಶ್ರೇಷ್ಠವಾದ ತಪಶ್ಚರ್ಯದಿಂದಲೇ, ಪ್ರಕೃತಿಯನ್ನು ನಾಶಗೊಳಿಸುವೆನು. ಆದುದರಿಂದ, ಸಿದ್ಧರು ಈ ಪ್ರಕೃತಿಯನ್ನು ಯಾವಾಗಲೂ ಸಂಗ್ರಹಿಸಿಕೊಳ್ಳಬಾರದು' ಎಂದು ಹೇಳಲು ಗಿರಿ ಜೆಯು ಹೇಳುತ್ತಾಳೆ. ಎಲೈ ಶಂಕರನೇ! ನೀನು ಯಾವ ಶ್ರೇಷ್ಠ ವಾದ ಮಾತನ್ನಾಡಿದೆಯೋ, ಅದು ಪ್ರಕೃತಿಯಲ್ಲವೋ? ಹೀಗಿರು ವಲ್ಲಿ ನೀನು ಪ್ರಕೃತಿಗೆ ಅತೀತನಾದುದು ಹೇಗೆ? ಎಲೈ ಶಂಕರನೆ! ಯಾವುದನ್ನು ನೀನು ಕೇಳುತ್ತೀಯೋ, ಯಾವುದನ್ನು ತಿನ್ನುವೆಯೋ, ಯಾವುದನ್ನು ನೋಡುವೆಯೋ ಅದೆಲ್ಲವೂ ಪ್ರಕೃತಿಯಲ್ಲದೆ ಮತ್ತೇನು? ಎಲೈ ಪ್ರಭುವೆ! ನಾನೀಗ ನಿನ್ನೊಡನೆ ವಾಗ್ವಾದವನ್ನು ಮಾಡಿದುದ ರಿಂದೇನು ಪ್ರಯೋಜನವು? ಈ ನಿರರ್ಥಕವಾದ ಸುಳ್ಳುವಾದಗಳೆಲ್ಲವೂ ಪ್ರಕೃತಿಯ ಕಾರ್ಯವೇ ಸರಿ! ಇಂತಿರುವಲ್ಲಿ ಪ್ರಕೃತಿಹೀನನಾದ ನೀನು ಏತಕ್ಕಾಗಿ ಈ ತಪವನ್ನಾಚರಿಸುವೆ? ಎಲೈ ಶಂಭುವೇ! ನೀನು ಪರ್ವತದಲ್ಲಿ ಪ್ರಕೃತಿಯೊಂದಿಗೆ ಕೂಡಿರುವೆಯೆಂಬುದನ್ನು ತಿಳಿಯೆಯಾ? ಎಲೈ ದೇವಾ! ನಾನು ವಾಗ್ವಾದ ಮಾಡುವುದರಿಂದೇನು ಫಲ? ಎಲೈ ಪರಮೇಶ್ವರನೆ! ನೀನು ಪ್ರಕೃತಿರಹಿತನಾಗಿರುವುದು ಸತ್ಯವಾಗಿದ್ದಲ್ಲಿ,

ಈಗ ನನಗೋಸ್ಕರವಾಗಿ ಹೆದರಬೇಕಾದುದಿಲ್ಲವು' ಎಂಬುದಾಗಿ ನುಡಿದ ಗಿರಿಜೆಯನ್ನು ಕುರಿತು, ಪರಶಿವನು 'ಎಲೌ ಚಾರುಭಾಷಿಣಿಯೇ! ನೀನು ಪ್ರತಿನಿತ್ಯವೂ ನನ್ನ ಸೇವೆಯನ್ನು ಮಾಡುವಳಾಗು ಎಂದು ನುಡಿದು ಗಿರಿರಾಜನನ್ನು ಕುರಿತು 'ಎಲೈ ಹಿಮವಂತನೇ! ನಾನು ಈ ಪರ್ವತದಲ್ಲಿಯೇ ತಪವನ್ನಾಚರಿಸಿಕೊಂಡು, ಪರಮಾರ್ಥ ಭಾವದಿಂದ ಭೂಮಿಯಲ್ಲಿ ಸಂಚರಿಸುವೆನಾದುದರಿಂದ ನನಗೆ ಈ ಪರ್ವತದಲ್ಲಿ ತಪವನ್ನಾಚರಿಸಲು ಅನುಜ್ಞೆಯನ್ನು ಕೊಡುವವನಾಗು. ನಿನ್ನ ಅನುಜ್ಞೆಯ ಹೊರತು ತಪವನ್ನಾಚರಿಸಲಾಗುವುದಿಲ್ಲ' ಎಂದು ಹೇಳಿದನು. ಇಂತು ನುಡಿದ ದೇವದೇವನಾದ ಪರಶಿವನ ಮಾತುಗಳನ್ನು ಕೇಳಿ, ಗಿರಿರಾಜನು 'ಎಲೈ ದೇವಾ! ಈ ದೇವತೆಗಳಿಂದಲೂ ಮಾನುಷರಿಂದಲೂ ಕೂಡಿರುವ ಸಕಲವಾದ ಪ್ರಪಂಚವೆಲ್ಲವೂ ನಿನ್ನದೇ ಅಲ್ಲವೆ? ಹೀಗಿರುವಲ್ಲಿ ತುಚ್ಛನಾದ ನಾನು ನಿನಗೇನನ್ನು ಕೊಡಬಲ್ಲೆ?' ಎಂದು ನುಡಿದನು.

ಆ ಬಳಿಕ ಸದಾಶಿವನು ಹಿಮವಂತನನ್ನು ಆದರದಿಂದ ಹಿಂದಕ್ಕೆ ಕಳುಹಿಸಿದನು. ಇಂತು ಪರಶಿವನ ಅನುಜ್ಞೆಯನ್ನು ಪಡೆದ ಗಿರಿರಾಜನು, ತನ್ನ ಮಗಳಾದ ಗಿರಿಜೆಯೊಡನೆ ಪರಶಿವನನ್ನು ನೋಡುತ್ತಾ ತನ್ನ ಮನೆಗೆ ಬಂದನು. ಎಲೈ ಋಷಿಗಳಿರಾ! ಗಿರಿರಾಜನೂ, ಆತನ ಮಗಳಾದ ಗಿರಿಜೆಯೂ ಈಶ್ವರನ ಸೇವೆಯನ್ನು ಮಾಡುತ್ತಿರುವಲ್ಲಿ ಸ್ವಲ್ಪಕಾಲವು ಕಳೆಯಿತು. ಆ ಬಳಿಕ ದೇವತೆಗಳೆಲ್ಲರೂ, ಅಲ್ಲಿಯೇ ಪಾರ್ವತಿಯೊಡನೆ ಶಿವನು ಸೇರದೇ ಇರುವುದನ್ನು ನೋಡಿ ಚಿಂತಾನ್ವಿತರಾದರು. ಬಳಿಕ ತಮ್ಮ ಗುರುವಾದ ಬೃಹಸ್ಪತಿಯನ್ನು ಕುರಿತಿಂತೆಂದರು. 'ಎಲೈ ಬೃಹಸ್ಪತಿಯೇ! ಈಗ ಯಾವ ಕಾರ್ಯವನ್ನು ಮಾಡುವ' ಎಂದು ಕೇಳಿದ ದೇವತೆಗಳನ್ನು ಕುರಿತು ಬೃಹಸ್ಪತಿಯು 'ಎಲೈ ಇಂದ್ರನೇ! ಕೇಳು; ಮಹತ್ತರವಾದ ಈ ಕಾರ್ಯವು ಮದನನಿಂದ ಮಾಡಲ್ಪಡಬೇಕೆ ಹೊರತು ಮತ್ತಾರಿಂದಲೂ ಮಾಡಲು ಸಾಧ್ಯವಲ್ಲವು. ಈ ಮನ್ಮಥನೇನೂ ಸಾಮಾನ್ಯನಲ್ಲವು. ತಪಸ್ವಿಗಳ ತಪವೆ



ಪರಶಿವನ ತಪಸ್ಸು

ಲ್ಲವನ್ನೂ ಹಾಳುಮಾಡಿರುವನು. ಆದುದರಿಂದ ಮನ್ಮಥನು ಪ್ರಾರ್ಥಿಸಲ್ಪಡತಕ್ಕವನು. ಹೀಗೆ ಮಾಡಿದರೆ ನಿಮ್ಮ ಅಭಿಮತವು ಫಲಿಸುವುದು.' ಎಂದನು. ಬೃಹಸ್ಪತಿಯ ಮಾತುಗಳನ್ನು ಕೇಳಿ ಇಂದ್ರನು ತತ್ಕ್ಷಣದಲ್ಲಿಯೇ, ಮನ್ಮಥನನ್ನು ಕರೆದನು. ಇಂತು ಕರೆದೊಡನೆಯೇ ಮನ್ಮಥನು ತನ್ನ ಪತ್ನಿಯಾದ ರತಿಯೊಡನೆ ಮಹೇಂದ್ರನ ಸಭೆಯ ಮುಂಗಡೆ ನಿಂತು ಅತಿ ಗರ್ವದಿಂದ, ಲೋಕ ಮನೋಹರವಾಗಿರುವ ಮಾತುಗಳನ್ನಾಡಿದನದೆಂತೆನೆ 'ಎಲೈ ದೇವೇಂದ್ರನೇ! ನನ್ನನ್ನು ಏತಕ್ಕಾಗಿ ಕರಿಸಿರುವೆ? ಅದನ್ನೀಗ ಹೇಳು. ನಾನೀಗ ಯಾವ ಕಾರ್ಯವನ್ನು ಮಾಡಬೇಕೋ ಅದನ್ನು ಜಾಗ್ರತೆಯಾಗಿ ಹೇಳು. ಎಲೈ ದೇವೇಂದ್ರನೇ! ನನ್ನ ಶೌರ್ಯ, ಸ್ಥೈರ್ಯ, ಪರಾಕ್ರಮಗಳನ್ನು ನೀನೇ ತಿಳಿದಿರುವೆ. ತಪಸ್ವಿಗಳೆಲ್ಲರೂ ನನ್ನ ಸ್ಮರಣ ಮಾತ್ರದಿಂದಲೇ ಭ್ರಷ್ಟರಾಗಿರುವರಲ್ಲವೆ? ಇದಲ್ಲದೆ ಶಕ್ತಿ ಪುತ್ರನಾದ ಪರಾಶರನೂ ನನ್ನ ಶೌರ್ಯವನ್ನು ತಿಳಿದಿರುವನಲ್ಲವೆ? ಭೃಗುವೇ ಮೊದಲಾದ ಈ ಋಷಿಗಳೆಲ್ಲರೂ ನನ್ನ ಪರಾಕ್ರಮವನ್ನು ತಿಳಿದಿರುವರಷ್ಟೆ? ಗುರುವಾದ ಬೃಹಸ್ಪತಿಯೂ ನನ್ನ ಪರಾಕ್ರಮವನ್ನು ಬಲ್ಲನು. ಹೆಂಡತಿಯ ವ್ಯಭಿಚಾರದಿಂದಲೂ, ಗುರುವಿನ ಸಂಕರದಿಂದಲೂ ಭರದ್ವಾಜನು ಹುಟ್ಟಿದನಲ್ಲವೆ? ಇಂತು ಹುಟ್ಟಿದವನನ್ನು ಬೃಹಸ್ಪತಿಯು ಮಹಾಭಾಗ್ಯಶಾಲಿಯಾದ ಭರದ್ವಾಜನೆಂದು ಕರೆದನು. ಎಲೈ ಇಂದ್ರನೇ! ಈ ಬ್ರಹ್ಮನೂ ನನ್ನ ಶೌರ್ಯ ಪರಾಕ್ರಮಗಳನ್ನು ತಿಳಿದಿರುವನು. ನನ್ನ ಸ್ನೇಹಿತನಾರು ಬಲ್ಲೆಯೋ? ಮಹಾ ಬಲಶಾಲಿಯಾದ ಕ್ರೋಧನು. ನಾವಿಬ್ಬರೂ ಜಂಗಮ ಸ್ಥಾವರ ಪ್ರಪಂಚವನ್ನೂ ತಳೆಕೆಳಗಾಗಿ ಮಾಡಿರುವೆವು. ಪಿಪೀಲಿಕಾದಿ ಬ್ರಹ್ಮಪರ್ಯಂತವೂ ಇರುವ ಚರಾಚರ ಪ್ರಾಣಿಗಳನ್ನು ಈ ಕಾಮಕ್ರೋಧಾದಿಗಳಿಂದ ತುಂಬಿಸಿರುವೆವು' ಇಂತು ಅತಿಗರ್ವದಿಂದ ತನ್ನ ಶೌರ್ಯ ಪರಾಕ್ರಮಗಳನ್ನು ಹೇಳಿಕೊಳ್ಳುತ್ತಿರುವ ಮನ್ಮಥನನ್ನು ಕುರಿತು ದೇವತೆಗಳೆಲ್ಲರೂ 'ಅಯ್ಯಾ ಮನ್ಮಥನೇ! ನೀನು ಸಮರ್ಥನೇ ಸರಿ. ನಮ್ಮೆಲ್ಲರನ್ನೂ ಸದಾಕಾಲದಲ್ಲಿಯೂ ಜಯಿಸುವುದಕ್ಕೆ ನೀನೇ ಸಮರ್ಥನು. ಎಲೈ

ಬುದ್ಧಿಶಾಲಿಯೇ ! ದೇವತೆಗಳ ಕಾರ್ಯಸಿದ್ಧಿಗಾಗಿ ನೀನೀಗಲೇ ಪರಶಿವ ನಲ್ಲಿಗೆ ಹೋಗಿ ಆತನು ಪಾರ್ವತಿಯೊಡನೆ ಸೇರುವಂತೆ ಮಾಡುವವ ನಾಗು ' ಎಂದರು.

ಆಗ ಮನ್ಮಥನು, ಕುಸುಮಧನುಸ್ಸನ್ನು ಹಿಡಿದವನಾಗಿಯೂ, ಮನೋಹರಗಳಾಗಿರುವ ಬಾಣಗಳನ್ನು ತೆಗೆದುಕೊಂಡವನಾಗಿಯೂ ಹಿಮಾಲಯದ ತಪ್ಪಲ ಪ್ರದೇಶಕ್ಕೆ ಬಂದನು. ಸುಂದರಿಯರಾದ ದೇವವೇಶ್ಯೆಯರು ಮನ್ಮಥನ ಸಹಾಯಾರ್ಥವಾಗಿ ಬಂದರು. ಅಪ್ಸರೆ ಯರೆಲ್ಲರೂ ಮದನನೊಡನೆ ಬರುತ್ತಲಿರುವದನ್ನು ಶಿವಗಣಗಳು ಕಂಡರು. ಆಬಳಿಕ ಶಿವಗಣಗಳೆಲ್ಲವೂ ಮದನನಿಂದ ವಿಮೋಹಿತ ಗಳಾದವು. ಆಗಲಾ ಭೃಂಗಿಯು ರಂಭೆಯೊಡನೆ ರಮಿಸಿದನು. ಚಂಡನು ಊರ್ವಶಿಯೊಡನೆಯೂ, ಮೇನಕಿಯೊಡನೆ ವೀರಭದ್ರನೂ, ಪುಂಜಿಕಸ್ಥಲಿಯೊಡನೆ ಮುಂಡನೂ ಉನ್ಮತ್ತರಾಗಿ ಮೆರೆದರು. ಕೋಗಿ ಲೆಗಳೆಲ್ಲವೂ ಮನ್ಮಥನ ಮೋಹಪಾಶಕ್ಕೆ ಸಿಕ್ಕಿ ಅಕಾಲದಲ್ಲಿಯೇ ಮನೋಹರವಾಗಿ ಗಾನಮಾಡಲುಪಕ್ರಮಿಸಿದವು. ಅಶೋಕ, ಚಂಪಕ, ಯೂಥಿಕ, ಕದಂಬಕವೇ ಮೊದಲಾದ ರಾಜವೃಕ್ಷಗಳೆಲ್ಲವೂ ಚಿಗುರು ಗಳಿಂದ ರಂಜಿಸತೊಡಗಿದವು. ಎಲ್ಲೆಲ್ಲಿಯೂ ದ್ರಾಕ್ಷಿಯ ಬಳ್ಳಿಗಳು ನಾಗಕೇಸರವೂ, ! ಕದಳೀ ವೃಕ್ಷಗಳೂ, ಕೇತಕೀ ವೃಕ್ಷಗಳೂ, ದುಂಬಿಗಳಿಂದ ಮುತ್ತಲ್ಪಟ್ಟು ಶೋಭಾಯಮಾನವಾಗಿದ್ದವು. ಇಷ್ಟೆ ಯಲ್ಲದೆ ಈ ಮದನನ ಸಂಪರ್ಕದಿಂದ ಉನ್ಮತ್ತಗಳಾದ ಹಂಸಗಳು ಕಲಹಂಸಗಳೊಡನೆಯೂ, ಹೆಣ್ಣಾನೆಗಳು ಗಂಡಾನೆಗಳೊಡನೆಯೂ, ಹೆಣ್ಣು ಶಿಖಂಡೀ ಮೃಗಗಳು ಗಂಡು ಶಿಖಂಡೀ ಮೃಗಗಳೊಡನೆಯೂ ಸೇರಿ ರಮಿಸಿದವು. ಆ ಬಳಿಕ ಮಹಾ ತೇಜಸ್ವಿಯಾದ ನಂದಿಯು ಪರಶಿವನ ಸಂಪರ್ಕದಿಂದುಂಟಾದ ಗುಣಗಳಿಂದ ಕೂಡಿ ನಿಷ್ಕಾಮ ನಾದನು. ಬಳಿಕ ನಂದಿಯು ಆಕಸ್ಮಿಕವಾಗಿ ಹುಟ್ಟಿರುವ ವಸಂತ ಋತುವನ್ನು ನೋಡಿ ಇದು ಹೇಗೆ ಹುಟ್ಟಿತೆಂದು ವಿಮರ್ಶಿಸುತ್ತಾ ರಾಕ್ಷಸರಿಂದಲೋ, ದೇವತೆಗಳಿಂದಲೋ ಮಾಡಿದ ಕಾರ್ಯವಾಗಿರಬ

ಹುದೆಂದು ಯೋಚಿಸಿದನು. ಆಗ ಮನ್ಮಥನು ಕುಸುಮಾಯುಧ ವನ್ನು ಹಿಡಿದುಕೊಂಡು ಅರವಿಂದ, ಅಶೋಕ, ಚೂತ, ನವಮಲ್ಲಿಕ, ನೀಲೋತ್ಪಲವೆಂಬ ಪಂಚಬಾಣಗಳನ್ನು ಹದೆಗೇರಿಸಿ ದೇವದಾರು ವೃಕ್ಷದ ನೆರಳನ್ನಾಶ್ರಯಿಸಿ ಪರಮೇಷ್ಠಿಗಳೆಲ್ಲರಿಗೂ ಪತಿಯಾದ ಗಂಗಾಧರನೂ, ನೀಲತಮಾಲಕಂಠನೂ ಅರ್ಧಚಂದ್ರನಿಂದ ಶೋಭಾ ಯಮಾನವಾದ ಮುಖವುಳ್ಳವನೂ, ಕಪರ್ದಿಯೂ, ನಾಗಭೂಷ ಣನೂ, ಪಂಚವಕ್ತ್ರಗಳನ್ನುಳ್ಳವನೂ ಶಕ್ತಿಯಿಂದ ಕೂಡಿರುವವನೂ ಆದ ಪರಶಿವನನ್ನು ಹೊಡೆಯಲು ಇಷ್ಟವುಳ್ಳವನಾದನು. ಅಷ್ಟ ರಲ್ಲಿಯೇ ಹಿಮವಂತನ ಮಗಳಾದ ಗಿರಿಜೆಯು ಸಖೀಜನರಿಂದಾವೃತ ಳಾಗಿ, ಮಂಗಳಗಳೆಲ್ಲಕ್ಕೂ ಮಂಗಳಕರನಾದ ಸಾಕ್ಷಾತ್ಪರಶಿವನನ್ನು ಪೂಜಿಸಲೋಸುಗ ಬಂದಳು. ಇಂತು ಬಂದು ಬಂಗಾರದ ಹೂಗ ಳಿಂದ ರಚಿಸಿದ ಹಾರವನ್ನು ಆ ಪರಶಿವನ ನೀಲಕಂಠದಲ್ಲಿ ಅಂತಃಕರಣ ಶುದ್ಧಿಯಿಂದ ಹಾಕಿ, ನಸುನಗೆಯಿಂದ ಅರಳಲ್ಪಟ್ಟ ಕಂಗಳುಳ್ಳವ ಳಾಗಿ, ಸಕಲಜನ ಸೃಷ್ಟಿಕರ್ತೃಳಾದ ಗಿರಿಜೆಯು ಪರಶಿವನ ಮನೋ ಹರವಾದ ಮುಖವನ್ನು ನೋಡುತ್ತಾ ನಿಂತಳು. ಆ ಸಮಯದಲ್ಲಿ ಮನ್ಮಥನು ಪರಶಿವನನ್ನು ಮೋಹನಾಸ್ತ್ರದಿಂದ ಶೀಘ್ರವಾಗಿ ಹೊಡೆ ದನು. ಇಂತು ಮದನಬಾಣಾ ಹತನಾದ ಪರಶಿವನು ಮೆಲ್ಲಮೆಲ್ಲನೆ ತನ್ನ ಕಂಗಳನ್ನು ತೆರೆದು ನೋಡಿದನು. ಆಗ ಮನೋಹರವಾದ ಮುಖವುಳ್ಳವಳೂ ಬಿಂಬಿತವಾದ ತುಟಿಗಳನ್ನುಳ್ಳವಳೂ, ನಸುನಗೆ ಯಿಂದ ಕೂಡಿದ ನೋಟವುಳ್ಳವಳೂ, ಕುಂದರದನೆಯೂ ಅಗ್ನಿಯಿಂ ದುತ್ಪನ್ನವಾದ ದೇಹವುಳ್ಳವಳೂ, ಪ್ರಪಂಚವನ್ನೇ ಮೋಹಗೊಳಿಸು ವವಳೂ, ಮೋಹನೆಯೂ ಆದ ಗಿರಿಜೆಯನ್ನು ಕಂಡನು. ಬಳಿಕ ಪರಶಿವನು, ಯಾವಳು ಬ್ರಹ್ಮಾದಿಗಳಿಂದ ಮೂರು ಲೋಕಗಳ ರಚ ನೆಯನ್ನುಗೈದಳೋ, ಪುತ್ರಾತ್ಮವಳು, ಸತ್ವ, ರಜಸ್ತಮೋಗುಣಗಳನ್ನು ಮುಂದಿಟ್ಟುಕೊಂಡು ಸೃಷ್ಟಿ, ಸ್ಥಿತಿ, ಲಯಕಾರ್ಯಗಳನ್ನು ಮಾಡಿ ದಳೋ, ಅಂತಹ ಚೇತನಸ್ವರೂಪಳಾದ, ತ್ರಿಭುವನೈಕಸುಂದರಿಯಾದ ಗಿರಿಜೆಯನ್ನು ನೋಡಿ ಮದನನಿಂದ ಆತುರನಾಗಿಮಾಡಲ್ಪಟ್ಟು

ಮೋಹಿಸಿದನು. ಈ ಪ್ರಕಾರವಾಗಿ ಪಾರ್ವತಿಯನ್ನು ನೋಡುತ್ತ ಲಿರುವ ಪರಶಿವನು ಮನಸೊಂಪವನಾಗಿ ಗಿರಿಜೆಯನ್ನು ನೋಡಿ 'ನಾನು ಮೋಹಿತನಾದುದು ಹೇಗೆ? ಎಲ್ಲಿಂದ, ಯಾತರಿಂದ, ಯಾರಿಂದ ಇಂತು ಮಾಡಲ್ಪಟ್ಟಿತು? ನನಗೆ ಅಪ್ರಿಯವಾದ ಈ ಕಾರ್ಯವನ್ನು ಯಾರುಮಾಡಿದರು?' ಎಂದು ಚಿಂತಿಸಿ ನಾಲ್ಕು ದಿಕ್ಕುಗಳಲ್ಲಿಯೂ ಆದರದಿಂದ ನೋಡಲಾರಂಭಿಸಿದನು. ಆಗ ದಕ್ಷಿಣ ದಿಕ್ಕಿನಲ್ಲಿ ಮನ್ಮ ಥನು, ಚಕ್ರಾಕಾರವಾಗಿ ಮಾಡಲ್ಪಟ್ಟ ಧನುಸ್ಸನ್ನು ಸಜ್ಜೀಕರಿಸಿ ಕೊಂಡು ಸದಾಶಿವನನ್ನು ಹೊಡೆಯಲೆತ್ನಿಸುತ್ತಿದ್ದನು. ಇದನ್ನು ಕಂಡ ಪರಶಿವನು ರೋಷಗೊಂಡು, ತನ್ನ ಹಣೆಗಣ್ಣಿನಿಂದ ಆ ಮನ್ಮ ಥನನ್ನು ಅದ್ಭುತವಾಗಿ ನೋಡಲಾರಂಭಿಸಿದನು. ಇಂತು ನೋಡಿ ದೊಡನೆಯೇ ಆ ಮನ್ಮಥನು ದಗ್ಧವಾದ ಶರೀರವುಳ್ಳವನಾದನು. ಆ ಸಮಯದಲ್ಲಿ ನೋಡುತ್ತಿದ್ದ ದೇವತೆಗಳೆಲ್ಲರೂ ಹಾ! ಹಾ! ಕಾರ ವನ್ನು ಮಾಡಿದರು. ಬಳಿಕ ದೇವತೆಗಳೆಲ್ಲರೂ ಪರಶಿವನನ್ನು ಕುರಿತು 'ಎಲೈ ದೇವದೇವನಾದ ಮಹಾದೇವನೇ! ಪ್ರಸನ್ನನಾಗು! ಈಮನ್ಮಥ ನನ್ನು, ಗಿರಿರಾಜ ಕುಮಾರಿಯ ಸಹಾಯಾರ್ಥವಾಗಿ ಬೋಧಿಸಿ ಕಳು ಹಿಸದ್ದೆವು! ಎಲೈ ದೇವನೇ! ನಾವು ಕಳುಹಿದ ಮಹಾ ಪ್ರಭಾಶಾಲಿ ಯಾದ ಮನ್ಮಥನು ನಿನ್ನಿಂದ ಸುಟ್ಟು ಹೋದನು. ಎಲೈ ಜಗ ದೇಕ ಬಂಧುವೇ! ನೀನು ಈಗ ದೇವಕಾರ್ಯವನ್ನು ಸಫಲಗೊಳಿಸು ವವನಾಗು. ಎಲೈ ಶಂಭುವೇ! ಈ ಗಿರಿರಾಜ ಕುಮಾರಿಯನ್ನು ವರಿಸು. ಎಲೈ ಮಹಾದೇವನೇ! ಕ್ರೂರನಾದ ತಾರಕಾಸುರನಿಂದ, ನಾವು ಪೀಡಿತರಾಗಿರುವೆವು. ಆದುದರಿಂದ ಎಲೈ ದೇವನೇ ಈ ಮನ್ಮಥನಿಗೆ ಜೀವಿತವನ್ನು ಕೊಟ್ಟು ಗಿರಿಜೆಯನ್ನು ವರಿಸಿ ದೇವ ಕಾರ್ಯದಲ್ಲಿ ದುರಂಧರನಾಗು. ಎಲೈ ಪರಶಿವನೇ! ಪೂರ್ವದಲ್ಲಿ ನೀನು ಗಜಾಸುರನಿಂದ ಭಯಗೊಂಡವರಾದ ನಮ್ಮನ್ನು ಕಾಪಾಡ ಲಿಲ್ಲವೇ? ಎಲೈ ದೇವಾ! ಕಾಲಕೂಟ ಮಹಾವಿಷವನ್ನು ಪಾನಮಾಡಿ ನಮ್ಮನ್ನು ರಕ್ಷಿಸಿದೆ! ಭಸ್ಮಾಸುರನನ್ನು ಕೊಂದು ಅವನಿಂದ ಭಯ ಗೊಂಡಿದ್ದ ನಮ್ಮನ್ನು ಕಾಪಾಡಲಿಲ್ಲವೆ? ಈ ಮನ್ಮಥನಾದರೋ

ದೇವತೆಗಳ ಕಾರ್ಯಸಿದ್ಧಿಗಾಗಿ ನಿನ್ನಲ್ಲಿಗೆ ಬಂದು ಬಾಣಸಂಧಾನ ಮಾಡಿದನು. ಆದುದರಿಂದ ಎಲೈ ಪರಮೇಶ್ವರನೇ! ಈ ಮನ್ಮಥ ನನ್ನು ಕಾಪಾಡು. ನಮಗೆ ಉಪಕಾರವನ್ನು ಮಾಡು. ಎಲೈ ಶಂಕರನೇ ! ನೋಡು. ಚೆನ್ನಾಗಿ ವಿಮರ್ಶೆಮಾಡಿ ನೋಡು. ನೀನು ನಿಷ್ಕಾಮನಾದುದು ಹೇಗೆ? ಮನ್ಮಥನು ನಾಶವಾದರೆ, ಪ್ರಪಂಚವೇ ಹಾಳಾಗುವದಲ್ಲವೆ?' ಎಂದು ಬಹಳವಾಗಿ ಪ್ರಾರ್ಥಿಸಿದರು.

ಇಂದ್ರಾದಿ ದೇವತೆಗಳ ಮಾತನ್ನು ಕೇಳಿ, ಮಹಾರೋಷ ಸಮನ್ವಿತನಾದ ಪರಶಿವನು, 'ಎಲೈ ದೇವತೆಗಳಿರಾ! ಕಾಮನಿಂದ ರಹಿತರಾಗಿ ನೀವುಗಳೆಲ್ಲರೂ ಇರಬೇಕೇಹೊರತು ಮತ್ತೆ ಬೇರೆಯಲ್ಲವು. ಯಾವಾಗ ಕಾಮನನ್ನು ಪುರಸ್ಕರಿಸಿದರೋ ಆಗಲೇ ಇಂದ್ರನೇ ಮೊದಲಾದ ದೇವತೆಗಳೆಲ್ಲರೂ ಪದಚ್ಯುತರಾಗಿ ರಾಕ್ಷಸರನ್ನು ಆಶ್ರಯಿಸಿದವರಾದರು. ಆದುದರಿಂದ ಎಲೈ ದೇವತೆಗಳಿರಾ! ಸಕಲ ಪ್ರಾಣಿಗಳಿಗೂ ಕಾಮವು ನರಕವೆಂಬುದೇ ಸಿದ್ಧವು. ಈ ಕಾಮನು ದುಃಖರೂಪನೆಂಬುದನ್ನು ತಿಳಿಯಿರಿ. ಯಾವಾಗ ಕಾಮನು ನಾಶವಾದನೋ, ಆವಾಗಲೇ ದುರಾಚಾರ ಶೀಲನಾದ ತಾರಕಾಸುರನು ನಿಷ್ಕಾಮನಾಗುವನು. ಕಾಮವನ್ನು ತ್ಯಜಿಸಿದರೆ ಮನುಷ್ಯನು ಪಾಪವನ್ನು ಹೇಗೆಮಾಡುವನು? ಆದುದರಿಂದ ಸಕಲರ ಶಾಂತಿಗೋಸುಗ ಈ ಕಾಮನು ನನ್ನಿಂದ ಸುಡಲ್ಪಟ್ಟನು. ನೀವೂ, ಮಹಾ ಋಷಿಗಳೂ, ರಾಕ್ಷಸರೂ, ಕಾಮಕ್ರೋಧಾದಿವಿಹೀನರಾಗಿರಿ. ಅಂತಹ ಪ್ರಪಂಚವನ್ನೀಗ ಕಲ್ಪಿಸಿರುವೆನು. ಆದುದರಿಂದಲೇ ಎಲೈ ದೇವತೆಗಳಿರಾ! ದುಃಖಕ್ಕೆ ಮೂಲನಾಗಿಯೂ ಪಾಪಿಯಾಗಿಯೂ ಇರುವ ಈ ಮನ್ಮಥನನ್ನು ಖಂಡಿತವಾಗಿಯೂ ಬದುಕಿಸುವದಿಲ್ಲವು. ನೀವಾದರೋ, ಸದಾಕಾಲದಲ್ಲಿಯೂ ಆತ್ಮಸುಖವನ್ನು ವಿಕಸನಮಾಡುವ ಆನಂದ ಲಕ್ಷಣದಿಂದ ಕೂಡಿರುವ ಅಗಾಧವಾದ, ಅನನ್ಯರೂಪವನ್ನು ನೋಡಿರಿ' ಎಂದನು. ಪರಶಿವನ ಮಾತುಗಳನ್ನು ಕೇಳಿ, ಋಷಿ

ಗಳೆಲ್ಲರೂ ಲೋಕೈಕ ಶಂಕರನಾದ ಶಂಕರನನ್ನು ಕುರಿತಿಂತೆಂದರು. 'ಎಲೈ ಶಿವನೇ! ನೀನು ಯಾವುದನ್ನು ಹೇಳಿದೆಯೋ ಅದು ನಮಗೆ ಶ್ರೇಯಸ್ಸನ್ನುಂಟುಮಾಡುವದೇ ಸರಿ. ಆದರೂ ಹೇಳುವೆವು, ಕೇಳು, ಕೇಳಿ ಚೆನ್ನಾಗಿ ವಿಮರ್ಶಿಸು. ಈ ಪ್ರಪಂಚವು ಕಾಮಕ್ರೋಧಾದಿಗಳಿಂದ ಕೂಡಿದುದಾಗಿ ಸೃಷ್ಟಿಸಲ್ಪಟ್ಟಿರುವುದು. ಆದುದರಿಂದ ಇದು ಕಾಮರೂಪವಷ್ಟೆ? ಎಲೈ ಮಹಾದೇವನೇ! ಧರ್ಮ, ಅರ್ಥ, ಕಾಮ, ಮೋಕ್ಷವೆಂಬ ಚತುರ್ವಿಧ ಫಲ ಪುರುಷಾರ್ಥಗಳೂ ಯಾವನಿಂದ ನಡಿಸಲ್ಪಡುತ್ತವೆಯೋ, ಅಂತಹ ಕಾಮನು ಕೊಲ್ಲಲ್ಪಡುವುದಿಲ್ಲವಷ್ಟೆ? ಎಲೈ ದೇವಾ! ಜಂಗಮಸ್ಥಾವರ ಪ್ರಪಂಚವನ್ನು ಸಂಘಟಿಸುವ ಮನ್ಮಥನು ನಿನ್ನಿಂದ ಹೇಗೆ ಸುಡಲ್ಪಟ್ಟನು? ಕಾಮನಿಂದಲೇ ಪ್ರಪಂಚನಾಶವು! ಕಾಮನಿಂದಲೇ ಪ್ರಪಂಚಪಾಲನೆಯು! ಕಾಮನಿಂದಲೇ ಪ್ರಪಂಚ ಸೃಷ್ಟಿಯು! ಆದುದರಿಂದ ಎಲೈ! ದೇವ ದೇವನಾದ ಪರಶಿವನೇ! ಕಾಮನು ಮಹಾಪರಾಕ್ರಮಶಾಲಿಯು. ಎಲೈ ದೇವಾ! ಕಾಮದಿಂದಲೇ ಅಲ್ಲವೆ ಕ್ರೋಧವು ಸಂಭವಿಸುವುದು? ನೀನೂ ಆ ಕಾಮಜನಿತವಾದ ಕ್ರೋಧದಿಂದ ವಶೀಕೃತನಾಗಲಿಲ್ಲವೆ? ಆದುದರಿಂದ ಕಾಮನನ್ನು ಬದುಕಿಸು. ಎಲೈ ದೇವಾ! ನಿನ್ನಿಂದಲೇ ಅಲ್ಲವೆ, ಮಹಾಬಲಶಾಲಿಯಾದ ಮನ್ಮಥನು ಸಂಪಾದಿಸಲ್ಪಟ್ಟದ್ದು? ಅಂತಹನು ಸಮರ್ಥನಲ್ಲವೆ? ಆ ಸಮರ್ಥನೆಯಿಂದ ಅವನ ಸಾಮರ್ಥ್ಯವನ್ನು ತೋರುವನಲ್ಲವೆ?' ಇಂತು ನುಡಿದ ಋಷಿಗಳನ್ನು ಕೇಳಿ ಪರಶಿವನು ದ್ವಿಗುಣಿತವಾದ ರೋಷವನ್ನು ಹೊಂದಿ ತನ್ನ ಹಣೆಗಣ್ಣಿನಿಂದ ಅವರನ್ನು ಸುಡಲುಜ್ಜಿಸಿದನು. ಆಗ ಋಷಿಗಳೂ, ಚಾರಣರೂ, ಸಿದ್ಧಗಣಗಳೂ, ವೃಷಭವಾಹನನಾದ ಪರಶಿವನನ್ನು ನಮಸ್ಕರಿಸಿ ಸ್ತೋತ್ರಮಾಡಿದರು. ಬಳಿಕ ಪರಶಿವನು, ಶಾಂತಿಗೊಂಡು ಹಿಮವತ್ಪರ್ವತವನ್ನು ಬಿಟ್ಟು ಅಂತರ್ಧಾನವಾದನು. ಪಾರ್ವತಿಯು ಶಿವನಂತರ್ಧಾನವಾದುದನ್ನೂ, ಸುಟ್ಟುಹೋದ ಮನ್ಮಥನನ್ನೂ, ಅವನ ಸತಿಯಾದ ರತಿದೇವಿಯ ವಿಲಾಪವನ್ನೂ, ನೋಡಿ ಮನಗುಂದಿ, ಶೋಕಾಶ್ರುಗಳನ್ನು ಸುರಿಸುತ್ತಾ, ಪರಶಿವನು ಹೇಗೆ ವಶನಾಗುವ

ನೆಂದು ದೀರ್ಘಕಾಲ ಚಿಂತಿಸಿದಳು. ಆಗ ಮಹಾ ರೂಪವತಿಯಾದ ರತಿಯು, 'ಎಲೌ ಸಖಿಯೇ! ಯೋಚಿಸಬೇಡ. ನನ್ನ ಪತಿಯಾದ ಮನ್ಮಥನನ್ನು ಬದುಕಿಸುವೆನು' ಎಂದು ಗಿರಿಜೆಯನ್ನು ಸಮಾಧಾನ ಗೊಳಿಸಿ ಮನ್ಮಥನು ಸುಟ್ಟುಹೋಗಿದ್ದ ಸ್ಥಳದಲ್ಲಿ ಪತಿಯನ್ನು ಪಡೆಯಬೇಕೆಂದು ಮಹತ್ತರವಾದ ತಪವನ್ನಾಚರಿಸುತ್ತಿದ್ದಳು. ಇಂತು ರತಿಯು ತಪಶ್ಚರ್ಯವನ್ನು ಮಾಡುತ್ತಲಿರುವುದನ್ನು ದೇವ ಮುನಿಯಾದ ನಾರದನು ಕಂಡನು. ಆಗ ನಾರದನು ರತಿಯ ಸಮೀ ಪಕ್ಕೆ ಹೋಗಿ 'ಎಲೌ ಭಾಮಿನೀ! ಮಹಾರೂಪವತಿಯಾಗಿಯೂ, ತರುಣಿಯಾಗಿಯೂ, ಶ್ರೇಷ್ಠವಾದ ಸೌಭಾಗ್ಯದಿಂದ ಕೂಡಿರುವವಳಾ ಗಿಯೂ, ಇರುವ ನೀನು ಯಾರು? ಎಲೌ ವಿಶಾಲಾಕ್ಷಿಯೇ! ಏತ ಕ್ಕಾಗಿ ತಪಶ್ಚರ್ಯವನ್ನು ಮಾಡುತ್ತಿರುವೆ?' ಎಂದು ನುಡಿದನು. ನಾರದನ ಮಾತುಗಳನ್ನು ಕೇಳಿ, ರತಿಯು ಮಹಾರೋಷ ಸಮನ್ವಿತ ಳಾಗಿ ಮಧುರವಾಗಿಯೂ, ನಿಷ್ಠುರದಿಂದ ಕೂಡಿರುವುದಾಗಿಯೂ ಇರುವ ಮಾತುಗಳನ್ನಾಡಿದಳದಂತೆನೆ:—'ಎಲೈ ವಟುವೆ! ನೀನು ನಾರದನೆಂಬುದನ್ನು ನಾನು ಬಲ್ಲೆನು. ನೀನು ಹುಡುಗನೆಂಬುದರಲ್ಲಿ ಸಂಶಯವಿಲ್ಲವು. ಎಲೈ ಸುವ್ರತನೇ! ತಡೆಮಾಡದೇ ಬಂದ ದಾರಿ ಯನ್ನು ಹಿಡಿದುಕೊಂಡು ಹೋಗು. ನಿನಗೆ ಸ್ವಲ್ಪವೂ ತಿಳಿಯುವ ದಿಲ್ಲವು. ಕೇವಲ ಕಲಿಮಹಿಮೆಯಿಂದ ಆವೃತನಾಗಿರುವೆ. ಪರ ಸ್ತ್ರೀಲಂಪಟರಾಗಿಯೂ, ಕ್ಷುದ್ರರಾಗಿಯೂ, ವಿಟರಾಗಿಯೂ, ಸಪ್ತ ವ್ಯಸನಗಳನ್ನುಳ್ಳವರಾಗಿಯೂ, ಪಾಪಕಾರ್ಯಗಳನ್ನು ಮಾಡುವವ ರಾಗಿಯೂ, ಸ್ತಬ್ಧರಾಗಿಯೂ ಇರುವ ನರರ ಮಧ್ಯದಲ್ಲಿ ನೀನು ಅಗ್ರ ಗಣ್ಯನು.'

ಇಂತು ರತಿದೇವಿಯಿಂದ ಗದರಿಸಲ್ಪಟ್ಟ ನಾರದನು ಶೀಘ್ರ ವಾಗಿ ದೈತ್ಯಪುಂಗವನಾದ ಶಂಬರಾಸುರನಲ್ಲಿಗೆ ಹೋಗಿ ಮನ್ಮಥನು ರುದ್ರಕೋಪದಿಂದ ಸುಟ್ಟುಹೋದುದನ್ನು ಹೇಳಿ 'ಎಲೈ ಶಂಬ ರಾಸುರನೇ! ಮದನನ ಹೆಂಡತಿಯು ಅತಿ ರೂಪಸಂಪನ್ನಳು,

ಇಂತಿರುವ ಆ ಮದನಮೋಹಿನಿಯಾದ ರತಿಯನ್ನು ಕರೆದುಕೊಂಡು ಬಂದು ನಿನ್ನ ಪತ್ನಿಯನ್ನಾಗಿ ಮಾಡಿಕೊಂಡರೆ ನಿನ್ನ ಭಾಗ್ಯಕ್ಕೆ ಕೊರತೆಯೇ ಇರುವುದಿಲ್ಲವು' ಎಂದನು. ನಾರದನ ಮಾತುಗಳನ್ನು ಕೇಳಿ ಶಂಬರಾಸುರನು ಪರಮ ಶೋಭನೆಯಾದ ರತಿಯೆಲ್ಲಿದ್ದಳೋ ಅಲ್ಲಿಗೆ ಬಂದನು. ಅಲ್ಲಿಯಾದರೋ ಶಂಬರಾಸುರನು ವಿಶಾಲವಾದ ಕಂಗಳುಳ್ಳವಳಾಗಿಯೂ, ಮದನಮೋಹಿನಿಯಾಗಿಯೂ, ಇರುವ ರತಿಯನ್ನು ನೋಡಿ, 'ಎಲೌ ಕೋಮಲಾಂಗೀ ! ನನ್ನೊಡನೆ ಬಂದು ಯಥೇಚ್ಛವಾಗಿ ನನ್ನ ಪ್ರಸಾದದಿಂದ ರಾಜ್ಯಭೋಗಗಳನ್ನನುಭವಿಸು. ಈ ತಪಶ್ಚರ್ಯದಿಂದೇನು ಫಲವು?' ಎಂದು ನುಡಿಯಲು, ಮನೋಹರಳಾದ ರತಿಯು, ಮಹಾತ್ಮನಾದ ಶಂಬರನನ್ನು ಕುರಿತು, 'ಎಲೈ ಶಂಬರಾಸುರನೇ! ನಾನು ವಿಧವೆಯು. ಆದುದರಿಂದ ನೀನಿಂತು ಮಾತನಾಡಬಾರದು. ನೀನಾದರೋ ಸಕಲಲಕ್ಷಣಗಳಿಂದಲೂ ಕೂಡಿರುವೆ. ದಾನವರೆಲ್ಲರಿಗೂ ರಾಜನಾಗಿರುವೆ. ಅಂತಹ ನೀನು ಹೀಗೆನ್ನಬಹುದೇ?' ಎಂದಳು. ಆಗಲಾ ಶಂಬರಾಸುರನು ಕಾಮಸಂತಪ್ತನಾಗಿ ರತಿದೇವಿಯನ್ನು ಹಿಡಿದುಕೊಳ್ಳಲು ಹೋದನು. ರತಿಯು ಅವನನ್ನು ತಡೆದಳು. ಆದರೂ ಗೆಲ್ಲಲಸಾಧ್ಯವೆಂಬುದನ್ನು ತನ್ನ ಮನಸ್ಸಿನಲ್ಲಿಯೇ ವಿಮರ್ಶಿಸಿ, 'ಎಲವೋ ಮೂಢನೇ ! ನನ್ನನ್ನು ಮುಟ್ಟಬೇಡ. ನನ್ನ ಸಂಪರ್ಕಮಾತ್ರದಿಂದಲೇ ಸುಟ್ಟುಹೋಗುವೆ, ಎಂಬುದನ್ನು ಖಂಡಿತವಾಗಿಯೂ ತಿಳಿ' ಎಂದಳು. ಆಗ, ಮಹಾ ತೇಜಸ್ವಿಯಾದ ಶಂಬರಾಸುರನು ನಸುನಗುತ್ತಾ 'ಎಲೌ ಮೋಹನಾಂಗಿಯೇ! ಭೀಕರವಾದ ಮಾತುಗಳಿಂದ ನನ್ನನ್ನು ಹೆದರಿಸುವೆಯಲ್ಲ! ಶೀಘ್ರವಾಗಿ ನನ್ನ ಮನೆಗೆ ಬರುವವಳಾಗು. ವ್ಯರ್ಥವಾಗಿ ಮಾತನಾಡುವದರಿಂದ ಪ್ರಯೋಜನವೇನು?' ಎಂದು ಹೇಳುತ್ತಾ ಮನೋಹರಾಂಗಿಯಾದ ರತಿಯನ್ನು ತನ್ನ ಪಟ್ಟಣಕ್ಕೆ ಕರೆದುಕೊಂಡುಹೋಗಿ ರಾಣೀವಾಸದಲ್ಲಿ ಅಧ್ಯಕ್ಷಳನ್ನಾಗಿಮಾಡಿ ಮಾಯಾವತಿಯೆಂಬ ಹೆಸರನ್ನಿಟ್ಟನು.

ಇಂತೆಂದು ಬಿತ್ತರಿಸಿದ ಸೂತಪುರಾಣಿಕನನ್ನು ಕುರಿತು ಶೌನಕಾದಿ ಋಷಿಗಳು ಕೇಳುತ್ತಾರೆ. 'ಎಲೈ ಸೂತಪುರಾಣಿಕನೇ !

ಪಾರ್ವತಿಯಿಂದ ಮದನನನ್ನು ಕರೆದುಕೊಂಡು ಪರಲೋಕಸಂಗ ಅಧಿಕೃತಳಾದ ರತಿದೇವಿಯು ಶಂಬರಾಸುರನಿಂದ ಅಪಹರಿಸಲ್ಪಟ್ಟಳೆಂದು ಹೇಳಿದೆಯಲ್ಲವೇ ? ಬಳಿಕ ಏನಾಯಿತೆಂಬುದನ್ನು ವರ್ಣಿಸುವವನಾಗು' ಎನಲು ಸೂತಪುರಾಣಿಕನು ಹೇಳುತ್ತಾನೆ. ಅಯ್ಯಾ ಋಷಿಗಳಿರಾ ಕೇಳಿರಿ! ಆಬಳಿಕ ಪಾರ್ವತಿಯು ಮದನನನ್ನು ಸುಟ್ಟುಹೊರಟುಹೋದ ಪರಶಿವನನ್ನು ಕುರಿತು ತಪಶ್ಚರ್ಯೆಯನ್ನು ಮಾಡುತ್ತಾ ಅಲ್ಲಿಯೇ ಇದ್ದಳು. ಆಗ ಗಿರಿಜೆಯ ತಂದೆತಾಯಿಗಳಾದ ಹಿಮವಂತನೂ ಮೇನೆಯೂ, ಪಾರ್ವತಿಯನ್ನು ಕುರಿತು 'ಎಲೌ ಬಾಲೆ! ಇದೆಂತಹ ವಿಪರೀತವಾದ ಕಾರ್ಯವನ್ನು ಮಾಡುತ್ತಿರುವೆ? ಮನೆಗೆ ಬಂದು ಸೌಖ್ಯವಾಗಿರು. ನಿನಗೇಕೀ ತಪವು?' ಎಂದರು. ಇಂತೆಂದ ತಾಯಿತಂದೆಗಳನ್ನು ಕುರಿತು ಗಿರಿಜೆಯು 'ಎಲೈ ತಂದೆಯೇ! ಎಲೌ ತಾಯಿಯೇ ! ನಾನು ಮನೆಗೆ ಬರುವುದಿಲ್ಲವು. ಧರ್ಮಾರ್ಥಯುಕ್ತವಾದ ನನ್ನ ಮಾತುಗಳನ್ನು ಕೇಳಿದರೆ ಸಂತೋಷವನ್ನು ಹೊಂದುವಿರಿ. ಯಾವ ಮಹಾ ಪುರುಷನಾದ ಶಂಭುವಿನಿಂದ ಮನ್ಮಥನು ಸುಟ್ಟುಹೋದನೋ ಆ ಪರಶಿವನನ್ನು ಇಲ್ಲಿಗೇ ಕರೆತರುವೆನು. ಎಲೈ ತಂದೆಯೇ! ಗೃಹವನ್ನಪೇಕ್ಷಿಸುವ ಪ್ರಾಣಿಗಳಿಗೆ ಪರಶಿವನು ದುರ್ಲಭನಲ್ಲವೇ ? ಆದುದರಿಂದ ನಾನು ಮನೆಗೆ ಬರುವುದಿಲ್ಲವು. ನಾನೀಗ ಹೇಳಿದುದನ್ನು ಚನ್ನಾಗಿ ವಿಮರ್ಶೆಮಾಡಿರಿ' ಎಂದಳು. ಬಳಿಕ ಮಹಾ ತೇಜಸ್ವಿಯಾದ ಹಿಮವಂತನು ಮಗಳನ್ನು ಕುರಿತು, 'ಎಲೌ ಗಿರಿಜೆ! ಪರಮೇಶ್ವರನು ಪೂಜಿಸಲಸಾಧ್ಯನು. ಸರ್ವದೇವತೆಗಳಿಂದಲೂ ನಮಸ್ಕೃತನಾದ ಶಿವನನ್ನು ಹೊಂದಲು ನೀನು ಶಕ್ಯಳಲ್ಲವು.' ಎಂದನು. ಗಿರಿಜೆಯ ತಾಯಿಯೂ ಗದ್ಗದಸ್ವರಭರಿತಳಾಗಿ 'ಎಲೌ ಮಗಳೇ! ಶೀಘ್ರವಾಗಿ ಮನೆಗೆ ಬರುವವಳಾಗು' ಎಂದಳು. ಆಗ ಗಿರಿಜೆಯು ನಸುನಗುತ್ತಾ 'ಎಲೌ ತಾಯೆ! ನನ್ನ ಪ್ರತಿಜ್ಞೆಯನ್ನು ಕೇಳು. ಘೋರವಾದ ತಪಸ್ಸಿನಿಂದಲೇ ಆ ಪರಶಿವನನ್ನು ಕರೆತಂದು ವಿವಾಹಿತಳಾಗುವೆನು. ಇಷ್ಟೆಯಲ್ಲದೆ ರುದ್ರನ ರೌದ್ರವನ್ನು ನಾಶಗೊಳಿಸುವೆನು' ಎಂದು ಹೇಳಿ ಸುಖರೂಪಗಳನ್ನೆಲ್ಲವನ್ನೂ

ತ್ಯಜಿಸಿ ಪುನಸ್ತಪಸ್ವಿನಿಯಾದ ಗಿರಿಜೆಯು ಸಾಕ್ಷಾತ್ಪರಶಿವನನ್ನು ಆರಾಧಿಸತೊಡಗಿದಳು. ಆಗ ಜಯೆ, ವಿಜಯೆ, ಮಾಧವಿ ಇವರೇ ಮೊದಲಾದ ಸಖಿಯರು ಗಿರಿಜೆಯನ್ನು ಉಪಚರಿಸಲಾರಂಭಿಸಿದರು. ಸಖಿಯರಿಂದ ಉಪಚರಿಸಲ್ಪಟ್ಟ ಗಿರಿಜೆಯು ಮನ್ಮಥನು ರುದ್ರನಿಂದ ಸುಟ್ಟುಹೋದ ಸ್ಥಳದಲ್ಲಿಯೇ ವೇದಿಕೆಯನ್ನು ಮಾಡಿಕೊಂಡು, ಉಗ್ರವಾದ ತಪವನ್ನಾಚರಿಸಿದಳು. ಕ್ರಮಕ್ರಮವಾಗಿ ಮಹತ್ತರವಾದ ತಪಸನ್ನಾಚರಿಸಿ, ಒಂದೇ ಅಂಗುಷ್ಠದಿಂದ ದೇಹಾದ್ಯಂತವನ್ನೂ ಹೊತ್ತುಕೊಂಡು ಸಂತೋಷದಿಂದ ಕೂಡಿ ಶಂಕರಾರಾಧನೆಯನ್ನು ಮಾಡಿದಳು. ಈ ಪ್ರಕಾರವಾಗಿ ಗಿರಿಜೆಯು ಪರಂಭಾವವನ್ನು ಹೊಂದಿ, ಈಶ್ವರನ ಸಂತೋಷಾರ್ಥವಾಗಿ ಒಂದುಸಾವಿರ ವರ್ಷಕಾಲ ಉಗ್ರವಾದ ತಪಶ್ಚರ್ಯವನ್ನು ಮಾಡಿದಳು. ಆಗ ಗಿರಿರಾಜನು, ಗಿರಿಜೆಯಲ್ಲಿಗೆ ಬಂದು, 'ಗಿರಿಜೆ! ರುದ್ರನು ನಿನಗೆಲ್ಲಿ ಕಾಣುವನು? ಅವನು ವಿರಕ್ತನು. ನೀನಾದರೋ ಹುಡುಗಿ; ಮನೋಹರಾಂಗಿಯೂ, ಬಾಲೆಯೂ, ತಪಸ್ಸಿನಿಂದ ವಿಮೋಹಿತೆಯೂ, ಆಗಿರುವೆ. ಹೀಗೆಯೇ ಮಾಡುತ್ತಿದ್ದರೆ ಸುಟ್ಟುಹೋದ ಶರೀರವುಳ್ಳವಳಾಗುವೆ ಎಂಬುದರಲ್ಲಿ ಸಂಶಯವಿಲ್ಲವು. ಆದುದರಿಂದ ಮನೆಗೆ ಬರುವವಳಾಗು. ಎಲೌ ಶುಚಸ್ಮಿತೆಯೇ! ಹಿಂದೆಯೇ ಮನ್ಮಥನನ್ನು ಸುಟ್ಟ ವಿರಕ್ತನಾದ ರುದ್ರನಿಂದ ನಿನಗೆ ಏನು? ಏತಕ್ಕಾಗಿ ಪ್ರಾರ್ಥಿಸುವೆ? ಎಲೌ ಮಗಳೇ! ಗಗನದಲ್ಲಿರುವ ಚಂದ್ರನನ್ನು ಪಡಿಯಲು ಹೇಗೆ ಅಶಕ್ಯವೋ, ಹಾಗೆಯೇ ಈ ಶಂಭುವೂ ನಿನ್ನಿಂದ ಹೊಂದಲಸಾಧ್ಯನೆಂದು ತಿಳಿ' ಎಂದನು. ಬಳಿಕ ಮೇನೆಯೂ, ಮೈನಾಕನೂ, ಮಂದರ, ಮೇರು, ಸಹ್ಯಾದ್ರಿಗಳೇ ಮೊದಲಾದವರೆಲ್ಲರೂ ಹಿಮವಂತನ ನುಡಿಯಂತೆಯೇ ನುಡಿದರು. ಆಗ ತಪೋಗತಳಾದ ಪಾರ್ವತಿಯು ನಸುನಗುತ್ತಾ ಹಿಮವಂತನನ್ನು ಕುರಿತು 'ಎಲೈ ತಂದೆಯೇ! ಎಲೌ ತಾಯೇ! ಹಿಂದೆ ಹೇಳಿದುದನ್ನು ಮರೆತಿರುವಿರೇನು? ಎಲೈ ಬಾಂಧವರಿರಾ! ಈಗಲಾದರೂ ನನ್ನ ಪ್ರತಿಜ್ಞೆಯನ್ನು ಕೇಳಿರಿ. ಯಾವನಿಂದ ಮನ್ಮಥನು ಸುಡಲ್ಪಟ್ಟನೋ, ಆ ಪರಶಿವನನ್ನು ಶ್ರೇಷ್ಠವಾದ ತಪಸ್ಸಿನಿಂದಲೇ ಸಂತೋಷಪಡಿಸುವೆನು.

ಯಾವ ಶಂಕರನಿಂದ ಮದನನೂ ಹಿಮವತ್ಪರ್ವತದ ವನವೂ, ಸುಡಲ್ಪಟ್ಟವೋ ಆ ಲೋಕೈಕ ಶಂಕರನಾದ ಪರಶಿವನನ್ನು ಶ್ರೇಷ್ಠವಾದ ತಪೋಬಲದಿಂದಲೇ ಇಲ್ಲಿಗೆ ಕರೆತರುವೆನು. ಮಹತ್ತರವಾದ ತಪೋಬಲದಿಂದ ಸದಾಶಿವನು ಸೇವಿಸಲ್ಪಡುವನೆಂಬುದನ್ನು ತಿಳಿಯಿರಿ! ಸತ್ಯವಾಗಿಯೂ ಹೇಳುತ್ತಿರುವೆನು; ಆದುದರಿಂದ ನೀವು ಈ ವಿಷಯದಲ್ಲಿ ವಿಚಾರಮಾಡಬೇಕಾದುದಿಲ್ಲವು; ತೆರಳಿರಿ' ಎಂದಳು. ಆಗ ಹಿಮವಂತನು ಹೆಂಡತಿಯಾದ ಮೇನೆಯೊಡನೆಯೂ, ಮೈನಾಕ, ಮಂದರ, ಮೇರು, ಸಹ್ಯಾದ್ರಿಗಳೊಡನೆಯೂ, ಬಂದ ದಾರಿಯನ್ನು ಹಿಡಿದು ತೆರಳಿದನು.

ಬಳಿಕ ಗಿರಿಜೆಯು ಮರಳಿಯೂ ದಾರುಣವಾದ ತಪವನ್ನಾಚರಿಸಿದಳು. ಆಕೆಯ ತಪೋಜ್ವಾಲೆಯಿಂದ ಚರಾಚರಾತ್ಮಕವಾದ ಪ್ರಪಂಚವೆಲ್ಲವೂ ಉರಿಯಲಾರಂಭಿಸಿತು. ಆಗ ದೇವ ದಾನವರೆಲ್ಲರೂ ಬ್ರಹ್ಮನನ್ನು ಶರಣು ಹೊಕ್ಕರು. ದೇವ ದಾನವರ ಮಾತುಗಳನ್ನು ಕೇಳಿ, ಬ್ರಹ್ಮನು ಬಹಳವಾಗಿ ಯೋಚಿಸಿ, ಗಿರಿರಾಜ ಕುಮಾರಿಯ ತಪಸ್ಸಿನಿಂದ ಉಂಟಾದ ಕಾಡ್ಗಿಚ್ಚನ್ನು ತಿಳಿದು ಶೀಘ್ರವಾಗಿ ದೇವದಾನವರೊಡನೆ ಕ್ಷೀರಸಾಗರಕ್ಕೆ ಬಂದು, ಮಹಾವಿಷ್ಣುವನ್ನು ಕಂಡು, 'ಎಲೈ ಮಹಾವಿಷ್ಣುವೇ! ಪಾರ್ವತಿಯ ತಪೋಜ್ವಾಲೆಯಿಂದ ಸುಟ್ಟುಹೋಗುತ್ತಲಿರುವ ನಮ್ಮನ್ನು ಕಾಪಾಡು' ಎಂದನು. ಬ್ರಹ್ಮನ ಮಾತನ್ನು ಕೇಳಿ ಶೇಷಾಸನೋಪವಿಷ್ಟನಾದ ನಾರಾಯಣನು 'ಎಲೈ ದೇವತೆಗಳಿರಾ! ನಿಮ್ಮೆಲ್ಲರಿಂದಲೂ ಕೂಡಿದವನಾಗಿ ಪರಮೇಶ್ವರನನ್ನು ಕುರಿತು ಹೋಗುವೆನು. ಮಹಾದೇವನನ್ನು ಪಾರ್ವತೀ ವಿವಾಹಾರ್ಥವಾಗಿ ಹೋಗುವಂತೆ ಪ್ರಾರ್ಥಿಸುವ' ಎಂದನು. ಬಳಿಕ ದೇವದಾನವರೆಲ್ಲರೂ, 'ಎಲೈ ಮಹಾವಿಷ್ಣುವೇ! ನಾವು ಪರಶಿವನಲ್ಲಿಗೆ ಹೋಗತಕ್ಕದ್ದಲ್ಲವು. ಪರಶಿವನಲ್ಲಿಗೆ ಹೊದದ್ದೇ ಆದರೆ ಆತನು, ಹಿಂದೆ ಮನ್ಮಥನನ್ನು ಸುಟ್ಟಹಾಗೆ ನಮ್ಮನ್ನೂ ಸುಟ್ಟುಬಿಡುವನೆಂಬುದರಲ್ಲಿ ಸಂಶಯವಿಲ್ಲವು' ಎಂದರು. ಆಗ ವಿಷ್ಣುವು

ದೇವತೆಗಳನ್ನು ಕುರಿತು 'ಎಲೈ ದೇವತೆಗಳಿರಾ! ಹೆದರಬೇಡಿರಿ. ಸದಾಶಿವನು ಮಂಗಳರೂಪನು. ಅವನು ನಿಮ್ಮೆಲ್ಲರನ್ನು ಸುಡುವದಿಲ್ಲವು. ನಿಮ್ಮ ಭಯವನ್ನು ನಾಶಗೊಳಿಸುವನು' ಎಂದು ಹೇಳಿ ದೇವತೆಗಳೊಡಗೂಡಿ ಪುರಾಣಪುರುಷನಾದ ಪರಶಿವನ ತಪೋಸ್ಥಾನಕ್ಕೆ ಹೊರಡಲು ಮನಸದೆರದನು.

## ಅಧ್ಯಾಯ ೨೨

### ಗಿರಿಜೆಯ ತಪಸ್ಸು — ಪರಶಿವನ ಪರಾಜಯ

ಸೂತನು ಹೇಳುತ್ತಾನೆ:—ಕೇಳಿರೈ ಋಷಿಗಳಿರಾ! ಮಧುಸೂದನನಿಂತು ಹೇಳಿದ ಬಳಿಕ ದೇವತೆಗಳು ಪರಶಿವನನ್ನು ನೋಡಲಿಷ್ಟವುಳ್ಳವರಾಗಿ ಹೊರಟರು. ಆ ಬಳಿಕ ಅಪಾರವಾದ ಸಮುದ್ರತೀರದಲ್ಲಿ ಶ್ರೇಷ್ಠವಾದ ಸಮಾಧಿಗತನಾಗಿ ಯೋಗಪೀಠದಲ್ಲಿ ಕುಳಿತುಕೊಂಡವನಾಗಿಯೂ, ಶಿವಗಣಗಳಿಂದ ಪರಿವಾರಿತನಾಗಿಯೂ, ಯಜ್ಞೋಪವೀತ ವಿಧಾನದಿಂದ ಸರ್ಪರಾಜನಾದ ವಾಸುಕಿಯನ್ನು ಧರಿಸಿದವನಾಗಿಯೂ, ಕರ್ಣ ದ್ವಯದಲ್ಲಿ, ಕರ್ಕೋಟಕನನ್ನೂ, ಬಾಹುಗಳಲ್ಲಿ, ಪುಲಹನನ್ನೂ, ಕಂಕಣ, ನೂಪುರ, ಶಂಖ, ಪದ್ಮಗಳನ್ನು ಧರಿಸಿಕೊಂಡು ವಿರಾಜಮಾನನಾಗಿಯೂ, ಶಿತಿಕಂಠನಾಗಿಯೂ ಅದ್ಭುತವಾದ ವೃಷಭದಿಂದ ಕೂಡಿರುವವನಾಗಿಯೂ ಇರುವ ದೇವಶ್ರೇಷ್ಠನಾದ ಪರಶಿವನನ್ನು ಕಂಡರು. ಆಗ ಬ್ರಹ್ಮ ವಿಷ್ಣ್ವಾದಿ ದೇವತೆಗಳೂ ಋಷಿಗಳೂ, ವೇದೋಪನಿಷತ್ತುಗಳಿಂದ ಕೂಡಿದ ಸೂಕ್ತಿಗಳಿಂದ ಸದಾಶಿವನನ್ನು ಸಂತಸಗೊಳಿಸಿದರು. ಆ ಬಳಿಕ ಬ್ರಹ್ಮನು 'ಎಲೈ ಮಹಾದೇವನೇ! ಮನ್ಮಥನ ಸಂಹಾರಕನಾಗಿಯೂ, ರುದ್ರನಾಗಿಯೂ ಇರುವ ನಿನಗೆ ನಮಸ್ಕಾರವು ! ಭರ್ಗನಾಗಿಯೂ

ಅಮೋಘ ಭಾಗ್ಯನಾಗಿಯೂ, ಮುಕ್ಕಣ್ಣನಾಗಿಯೂ, ತ್ರಿವಿಷ್ಟಪನಾಗಿಯೂ, ಶಿಪಿವಿಷ್ಟನಾಗಿಯೂ ಇರುವ ನಿನಗೆ ಅನಂತ ನಮಸ್ಕಾರಗಳು. ಎಲೈ ದೇವ! ಭೀಮನಾಗಿಯೂ, ಶೇಷಧಾರಿಯಾಗಿಯೂ, ತ್ರ್ಯಂಬಕನಾಗಿಯೂ, ಪ್ರಪಂಚಧಾರಿಯಾಗಿಯೂ, ವಿಶ್ವರೂಪನಾಗಿಯೂ, ಇರುವ, ನಿನಗೆ ಧನ್ಯವಾದ ನಮಸ್ಕಾರಗಳು! ಎಲೈ ದೇವಾ! ನೀನೇ ಅಲ್ಲವೆ ಸಕಲ ಲೋಕಗಳಿಗೂ, ದಾತನು? ಸಕಲ ಲೋಕಗಳಿಗೂ ತಂದೆಯೂ, ತಾಯಿಯೂ, ನೀನೇ ಅಲ್ಲವೆ? ಎಲೈ ಪರಮೇಶ್ವರನೇ! ನಮ್ಮನ್ನು ಕೃಪೆಮಾಡಿ ಕಾಪಾಡು' ಎಂದು ಸ್ತುತಿಸಿದನು. ಆಗ ಶಿವಕಿಂಕರನಾದ ನಂದಿಯು, ದೇವತೆಗಳನ್ನು ಕುರಿತು 'ಎಲೈ ದೇವತೆಗಳಿರಾ! ನೀವು ಇಲ್ಲಿಗೆ ಏತಕ್ಕಾಗಿ ಬಂದಿರುವಿರಿ? ನಿಮ್ಮ ಮನದಾಸೆ ಏನು' ಎಂದು ಕೇಳಿದನು. ನಂದಿಯ ಮಾತುಗಳನ್ನು ಕೇಳಿ, ದೇವತೆಗಳೆಲ್ಲರೂ 'ಅಯ್ಯಾ ನಂದಿಯೇ! ದೇವಕಾರ್ಯಾರ್ಥವಾಗಿ ಪರಶಿವನಲ್ಲಿ ವಿಜ್ಞಾಪಿಸಿಕೊಳ್ಳಲು ಬಂದಿರುವೆವು' ಎಂದರು. ಬಳಿಕ ನಂದಿಯು ತ್ವರಾನ್ವಿತನಾಗಿ ಶಂಭುವಿನಲ್ಲಿಗೆ ಹೋಗಿ 'ಎಲೈ ದೇವಾ! ಬ್ರಹ್ಮಾದಿ ದೇವತೆಗಳೂ ಸುರಸಿದ್ಧ ಸಮೂಹಗಳೂ ಅಸುರರಿಂದ ಪೀಡಿಸಲ್ಪಟ್ಟವರಾಗಿ ನಿನ್ನಲ್ಲಿಗೆ ಬಂದಿರುವರು. ಶತೃಗಳಿಂದ ಪೀಡಿತರಾದ ಈ ದೇವತೆಗಳನ್ನು ದಯವಿಟ್ಟು ಕಾಪಾಡು' ಎಂದು ವಿಜ್ಞಾಪಿಸಿಕೊಂಡನು. ಆಗ ಪರಶಿವನು ಸ್ವಲ್ಪ ಸ್ವಲ್ಪವಾಗಿ ಸಮಾಧಿಯಿಂದ ಎಚ್ಚೆತ್ತವನಾಗಿ ದೇವತೆಗಳನ್ನು ಕುರಿತು 'ಎಲೈ ಮಹಾಭಾಗ್ಯಶಾಲಿಗಳಾದ ಬ್ರಹ್ಮಾದಿ ದೇವತೆಗಳಿರಾ! ಯಾವ ಕಾರಣದಿಂದ ನನ್ನಲ್ಲಿಗೆ ಬಂದಿರುವಿರಿ? ಅದನ್ನು ಜಾಗ್ರತೆಯಾಗಿ ಹೇಳಿರಿ' ಎಂದು ನುಡಿದನು. ಇಂತು ನುಡಿದ ಶಿವನನ್ನು ಕುರಿತು ಬ್ರಹ್ಮನು ಹೇಳುತ್ತಾನೆ. 'ಎಲೈ ಶಂಭುವೇ! ತಾರಕಾಸುರನು ದೇವತೆಗಳೆಲ್ಲರಿಗೂ ಅದ್ಭುತನಾಗಿರುವನು. ಆದುದರಿಂದ ಅವನನ್ನು ಗೆಲ್ಲಲು ಅತಿ ಪ್ರಯಾಸವಾಗಿರುವುದು. ಈ ತಾರಕಾಸುರನು ನಿನ್ನ ಔರಸ ಪುತ್ರನಿಂದ ಕೊಲ್ಲಲ್ಪಡುವನೇ ಹೊರತು ಮತ್ತೆ ಬೇರೆಯಲ್ಲವು. ಆದುದರಿಂದ ಎಲೈ ಶಂಭುವೇ! ಗಿರಿರಾಜ ಕುಮಾರಿಯನ್ನು ವರಿಸು

ನಾಗು! ಹಿಮವಂತನು ತನ್ನ ಮಗಳನ್ನು ನಿನಗೆ ಕೊಡುವ ಹಾಗೆ ಮಾಡು' ಎಂದನು. ಆಗ ಪರಶಿವನು ನಸುನಗುತ್ತಾ 'ಎಲೈ ದೇವತೆಗಳಿರಾ! ನಾನು ಗಿರಿಜೆಯನ್ನು ವರಿಸಿದ್ದೇ ಆದಲ್ಲಿ ದೇವತೆಗಳೂ ಋಷಿಗಳೂ ಕಾಮದಿಂದ ಕೂಡಿ ಪ್ರಪಂಚದಲ್ಲಿ ಕ್ಷಮಿಸಲಸಾಧ್ಯರಾಗುತ್ತಾರೆ. ಮನ್ಮಥನಾದರೋ ಸಕಲರ ಕಾರ್ಯಸಿದ್ಧಿಗಾಗಿ ನನ್ನಿಂದ ಕೊಲ್ಲಲ್ಪಟ್ಟನು. ಪಾರ್ವತಿಯೂ ಧೀಕ್ಕೃತಳಾದಳು. ಎಲೈ ಬ್ರಹ್ಮನೇ! ಪಾರ್ವತಿಯಾದರೋ ಮನ್ಮಥನನ್ನು ಬದುಕಿಸುವಳೆಂಬುದರಲ್ಲಿ ಸಂಶಯವಿಲ್ಲವು. ಕಾರ್ಯಾಕಾರ್ಯಗಳನ್ನು ವಿಚಾರವಮಾಡಿಯೇ ಸುಟ್ಟುಹೋದ ಮನ್ಮಥನು ಈ ಮಹತ್ಕಾರ್ಯವನ್ನು ಮಾಡಿದನು. ನೀವೂ ನನ್ನ ಹಾಗೆಯೇ ನಿಷ್ಕಾಮರಾಗುವಿರೆಂಬುದರಲ್ಲಿ ಸಂಶಯ ವಿಲ್ಲವು. ನಾನು ಹೇಗೆ ಕಾಮರಹಿತನಾಗಿರುವೆನೋ ಹಾಗೆಯೇ ನೀವೂ ಪ್ರಯತ್ನ ಪೂರ್ವಕವಾಗಿ ಶ್ರೇಷ್ಠವಾದುದಾಗಿಯೂ, ದುಷ್ಕರವಾಗಿಯೂ, ಇರುವ ತಪಸ್ಸಿನಿಂದ ಕೂಡಿ, ಪರಮಾನಂದವನ್ನು ಹೊಂದಿ ಸುಖಿಸಿರಿ. ಕೇಳಿರೈ ದೇವತೆಗಳಿರಾ! ಕಾಮವೆಂದರೆ ನರಕವೇ ಸರಿ. ಕಾಮದಿಂದ ಕ್ರೋಧವು ಹುಟ್ಟುವುದು. ಈ ಕ್ರೋಧದಿಂದ ಮೋಹವು ಹುಟ್ಟುವುದು. ಈ ಮೋಹದಿಂದ ಮನವು ಚಂಚಲವಾಗುತ್ತದೆಯೇ ಹೊರತು ಸ್ಥಿರವಾಗಿ ನಿಲ್ಲುವುದಿಲ್ಲ. ಆದುದರಿಂದ ನೀವೆಲ್ಲರೂ ಕಾಮಕ್ರೋಧಾದಿಗಳನ್ನು ತ್ಯಜಿಸತಕ್ಕದ್ದು', ಎಂದು ಹೇಳಿ, ಮರಳಿಯೂ ಸಮಾಧಿಗತನಾದನು.

ಬಳಿಕ ದೇವತೆಗಳೆಲ್ಲರೂ ಹೊರಟುಹೋದರು. ಶಂಕರನು ಸಮಾಧಿಗತನಾಗಿ ತನ್ನ ಆತ್ಮನನ್ನು ತನ್ನಲ್ಲಿಯೇ ಲೀನಮಾಡಿಕೊಂಡು, ತನ್ನಲ್ಲಿಯೇ ಇರುವ ಪರಾತ್ಪರವಾಗಿಯೂ, ಸ್ವಚ್ಛವಾಗಿಯೂ, ನಿಷ್ಕಳಂಕವಾಗಿಯೂ, ಅವಗ್ರಹ ಶೂನ್ಯವಾಗಿಯೂ, ಅಂಜನರಹಿತವಾಗಿಯೂ, ನಿರಾಭಾಸವಾಗಿಯೂ, ಎಲ್ಲಿ ಪಂಡಿತರು ಮೋಹಗೊಳ್ಳುತ್ತಾರೆಯೋ ಎಲ್ಲಿ ಸೂರ್ಯಾಗ್ನಿಚಂದ್ರರೂ, ವಾಯುವೂ ಪ್ರಕಾಶಿಸುವದಿಲ್ಲವೋ, ಯಾವುದನ್ನು ಚನ್ನಾಗಿ ವಿಚಾರಿಸಿದ್ದರೂ ಸೂಕ್ಷ್ಮ

ಕ್ಕಿಂತಲೂ ಅತಿಸೂಕ್ಷ್ಮವಾಗಿಯೂ, ಅತಿಸೂಕ್ಷ್ಮಕ್ಕಿಂತಲೂ ಸೂಕ್ಷ್ಮವಾಗಿಯೂ ಇರುವ, ಅನಿರ್ದೇಶ್ಯವಾಗಿಯೂ, ಯೋಚಿಸಲಸಾಧ್ಯವಾಗಿಯೂ, ಆಮಯರಹಿತವಾಗಿಯೂ, ಜ್ಞಪ್ತಿಮಾತ್ರವೇ ಸ್ವರೂಪವುಳ್ಳದ್ದಾಗಿಯೂ, ಸ್ಥಿರಚಿತ್ತರು ಹೋಗುವದಾರಿಯಾಗಿಯೂ, ಶಬ್ದಾತೀತವಾಗಿಯೂ, ಸತ್ವರಜಸ್ತಮೋಗುಣ ರಹಿತವಾಗಿಯೂ, ಸತ್ತಾಮಾತ್ರವಾಗಿಯೂ, ಜ್ಞಾನದಿಂದ ಪಡಿಯತಕ್ಕದ್ದಾಗಿಯೂ, ಹೊಂದಲಸಾಧ್ಯವಾಗಿಯೂ, ವೇದಾಗಮಗಳಿಂದ ಸೂಕ್ತವಾದ ವಸ್ತುಭೂತನಾಗಿ, ಅತ್ಯುಗ್ರವಾದ ತಪವನ್ನಾಚರಿಸಿದನು. ಕೇಳಿರೈ ಋಷಿಗಳಿರಾ! ಇತ್ತಲಾಪಾರ್ವತಿಯು ತಪವನ್ನಾಚರಿಸುತ್ತಿರಲು, ಸಾಕ್ಷಾತ್ಪರಶಿವನೂ ಭಯವನ್ನು ಹೊಂದಿದನು. ಆಗ ಪಾರ್ವತೀ ದೇವಿಯು ತನ್ನ ಅಮೋಘವಾದ ತಪಸ್ಸಿನಿಂದಲೇ ಸಕಲಾರ್ಥದಾಯಕನಾಗಿಯೂ, ಸ್ಥಾಣುವಾಗಿಯೂ, ಶಂಭುವಾಗಿಯೂ, ನಿಜಸ್ವರೂಪನಾಗಿಯೂ ಇರುವ, ಶಂಕರನನ್ನು ಗೆದ್ದಳು. ಈ ಗಿರಿಜೆಯಿಂದ ಗೆಲ್ಲಲ್ಪಟ್ಟ ಪರಶಿವನು ತಕ್ಷಣದಲ್ಲಿಯೇ ಸಮಾಧಿಯಿಂದ ಬಹಿರ್ಮುಖನಾದನು. ಬಳಿಕ ಪಾರ್ವತಿಯ ಬಳಿಗೆ ಶೀಘ್ರವಾಗಿ ಹೋಗಿ, ಮನ್ಮಥನು ಸುಟ್ಟುಹೋಗಿದ್ದ ಸ್ಥಳದಲ್ಲಿ ವೇದಿಕೆಯನ್ನು ಮಾಡಿಕೊಂಡು, ಅದರ ಮೇಲೆ ಕುಳಿತು, ಸಖೀಜನರಿಂದ ಪರಿವಾರಿತಳಾಗಿ, ಚಂದ್ರಕಳೆಯಂತೆ ಶೋಭಾಯಮಾನಳಾಗಿಯೂ, ತಪವನ್ನಾಚರಿಸುತ್ತಿರುವವಳಾಗಿಯೂ, ಇರುವ ಗಿರಿಜೆಯನ್ನು ಕಂಡನು. ಅನಂತರದಲ್ಲಿ ಪರಶಿವನು ವಟುರೂಪವನ್ನು ತಾಳಿ, ಬ್ರಹ್ಮಚಾರಿಯಂತೆ, ಸಖೀಜನಗಳ ಮಧ್ಯಕ್ಕೆ ಹೋಗಿ ಅವರನ್ನು ಕುರಿತು, 'ಎಲೌ ಸಖಿಯರೆ! ಸರ್ವಾಂಗ ಸುಂದರಿಯಾಗಿ ವೇದಿಕೆಯಲ್ಲಿ ಕುಳಿತು ತಪವನ್ನಾಚರಿಸುತ್ತಲಿರುವ, ಈಕೆಯಾರು? ಯಾರಮಗಳು? ಎಲ್ಲಿಂದ ಬಂದಳು? ಏತಕ್ಕಾಗಿ ತಪವನ್ನುಗೈಯುತ್ತಿರುವಳು? ಈ ವಿಷಯವನ್ನು ಯಥಾರ್ಥವಾಗಿ ಹೇಳುವವರಾಗಿ' ಎಂದು ಕೇಳಿದನು. ಆಗ, ಪಾರ್ವತಿಯ ಸಖಿಯಾದ ಜಯೆಯು, ವಟುರೂಪಧಾರಿಯಾದ ರುದ್ರನನ್ನು ಕುರಿತು 'ಎಲೈ ವಟುವೆ! ಈಕೆಯು ಹಿಮವಂತನ ಮಗಳು. ಶಿವ

ನನ್ನು ತನ್ನ ಪತಿಯನ್ನಾಗಿ ಮಾಡಿಕೊಳ್ಳಲು ತಪವನ್ನಾಚರಿಸುತ್ತಿರು ವಳು' ಎಂದಳು. ಜಯೆಯ ಮಾತುಗಳನ್ನು ಕೇಳಿ, ವಟುರೂಪ ಧಾರಿಯಾದ ಪರಶಿವನು ಸಖಿಯರನ್ನು ಕುರಿತು, 'ಎಲೌ ಸಖಿಯರೆ! ಈ ಪಾರ್ವತಿಯು ಮೂಢಳು. ಹಿತಾಹಿತಗಳನ್ನರಿಯಳು. ಶಿವ ನನ್ನು ಹೊಂದಲು ತಪಸ್ಸನ್ನು ಏಕೆ ಮಾಡಬೇಕು? ಆ ಶಿವನಾದರೋ ಅಮಂಗಳನು; ಕಪಾಲಿಯು; ಸ್ಮಶಾನವಾಸಿಯು; ಅಮಂಗಳ ನಾದರೂ ಮಂಗಳನೆಂದೆಣಿಸಿಕೊಳ್ಳುವನು. ಈ ಸುಂದರಾಂಗಿಯಾದ ಗಿರಿಜೆಯು ಪರಶಿವನಲ್ಲಿ ಸೇರಿದ್ದೇ ಆದರೆ ಅಮಂಗಳಕರಳಾಗುವದ ರಲ್ಲಿ ಸಂಶಯವಿಲ್ಲವು. ಆ ವಿಟನಾದ ರುದ್ರನಾದರೋ ದಕ್ಷನ ಶಾಪದಿಂದ ಯಜ್ಞ ಬಹಿಷ್ಕೃತನಾದನು. ಈ ಶರ್ವನ ಅಂಗಾ ಭರಣಗಳಾದರೋ ಮಹಾವಿಷದಿಂದ ಕೂಡಿದ ಸರ್ಪಗಳು. ಇವನು ಬಳದುಕೊಳ್ಳುವ ಲೇಪನವಾದರೋ ಹೆಣದ ಬೂದಿಯು. ಪರ ಶಿವನು ಕೃತ್ತಿವಾಸನನಾಗಿಯೂ, ಅಮಂಗಳಕರನಾಗಿಯೂ, ಸದಾ ಕಾಲದಲ್ಲಿ ಪಿಶಾಚಿಗಳಿಂದಲೂ, ಭೂತ ಪ್ರಮಥಗಣಗಳಿಂದಲೂ, ಆವೃತನಾಗಿರುವನು. ಅಮಂಗಳಕರನಾದ ರುದ್ರನಿಂದ ಸುಕುಮಾ ರಿಯಾದ ಈ ಗಿರಿಜೆಗೆ ಏನಾಗಬೇಕು? ಆದುದರಿಂದ ಎಲೌ ಸಖಿ ಯರೇ! ಈ ಗಿರಿಜೆಯನ್ನು ಪಿಶಾಚಿಯಂತೆ ಸಾಯುವದನ್ನು ನಿವಾ ರಿಸಿ, ಮನೋಹರನಾದ ಇಂದ್ರನನ್ನೋ, ಮಹಾ ಪ್ರಭಾಶಾಲಿಯಾದ ಯಮನನ್ನೊ, ವಿಶಾಲ ನಯನನಾದ ನೈರುತನನ್ನೋ, ಇಲ್ಲದಿದ್ದರೆ ಜಲಪತಿಯಾದ ವರುಣನನ್ನೋ, ಕುಬೇರನನ್ನೋ, ಅದೂ ಅಲ್ಲದಿದ್ದರೆ ವಿಭಾವಸುವನ್ನೋ ವರಿಸುವಂತೆ ಮಾಡಿರಿ' ಎಂದನು. ಇಂತು ನುಡಿದ ಪರಶಿವನನ್ನು ನೋಡಿ; ಸಮಾಧಿಗತಳಾದ ಪಾರ್ವತಿಯು ಅತಿಯಾಗಿ ಕೋಪಗೊಂಡು ವಟುರೂಪಧಾರಿಯಾದ ಪರಶಿವನನ್ನು ಕುರಿತು, ಎಲೈ ವಟುವೇ! ಶೀಘ್ರವಾಗಿ ತೆರಳುವವನಾಗು. ಕ್ಷಣ ಮಾತ್ರವೂ ನೀನಿಲ್ಲಿರಲಾಗದು. ನೀನೀರೀತಿಯಲ್ಲಿ ಅತ್ತರೆಸಿನಗೇನು ಪ್ರಯೋಜನವು? ಎಂದು ಗದುರಿಸಿದಳು. ಆದರೂ ಶಿವನು ಅಲ್ಲಿಯೇ ನಿಂತುಕೊಂಡು ಮೆಲ್ಲಮೆಲ್ಲಗೆ ವಿಜಯೆಯ ಸಮೀಪಕ್ಕೆ

ಬಂದು, ಮರಳಿಯೂ ಇಂತೆಂದನು. 'ಎಲೌ ವಿಜಯೇ! ಈಕೆಯು ಏತಕ್ಕಾಗಿ ಕೋಪಿಸಿರುವಳು? ಕೋಪಕ್ಕೆ ಕಾರಣವೇನು? ನಾನು ಹೇಳಿದ ಮಾತುಗಳೆಲ್ಲವೂ ಸೂಕ್ತವಾಗಿಲ್ಲವೇ? ಯಥೋಕ್ತವಾಗಿ ಹೇಳಿದ ಮಾತುಗಳಿಂದಲೇ ಕೋಮಲಾಂಗಿಯಾದ ಈ ಗಿರಿಜೆಯು ಹೇಗೆ ಕೋಪಗೊಂಡಳು? ಯಾವನು ಶಂಭುವೆಂದು ಹೇಳಲ್ಪಡುತ್ತಾನೆಯೋ, ಅವನು ತಿರಿಯುವುದರಲ್ಲಿ ಅಭಿಲಾಷಿಯುಳ್ಳವನು. ನಾನು ಸುಳ್ಳನ್ನು ಹೇಳಿದ್ದಲ್ಲಿ ಈ ನಿನ್ನ ಸಖಿಯು ಕೋಪಗೊಳ್ಳುವುದುಚಿತವು. ಈಕೆಯಾದರೋ, ಮನೋಹರಾಂಗಿಯು. ಆ ಸದಾಶಿವನಾದರೋ ವಿಕಾರವಾದ ರೂಪವುಳ್ಳವನು. ಈಕೆಯು ವಿಶಾಲವಾದ ಕಂಗಳುಳ್ಳವಳು. ಆ ರುದ್ರನಾದರೋ ವಕ್ರವಾದ ಕಣ್ಣುಗಳನ್ನುಳ್ಳವನು. ಇಂತಿರುವ ರುದ್ರನಲ್ಲಿ ಈ ಮನೋಹರಾಂಗಿಯು ಮೋಹಗೊಂಡಿದ್ದು ಹೇಗೆ? ಸ್ತ್ರೀಯರಿಗೆ ಪತಿಯು ಭಾಗ್ಯವಂತನಾಗಿ ಸದಾ ಸುರತಪ್ರಿಯನಾಗಿರುವನಲ್ಲವೆ? ಹೀಗಿರುವಲ್ಲಿ ತ್ರಿಗುಣಗಳಿಂದ ಕೂಡಿರುವ ಈಕೆಯು ಗುಣರಹಿತನಾದ ಶಂಭುವಿನಲ್ಲಿ ಹೇಗೆ ಮೋಹಗೊಂಡಳು? ಆ ಶಿವನಾದರೋ, ಯಾರಿಂದಲೂ ಕೇಳಲ್ಪಡಲಿಲ್ಲ. ಯಾರಿಂದಲೂ ತಿಳಿಯಲ್ಪಡಲಿಲ್ಲ. ಯಾರಿಂದಲೂ ನೋಡಲ್ಪಡಲಿಲ್ಲ. ಅದೂ ಅಲ್ಲದೇ, ಫಲಾಕಾಂಕ್ಷಿಗಳಾಗಿರುವವರಿಗೆ ಶಿವನು ದುರ್ಲಭನಲ್ಲವೆ? ಈ ಮನೋಹರಾಂಗಿಯಾದರೋ, ತನ್ನ ಅಮೋಘವಾದ ತಪಸ್ಸಿನಿಂದಲೇ ಗರ್ವಿತಳಾಗಿರುವಳು. ಆ ಶಿವನು ನಿಸ್ತಂಭನಲ್ಲವೆ? ಅಂತಹನನ್ನು ಇವಳು ಹೇಗೆ ಪಡೆಯುವಳು? ಎಲೌ ವಿಶಾಲಾಕ್ಷಿಯೇ! ನಾನೇನು ಹೇಳುತ್ತಿರುವೆನು? ಏತಕ್ಕಾಗಿ ನನ್ನಮೇಲೆ ರೋಷಗೊಂಡಿರುವೆ? ಎಲೌ ಸಖಿಯೇ! ಸ್ತ್ರೀಪುರುಷರಿಗೆ ವಿಶೇಷವಾಗಿ ರೋಷವುಂಟಾಗಿ, ಆ ರೋಷದಿಂದ, ಅವರಿಂದಾರ್ಜಿಸಲ್ಪಟ್ಟ ಸುಕೃತಗಳೆಲ್ಲವೂ ಭಸ್ಮೀಕೃತವಾಗಿ ಹೋಗುವವು. ಕೇಳು; ಕಾಮ, ಕ್ರೋಧ, ಲೋಭ, ಮೋಹ, ಮದ ಮಾತ್ಸರ್ಯ, ಹಿಂಸೆ, ಅಸೂಯೆ, ಇವುಗಳಿಂದ ಪ್ರಪಂಚವೆಲ್ಲವೂ ನಾಶವಾಗುವುದು. ಆದುದರಿಂದ ತಪಸ್ವಿಗಳು ಕಾಮಕ್ರೋಧಾದಿಗಳಿಂದ ವರ್ಜಿತರಾಗಿರಬೇಕು.

ಬುದ್ಧಿವಂತರು, ಯಾವ ಈಶ್ವರನನ್ನು ಹೃದಯ ಮಧ್ಯದಲ್ಲಿ ಭಾವಿಸಿಕೊಂಡು, ಸದಾಕಾಲದಲ್ಲಿಯೂ, ಜ್ಞಪ್ತಿಯನ್ನು ಮಾತ್ರ ಒಳಗೊಂಡಿರುವವರಾಗಿರಬೇಕೇ ಹೊರತು ಈವಿಧವಾದ ಕಾಮಕ್ರೋಧಾದಿಗಳನ್ನು ಕಟ್ಟಿಕೊಳ್ಳಬಾರದು' ಎಂದು ನುಡಿದ ವಟುರೂಪಧಾರಿಯಾದ ಪರಶಿವನ ಮಾತುಗಳನ್ನು ಕೇಳಿ, ವಿಜಯೆಯು 'ಎಲೈ ವಟುವೆ! ನಿನಗಿಲ್ಲೇನು ಕೆಲಸವು? ಜಾಗ್ರತೆಯಾಗಿ ತೆರಳುವವನಾಗು. ಸುಮ್ಮನೆ ಹುಡುಗರಹಾಗೆ ಉಸರಬೇಡ. ನಡೆ' ಎಂದು ಗದರಿಸಿದಳು.

ಆಗಲಾ ಪರಶಿವನು ತಕ್ಷಣದಲ್ಲಿಯೇ ಅಲಕ್ಷ್ಯಮಾಡುತ್ತಲಿರುವ ಸಖೀಜನಗಳನ್ನು ಬಿಟ್ಟು ಅಂತರ್ಧಾನನಾಗಿ ನಿಜರೂಪವನ್ನು ತಾಳಿ ಪ್ರತ್ಯಕ್ಷನಾದನು. ಆಗಲಾ ಪಾರ್ವತಿಯು ಧ್ಯಾನಮಾಡುತ್ತಿರುವಲ್ಲಿಯೇ ಹೃದಯ ಮಧ್ಯಸ್ಥನಾದ ಪರಶಿವನು ಆಕೆಯ ಹೊರಗಣ್ಣಿಗೆ ಕಾಣುವವನಾದನು. ಬಳಿಕ ಗಿರಿಜೆಯು ಕಂಗಳನ್ನು ಬಿಟ್ಟು ದೇವದೇವನಾಗಿಯೂ, ಸರ್ವ ಲೋಕ ಮಹೇಶ್ವರನಾಗಿಯೂ, ದ್ವಿಭುಜನಾಗಿಯೂ, ಏಕಮುಖನಾಗಿಯೂ, ಅದ್ಭುತವಾದ ಕೃತ್ತಿವಾಸಸನಾಗಿಯೂ, ಕಪರ್ದಿಯಾಗಿಯೂ, ಅರ್ಧಚಂದ್ರಧರನಾಗಿಯೂ, ಕಿವಿಗಳಲ್ಲಿ ಮಹಾ ಸರ್ಪಗಳನ್ನೂ, ಕಂಬಳಾಶ್ವತರಸೂತ್ರಗಳನ್ನೊಳಗೊಂಡಿರುವವನಾಗಿಯೂ, ಇರುವ ಸದಾಶಿವನನ್ನು ಕಂಡಳು. ಬಳಿಕ ಸದಾಶಿವನು ಗಿರಿಜೆಯ ಮುಂಗಡೆಗೆ ಬಂದು ಆಕೆಯನ್ನು ಕುರಿತು 'ಎಲೌ ಮಂಗಳಕರಳೇ ನಿನಗೆ ಬೇಕಾದ ವರವನ್ನು ಬೇಡಿಕೊಳ್ಳುವವಳಾಗು' ಎಂದನು. ಆಗ ಪಾರ್ವತಿಯು ಅತಿಶಯವಾದ ಲಜ್ಜೆಯಿಂದಕೂಡಿ ಶಂಕರನನ್ನು ಕುರಿತು 'ಎಲೈ ದೇವಾ! ನೀನು ನನ್ನ ಪತಿ ಎಂಬುದನ್ನು ಮರೆತುಬಿಟ್ಟಿರುವೆಯಲ್ಲವೆ? ಪೂರ್ವದಲ್ಲಿ ದಕ್ಷಬ್ರಹ್ಮನ ಯಾಗಧ್ವಂಸವನ್ನು ಯಾರಿಗೋಸ್ಕರವಾಗಿ ಮಾಡಿದೆಯೋ ಆಕೆಯೇ ನಾನು. ಎಲೈ ಮಹಾದೇವನೆ! ಆ ಯಜ್ಞಕುಂಡದಲ್ಲಿ ಬಿದ್ದು ಸುಟ್ಟುಹೋದ ನಾನು ತಾರಕಾಸುರನನ್ನು ಕೊಲ್ಲಬೇಕೆಂಬ ದೇವತೆಗಳ ಕಾರ್ಯಸಿದ್ಧಿಗಾಗಿ ಗಿರಿರಾಜಪತ್ನಿಯಾದ ಮೇನೆಯ ಗರ್ಭ

ವಲ್ಲಿ ಜನಿಸಿದೆನು. ಎಲೈ ದೇವ ! ಈ ದೇವ ಕಾರ್ಯವು ನನ್ನಿಂದಲೂ ನಿನ್ನಿಂದಲೂ ಉತ್ಪನ್ನವಾಗುವ ಕುಮಾರನಿಂದ ಸಿದ್ಧಿಯಾಗಬೇಕು. ಆದುದರಿಂದ ಎಲೈ ಪರಶಿವನೆ ! ನೀನೀಗಲೇ ನನ್ನ ತಂದೆಯಾದ ಹಿಮ ವಂತನಲ್ಲಿಗೆ ಹೋಗಿ ನನ್ನನ್ನು ವಿವಾಹಾರ್ಥವಾಗಿ ಕೇಳುವವನಾಗು. ನನ್ನ ತಂದೆಯಾದರೋ ನಿನ್ನ ಮಾತಿಗೆ ಪ್ರತ್ಯುತ್ತರವನ್ನು ಹೇಳುವು ದಿಲ್ಲವು. ಎಲೈ ಶಿವನೇ ! ಪೂರ್ವದಲ್ಲಿ ನಾನು ದಾಕ್ಷಾಯಣಿಯಾಗಿ ದ್ದೆನು. ಆಗ ನಮ್ಮ ತಂದೆಯಾದ ದಕ್ಷಬ್ರಹ್ಮನು ನನ್ನನ್ನು ನಿನಗೆ ಕೊಟ್ಟಾಗ ಆತನು ಗೃಹಪೂಜೆಯನ್ನು ಮಾಡಲಿಲ್ಲವು. ಆದುದರಿಂ ದಲೇ ಆ ದಕ್ಷಬ್ರಹ್ಮನು ಅನೇಕ ತೊಂದರೆಗಳನ್ನನುಭವಿಸಿದನು. ಆದುದರಿಂದ ನೀನೀಗ ದೇವಕಾರ್ಯ ಸಿದ್ಧಿಗಾಗಿ ವಿಧಿವತ್ತಾಗಿ ವಿವಾ ಹವನ್ನು ಬೆಳಿಸುವವನಾಗು ' ಎಂದ ಪಾರ್ವತಿಯ ನುಡಿಗಳನ್ನು ಕೇಳಿ ಪರಶಿವನು ' ಎಲೌ ಪಾರ್ವತಿಯೇ ! ಕೇಳು ಜಂಗಮಸ್ಥಾವರ ಪ್ರಪಂಚವೆಲ್ಲವೂ ನಿನ್ನಿಂದ ಮೋಹಿತವಾಗಿ ಸತ್ವರಜಸ್ತಮೋಗುಣಗ ಳಿಂದಾವರಿಸಲ್ಪಟ್ಟಿತು. ಆ ಬಳಿಕ ತ್ರಿಗುಣಗಳಿಂದ ಅಹಂಕಾರವು ಹುಟ್ಟಿತು. ಅಹಂಕಾರದಿಂದ ತತ್ವವೂ, ಈ ಮಹತ್ತರವಾದ ತತ್ವ ದಿಂದ ಕತ್ತಲೆಯೂ ಹುಟ್ಟಿ ಆಕಾಶವೆಲ್ಲವನ್ನೂ ಆವರಿಸಿತು. ಕೇಳೌ ಪಾರ್ವತಿ ! ಈ ಆಕಾಶದಿಂದ ವಾಯುವು ಹುಟ್ಟಿತು. ಈ ವಾಯುವಿ ನಿಂದ ಅಗ್ನಿಯೂ, ಅಗ್ನಿಯಿಂದ ನೀರೂ, ನೀರಿನಿಂದ ಭೂಮಿಯೂ ಹುಟ್ಟಿದವು. ಭೂಮಿಯೇ ಮೊದಲಾದ ಅಚಲಪದಾರ್ಥಗಳು ಚಲಿ ಸುವ ಪದಾರ್ಥಗಳು ಯಾವುದಾವುದು ಕಾಣುವವೋ ಅವೆಲ್ಲವೂ ನಶ್ವ ರಗಳೆಂದು ತಿಳಿ. ಎಲೌ ದೇವಿ ! ಒಂದೇ ರೂಪವಾಗಿರುವದು, ಅನೇಕ ರೂಪಗಳಾಗಿ ಕಾಣುವುದು, ಗುಣರಹಿತವಾದುದೂ, ಸ್ವಪ್ರಕಾಶ ದಿಂದ ಬೆಳಗುವುದೂ, ಪರಂಜ್ಯೋತಿಯಂತೆ ಕಾಣುವುದೂ, ಸ್ವಾತಂ ತ್ರ್ಯವೂ ಮಹತ್ತರವಾದ ನೇವಾವೃತ್ತಿಯೂ ನಿನ್ನಿಂದಲೇ ಮಾಡಲ್ಪ ಟ್ಟವು. ಈ ಸಂಪೂರ್ಣವಾದ ಪ್ರಪಂಚವು ಮಾಯಾಮಯವಾಗಿ ನಿನ್ನಿಂದ ಮಾಡಲ್ಪಟ್ಟು ಆತ್ಮರಿಂದಲೂ, ಪುಣ್ಯಶಾಲಿಗಳಿಂದಲೂ, ಪರ ಮಾರ್ಥಗಳನ್ನು ತಿಳಿದವರಿಂದಲೂ, ಇಂದ್ರಿಯಗ್ರಾಮಗಳನ್ನು ಗೆದ್ದ

ವರಿಂದಲೂ ಆವರಿಸಲ್ಪಟ್ಟಿತು. ಹೀಗಿರುವಲ್ಲಿ ಎಲೌ ದೇವಿ! ನಿನ್ನಿಂದ ಮಾಡಲ್ಪಟ್ಟ ಯಾವ ಗ್ರಹಗಳು, ಯಾವ ನಕ್ಷತ್ರಗಳು ನಮ್ಮನ್ನು ಬಾಧಿಸುವವು? ನಾವಿಬ್ಬರೂ ಸತ್ವರಜಸ್ತಮೋಗುಣಗಳ ಕಾರ್ಯ ಪ್ರಸಂಗದಿಂದ ಅವತಾರವನ್ನು ಮಾಡಿರುವೆವಲ್ಲವೆ? ನೀನೇ ಅಲ್ಲವೆ ಸೂಕ್ಷ್ಮಳಾದ ಸತ್ವರಜಸ್ತಮೋಗುಣಾವೃತಳಾದ ಪ್ರಕೃತಿಯು? ಕೇಳೌ ಸುಮಧ್ಯಮೆ! ನಾನಾದರೋ ಯಾವಾಗಲೂ ವ್ಯಾಪಾರ ದಕ್ಷನು. ಆದುದರಿಂದ ನಿಮ್ಮ ತಂದೆಯಾದ ಹಿಮವಂತನಲ್ಲಿಗೆ ಯಾವಾಗಲೇ ಆಗಲಿ ಯಾಚಕನಾಗಿ ಹೋಗುವುದಿಲ್ಲವು. ಇನ್ನೊಬ್ಬರಲ್ಲಿಗೆ ಹೋಗಿ 'ದೇಹಿ' ಎಂದೊಡನೆಯೇ ಪುರುಷನು ತುಚ್ಛನಾಗುವನೆಂಬುದನ್ನು ಅರಿತೂ ನಿಮ್ಮ ತಂದೆಯನ್ನು ಯಾಚಿಸುವ ಕೆಲಸವನ್ನು ನನಗೇತಕ್ಕಾಗಿ ಹೇಳುವೆ? ಆದರೂ ನಿನ್ನ ಆಜ್ಞೆಯಿಂದ ಯಾವದನ್ನು ಮಾಡಬೇಕೋ ಅದನ್ನೆಲ್ಲವನ್ನೂ ಹೇಳುವವಳಾಗು' ಎಂದು ಹೇಳಿದ ಪರಶಿವನನ್ನು ಕುರಿತು ಪಾರ್ವತಿಯು 'ಎಲೈ ಶಂಭುವೇ! ನಾನೇ ಪ್ರಕೃತಿಯು. ನೀನೇ ಆತ್ಮನು. ಇದರಲ್ಲಿ ಸ್ವಲ್ಪವೂ ಸಂಶಯವಿಲ್ಲವು. ಆದರೂ ನನ್ನನ್ನು ವಿವಾಹ ಮಾಡಿಕೊಳ್ಳಬೇಕು. ಈ ದೇಹವಾದರೋ ಅವಿದ್ಯೆಯಿಂದ ಧಿಕ್ಕರಿಸಲ್ಪಟ್ಟಿರುವುದು. ಆತ್ಮನಾದರೋ ನೀನೇ ಆಗಿರುವೆ. ಹಾಗಿದ್ದರೂ ನನಗೆ ಶರೀರದ ಆವರಣವನ್ನು ನೀಡು. ಎಲೈ ಪ್ರಭುವಾದ ಶಂಭುವೇ! ನನ್ನ ಮಾತಿನಿಂದ ಪ್ರಾಪಂಚಿಕ ವ್ಯವಹಾರದಂತೆ ನಮ್ಮ ತಂದೆಯಾದ ಹಿಮವಂತನಲ್ಲಿಗೆ ಹೋಗಿ ನನ್ನನ್ನು ಯಾಚಿಸು' ಎಂದಳು. ಆಗ ಸಾಕ್ಷಾತ್ಪರಶಿವನು ಪ್ರಾಪಂಚಿಕ ವ್ಯವಹಾರದಂತೆ ಹಾಗೆಯೇ ಆಗಲೆಂದು ಒಪ್ಪಿಕೊಂಡು ತನ್ನ ಮನೆಯಾದ ಕೈಲಾಸಕ್ಕೆ ದೇವತೆಗಳಿಂದ ಪೂಜಿತನಾಗಿ ತೆರಳಿದನು.

# ಅಧ್ಯಾಯ ೨೩

## ಕನ್ಯಾನಿಶ್ಚಯ – ಈಶ್ವರನು ವಿವಾಹಾರ್ಥವಾಗಿ ಪ್ರಯಾಣಮಾಡುವಿಕೆ

ಸೂತನು ಹೇಳುತ್ತಾನೆ :—ಕೇಳಿರೈ! ಆ ಬಳಿಕ ಪರಶಿವನಿಂದ ಕನ್ಯಾರ್ಥವಾಗಿ ಪ್ರೇರಿತರಾದ ಸಪ್ತಋಷಿಗಳು ಹಿಮವಂತನಲ್ಲಿಗೆ ಬಂದರು. ಇಂತು ಬಂದ ಸಪ್ತಋಷಿಗಳನ್ನು ಹಿಮವಂತನು ಯಥೋಕ್ತವಾಗಿ ಪೂಜಿಸಿ, ತಲೆ ಬಗ್ಗಿದವನಾಗಿ ಅವರನ್ನು ಕುರಿತು 'ಎಲೈ ಋಷಿಗಳಿರಾ! ನೀವೇತಕ್ಕಾಗಿ ಬಂದಿರುವಿರೆಂಬುದನ್ನು ಶೀಘ್ರವಾಗಿ ಹೇಳಿರಿ' ಎನಲು, ಆ ಋಷಿಗಳು 'ಎಲೈ ಹಿಮವಂತನೇ! ನಾವೆಲ್ಲರೂ ಪರಶಿವನಿಂದ ಪ್ರೇರಿತರಾಗಿ ನಿನ್ನ ಮಗಳನ್ನು ನೋಡಲು ಬಂದಿರುವೆವೆಂದು ತಿಳಿ. ಆದುದರಿಂದ ನಿನ್ನ ಮಗಳನ್ನು ಜಾಗ್ರತೆಯಾಗಿ ತೋರಿಸುವವನಾಗು' ಎಂದರು. ಆಗ ಪುತ್ರಿವತ್ಸಲನಾದ ಗಿರಿರಾಜನು ಹಾಗೆಯೇ ಆಗಲೆಂದು ಹೇಳಿ ತನ್ನ ಮಗಳಾದ ಪಾರ್ವತಿಯನ್ನು ಎತ್ತಿಕೊಂಡು ಋಷಿಗಳಿದ್ದೆಡೆಗೆ ಬಂದು ಅವರನ್ನು ಕುರಿತು 'ಎಲೈ ಋಷಿಗಳಿರಾ! ಈಕೆಯು ನನ್ನ ಮಗಳು. ಆ ಪರಶಿವನಾದರೋ ತಪಸ್ವಿಗಳಲ್ಲಿ ಶ್ರೇಷ್ಠನೂ ಮದನಸಂಹಾರಕನೂ ಆಗಿರುವನು. ಹೀಗಿರುವಾಗ ಶಿವನಿಗೂ, ನನ್ನ ಮಗಳಿಗೂ ವಿವಾಹವು ಹೇಗಾಗುವುದು? ಕೇಳಿರಿ! ಅತ್ಯಾಸನ್ನನಾಗಿಯೂ, ಆಢ್ಯನಾಗಿಯೂ, ಧನಹೀನನಾಗಿಯೂ, ಮೂಢನಾಗಿಯೂ, ವಿರಕ್ತನಾಗಿಯೂ, ಮೂರ್ಖನಾಗಿಯೂ, ಆತುರನಾಗಿಯೂ, ಪ್ರಮತ್ತನಾಗಿಯೂ, ಇರುವವನಿಗೆ ಕನ್ಯಾದಾನವನ್ನು ಮಾಡುವುದು ಯೋಗ್ಯವಲ್ಲ. ಆದುದರಿಂದ ಈಗ ನೀವೆಲ್ಲರೂ ಬಂದಿರುವಿರಿ. ನಿಮ್ಮಲ್ಲಿ ವಿಚಾರಮಾಡಿ ಈ ಗಿರಿಜೆಯನ್ನು ಶಿವನಿಗೆ ಕೊಟ್ಟು ವಿವಾಹಮಾಡಬೇಕೆಂಬುದೇ ನನ್ನ ಯೋಚನೆಯು' ಎಂದನು. ಇಂತು ನುಡಿದ ಗಿರಿರಾಜನ

ಮಾತುಗಳನ್ನು ಕೇಳಿ ಋಷಿಗಳೆಲ್ಲರೂ ಅವನನ್ನು ಕುರಿತು ಹೇಳು ತ್ತಾರೆ. 'ಎಲೈ ಹಿಮವಂತನೆ! ಗಿರಿಜೆಯು ಮಾಡಿದ, ತೀವ್ರವಾದ ತಪಸ್ಸಿನಿಂದಲೂ, ಶಿವಾರಾಧನೆಯಿಂದಲೂ, ಸಂತುಷ್ಟನಾದ ಪರ ಶಿವನು ಈಗ ಪ್ರಸನ್ನನಾಗಿರುವನು. ಆ ಪರಶಿವನ ಮಹಿಮೆಯೂ, ಈ ನಿನ್ನ ಮಗಳಾದ ಗಿರಿಜೆಯ ಮಹಿಮೆಯೂ ನಿನಗೆ ಸ್ವಲ್ಪವೂ ತಿಳಿ ಯದು. ನಾವು ಹೇಳಿದ ಹಾಗೆ ಗಿರಿಜೆಯನ್ನ ಪರಶಿವನಿಗೆ ಕೊಟ್ಟು ಲಗ್ನ ವನ್ನು ಮಾಡು' ಎಂದು ನುಡಿದ ಋಷಿಗಳ ಮಾತನ್ನು ಕೇಳಿ ಹಿಮ ವಂತನು ಪರ್ವತ ರಾಜರನ್ನು ಕುರಿತು 'ಎಲೈ ಮೇರುವೆ, ನಿಷಧನೆ, ಎಲೈ ಗಂಧಮಾದನನೆ, ಮಂದರನೇ, ಎಲೈ ಮೈನಾಕನೇ ಈಗೇನು ಮಾಡಬೇಕೆಂಬುದನ್ನು ಹೇಳಿರಿ' ಎಂದನು. ಆಗ ಗಿರಿರಾಜ ಪತ್ನಿ ಯಾದ ಮೇನೆಯು ಸಕಲರನ್ನೂ ಕುರಿತು 'ಎಲೈ ಪರ್ವತಗಳಿರಾ! ಈಗ ಯೋಚಿಸಿ ಏನು ಮಾಡಬೇಕು? ಈ ಗಿರಿಜೆಯು ದೇವತೆಗಳ ಕಾರ್ಯಸಿದ್ಧಿಗಾಗಿ ಹುಟ್ಟಿರುವಳು. ಶಿವನಿಗೆ ಕೊಡಬೇಕೆಂತಲೇ ಗಿರಿಜೆಯು ಅವತರಿಸಿರುವಳು. ಈಕೆಯಿಂದ ಜಿತನಾದ ರುದ್ರನು, ತನ್ನ ರುದ್ರತ್ವದಿಂದ ಶಾಂತನಾಗಿರುವನು. ಆದುದರಿಂದ ಮಹಾ ಸತಿ ಯಾದ ಗಿರಿಜೆಯನ್ನು ಶಿವನಿಗೆ ಕೊಟ್ಟು ವಿವಾಹ ಮಾಡಿರಿ' ಎಂದಳು. ಇಂತು ನುಡಿದ ಮೇನೆಯ ಮಾತುಗಳನ್ನು ಕೇಳಿ ಹಿಮವಂತನು ಅತಿ ಸಂತೋಷಭರಿತನಾಗಿ, ಮನೋಹರವಾದ ಕಂಗಳುಳ್ಳವಳಾಗಿಯೂ, ನಡುವಿನಲ್ಲಿ ಒಡ್ಯಾಣವನ್ನಿಟ್ಟಿರುವವಳಾಗಿಯೂ, ಮಂಗಳಕರಳಾ ಗಿಯೂ, ವೈಢೂರ್ಯಮುಕ್ತಾಫಲಗಳೇ ಮೊದಲಾದವುಗಳಿಂದ ಮಾಡ ಲ್ಪಟ್ಟ ಬಳೆಗಳನ್ನು ತೊಟ್ಟವಳಾಗಿಯೂ, ಪ್ರಕಾಶಮಾನವಾದ ಚಂದ್ರಕಿರಣದಂತೆ ಕಾಂತಿಯುಳ್ಳವಳಾಗಿಯೂ ಇರುವ ತನ್ನ ಮಗ ಳಾದ ಗಿರಿಜೆಯನ್ನು ಕರೆದುಕೊಂಡುಬಂದು, ಋಷಿಗಳನ್ನು ಕುರಿತು 'ಎಲೈ ಋಷಿಗಳಿರಾ! ಈಕೆಯೇ ನನ್ನ ಮಗಳು! ಈಕೆಯನ್ನು ಶಿವ ನಿಗೆ ಕೊಡಲು ಸಿದ್ಧನಾಗಿರುವೆನು' ಎಂದನು. ಆಗ ಋಷಿಗಳೆಲ್ಲರೂ, ಲಾವಣ್ಯವೆಂಬ ಅಮೃತಸಾಗರಳಾಗಿಯೂ, ಮನೋಹರವಾದ ಮುಖ ವುಳ್ಳವಳಾಗಿಯೂ, ನೆಟ್ಟಗಸಾದ ನಾಸಿಕದಿಂದೊಪ್ಪುತ್ತಿರುವಹ

ಳಾಗಿಯೂ, ಮಂಗಳಕರಳಾಗಿಯೂ, ತ್ರಿಭುವನೈಕನಾಥನಾದ ಪರಶಿವನ ಪ್ರಿಯಳಾದ ಗೌರಿಯನ್ನು ಕಂಡು ಮೋಹಗೊಂಡು ಭ್ರಾಂತರಾಗಿಯೂ, ಉನ್ಮತ್ತರಾಗಿಯೂ, ಸ್ತಬ್ಧರಾಗಿಯೂ ಆದರು.

ಅಯ್ಯಾ ಋಷಿಗಳಿರಾ ! ಸಪ್ತ ಋಷಿಗಳೇ ಪಾರ್ವತಿಯನ್ನು ನೋಡಿ ಮೋಹಗೊಂಡಮೇಲೆ, ಉಳಿದ ದೇವತೆಗಳ ವಿಚಾರವೇನು? ಆಬಳಿಕ ಋಷಿಗಳೆಲ್ಲರೂ ಪಾರ್ವತಿಯನ್ನು ನೋಡಿಕೊಂಡು ಮರಳಿ ಪರಶಿವನಲ್ಲಿಗೆ ಬಂದು ಎಲ್ಲವನ್ನೂ ಬಿತ್ತರಿಸಿ 'ಎಲೈ ಮಹಾದೇವನೇ ! ಗಿರಿಜೆಯೊಂದಿಗಿದ್ದ ಹಿಮವಂತನೊಡನೆ ಮಾತನಾಡಿರುವೆವು. ಎಲೈ ಮಹಾದೇವನೇ ! ನಿನಗಾಗಿ ಜನ್ಮವನ್ನೆತ್ತಿರುವ ಆ ಪರ್ವತರಾಜನ ಮಗಳನ್ನು ವಿವಾಹ ಮಾಡಿಕೊಳ್ಳಲು ಶೀಘ್ರವಾಗಿ ಹೊರಡುವವನಾಗು' ಎಂದರು. ಇಂತು ನುಡಿದ ಋಷಿಗಳನ್ನು ಕುರಿತು ಪರಶಿವನು, 'ಎಲೈ ಋಷಿಗಳಿರಾ ! ವಿವಾಹವೆಂಬುದನ್ನು ನಾನು ಹಿಂದಾವಾಗಲೂ ಕಂಡೂ ಇರಲಿಲ್ಲ, ಕೇಳೂ ಇರಲಿಲ್ಲ. ಆದುದರಿಂದ ವಿವಾಹ ವಿಧಿಯನ್ನು ಸವಿಸ್ತಾರವಾಗಿ ಹೇಳಿರಿ' ಎಂದನು. ಆಗಲಾ ಋಷಿಗಳು ಪರಶಿವನಂ ಕುರಿತು, 'ಎಲೈ ದೇವಾ ! ವಿಷ್ಣುವೇ ಮೊದಲಾದ ದೇವತೆಗಳನ್ನೂ, ಬ್ರಾಹ್ಮಣರನ್ನೂ ಕರೆಯುವವನಾಗು. ಅಲ್ಲದೆ ಋಷಿಗಳನ್ನೂ, ಯಕ್ಷ, ಗಂಧರ್ವ, ಪನ್ನಗ, ಸಿದ್ಧ, ವಿದ್ಯಾಧರ ಕಿನ್ನರರನ್ನೂ, ಅಪ್ಸರರೇ ಮೊದಲಾದವರನ್ನೆಲ್ಲರನ್ನೂ ಜಾಗ್ರತೆಯಾಗಿ ಬರಮಾಡು' ಎಂದರು. ಆಗ ಪರಶಿವನು, ನಾರದನನ್ನು ಕುರಿತು 'ಎಲೈ ನಾರದನೇ ! ವಿಷ್ಣು ಬ್ರಹ್ಮೇಂದ್ರಾದಿ ಸಕಲ ದೇವತೆಗಳನ್ನೂ ಆಹ್ವಾನಿಸು' ಎಂದು ಆಜ್ಞಾಪಿಸಿದನು. ನಾರದನಾದರೋ ಹಾಗೆಯೇ ಆಗಲೆಂದು ಪರಶಿವನಾಜ್ಞೆಯನ್ನು ಶಿರಸಾವಹಿಸಿ, ಜಾಗ್ರತೆಯಾಗಿ ವೈಕುಂಠಕ್ಕೆ ಬಂದನು. ಅಲ್ಲಿಯಾದರೋ, ಸಂಪದ್ಯುಕ್ತನಾದ ನಾರಾಯಣನನ್ನು ಕಂಡನು. ಆಗ ನಾರದನು, ಮಹತೀ ಎಂಬ ತನ್ನ ವೀಣೆಯನ್ನು ನುಡಿಸುತ್ತಾ ವಿಷ್ಣುವಿನ ಸಮೀಪಕ್ಕೆ ಹೋಗಿ 'ಎಲೈ ವಿಷ್ಣುವೇ ! ಮಹಾದೇವನಬಳಿಗೆ ಜಾಗ್ರತೆಯಾಗಿ ಬರುವವ

ನಾಗು. ನೀನೊಬ್ಬನೇ ಕಾರ್ಯಸಾಧಕನು. ಶಂಭುವಿನ ವಿವಾಹಾ ರ್ಥವಾಗಿ ಜಾಗ್ರತೆಯಾಗಿ ಹೊರಡುವವನಾಗು ' ಎಂದು ನುಡಿದನು. ಆಗ ವಿಷ್ಣುವು ಸಕಲವನ್ನೂ ತಿಳಿದಿದ್ದರೂ ನಾರದನನ್ನು ಕುರಿತು 'ಎಲೈ ನಾರದನೇ! ಇದೇನು! ದೇವದೇವನಾದ ಪರಶಿವನಿಗೆ, ವಿವಾಹ ಮಾಡಿಕೊಳ್ಳಬೇಕೆಂಬ ಬುದ್ಧಿಯು ಹೇಗೆ ಹುಟ್ಟಿತು?' ಎಂದು ಕೇಳಿ ದನು. ಬಳಿಕ ನಾರದನು 'ಕೇಳು; ಗಿರಿಜೆಯು ಅಮೋಘವಾದ ತಪಶ್ಚ ರ್ಯದಿಂದ ಪರಶಿವನು ಸಂತುಷ್ಟನಾದನು. ಆ ಬಳಿಕ ತಾನಾಗಿಯೇ ಆ ಗಿರಿಜೆಯಿರುವ ಸ್ಥಳಕ್ಕೆ ಹೋಗಿ, ಎಲೌ ಗಿರಿಜೆ! ನಾನು ನಿನ್ನದಾ ಸನು ನನ್ನನ್ನು ವಿವಾಹ ಮಾಡಿಕೋಯೆಂದು ಹೇಳಿದನು. ಅದೆಲ್ಲ ಇರಲಿ. ಎಲೈ ವಿಷ್ಣುವೇ! ಶಂಕರನು ನಿನ್ನನ್ನು ಜಾಗ್ರತೆಯಾಗಿ ಬರಹೇಳಿರುವನು. ಆದುದರಿಂದ ಹೊರಡು ' ಎಂದು ನುಡಿದನು. ಇಂತು ನುಡಿದ ನಾರದನ ಮಾತುಗಳನ್ನು ಕೇಳಿ ಮಹಾ ವಿಷ್ಣುವು ನಾರದನಿಂದಲೂ ಪಾರ್ಷದರಿಂದಲೂ ಪರಿವಾರಿತನಾಗಿ ಗರುಡವಾಹನ ವನ್ನೇರಿಕೊಂಡು, ಆಕಾಶಮಾರ್ಗದಲ್ಲಿಯೇ ಶಂಭುವನ್ನು ಕುರಿತು ಬಂದನು. ಇಂತು ಬರುತ್ತಲಿರುವ ಮಹಾ ವಿಷ್ಣುವನ್ನು ಕಂಡು ಪರಶಿವನು, ಎದ್ದು ನಿಂತು ಮಧುಸೂದನನನ್ನು ಆಲಿಂಗನೆ ಮಾಡಿಕೊಂಡು, 'ಎಲೈ ವಿಷ್ಣುವೇ! ಗಿರಿಜೆಯ ತಪಸ್ಸಿನಿಂದ ನಾನು ಪರಾಜಿತನಾಗಿರುವೆನೆಂಬುದರಲ್ಲಿ ಸಂಶಯವಿಲ್ಲವು. ಈಗಲಾದರೋ ನಾನವಳ ಪಾಣಿಗ್ರಹಣಾರ್ಥವಾಗಿ ಹಿಮಾಲಯನಲ್ಲಿಗೆ ಹೋಗಲಿಷ್ಟ ವುಳ್ಳವನಾಗಿರುವೆನು. ಕೇಳು! ನಿನ್ನಲ್ಲಿ ಯಥಾರ್ಥವಾಗಿ ಹೇಳು ವೆನು. ಹಿಂದೆ ದಕ್ಷಬ್ರಹ್ಮನಿಂದ ಕೊಡಲ್ಪಟ್ಟ ದಾಕ್ಷಾಯಣಿಯನ್ನು ನಾನು ಸಂಕಲ್ಪವಿಧಿಪೂರ್ವಕವಾಗಿ ವಿವಾಹಮಾಡಿಕೊಳ್ಳಲಿಲ್ಲವು. ಈಗಲಾದರೋ ನಾನು ಕರ್ಮವನ್ನು ಸವಿಸ್ತಾರವಾಗಿ ಮಾಡಬೇಕೆಂ ದಿರುವೆನು. ಆದರೆ ಎಲೈ ವಿಷ್ಣುವೇ! ಪಾಣಿಗ್ರಹಣೋಚಿತವಾದ ಯಾವ ಕರ್ಮವನ್ನು ಮಾಡಬೇಕೋ ಅದನ್ನರಿಯೆನು ' ಎಂದನು. ಪರಶಿವನ ಮಾತುಗಳನ್ನು ಕೇಳಿ ಮಧುಸೂದನನು ಹೇಳಲುಪಕ್ರಮಿ ಸುವಷ್ಟರಲ್ಲಿಯೇ ಬ್ರಹ್ಮನು ಇಂದ್ರನಿಂದಲೂ, ಲೋಕಪಾಲಕರಿಂ

ಡಲೂ, ದೇವಾಸುರ, ಯಕ್ಷ, ದಾನವ, ನಾಗರಿಂದಲೂ ಮಹರ್ಷಿಗಳಿಂದಲೂ ಕೂಡಿದವನಾಗಿ ತ್ವರಾನ್ವಿತನಾಗಿ ಬಂದು ಸಾಕ್ಷಾತ್ಪರಶಿವನನ್ನು ನಮಸ್ಕರಿಸಿ 'ಎಲೈ ಪರಶಿವನೇ ? ಪಾರ್ವತೀ ವಿವಾಹಾರ್ಥವಾಗಿ ಹೊರಡುವನಾಗು' ಎಂದು ನುಡಿದನು. ಆಗಲಾ ವಿಷ್ಣುವು ಪರಶಿವನನ್ನು ಕುರಿತು ಪ್ರಸ್ತಾವಸದೃಶವಾದ ಮಾತನ್ನಾಡಿದನದೆಂತೆನೆ: 'ಎಲೈ ಶಂಭುವೇ ! ಗೃಹ್ಯೋಕ್ತ ವಿಧಿಯಿಂದ ವಿವಾಹವನ್ನು ಮಾಡಿಕೊಳ್ಳುವವನಾಗು. ವೇದವನ್ನು ತಿಳಿದ ಕೆಲ ಬದ್ಧಿವಂತರು ನಾಂದೀಮುಖವಾದ ಮಂಡಪವನ್ನು ಸ್ಥಾಪಿಸಿ ಮಹಾನದೀಸಂಗಮವನ್ನು ಬಿಟ್ಟು ಮಾಡುವರು. ನೀನೂ ಮಹಾ ನದೀ ಸಂಗಮವನ್ನು ಬಿಟ್ಟು ಧರ್ಮಯುಕ್ತವಾದ ನಾಂದೀ ಮಂಟಪವನ್ನು ರಚಿಸಿ ವೈವಾಹಿಕ ಕ್ರಿಯೆಯನ್ನು ಮಾಡುವವನಾಗು' ಎಂದು ಹೇಳಿದ ವಿಷ್ಣುವಿನ ಮಾತಿನಂತೆಯೇ ಪರಶಿವನು ಬ್ರಹ್ಮಾದಿಗಳಿಂದ ಕೂಡಿ ಕಶ್ಯಪನೊಡನೆ, ತನ್ನ ಹಿತಕ್ಕಾಗಿಯೂ, ಸಕಲರ ಅಭ್ಯುದಯಕ್ಕಾಗಿಯೂ, ಮಂಟಪಸ್ಥಾಪನೆಯನ್ನು ಮಾಡಿ ಗ್ರಹಗಳನ್ನು ಪೂಜಿಸಿದನು. ಬಳಿಕ, ಬ್ರಹ್ಮನಿಂದಾಜ್ಞಾಪಿತರಾದ, ವೇದವೇದಾಂಗ ಪಾರಂಗತರಾದ, ಅತ್ರಿ, ಗೌತಮ, ಪರಾಶರ, ಅಗಸ್ತ್ಯ, ಮಾರ್ಕಂಡೇಯ, ಗರ್ಗಾದಿ ಮಹಾಋಷಿಗಳೆಲ್ಲರೂ ಯಥಾವಿಧಿಯಾದ ವೇದೋಕ್ತ ವಿಧಿಯಿಂದ ವೈವಾಹಿಕ ಕ್ರಿಯೆಗಳನ್ನು ಮಾಡಿ ಮಹೇಶನ ಕೌತುಕ ಮಂಗಲವಾದ ರಕ್ಷೆಯನ್ನು ಮಾಡಿದರು. ಆಬಳಿಕ, ಋಗ್ವೇದ, ಯಜುರ್ವೇದ, ಸಾಮವೇದ ಸಹಿತಗಳಾದ ಅನೇಕ ಸೂಕ್ತಿಗಳಿಂದ ತತ್ವವೇತೃಗಳಾದಾ ಋಷಿಗಳು ಶಾಸ್ತ್ರೋಕ್ತವಾಗಿ ಆ ಪರಶಿವನ ಅಭ್ಯಂಜನವೇ ಮೊದಲಾದ ಅನೇಕ ಶುಭ ಕರ್ಮಗಳನ್ನು ಮಾಡಿಸಿದರು. ಅನಂತರದಲ್ಲಿ ಮಹಾಚಂಡಿಯು ಅನೇಕ ಮುತ್ತುಗಳಿಂದ ಕೂಡಿದ ಮುಂಡಮಾಲೆಯನ್ನು ಧರಿಸಿಕೊಂಡು ತನ್ನ ಉಗ್ರವಾದ ಕಂಗಳಿಂದ ಪ್ರಕಾಶಿಸುತ್ತಾ ಪೂರ್ಣವಾದ ಬಂಗಾರದ ಕಲಶವನ್ನು ತಲೆಯಮೇಲೆ ಹೊತ್ತುಕೊಂಡು ತನ್ನ ಪರಿವಾರದಿಂದ ಕೂಡಿ ಹೊರಟಳು. ಅವಳಹಿಂದೆ, ಅನೇಕ ವಿರೂಪಗಳಾದ ಭೂತಗಣಗಳು ಹೊರಟವು. ಇವರನ್ನು ಪರಮದಾರುಣ

ಗಳಾದ ಹನ್ನೊಂದು ಕೋಟಿ ಶಿವಗಣಗಳು ಹಿಂಬಾಲಿಸಿದವು. ಆಗ ಡಮರುಗ ನಾದದಿಂದಲೂ, ಭೇರಿಯ ಭಂಕಾರಶಬ್ದದಿಂದಲೂ, ಶಂಖಧ್ವನಿಗಳಿಂದಲೂ ಜಗತ್ರಯಗಳು ತುಂಬಿದವು. ದುಂದುಭಿಗಳ ಶಬ್ದದಿಂದ ಪ್ರಪಂಚವೆಲ್ಲವು ಕೋಲಾಹಲ ವಾಯಿತು. ಆಗ ದೇವತೆಗಳೆಲ್ಲರೂ, ಸಿದ್ಧರಿಂದಲೂ, ಲೋಕಪಾಲಕರಿಂದಲೂ, ಪರಿವಾರಿತರಾದ ಗಣಗಳನ್ನು ಹಿಂಬಾಲಿಸಿದರು. ಬಳಿಕ ಭರದ್ವಾಜಾದಿ ಋಷಿಗಳೆಲ್ಲರೂ ಈ ಗುಂಪನ್ನನುಸರಿಸಿದರು. ಕೇಳಿರೈ ಋಷಿಗಳಿರಾ! ಆಗ ಶಾಕಿನೀಗಣಗಳೂ, ರಾಕ್ಷಸರೂ, ವೈತಾಲಿಕರೂ, ಬ್ರಹ್ಮರಾಕ್ಷಸರೂ, ಭೂತ, ಪ್ರೇತ, ಪಿಶಾಚಿಗಳೂ, ಪರಶಿವನ ವಿವಾಹಕ್ಕಾಗಿ ಹೋಗುತ್ತಿರುವ ಚಂಡಿಯನ್ನು ನಮಸ್ಕರಿಸಿ 'ಎಲೌ ಚಂಡಿಯೇ! ನಮ್ಮೆಲ್ಲರನ್ನೂ ಬಿಟ್ಟು ಮಹಾ ಭೈರವನೊಂದಿಗೆ ಎಲ್ಲಿಗೆ ಹೋಗುವೆ? ಎಂದು ಕೇಳಿದರು. ಇಂತು ನುಡಿದ ಸಕಲ ಭೂತ, ಪ್ರೇತ, ಪಿಶಾಚಿಗಳ ಮಾತುಗಳನ್ನು ಕೇಳಿದ ಚಂಡಿಯು ಅವರನ್ನು ಕುರಿತು 'ಕೇಳಿರಿ! ಈಗ ನಾನು, ಶಂಭುವಿನ ವಿವಾಹಾರ್ಥವಾಗಿ ಪ್ರೇತಾರೂಢಳಾಗಿ ಪೂರ್ಣವಾದ ಸುವರ್ಣ ಕಲಶವನ್ನು ಹೊತ್ತುಕೊಂಡು ಹೋಗುತ್ತಲಿರುವೆನು' ಎಂದು ನುಡಿದಳು. ಇಂತು ನುಡಿದು ಚಂಡಿಯು ಭೂತಗಳ ಮುಂಗಡೆ ಹೊರಟಳು. ಈ ಭೂತಗಳಹಿಂದೆ ಶಿವಗಣಗಳು ಹೊರಟವು. ಈ ಶಿವಗಣಗಳಹಿಂದೆ ದೇವತೆಗಳು ಹೊರಟರು. ಇವರಾದಮೇಲೆ ಇಂದ್ರಾದಿ ಲೋಕಪಾಲಕರೂ, ಇವರ ಹಿಂಗಡೆ ಋಷಿಗಳೂ ಹೊರಟರು. ಇವರಾದಮೇಲೆ, ವಿಷ್ಣುವಿನಂತೆಯೇ ಸ್ವರೂಪವುಳ್ಳವರಾಗಿಯೂ, ನಾಲ್ಕು ಭುಜಗಳನ್ನುಳ್ಳವರಾಗಿಯೂ, ಮನೋಹರರಾಗಿಯೂ, ಕರ್ಣಕುಂಡಲಗಳನ್ನು ಧರಿಸಿದವರಾಗಿಯೂ, ಕಿರೀಟ, ಕಟಕಧಾರಿಗಳಾಗಿಯೂ, ವನಮಾಲೆಗಳಿಂದ ಶೋಭಿಸುವವರಾಗಿಯೂ, ಕಟಿಸೂತ್ರಗಳಿಂದಲೂ, ಉಂಗುರಗಳಿಂದಲೂ, ಶೋಭಾಯಮಾನರಾಗಿಯೂ, ಮಹಾಪುರುಷರ ಲಕ್ಷಣಗಳನ್ನುಳ್ಳವರಾಗಿಯೂ ಇರುವ, ವಿಷ್ಣುವಿನ ಪಾರ್ಷದರು ಹೊರಟರು. ಇವರ ಮಧ್ಯದಲ್ಲಿ ವಿಶ್ವ ಪ್ರಾಣಿಗಳನಾಥ ವಿಷ್ಣುವು ಲಕ್ಷ್ಮೀದೇವಿಯೊಂದೊಡಗೂಡಿ,

ಹೊರಟನು. ಆ ಬಳಿಕ ಬ್ರಹ್ಮನು, ಹಂಸಾರೂಢನಾಗಿ, ವೇದಗಳಿಂದಲೂ, ಷಡಂಗಗಳಿಂದಲೂ, ಆಗಮಗಳಿಂದಲೂ, ಇತಿಹಾಸ ಪುರಾಣಗಳಿಂದಲೂ ಕೂಡಿ ಹೊರಟನು. ಅನಂತರದಲ್ಲಿ ಪರಶಿವನು ವೃಷಭಾರೂಢನಾಗಿಯೂ, ಋಷಿಗಳಿಂದಲೂ ದೇವತೆಗಳಿಂದಲೂ, ಕೂಡಿ ಹೊರಟನು. ಆ ಬಳಿಕ ಸ್ಫಟಿಕ ಕಾಂತಿಯುಳ್ಳ ವೃಷಭನು, ಅನೇಕ ಗೋವುಗಳಿಂದ ಹೊರಟನು. ಇಂತು ಯೋಗಿಗಳಿಂದಲೂ ತಿಳಿಯಲಸಾಧ್ಯನಾದ ಪರಶಿವನು, ದೇವದಾನವರಿಂದಲಂಕೃತನಾಗಿ ಗಿರಿರಾಜಕುಮಾರಿಯನ್ನು ವರಿಸಲೋಸುಗ ಹಿಮಾದ್ರಿಯನ್ನು ಕುರಿತು ಹೊರಟನು.

# ಅಧ್ಯಾಯ ೨೫

## ವಿವಾಹ ಮಂಟಪ ರಚನೆ—ಈಶ್ವರನು ಹಿಮಾಚಲಕ್ಕೆ ಬರುವದು

ಸೂತನು ಹೇಳುತ್ತಾನೆ:—ಕೇಳಿರೈ ಋಷಿಗಳಿರಾ! ಇತ್ತಲಾ ಹಿಮವಂತನು ತನ್ನ ಮಗಳಾದ ಗಿರಿಜೆಯ ವಿವಾಹಾರ್ಥವಾಗಿ ಗರ್ಗಾಚಾರ್ಯನನ್ನು ಮುಂದುಮಾಡಿಕೊಂಡು ಪರಮೈಶ್ವರ್ಯದಿಂದ ಮಾಂಗಲ್ಯ ಭೂಮಿಯನ್ನು ಸ್ಥಾಪಿಸಿದನು. ಆಬಳಿಕ ವಿಶ್ವಕರ್ಮನನ್ನು ಕರೆಯಿಸಿ ಆದರಪೂರ್ವಕವಾಗಿ ಅನೇಕ ವೇದಿಕೆಗಳಿಂದ ಮನೋಹರವಾಗಿರುವ ನೂರು ಯೋಜನ ವಿಸ್ತಾರವಾದ ನಾನಾಶ್ಚರ್ಯಗಳಿಂದ ಕೂಡಿರುವ ವಿವಾಹಮಂಟಪವನ್ನು ಮಾಡಿಸಿದನು. ಆ ವಿವಾಹ ಮಂಟಪದಲ್ಲಿಯಾದರೋ ಸ್ಥಾವರಗಳೂ; ಜಂಗಮಗಳೂ ಅತಿ ಮನೋಹರವಾಗಿದ್ದವು. ಈ ಸ್ಥಾವರಪದಾರ್ಥಗಳು ತಮ್ಮ ಸೌಂದರ್ಯದಲ್ಲಿ ಜಂಗಮಗಳನ್ನು ಜಯಿಸಿದವು. ಜಂಗಮಗಳಾದರೋ ಮರಳಿ ಆ ಸ್ಥಾವರಗಳನ್ನು ಗೆದ್ದವು. ಆ ವಿವಾಹ ಮಂಟಪದಲ್ಲಿನ ಸ್ಥಳ

ಭೂಮಿಯು, ಸೀರಿಸಂತೆಯೇ ಕಾಣಿಸುತ್ತಿದ್ದಿತು. ಅಯ್ಯಾ ಋಷಿಗ ಳಿರಾ! ಕೇಳಿರಿ! ಆ ವಿಶ್ವಕರ್ಮನಿಂದ ಮಾಡಲ್ಪಟ್ಟ ಸ್ಥಲಭೂಮಿಯನ್ನು ನೋಡಿದ ಜನರು ಇದು ಸೀರೋ, ಅಥವಾ ಭೂಮಿಯೋ ಎಂಬುದ ನ್ನರಿಯದೇ ಹೋದರು. ಆ ವಿವಾಹ ಮಂಟಪದಲ್ಲಿ ಕೆಲವುಕಡೆ ಕೃತ್ರಿಮಗಳಾದ ಸಿಂಹಗಳೂ, ಇನ್ನೊಂದುಕಡೆ ಹಂಸಗಳೂ, ಮತ್ತೊಂದುಕಡೆ ಸಾರಸಗಳೂ, ಶಿಖಂಡೀ ಮೃಗಗಳೂ, ಆನೆಗಳೂ, ಕುದುರೆಗಳೂ, ಹಾಗೆಯೇ ಇನ್ನೂ ಅನೇಕ ಮೃಗಗಳೂ ಮನೋ ಹರವಾಗಿ ವಿಶ್ವಕರ್ಮನಿಂದ ಮಾಡಲ್ಪಟ್ಟಿದ್ದವು. ಇವುಗಳನ್ನು ನೋಡಿ ದವರು ಯಾವುದು ನಿಶ್ಚಯವಾದವುಗಳು? ಯಾವುದು ಕೃತ್ರಿಮಗ ಳೆಂಬುದನ್ನೇ ಅರಿಯದೆ ಹೋದರು. ಹೀಗೆಯೇ ಆ ವಿಶ್ವಕರ್ಮನು ಅದ್ಭುತರಾದ ದ್ವಾರಪಾಲಕರನ್ನೂ ಮಾಡಿದನು. ಮತ್ತಿಷ್ಟೆಯಲ್ಲದೆ ಆ ವಿಶ್ವಕರ್ಮನು, ಬಿಲ್ಲುಗಳನ್ನೆತ್ತಿ ಹಿಡಿದುಕೊಂಡಿರುವ ಪುರುಷ ರನ್ನೂ, ಅಶ್ವಗಳಮೇಲೆ ಕುಳಿತುಕೊಂಡಿರುವ ಸವಾರರನ್ನೂ, ಆನೆ ಗಳಮೇಲೆ ಹತ್ತಿಕೊಂಡಿರುವ ಮಾವುತರನ್ನೂ, ಚಾಮರಗಳಿಂದ ಬೀಸುತ್ತಲಿರುವ ಚಾಮರಧಾರಿಗಳನ್ನೂ, ಪುಷ್ಪಾಂಕುರಗಳನ್ನು ಹಿಡಿದುಕೊಂಡಿರುವ ಮಾಲಾಧಾರಿಗಳನ್ನೂ ಅತಿ ಕುಶಲತೆಯಿಂದ ರಚಿಸಿದ್ದನು. ಇವು ಸ್ಥಾವರಗಳಾದರೂ, ಜಂಗಮಗಳಂತೆಯೇ ತೋರುತ್ತಿದ್ದವು. ವಿಶ್ವಕರ್ಮನು ವೈವಾಹಿಕ ಮಂಟಪದ್ವಾರದಲ್ಲಿ ಕ್ಷೀರಸಾಗರ ಕನ್ಯೆಯಾದ ಲಕ್ಷ್ಮಿಯನ್ನು ಕಲ್ಪಿಸಿದವನಾದನು. ಎಲ್ಲರೂ ಮೋಹಗೊಳ್ಳಲೋಸುಗವಾಗಿ ಮಹಾದ್ವಾರದಲ್ಲಿ ಶಿವಕಿಂಕ ರನಾದ ನಂದಿಯು, ಹೇಗೆ ಶುದ್ಧವಾದ ಸ್ಫಟಿಕ ಪ್ರಭೆಯಂತೆ ಕಂಗೊ ಳಿಸುತ್ತಿರುವನೋ ಹಾಗೆಯೇ ರಚಿಸಿದನು. ಆ ಬಳಿಕ ದಿವ್ಯವಾದ ಪುಷ್ಪಕ ವಿಮಾನವನ್ನು ಆವನಮೇಲೆ ಭೂಷಿತವನ್ನಾಗಿ ಮಾಡಿದನು. ಅನಂತರದಲ್ಲಿ ಆ ಕೃತ್ರಿಮನಾದ ನಂದಿಯಮೇಲೆ ಕಂಗೊಳಿಸುತ್ತಲಿದ್ದ ವಿಮಾನವು ಪಲ್ಲವ ಛತ್ರಗಳಿಂದಲೂ, ಚಾಮರಗಳಿಂದಲೂ, ಮನೋ ಹರವಾಗಿದ್ದಿತು. ಇಷ್ಟೆಯಲ್ಲದೆ ಆ ನಂದಿಯ ವಾಮಪಾರ್ಶ್ವದಲ್ಲಿ ಮಹಾ ಪ್ರಭಾಶಾಲಿಗಳಾಗಿಯೂ, ಆರುವರ್ಷಗಳಿಂದ ಕೂಡಿದ್ದುದಾ

ಗಿಯೂ ಇರುವ, ಕಾಶ್ಮೀರದಂತೆ ಪ್ರಕಾಶಮಾನಗಳಾದ ನಾಲ್ಕು ದಂತಗಳಿಂದ ಶೋಭಿಸುತ್ತಲಿರುವ ಆನೆಗಳನ್ನೂ, ದಕ್ಷಿಣ ಪಾರ್ಶ್ವದಲ್ಲಿ ದಂಶಿತಗಳಾದ, ಮನೋಹರಗಳಾದ ಅಶ್ವಗಳನ್ನೂ ಕಲ್ಪಿಸಿದನು. ಇವೆಲ್ಲವೂ ಕೃತ್ರಿಮಗಳಾದರೂ ನಿಜವಾಗಿದ್ದಂತೆಯೇ ಇದ್ದಿತು. ಆ ಬಳಿಕ ನಾನಾಲಂಕಾರಗಳಿಂದ ಕೂಡಿದ ಲೋಕ ಪಾಲಕರನ್ನೂ ಷೋಡಶ ಪ್ರಕೃತಿಗಳನ್ನೂ ರಚಿಸಿದ್ದನು. ಇಷ್ಟೆಯಲ್ಲದೆ ಸಕಲರಾದ ದೇವತೆಗಳನ್ನು ಯಥಾರ್ಥವಾಗಿ ಕಲ್ಪಿಸಿದನು. ಹಾಗೆಯೇ ಭೃಗುವೇ ಮೊದಲಾದ ಋಷಿಗಳನ್ನೂ, ಪಾರ್ಷದರಿಂದ ಕೂಡಿರುವ ಇಂದ್ರನನ್ನೂ ಯಥಾರ್ಥವಾಗಿ ಕಲ್ಪಿಸಿದ್ದನು. ಎಲೈ ಋಷಿಗಳಿರಾ ! ಇಂತು ಕುಶಾಗ್ರ ಬುದ್ಧಿಯಾದ, ಮಹಾತ್ಮನಾದ, ಮನೋಹರ ರೂಪನಾದ ವಿಶ್ವಕರ್ಮನು, ನಾನಾಶ್ಚರ್ಯಗಳಿಂದ ಕೂಡಿರುವ, ದಿವ್ಯವಾದ, ದೇವತೆಗಳ ಮನವನ್ನಾಕರ್ಷಿಸುವ, ಪಾರ್ವತಿಯ ವಿವಾಹ ಮಂಟಪವನ್ನು ಕಲ್ಪಿಸಿದನು.

ಈ ಮಧ್ಯೆದಲ್ಲಿ ಬ್ರಹ್ಮನಿಂದ ಪ್ರೇರಿತನಾದ ನಾರದನು ಹಿಮವತ್ಪರ್ವತಕ್ಕೆ ಬಂದು ವಿಶ್ವಕರ್ಮನಿಂದ ಕಲ್ಪಿಸಿದ್ದ ವಿವಾಹಮಂಟಪದಲ್ಲಿ ರಚಿಸಿದ್ದ ತನ್ನ ಸ್ವರೂಪವನ್ನು ಕಂಡನು. ಬಳಿಕ ನಾರದನು, ನಾನಾಲಂಕಾರಯುಕ್ತವಾಗಿಯೂ, ನಾನಾರತ್ನಗಳಿಂದುಪಶೋಭಿತವಾಗಿಯೂ, ಅನೇಕ ಸುವರ್ಣ ಕಲಶಗಳಿಂದ ರಮ್ಯವಾಗಿಯೂ, ಬಾಳೆಯೇ ಮೊದಲಾದವುಗಳಿಂದ ಶೋಭಿಸುತ್ತಲಿರುವ ಸಾವಿರಾರು ಸ್ತಂಭಗಳಿಂದಲೂ ಕೂಡಿರುವ ವಿವಾಹಮಂಟಪವನ್ನು ಪ್ರವೇಶಿಸಿದನು. ಇಂತು ಬಂದ ನಾರದನನ್ನು ಕಂಡ ಹಿಮವಂತನು ತನ್ನ ಪರಿವಾರದೊಡಗೂಡಿ, ನಾರದನನ್ನು ಅರ್ಘ್ಯಪಾದ್ಯಾದಿಗಳಿಂದ ಸತ್ಕರಿಸಿ, ಬಂದ ಕಾರಣವೇನೆಂದು ಕೇಳಿದನು. ಆಗ ನಾರದನು ಹಿಮವಂತನನ್ನು ಕುರಿತು 'ಎಲೈ ಗಿರಿರಾಜನೇ ! ಕೇಳು. ಇಂದ್ರನೇ ಮೊದಲಾದ ದೇವತೆಗಳಿಂದಲೂ, ಮಹರ್ಷಿಗಳಿಂದಲೂ, ಗಣಗಳಿಂದಲೂ ಪರಿವಾರಿತನಾಗಿ ಸದಾಶಿವನು ವೃಷಭಾರೂಢನಾಗಿ ಗಿರಿಜೆಯನ್ನು ವಿವಾಹ

ಮಾಡಿಕೊಳ್ಳಲೋಸುಗ ಬರುತ್ತಲಿರುವನು' ಎಂದು ನುಡಿದನು. ನಾರದನ ಮಾತುಗಳನ್ನು ಕೇಳಿ ಹಿಮವಂತನು ಅವನನ್ನು ಕುರಿತು, 'ಎಲೈ ನಾರದನೇ! ಯಥಾಶಾಸ್ತ್ರವಾಗಿ ಶಂಕರನನ್ನು ಪೂಜಿಸಲೋಸುಗ ತೆರಳುವವನಾಗು' ಎಂದನು. ಹಿಮವಂತನ ಮಾತುಗಳನ್ನು ಕೇಳಿ ನಾರದನು 'ಎಲೈ ಶೈಲರಾಜನೇ! ಮೈನಾಕ ಸಹ್ಯಾದ್ರಿ, ಮೇರುವೇ ಮೊದಲಾದವರೊಡಗೂಡಿ, ಸುರಾಸುರವಂದಿತ ಪಾದ ಕಮಲಗಳುಳ್ಳ ಸಾಕ್ಷಾತ್ಪರಶಿವನಲ್ಲಿಗೆ ಹೋಗಿ ಆತನನ್ನು ಕರೆದು ಕೊಂಡು ಬರುವವನಾಗು' ಎಂದು ನುಡಿದನು. ಬಳಿಕ ಹಿಮವಂತನು ಹಾಗೆಯೇ ಆಗಲೆಂದೊಪ್ಪಿಕೊಂಡು ಪರ್ವತರಾಜರಿಂದೊಡಗೂಡಿ ಶೀಘ್ರವಾಗಿ ಹೊರಟು, ಪರಶಿವನನ್ನು ಎದುರುಗೊಂಡನು. ಅಷ್ಟರಲ್ಲಿಯೇ ದೇವತೆಗಳಿಂದಲೂ, ಬ್ರಹ್ಮಾ ವಿಷ್ಣುಗಳಿಂದಲೂ ಪರಿವಾರಿತನಾದ ಪರಶಿವನು ಗಿರಿರಾಜನನ್ನು ಕಂಡನು. ಬಳಿಕ ಅವರೆಲ್ಲರೂ ನಾರದನನ್ನು ಕುರಿತು 'ಎಲೈ ನಾರದನೇ! ಈ ಸಹ್ಯಮೈನಾಕ ಮೇರುಗಳು ತಮತಮಗಿರುವ ಒಬ್ಬೊಬ್ಬ ಕನ್ಯೆಯನ್ನು ನಮಗೆ ಕೊಡುತ್ತಾರೆಯೋ? ಇಲ್ಲವೇ ಶಂಭುವಿಗೆ ಗಿರಿಜೆಯನ್ನು ಕೊಡುವುದರಲ್ಲಿ ಹೇಗೆ ಮಾಡಿರುವರು?' ಎಂದರು. ಆಗ ನಾರದನು ಬ್ರಹ್ಮನನ್ನು ಮುಂದುಮಾಡಿಕೊಂಡು ವಿಷ್ಣುವನ್ನು ಕುರಿತು ಕಾರಣ ಸಹಿತವಾಗಿಯೂ, ಮಹೇಂದ್ರನನ್ನು ಏಕಾಂತವಾಗಿ ಕರೆದುಕೊಂಡುಹೋಗಿ ಅವನನ್ನು ಕುರಿತು 'ಎಲೈ ಇಂದ್ರನೇ! ಈ ವಿಶ್ವಕರ್ಮನು ಮಹತ್ತರವಾದ ಭವನಗಳನ್ನು ಮಾಡಿರುವನು. ಇವನ್ನು ನೋಡಿ ನಾವೆಲ್ಲರೂ ಮೋಹಿತರಾಗಿರುವೆವು. ಎಲೈ ಶಚೀಪತಿಯೇ! ಹಿಂದೆ ಈ ವಿಶ್ವಕರ್ಮನಮಗನನ್ನು ಕೊಂದಿದುದನ್ನು ಮರೆತುಬಿಟ್ಟೆಯೋ? ಇದಿಗೋ ನೋಡು! ಈ ವಿಶ್ವಕರ್ಮನೀಗ ತನ್ನ ಮಗನ ಮೃತಿಯನ್ನು ಜ್ಞಾಪಿಸಿಕೊಂಡು ಈ ಮಹಾತ್ಮನಾದ ಗಿರಿರಾಜನ ಮನೆಯಲ್ಲಿಯೇ ಇದ್ದುಕೊಂಡು ನಿನ್ನನ್ನು ಗೆಲ್ಲಲು ಇಷ್ಟಪಡುತ್ತಿರುವನು. ಏನು ಹೇಳಲಿ! ಅಹಹ! ಆ ವಿಶ್ವಕರ್ಮನು ವಿಷ್ಣುವು ಬೇರೆ ರೂಪದಿಂದ ಬೆಳಗುತ್ತಲಿರುವನೋ, ಎಂಬಂತೆ ಆತನ ಪ್ರತಿಮೆಯನ್ನು ಶಂಖಚಕ್ರಗದೆಗಳಿಂದ

ಕೂಡಿದುದಾಗಿ ಕಲ್ಪಿಸಿರುವನು. ವಿಷ್ಣುವನ್ನು ಹೇಗೆ ಕಲ್ಪಿಸಿರುವನೋ ಹಾಗೆಯೇ ಬ್ರಹ್ಮನನ್ನೂ ಕಲ್ಪಿಸಿರುವನು. ನೋಡು! ಮಾಯಾಮಯವಾದ ವೃಷಭವನ್ನೂ, ಆನೆ, ಕುದುರೆಗಳನ್ನೂ, ಇನ್ನೂ ಅನೇಕ ಚಿತ್ರ ವಿಚಿತ್ರಗಳನ್ನೂ, ಕಲ್ಪಿಸಿರುವನು' ಎಂದನು. ನಾರದನ ಮಾತುಗಳನ್ನು ಕೇಳಿ ದೇವೇಂದ್ರನು ಅತಿಯಾಗಿ ಭಯಗೊಂಡು, ವಿಷ್ಣುವಿನಲ್ಲಿಗೆ ಶೀಘ್ರವಾಗಿ ಬಂದು, 'ಎಲೈ ವಿಷ್ಣುವೇ! ಈ ವಿಶ್ವಕರ್ಮನು ಪುತ್ರಶೋಕದಿಂದ ಪೀಡಿತನಾಗಿ, ಇನ್ನೊಂದು ವ್ಯಾಜದಿಂದಿವುಗಳನ್ನೆಲ್ಲವನ್ನೂ ಮಾಡಿರುವನು. ಅವುಗಳನ್ನು ನೋಡಿಕೊಂಡು ಬರುವೆನು. ನೀನಿಲ್ಲಿಯೇ ಇರು' ಎಂದು ಹೇಳಿದನು. ಇಂತು ನುಡಿದ ಇಂದ್ರನ ಮಾತುಗಳನ್ನು ಕೇಳಿ ವಿಷ್ಣುವು ಅವನನ್ನು ಕುರಿತು ನಸುನಗುತ್ತಾ 'ಮಹೇಂದ್ರಾ ಪೂರ್ವದಲ್ಲಿ ನೀನು ನಿವಾತಕವಚದಿಂದಲೇ ಮೋಹಿತನಾಗಿರುವೆ. ಈಗ ನಾನು ಇದರ ನಿವಾರಣಾರ್ಥವಾಗಿ ವಿದ್ಯಾಮೃತವನ್ನಿಲ್ಲಿಗೆ ತೆಗೆದುಕೊಂಡು ಬಂದಿರುವೆನು. ಈಗಲಾದರೋ ಈ ಮಹಾ ವಿದ್ಯೆಯ ಬಲದಿಂದಲೇ ಈ ತ್ವಷ್ಟ್ರನಿಂದ ಕಲ್ಪಿತವಾದೀ ವಿವಾಹ ಮಂಡಪವನ್ನು ಪ್ರವೇಶ ಮಾಡೋಣ. ಎಲೈ ಇಂದ್ರನೇ! ಹಿಂದೆ ನೀನು ನನ್ನ ಮಾತಿನಮೇಲೆ, ಹಿಮವಂತನೇ ಮೊದಲಾದ ಪರ್ವತೋತ್ತಮರನ್ನು ಪಕ್ಷಹೀನರನ್ನಾಗಿ ಮಾಡಲಿಲ್ಲವೆ? ಈಗೀವಿಶ್ವಕರ್ಮನು ಈ ಕಾರಣವನ್ನೆಲ್ಲವನ್ನೂ ಜ್ಞಾಪಿಸಿಕೊಂಡು ಈ ವಿವಾಹ ಮಂಟಪವನ್ನು ತನ್ನ ಮಾಯೆಯಿಂದ ಕಲ್ಪಿಸಿರುವನು. ಹೀಗಿರುವಲ್ಲಿ ಅವನು ಜಯವನ್ನಪೇಕ್ಷಿಸುತ್ತಾನೆಯೇ? ಅಪೇಕ್ಷಿಸುವುದಿಲ್ಲವು. ಆದುದರಿಂದ ಅಣುಮಾತ್ರವೂ ಭಯಪಡಬೇಕಾದುದಿಲ್ಲ' ಎಂದನು. ಆ ಬಳಿಕ ಇಂದ್ರಾದಿ ದೇವತೆಗಳೆಲ್ಲರೂ, ಹಿಮವಂತನೊಂದಿಗೆ ಸೇರಿ, ನಾರದನನ್ನು ಮುಂದುಮಾಡಿಕೊಂಡು, ಅನೇಕಾಶ್ಚರ್ಯಗಳಿಂದ ಕೂಡಿದುದಾಗಿಯೂ, ವಿಚಿತ್ರವಾದ ಚಿತ್ರಗಳಿಂದ ಮನೋಹರವಾಗಿಯೂ ಇರುವ ವಿವಾಹ ಮಂಟಪವನ್ನು ಕುರಿತು ಬಂದರು. ಇಂತು ಬರುತ್ತಲಿರುವ ದೇವತೆಗಳನ್ನು ನೋಡಿ ಆ ಹಿಮಾದ್ರಿಯು ಎದ್ದುನಿಂತುಕೊಂಡು, ಅವರೆಲ್ಲರಿಗೂ, ಮನೋ

ಹರಗಳಾಗಿರುವ ವಿಶ್ವಕರ್ಮನಿಂದ ಕಟ್ಟಲ್ಪಟ್ಟ ಭವನಗಳನ್ನು ವಾಸಗೃಹಗಳಾಗಿ ಮಾಡಿಕೊಟ್ಟನು. ಆಬಳಿಕ ದೇವ ಗಂಧರ್ವ ಯಕ್ಷ ಸಿದ್ಧ ಪ್ರಮಥರೆಲ್ಲರೂ ಆ ಮನೆಗಳಲ್ಲಿ ಸುಖವಾಗಿರಲು, ವಿಶ್ವಕರ್ಮನು ಅಲ್ಲಲ್ಲಿಯೇ ದಿವ್ಯವಾದ ಉಪವನಗಳನ್ನು ಕಲ್ಪಿಸಿದನು. ಇಷ್ಟೆಯಲ್ಲದೆ, ಆ ವಿಶ್ವಕರ್ಮನು ಅಲ್ಲಲ್ಲಿಯೇ ಇರುವ ಭೈರವರಿಗೂ, ಕ್ಷೇತ್ರಪಾಲಕರಿಗೂ, ಅನೇಕ ಕ್ಷೇತ್ರವಾಸಿಗಳಿಗೂ, ಶ್ಮಶಾನ ವಾಸಿಗಳಿಗೂ, ಅಶ್ವತ್ಥವೃಕ್ಷವಾಸಿಗಳಿಗೂ, ಇನ್ನೂ ಅನೇಕ ಖೇಚರರಿಗೂ, ಅಲ್ಲಲ್ಲಿಯೇ ಅವರವರ ಯೋಗ್ಯತಾನುಸಾರವಾಗಿ, ವಾಸಮಾಡಲನು ಕೂಲಗಳಾದ ಭವನಗಳನ್ನು ಕಲ್ಪಿಸಿದನು. ಇಂತು ವಿಶ್ವಕರ್ಮನಿಂದ ಕಲ್ಪಿತವಾದ ಭವನಗಳಲ್ಲಿ ಇಂದ್ರನಿಂದ ಕೂಡಿದ ದೇವತೆಗಳೂ, ಯಕ್ಷರೂ, ಪಿಶಾಚರೂ, ರಾಕ್ಷಸರೂ, ಗಂಧರ್ವ, ವಿದ್ಯಾಧರ, ಅಪ್ಸರರ ಸಮೂಹಗಳೂ ಆ ಹಿಮವಂತನಿಂದ ತಂಗಿಸಲ್ಪಟ್ಟು ಸುಖದಿಂದಿದ್ದರು.



ಓಂಕಾರೇಶ್ವರ.

# ಗಿರಿಜಾ ಕಲ್ಯಾಣ



## ಅಧ್ಯಾಯ ೨೫

ಸೂತನು ಹೇಳುತ್ತಾನೆ:—ಕೇಳಿರೈ! ಇಂತು ವಿಶ್ವಕರ್ಮನಿಂದ ಅತ್ಯದ್ಭುತವಾಗಿಯೂ, ವಿಚಿತ್ರಚಿತ್ರಗಳಿಂದ ಚಿತ್ರಿತವಾಗಿಯೂ, ನೋಡಿದವರ ಕಂಗಳಿಗೆ ಹಬ್ಬದಂತೆ ತೋರುವುದಾಗಿಯೂ, ಕಲ್ಪಿಸಲ್ಪಟ್ಟಿದ್ದ ಮನೋಹರವಾದ ಭವನಗಳಲ್ಲಿ ಸಕಲ ದೇವತೆಗಳೂ, ಯಕ್ಷ, ಗಂಧರ್ವ, ಪನ್ನಗ, ಕಿನ್ನರ, ಪಿಶಾಚ, ಭೂತ, ಪ್ರೇತ, ರಾಕ್ಷಸರೂ, ಪ್ರಮಥಗಣಗಳೂ ಮಹಾನುಭಾವನಾದ ಗಿರಿರಾಜನಿಂದ ಸತ್ಕರಿಸಲ್ಪಟ್ಟು, ಪರಿವಾರ, ವಾಹನಸಮೇತರಾಗಿ ಪ್ರವೇಶಿಸಿದರು. ಆ ಬಳಿಕ ಹಿಮಾದ್ರಿಯಲ್ಲಿಯೇ ವಿಶ್ವಕರ್ಮನು, ಬ್ರಹ್ಮನಿಗೋಸುಗ ಪರಮ ವಿಭೂತಿಯಿಂದ ಬೆಳಗುತ್ತಿರುವ ದಿವ್ಯವಾದ ಭವನವನ್ನು ನಿರ್ಮಾಣ ಮಾಡಿದನು. ಹೀಗೆಯೇ ಮಹಾ ಬುದ್ಧಿಶಾಲಿಯಾದ ವಿಶ್ವಕರ್ಮನು, ವಿಷ್ಣುವಿಗೋಸುಗ ಅನೇಕ ಚಿತ್ರವಿಚಿತ್ರಗಳಿಂದ ಕೂಡಿ ಬೆಳಗುತ್ತಿರುವ ಸೊಗಸಾದ ಭವನವನ್ನು ತಾನಾಗಿಯೇ ನಿರ್ಮಿಸಿದನು. ಇಷ್ಟೇ ಅಲ್ಲದೆ ಮಹಾತ್ಮನಾದ ವಿಶ್ವಕರ್ಮನು ಮನೋಹರವಾಗಿಯೂ, ಶ್ವೇತವರ್ಣ ಉಳ್ಳದ್ದಾಗಿಯೂ, ಮಹಾ ಪ್ರಭವಾಗಿಯೂ, ದೇವಶ್ರೇಷ್ಠರಿಂದ ಪೂಜಿಸಲ್ಪಟ್ಟಿದ್ದಾಗಿಯೂ, ಕೈಲಾಸ ಲಕ್ಷ್ಮಿಯ ಕಾಂತಿಯಿಂದೊಡಗೂಡಿದುದಾಗಿಯೂ ಇರುವ ಅನೇಕ ಸಭಿಕರು ಸೇರುವ ಸಭಾಭವನವನ್ನು ಬಹು ಸೊಗಸಾಗಿ ನಿರ್ಮಾಣ ಮಾಡಿದನು. ಈ ಭವನದಲ್ಲಿಯೇ ಸಾಕ್ಷಾತ್ಪರಶಿವನು, ಹಿಮವಂತನಿಂದ ಸತ್ಕೃತನಾಗಿ ತಂಗಿಸಲ್ಪಟ್ಟನು. ಈ ಮಧ್ಯದಲ್ಲಿ ಗಿರಿರಾಜನ ಪತ್ನಿಯಾದ ಮೇನೆಯು ಸಖೀಜನರಿಂದಲೂ, ಋಷಿಗಳಿಂ

ದಲೂ ಪರಿವಾರಿತಳಾಗಿ ಪರಶಿವನಿಗೆ ಆರತಿಯನ್ನೆತ್ತಲು ಬಂದಳು. ಆಗ ವಾದಿತ್ರಗಳ ನಿನದದಿಂದ ತ್ರಿಭುವನಗಳೂ ಪ್ರತಿವಾದಿತನಾದವು. ಬಳಿಕ ಗಿರಿರಾಜ ಪತ್ನಿಯಾದ ಮೇನೆಯು, ಪರಮ ತಪಸ್ವಿಯಾದ ಪರಶಿವನಿಗೆ ಆರತಿಯನ್ನೆತ್ತಿದಳು. ಇಂತು ಮೇನೆಯು ಪರಶಿವನಿಗೆ ಆರತಿಯನ್ನೆತ್ತಿ ತನ್ನಳಿಯನಾದ ಪರಶಿವನನ್ನು ಕಾಣದೆ ಇರುವುದರಿಂದ, ಹೇಗಿರುವನೋ ಎಂಬ ಸಂಶಯಗ್ರಸ್ತಳಾಗಿ ನೋಡುತ್ತಾ, ತನ್ನ ಮಗಳಾದ ಗಿರಿಜೆಯಿಂದ ಬಣ್ಣಿಸಲ್ಪಟ್ಟಿದ್ದ ಶಂಕರನ ಸೌಂದರ್ಯಲಾವಣ್ಯಗಳನ್ನು ಸ್ಮರಿಸಿಕೊಂಡು, ತಾನೀಗ ನೋಡುತ್ತಲಿರುವ ಪರಶಿವನ ಸೌಂದರ್ಯ ಲಾವಣ್ಯಗಳನ್ನೂ ನೋಡಿ ಆಶ್ಚರ್ಯಗೊಂಡಳು. ಇಂತು ನೋಡಿದ ಮೇನೆಯು ಅಹತಾಂಬರಯುಗ್ಮಗಳಿಂದ ಶೋಭಿಸುತ್ತಿರುವವಳಾಗಿಯೂ ನಾನಾರತ್ನಗಳಿಂದಲಂಕೃತಳಾಗಿಯೂ, ಮನೋಹರವಾಗಿಯೂ, ಇರುವ ಸಂಪದ್ಯುಕ್ತವಾದ ಕಂಚುಕದಿಂದ ಶೋಭಿಸುತ್ತಿರುವವಳಾಗಿಯೂ, ದಿವ್ಯವಾದ ರತ್ನಗಳಿಂದ ಭೂಷಿತವಾದ ಹಾರವನ್ನು ಧರಿಸಿದವಳಾಗಿಯೂ, ಮಹಾ ಪ್ರಕಾಶಮಾನವಾದ ಬಳೆಗಳನ್ನು ತೊಟ್ಟವಳಾಗಿಯೂ, ಸಖೀಜನಗಳಿಂದಲೂ, ಋಷಿಪತ್ನಿಯರಿಂದಲೂ ಸೇವಿಸಲ್ಪಟ್ಟವಳಾಗಿ, ಈಶ್ವರನ ಸೌಂದರ್ಯ ಲಾವಣ್ಯಗಳನ್ನು ನೋಡಿ ಆಶ್ಚರ್ಯಭರಿತಳಾಗಿ ಶಿವಧ್ಯಾನವನ್ನು ಮಾಡುತ್ತಾ ಅಲ್ಲಿಯೇ ಕುಳಿತುಬಿಟ್ಟಳು.

ಈ ಮಧ್ಯದಲ್ಲಿ ವಿವಾಹ ಪುರೋಹಿತನಾದ, ಗರ್ಗಾಚಾರ್ಯನು, ಅಲ್ಲಿಗೆ ಬಂದು 'ಎಲೈ ಹಿಮವಂತನೇ ! ಎಲೈ ಪರ್ವತಗಳಿರಾ ! ಜಾಗ್ರತೆಯಾಗಿ, ಇದೇ ವೇಳೆಯಲ್ಲಿ ಪರಶಿವನನ್ನು ವಿವಾಹಾರ್ಥವಾಗಿ ನಿಮ್ಮ ಮನೆಗೆ ಕರೆದುಕೊಂಡು ಬನ್ನಿರಿ' ಎಂದು ಹೇಳಿದನು. ಆಗ ಪರ್ವತರಾಜರೆಲ್ಲರೂ ಮಹಾತ್ಮನಾದ ಗರ್ಗನ ಮಾತುಗಳನ್ನು ಕೇಳಿ ತಮ್ಮ ಕಳತ್ರಗಳೊಂದಿಗೆ ಕೂಡಿದವರಾಗಿ, ಎದ್ದು ನಿಂತರು. ಆಗ ಪರ್ವತರಾಜ ಪತ್ನಿಯರೆಲ್ಲರೂ ಮಂಗಳಪಾಣಿಯರಾಗಿ, ಅನೇಕ ಅಲಂಕಾರಗಳಿಂದ ಶೋಭಿತರಾಗಿ ಅನೇಕ ಬೆಡಗು, ಬಿನ್ನಾಣಗಳನ್ನು

ಮಾಡಿಕೊಂಡು ಒಯ್ಯಾರದಿಂದ ಹೊರಟರು. ಬಳಿಕ ಪರ್ವತರಾಜರು ಪ್ರಮಥಗಣಗಳಿಂದಲೂ ಚಂಡಿಯಿಂದಲೂ, ದೇವ ಋಷಿಗಳಿಂದಲೂ ಸೇವಿತನಾದ, ಲೋಕವೆಲ್ಲಕ್ಕೂ ಸಂತೋಷವನ್ನುಂಟುಮಾಡುವ ಪರಶಿವನಲ್ಲಿಗೆ ವಾದ್ಯತ್ರಿಘೋಷಗಳಿಂದಲೂ, ಬ್ರಹ್ಮಘೋಷಗಳಿಂದಲೂ ಬಂದರು. ಆಗ ದೇವರ್ಷಿಗಳಿಂದಲೂ, ದೇವತೆಗಳಿಂದಲೂ ಕೂಡಿದ ಪರಶಿವನು ವಿವಾಹಾರ್ಥವಾಗಿ ಹೊರಟನು. ಯೋಗಿನೀ ಚಕ್ರಗಳಿಂದ ಕೂಡಿದ ಗಣನಾಯಕರೆಲ್ಲರೂ ಶಿವನನ್ನು ಹಿಂಬಾಲಿಸಿದರು. ಬಳಿಕ ಯೋಗಿನೀಚಕ್ರವು ಭೇರಿಯ ಠಂಕಾರದಿಂದ ಅತಿ ಭಯಂಕರವಾಗಿದ್ದಿತು. ಆಗ ಚಂಡಿಯು ಮಹಾ ಭಯಂಕರಳಾಗಿಯೂ, ಮಹಾ ವಿಭೂತಿಯಿಂದಲಂಕೃತಳಾಗಿಯೂ, ಕಂಠದಲ್ಲಿ ಕರ್ಕೋಟಕ ಸರ್ಪವನ್ನು ಹಾರವಾಗಿ ಧರಿಸಿದವಳಾಗಿಯೂ, ವೃಶ್ಚಿಕಗಳ ಪದಕವನ್ನು ಹಾಕಿಕೊಂಡಿರುವವಳಾಗಿಯೂ, ದಂದಶೂಕಗಗಳನ್ನು ಧರಿಸಿದವಳಾಗಿಯೂ, ಪಾಣಿಪಾದಮಯವಾದ ದರ್ಪಗಳೆರಡನ್ನು ಕರ್ಣಕುಂಡಲಗಳನ್ನಾಗಿ ಮಾಡಿಕೊಂಡಿರುವವಳಾಗಿಯೂ, ರಣರಂಗದಲ್ಲಿ ಮೃತರಾದ ಮಹಾ ವೀರಾಗ್ರಣಿಗಳ ಶಿರಸ್ಸುಗಳನ್ನು ಧರಿಸಿದವಳಾಗಿಯೂ, ಗಜಚರ್ಮವನ್ನು ಉಟ್ಟುಕೊಂಡಿರುವವಳಾಗಿಯೂ, ನಾಲ್ವತ್ತೆಂಟು ಯೋಗಿನೀ ಚಕ್ರಗಳಿಂದಲೂ, ಕ್ಷೇತ್ರಪಾಲರಿಂದಲೂ ಭೈರವರಿಂದಲೂ, ಪರಮ ಭಯಂಕರರಾದ ವೀರಭದ್ರಾದಿ ಗಣಗಳಿಂದಲೂ, ಮಹಾಕಾಳಿ, ಭಯಂಕರಳಾದ ಭೈರವಿ, ತ್ರಿಪುರೆ, ಜಯೆ, ಕ್ಷೇಮಂಕರೆ, ಭೂತಪ್ರೇತಕಪಟಗಳೇ ಮೊದಲಾದವರಿಂದ ಪರಿವಾರಿತಳಾಗಿ ಶಿವನ ಮುಂಗಡೆ ಹೊರಟಳು. ಆಗ ಮಹಾ ಶಿವಭಕ್ತನಾದ ವಿಷ್ಣುವು, ಋಷಿಗಳನ್ನೂ, ದೇವತೆಗಳನ್ನೂ, ಅನಸೂಯೆ ಅರುಂಧತಿಯರನ್ನು ಮುಂದುಮಾಡಿಕೊಂಡು ಶಿವನನ್ನು ಕುರಿತು 'ಎಲೈ ಪ್ರಭುವಾದ ಶಂಕರನೇ! ಈ ಚಂಡಿಯನ್ನು ಹಿಂದಕ್ಕೆ ಕಳುಹಿಸುವವನಾಗು' ಎಂದನು. ನಾರಾಯಣನ ಮಾತುಗಳನ್ನು ಕೇಳಿ ಶಂಭುವು ಚಂಡಿಯನ್ನು ಕುರಿತು ನಸುನಗುತ್ತಾ 'ಎಲೌ ಚಂಡಿಯೇ! ವಿವಾಹವು ಮುಗಿಯುವವರೆವಿಗೂ ನೀನಿಲ್ಲಿಯೆ ಇರುವವಳಾಗು.

ಎಲೌ ಮಂಗಳಕರಳೇ ಕಾರ್ಯಾಕಾರ್ಯಗಳಲ್ಲಿ ನನ್ನ ಗುಣವನ್ನರಿಯೆಯಾದುದರಿಂದ ನೀನಿಲ್ಲಿಯೇ ನಿಲ್ಲು' ಎಂದನು. ಆಗ ಚಂಡಿಯೂ, ಪ್ರಮಥಗಣಗಳೂ ಶಂಭುವಿಗೆ ಭೋಧಿಸಿದ ವಿಷ್ಣುವಿನಲ್ಲಿ ಕೋಪಗೊಂಡು ಆತನನ್ನುದ್ದೇಶಿಸಿ 'ಎಲೈ ಪ್ರಭುವೇ ! ಎಲ್ಲೆಲ್ಲಿ ಪರಶಿವನು ಇರುತ್ತಾನೆಯೋ ಅಲ್ಲೆಲ್ಲಾ ನಾವು ಇರುವೆವು. ಇಂತಹುದರಲ್ಲಿ ನೀನೀಗ ಶಂಭುವಿನ ವಿವಾಹಕ್ಕೆ ನಮ್ಮನ್ನೇಕೆ ತಡೆದಿರುವೆ ? ' ಎಂದು ಕೇಳಿದರು. ಇಂತು ನುಡಿದ ಚಂಡಿಯನ್ನೂ, ಪ್ರಮಥಗಣಗಳನ್ನೂ ಕುರಿತು ವಿಷ್ಣುವು ಚಂಡಿಯನ್ನುದ್ದೇಶಿಸಿ 'ನೀವೆಲ್ಲರೂ ನಾನು ಹೇಳಿದುದಕ್ಕೆ ಕೋಪಿಸಬೇಡಿರಿ' ಎಂದನು. ಆಗಲಾ ಚಂಡಿಯೂ, ಗಣಮುಖ್ಯರೂ ವಿಷ್ಣುವಿನ ಮಾತುಗಳನ್ನು ಕೇಳಿ ಜ್ವಲಿಸುತ್ತಿರುವ ಹೃದಯಗಳುಳ್ಳವರಾಗಿ ಏಕಾಂತವನ್ನಾಶ್ರಯಿಸಿದರು.

ಇಷ್ಟರಲ್ಲಿಯೇ ಹಿಮವಂತನ ಮಂತ್ರಿಗಳೆಲ್ಲರೂ, ತಮ್ಮ ಕಳತ್ರಗಳಿಂದ ಕೂಡಿ ಪಂಚವಾದ್ಯಗಳ ಘೋಷದಿಂದಲೂ, ಬ್ರಹ್ಮಘೋಷದಿಂದಲೂ, ಪೌರ ಸ್ತ್ರೀಯರ ಗೀತಗಳ ಶಬ್ದಗಳಿಂದಲೂ, ಪರಶಿವನನ್ನು ಕುರಿತು ಬಂದರು. ಇಂತು ಪರಶಿವನಲ್ಲಿಗೆ ಬಂದನಂತರ ಸರ್ವಾಭರಣ ಭೂಷಿತರಾಗಿಯೂ, ಮಂಗಳಗೀತಗಳನ್ನು ಪಾಡುತ್ತಲೂ, ಪೌರ ಸ್ತ್ರೀಯರೆಲ್ಲರೂ ಮಂಗಳ ಕಳಶಗಳಿಂದ, ಸದಾಶಿವನಿಗೆ ಸ್ನಾನವನ್ನು ಮಾಡಿಸಿದರು. ಆಬಳಿಕ ಪರ್ವತರಾಜರೂ, ಋಷಿಗಳೂ, ಗಂಧರ್ವರೇ ಮೊದಲಾದವರೆಲ್ಲರೂ, ಯೋಷಿತರಿಂದ ಪೂಜಿಸಲ್ಪಟ್ಟ, ಮುಕುಟಧಾರಿಯಾದ, ಛತ್ರ ಚಾಮರಗಳಿಂದ ಶೋಭಿಸುತ್ತಿರುವ ಸಾಕ್ಷಾತ್ಪರಶಿವನ ಮುಂಗಡೆ ಹೊರಟರು. ಬ್ರಹ್ಮನೂ, ವಿಷ್ಣುವೂ, ಚಂದ್ರನೂ, ಸಂಪತ್ತಿನಿಂದ ಕೂಡಿ ಶೋಭಿಸುತ್ತಾ ಮುಂದೆ ನಡೆದರು. ಹಾಗೆಯೆ, ಶಂಖಧಾರಿಗಳೂ, ಭೇರಿಯನ್ನು ಹೊಡೆಯುವವರೂ, ಪಟಹ, ಆನಕ, ಗೋಮುಖಗಳನ್ನು ಬಾರಿಸುವ ಅನೇಕ ಗಾಯಕರು ಪರಮ ಮಂಗಳಕರನಾದ ಪರಶಿವನ ವಿವಾಹಾರ್ಥವಾಗಿ ನಡೆದರು. ಆ ದಿವ್ಯ ಮಹೋತ್ಸವದಲ್ಲಿ ಪುನಃ ಪುನಃ

ವಾದಿತ್ರಿಯೇ ಮೊದಲಾದ ವಾದ್ಯಗಳನ್ನು ಬಾರಿಸುತ್ತಲಿದ್ದರು. ಅನಂತರದಲ್ಲಿ ಸಾವಿತ್ರಿಯೂ, ಅರುಂಧತಿಯೂ, ಅನಸೂಯೆ, ಮಹಾಲಕ್ಷ್ಮಿಯರೆಲ್ಲರೂ ಹೊರಟರು. ಎಲೈ ಋಷಿಗಳಿರಾ! ಜಗದೇಕ ಬಂಧುವಾದ ಪರಶಿವನು ಇವರೆಲ್ಲರಿಂದಲೂ ಕೂಡಿ ಅತಿ ಪ್ರಕಾಶವಾನವಾಗಿ ಬೆಳಗಿದನು. ಬಳಿಕ ಪರಶಿವನಿಗೆ ವಾಯುವೇ ಚಾಮರವನ್ನು ಹಿಡಿಯುವವನಾಗಿಯೂ, ಚಂದ್ರನೇ ಛತ್ರಿಯನ್ನು ಹಿಡಿಯುವವನಾಗಿಯೂ, ಸೂರ್ಯನೇ, ಮುಂದೆ ಬೆಳಗುವ ಪ್ರಕಾಶವಾಗಿಯೂ, ಸಾಕ್ಷಾದ್ವಿಷ್ಣುವೇ ಲಕ್ಷ್ಮಿಯಿಂದ ಸಮೇತನಾಗಿ ಸನ್ನಿಧಿಯಲ್ಲಿರುವವನಾಗಿಯೂ ಆದರು. ಇಂತು ಪರಶಿವನು ಸೂರ್ಯ, ಚಂದ್ರ, ಅಗ್ನಿ, ವಾಯುವೇ ಮೊದಲಾದ ಲೋಕಪಾಲಕರಿಂದಲೂ, ಮಹರ್ಷಿಗಳಿಂದಲೂ ಕೂಡಿದವನಾಗಿ ಬಹಳವಾದ ತೇಜಸ್ಸಿನಿಂದ ಬೆಳಗಿದನು. ಆಗ ದೇವತೆಗಳೆಲ್ಲರೂ, ಋಷಿಗಳಿಂದೊಡಗೂಡಿ ಆ ಪರಶಿವನಮೇಲೆ ಪುಷ್ಪ ವೃಷ್ಟಿಯನ್ನು ಸುರಿಸಿದರು. ಅನಂತರದಲ್ಲಿ ಪರಶಿವನು, ಬಂಗಾರದ ಕಾಂತಿಯಿಂದ ಪ್ರಕಾಶಿಸುವುದಾಗಿಯೂ, ಪರಮೈಶ್ವರ್ಯದಿಂದ ಶೋಭಿಸುತ್ತಿರುವುದಾಗಿಯೂ ಇರುವ ಗಿರಿರಾಜನ ಮನೆಯನ್ನು, ಅತಿಶಯವಾದ ಪೂಜೆಯನ್ನು ಕೈಕೊಂಡು, ದೇವ, ದಾನವ, ಮಾನುಷರಿಂದ ಸ್ತುತಿಸಲ್ಪಟ್ಟ ವೈಭವವುಳ್ಳವನಾಗಿ ಪ್ರವೇಶಿಸಿದನು. ಆ ಬಳಿಕ ಗಿರಿರಾಜನು ಪರಶಿವನನ್ನು ಗಜದಿಂದಿಳಿಸಿ ಪೀಠದಲ್ಲಿ ಕುಳ್ಳಿರಿಸಿದನಂತರದಲ್ಲಿ ಆತನ ಪತ್ನಿಯಾದ ಮೇನೆಯು ಸಖೀಜನಗಳಿಂದ ಕೂಡಿ ಅತಿ ಸಂಭ್ರಮದಿಂದ ಆರತಿಯನ್ನೆತ್ತಿದಳು. ಪುರೋಹಿತನಾದ ಗರ್ಗನು ವಿವಾಹ ಪೂರ್ವದಲ್ಲಿ ಮಾಡಿಸಬೇಕಾದ ಮಧುಪರ್ಕಾದಿಗಳನ್ನು ಬ್ರಹ್ಮನು ಹೇಳಿದಂತೆ ಮಾಡಿದನು. ಆಗಲಾ ಗಿರಿಜೆಯು ಆಭರಣ ಭೂಷಿತಳಾಗಿ ಕುಳಿತಿದ್ದ ಅಂತರ್ವೇದಿಕೆಗೆ ಪರಶಿವನನ್ನು ಮಹಾವಿಷ್ಣುವೂ, ಬ್ರಹ್ಮನೂ ಕರೆದುಕೊಂಡು ಬಂದರು. ಅಲ್ಲಿಯಾದರೋ ಬೃಹಸ್ಪತಿಯೇ ಮೊದಲಾದವರೆಲ್ಲರೂ, ಲಗ್ನವನ್ನು ನಿರೀಕ್ಷಿಸುತ್ತಿದ್ದರು. ಗರ್ಗನಾದರೋ ಘಟಿಕಾಲಯದಲ್ಲಿಯೇ ಇದ್ದುಕೊಂಡು, ಲಗ್ನದ ಘಳಿಗೆಯು ಬಂದೊಡನೆಯೇ, ಓಂ ಎಂದು

ಸಂಕಲ್ಪ ಪೂರ್ವಕವಾಗಿ ವಧುವಾದ ಪಾರ್ವತಿಗೆ ಅಂಜಲಿಯನ್ನು ಕೊಟ್ಟನು. ಆಗಲಾ ಪಾರ್ವತಿಯು ಪತಿಯಾದ ಪರಶಿವನಮೇಲೆ ಅಕ್ಷತೆಯನ್ನು ಸುರಿಸಿದಳು. ಇಂತು ಗಿರಿಜೆಯಿಂದ ಪರಶಿವನು ಅಕ್ಷತೆಯಿಂದಲೂ, ಕುಶಗಳಿಂದಲೂ ಪೂಜಿಸಲ್ಪಟ್ಟನು. ಪಾರ್ವತಿಯಾದರೋ ಅಪಾರವಾದ ಸಂತೋಷವನ್ನು ಹೊಂದಿದಳು. ಆಬಳಿಕ ಪಾರ್ವತಿಯು, ತಾನು ಯಾರಿಗಾಗಿ, ಯಾರಿಂದಲೂ ಮಾಡಲಸಾಧ್ಯವಾದ ತಪಶ್ಚರ್ಯವನ್ನು ಗೈದಳೋ ಅಂತಹ ತನ್ನ ಪತಿಯಾದ ಪರಶಿವನನ್ನು ಅಕ್ಕಾದರದಿಂದಲೂ,ಸಂತೋಷದಿಂದಲೂ ನೋಡುತ್ತಿದ್ದಳು. ಋಷಿಗಳಿರಾ! ಜಗಜ್ಜೀವನ ಜೀವನನಾದ ಪರಶಿವನಿಂತು ಪಾರ್ವತಿಯಿಂದ ಗೆಲ್ಲಲ್ಪಟ್ಟನು.

ಆಗಲಾ ನಾರದನೂ, ಗಂಗೆಯೂ, ಸನಕಾದಿ ಋಷಿಗಳೂ ಪರಶಿವನನ್ನು ಕುರಿತು 'ಎಲೈ ಮಹಾದೇವನೆ! ಈ ಪಾರ್ವತಿಗೆ ಪ್ರತಿಪೂಜೆಯನ್ನು ಮಾಡುವವನಾಗು' ಎಂದು ಹೇಳಲು ಪರಶಿವನು ಅರ್ಘ್ಯಾಕ್ಷತೆಗಳಿಂದ ಪಾರ್ವತಿಯನ್ನು ಪೂಜಿಸಿದನು. ಇಂತು ಪರಸ್ಪರವಾಗಿ ಪಾರ್ವತೀ ಪರಮೇಶ್ವರರು ಪೂಜಿಸುತ್ತ, ಪ್ರಕಾಶಿಸಿದರು. ಆ ಬಳಿಕ ತ್ರೈಲೋಕ್ಯ ಲಕ್ಷ್ಮಿಯನ್ನು ಸಿರೀಕ್ಷಿಸುತ್ತಿರಲು, ಮಹಾಲಕ್ಷ್ಮಿಯೂ, ಸಾವಿತ್ರಿಯೂ, ಅರುಂಧತಿಯೂ, ಪರಶಿವನಿಗೂ, ಪಾರ್ವತಿಗೂ ಅತಿ ಸಂಭ್ರಮದಿಂದ ಆರತಿಯನ್ನೆತ್ತಿದರು. ಈ ಮಧ್ಯದಲ್ಲಿ ಗರ್ಗಾಚಾರ್ಯನಿಂದ ಬೋಧಿತನಾದ ಹಿಮವಂತನು ಸರ್ವಾಭರಣ ಭೂಷಿತೆಯಾದ ಬಂಗಾರದ ಕಳಶವನ್ನು ಹಿಡಿದುಕೊಂಡಿರುವ ಅರ್ಧಾಂಗಿಯಾದ ಮೇನೆಯೊಡನೆ ಕೂಡಿದವನಾಗಿ ಈಶ್ವರನನ್ನು ಕುರಿತು, 'ಎಲೈ ದೇವನೇ! ಇದಿಗೋ ಈಗಲೇ ಬ್ರಹ್ಮನಿಂದಲೂ, ವಿಷ್ಣುವಿನಿಂದಲೂ, ಪುರೋಹಿತನಾದ ಗರ್ಗಾಚಾರ್ಯನಿಂದಲೂ ಕೂಡಿ ಕನ್ಯಾದಾನವನ್ನು ಮಾಡುವೆನು' ಎಂದು ನುಡಿದು ಬ್ರಾಹ್ಮಣರನ್ನು ಕುರಿತು 'ಎಲೈ ಬ್ರಾಹ್ಮಣರಿರಾ! ಈ ಸಮಯದಲ್ಲಾಗ ಬೇಕಾದ ಪ್ರಯೋಗವನ್ನು ಹೇಳುವವರಾಗಿರಿ' ಎಂದನು. ಆಗ ಕಾಲ

ಜ್ಞಾನಿಗಳಾದ ಬ್ರಾಹ್ಮಣರೆಲ್ಲರೂ ಹಾಗೆಯೇ ಆಗಲೆಂದು ಪರಶಿವನನ್ನು ಕುರಿತು 'ಎಲೈ ಶಿವನೆ! ನಿನ್ನ ಗೋತ್ರವಾವುದು? ನಿನ್ನ ಕುಲವಾವುದು? ಅದನ್ನು ಹೇಳುವವನಾಗು' ಎಂದು ಕೇಳಿದರು. ಆಗ ಪರಶಿವನು ಸುಮುಖನಾದರೂ, ವಿಮುಖನಾದನು; ಅಶೋಚ್ಯನಾದರೂ ಶೋಚ್ಯನಾದನು. ಬಳಿಕ ದೇವತೆಗಳೂ, ಋಷಿಗಳೂ, ಗಂಧರ್ವ ಯಕ್ಷ ಸಿದ್ಧಗಣಗಳೂ ಶಂಭುವು ನಿರುತ್ತರನಾಗಿರುವುದನ್ನು ನೋಡಿದರು. ಆಗ ಬ್ರಹ್ಮಪುತ್ರನಾದ ನಾರದನು ಹಾಸ್ಯಮಾಡಿಕೊಂಡು ತನ್ನ ವೀಣೆಯನ್ನು ನುಡಿಸಲಾರಂಭಿಸಿ ಹಿಮವಂತನಿಂದ ನಿವಾರಿತನಾದನು. ಬಳಿಕ ನಾರದನು ಹಿಮವಂತನನ್ನು ಕುರಿತು ಹೇಳುತ್ತಾನೆ: 'ಅಯ್ಯಾ ಗಿರಿರಾಜನೆ! ನೀನು ಸಾಕ್ಷಾತ್ಪರಶಿವನ ಕುಲಗೋತ್ರಗಳನ್ನು ಕೇಳಿದೆಯಲ್ಲವೆ? ಕೇಳೈ ಗಿರಿಶ್ರೇಷ್ಠನೇ! ಈ ಪರಶಿವನ ಗೋತ್ರವೂ, ಕುಲವೂ ಈ ನಾದನೇ ಸರಿ. ಪರಶಿವನು ನಾದದಲ್ಲಿ ಪ್ರತಿಷ್ಠಿತನಾಗಿರುವನು. ಈ ನಾದವಾದರೋ ಈ ವೀಣೆಯಲ್ಲಿ ಪ್ರತಿಷ್ಠಿತವಾಗಿರುವುದು. ಆದುದರಿಂದ ಶಂಭುವು ನಾದಮಯನು. ನಾದದಿಂದಲೇ ದೊರಕುವನು. ಆದುದರಿಂದಲೇ ನಾನೀಗ ವೀಣೆಯನ್ನು ನುಡಿಸುತ್ತಲಿರುವುದು. ಎಲೈ ಹಿಮವಂತನೆ! ಈ ಪರಶಿವನ ಕುಲಗೋತ್ರಗಳನ್ನು ಬ್ರಹ್ಮಾದಿ ದೇವತೆಗಳೂ ತಿಳಿದಿಲ್ಲವು; ಎಂದಮೇಲೆ ಇತರರ ಪಾಡೇನು? ನೀನಾದರೋ ಕೇವಲ ಮೌಢ್ಯತೆಯಿಂದ ಪರಶಿವನನ್ನು ತಿಳಿದಿಲ್ಲವು; ಪರಶಿವನಲ್ಲಿ ಇದು ಹೇಳತಕ್ಕ ಮಾತು, ಇದು ಆಡತಕ್ಕ ಮಾತಲ್ಲವೆಂಬುದನ್ನು ನೀನರಿಯೆ. ಯಾವ ಯಾವ ಆಗಮಿಕರಿರುವರೋ ಅವರೆಲ್ಲರೂ ನಾಶವಾದರೆಂಬುದರಲ್ಲಿ ಸಂಶಯವಿಲ್ಲವು. ಅಯ್ಯಾ ಗಿರಿರಾಜನೇ! ಈ ಪರಶಿವನು ರೂಪವರ್ಜಿತನು; ಇದರಲ್ಲಿ ಸಂಶಯವಿಲ್ಲವು. ಆದುದರಿಂದ ಈ ವಿಷಯದಲ್ಲಿ ವಿಮರ್ಶೆ ಮಾಡಬಾರದು. ಈ ಋಷಿಗಳೆಲ್ಲರೂ ಅಜ್ಞಾನದಿಂದ ಮೋಹಿತರಾಗಿರುವರು. ಅಯ್ಯಾ ಗಿರಿಯೇ! ಬ್ರಹ್ಮನೂ ಈ ಪರಶಿವನ ಮಸ್ತಕವನ್ನರಿಯನು. ವಿಷ್ಣುವು ಪಾತಾಳಕ್ಕೆ ಹೋದನು. ಅವನೂ ಈ ಅರೂಪನಾದ ಪರಶಿವಲಿಂಗದ ಆದಿಯನ್ನು ಕಾಣದೇ

ಹೋದನು. ಅಯ್ಯಾ ಹಿಮವಂತನೇ ! ಈ ಪರಶಿವ ಲಿಂಗದಿಂದ ಅಖಿಲವಾದ ಜಗತ್ರಯಗಳೂ ವ್ಯಾಪಿಸಲ್ಪಟ್ಟಿವೆಯೆಂದರಿಯುವವನಾಗು, ನಿನ್ನ ಮಗಳಾದ ಈ ಗಿರಿಜೆಯಿಂದ ಪರಶಿವನು ಪೂಜಿತನಾದುದು ಹೇಗೆಂಬುದನ್ನೂ ನೀನರಿಯೆ. ಕೇಳು; ಈ ಪಾರ್ವತೀಪರಮೇಶ್ವರರಿಂದಲೇ ಪ್ರಪಂಚವು ಸೃಷ್ಟನೆಯಾಗುವುದು. ಇವರಿಂದಲೇ ಸೃಷ್ಟನೆಯಾದ ಪ್ರಪಂಚವು ಪ್ರತಿಷ್ಠಿತವಾಗುವುದು.

ಎಂಬೀಪ್ರಕಾರವಾಗಿ ಹೇಳಿದ ದೇವಮುನಿಯಾದ, ನಾರದನ ಮಾತುಗಳನ್ನು ಕೇಳಿ ಇಂದ್ರನೇ ಮೊದಲಾದ ದೇವತೆಗಳೂ, ಹಿಮವಂತನೇ ಮೊದಲಾದ ಪರ್ವತರಾಜರೂ, ಆಶ್ಚರ್ಯ ಹೊಂದಿ 'ಸಾಧು ಸಾಧು' ಎಂದರು. ಪರಶಿವನ ಗಾಂಭೀರ್ಯವನ್ನೂ ಸಕಲರೂ ಆಶ್ಚರ್ಯದಿಂದೊಬ್ಬರಿಗೊಬ್ಬರು ನುಡಿದರು. ಆ ಬಳಿಕ ಮೇರುವೇ ಮೊದಲಾದ ಪರ್ವತಶ್ರೇಷ್ಠರೆಲ್ಲರೂ ಸಂಭ್ರಮಯುಕ್ತರಾಗಿ ಹಿಮವಂತನನ್ನು ಕುರಿತು 'ಎಲೈ ಗಿರಿರಾಜನೆ ! ಈ ಶಂಭುವು ನಿನಗೆ ಅಳಿಯನಾಗಿ ದೊರೆತುದು ನಿನ್ನ ಭಾಗ್ಯೋದಯವೇ ಸರಿ. ನೀನೀಗ ಸ್ವಲ್ಪವೂ ವಿಮರ್ಶೆಮಾಡದೆ ನಿನ್ನ ಮಗಳಾದ ಪಾರ್ವತಿಯನ್ನು ಪರಮಶೋಭನನಾದ, ಜಗದೇಕ ಬಂಧುವಾದ ಪರಶಿವನಿಗೆ ಕೊಟ್ಟು ವಿವಾಹಮಾಡುವವನಾಗು' ಎಂದರು. ಆಗ ಬ್ರಹ್ಮನು ಈಶ್ವರನ ಮಹಿಮೆಯನ್ನು ಬಣ್ಣಿಸಿದನು. ಬಳಿಕ ಗಿರಿರಾಜನು ಮನಸ್ಥೈರ್ಯವಾಗಿ ಸಂಕಲ್ಪ ಮಾಡಿಕೊಂಡು ಪರಶಿವನನ್ನು ಕುರಿತು 'ಎಲೈ ಪರಮೇಶ್ವರನೇ ನನ್ನ ಮಗಳಾದ ಈ ಪಾರ್ವತಿಯನ್ನು ನಿನಗೆ ಕನ್ಯಾದಾನ ಮಾಡುವೆನು. ಈಕೆಯನ್ನು ನೀನು ಭಾರ್ಯಾರ್ಥವಾಗಿ ಸ್ವೀಕರಿಸುವವನಾಗು' ಎಂದನು. ಇಂತು ಪಾರ್ವತೀ ಪರಮೇಶ್ವರರು ವಿವಾಹಿತರಾಗಿ ಬೆಳಗಿದರು. ಹಿಮವಂತನು ಸಾಕ್ಷಾತ್ ಶಂಭುವಿಗೆ ತನ್ನ ಮಗಳಾದ ಗಿರಿಜೆಯನ್ನು ಕೊಟ್ಟು ವಿವಾಹಮಾಡಿ ಕೃತಾರ್ಥನಾದನು.

# ಅಧ್ಯಾಯ ೨೬

## ವೈವಾಹಿಕಕರ್ಮವಿಸ್ತಾರ.

ಸೂತನು ಹೇಳುತ್ತಾನೆ :— ಕೇಳಿರೈ ಋಷಿಗಳಿರಾ! ಇಂತು ಗಿರಿರಾಜನಿಂದ ಕನ್ಯಾದಾನವಾದ ಬಳಿಕ ವಿವಾಹ ಪುರೋಹಿತನಾದ ಗರ್ಗಾಚಾರ್ಯನು ಪಾರ್ವತೀ ಪರಮೇಶ್ವರರನ್ನು ವೇದಿಕೆಯಿಂದ ಕರೆದುಕೊಂಡು ಬಂದು, ಬಹಿರ್ವೇದಿಯಲ್ಲಿ ಕುಳ್ಳಿರಿಸಿದನು. ಆಗ ಕಶ್ಯಪನು ಹವನ ಹೋಮಾದಿಗಳನ್ನು ಮಾಡಿಸಲು, ಅಗ್ನಿಯನ್ನು ಕರೆದನು. ಬ್ರಹ್ಮನು ಶಿವ ಸನ್ನಿಧಿಯಲ್ಲಿ, ಬ್ರಹ್ಮಾಸನದಲ್ಲಿ ಕುಳಿತುಕೊಂಡನು. ಹೀಗೆ ಹವನ, ಹೋಮಾದಿಗಳು ನಡೆಯುತ್ತಿರಲು ತತ್ವಜ್ಞಾನ ಹೀನರೂ ವೇದವಾದರತರೂ, ಆದ ಋಷಿಗಳೆಲ್ಲರೂ ತಮ್ಮ ತಮ್ಮ ಮತಾನುಸಾರವಾಗಿ 'ಇದು ಹೀಗೆಯೇ? ಅಲ್ಲ; ಎಂದಿಗೂ ಅಲ್ಲ ಅದು ಹೀಗೆಯೇ; ಹೀಗೆಯೇ ಹೊರ್ತು ಮತ್ತೆ ಬೇರೆಯಲ್ಲವು; ಇದನ್ನು ಮಾಡಲೇ ಬೇಕು; ಅದನ್ನು ಮಾಡಲೇಬಾರದು' ಎಂಬೀ ಪ್ರಕಾರವಾಗಿ ಹವನ ಹೋಮದ ವಿಚಾರವಾಗಿ ಚರ್ಚಿಸುತ್ತಿದ್ದರು. ಈಪ್ರಕಾರವಾಗಿ ಸಕಲ ಋಷಿಗಳೂ ತತ್ವಹೀನರಾಗಿ ಒಬ್ಬರನ್ನೊಬ್ಬರು ಗೆಲ್ಲಬೇಕೆಂಬದಾಗಿ ವಾದಿಸುತ್ತಿರುವುದನ್ನು ಕೇಳಿ ದೇವ ಮುನಿಯಾದ ನಾರದನು, ಆ ಪರಶಿವ ಸನ್ನಿಧಿಯಲ್ಲಿ ಆ ಋಷಿಗಳನ್ನು ಕುರಿತಿಂತೆಂದನು. 'ಎಲೈ ಋಷಿಗಳಿರಾ! ವೇದವಾದಗಳನ್ನು ಮಾಡುವುದರಲ್ಲಿ ಕುತೂಹಲರಾದ, ನೀವೆಲ್ಲನೂ, ವಾದಿಸುವುದನ್ನು ತ್ಯಜಿಸಿ, ಆತ್ಮನಾಗಿಯೂ, ಪರಮಾತ್ಮನಾಗಿಯೂ, ಪರಾತ್ಪರನಾಗಿಯೂ, ಯಾವನಿಂದ ಈ ಪ್ರಪಂಚವು ಸೃಷ್ಟಿಸಲ್ಪಟ್ಟಿತೋ, ಮತ್ತಾವನಿಂದ ಸೃಷ್ಟಿಸಲ್ಪಟ್ಟ ಪ್ರಪಂಚವು ರಕ್ಷಿಸಲ್ಪಡುತ್ತದೆಯೋ, ಇನ್ನಾವನಿಂದ ರಕ್ಷಿಸಲ್ಪಟ್ಟ ಸಮಸ್ತ ಪ್ರಪಂಚವು ಲಯಮಾಡಲ್ಪಡುತ್ತದೆಯೋ ಆ ಸದಾಶಿವ ಮೂರ್ತಿಯನ್ನು ನಮಸ್ಕರಿಸಿ ನಿಮ್ಮ ಹೃದಯಗಳಲ್ಲಿ ನಿಲ್ಲಿಸಿ,

ಮೌನವಾಗಿರುವವರಾಗಿರಿ. ಆ ಪರಶಿವನು ಈ ಹಿಮವಂತನ ಮನೆಯಲ್ಲಿಯೇ ಇರುವನು. ಈ ಶಂಕರನ ಮುಖದಿಂದಲೇ ನೀವುಗಳೆಲ್ಲರೂ ಹುಟ್ಟಿರುವಿರಿ' ಎಂದನು. ಆಗ ಋಷಿಗಳೆಲ್ಲರೂ ನಾರದನ ಉಪದೇಶದಿಂದ ಮೌನವನ್ನಾಶ್ರಯಿಸಿದರು. ಯಜ್ಞನವಾರಂಭವು ನಡಿಯುತ್ತಿರಲು ಶಿವಸನ್ನಿಧಿಯಲ್ಲಿಯೇ ಕುಳಿತಿದ್ದ ಬ್ರಹ್ಮನು ಪರಶಿವನ ಸತಿಯಾದ ಪಾರ್ವತಿಯ ಪಾದ ಕಮಲಗಳ ನಖ ಚಂದ್ರನನ್ನು ನೋಡಿ, ಮದನ ಬಾಣಸಂತಪ್ತನಾದನು. ಆಗ ಅವನಿಗೆ ವೀರ್ಯಸ್ಖಲನವಾಯಿತು. ಇಂತು ವೀರ್ಯಸ್ಖಲನವಾಗಲು ಬ್ರಹ್ಮನು ಅತಿ ಲಜ್ಜಾನ್ವಿತನಾದನು. ಆ ಬಳಿಕ ದುರತಿಕ್ರಮವಾಗಿಯೂ, ಗುಪ್ತವಾಗಿಯೂ, ಇದ್ದ ಆ ವೀರ್ಯವನ್ನು ತನ್ನ ಕಾಲುಗಳಿಂದ ಮರ್ದನ ಮಾಡಿದನು. ಈ ಪ್ರಕಾರವಾಗಿ ಬ್ರಹ್ಮನು ತನ್ನ ವೀರ್ಯವನ್ನು ಮರ್ದನಮಾಡಿದೊಡನೆಯೇ ಸಾವಿರಾರು ವಾಲಿಖಿಲ್ಯರು ಉತ್ಪನ್ನರಾದರು. ಆಗ ಅವರೆಲ್ಲರೂ ಬ್ರಹ್ಮನನ್ನು 'ಅಪ್ಪಾ! ಅಪ್ಪಾ!' ಎಂದು ಕೂಗಲಾರಂಭಿಸಿದರು. ಆ ಬಳಿಕ ಮಹಾತ್ಮನಾದ ನಾರದನು ಅತಿ ಕೋಪಾವಿಷ್ಟನಾಗಿ ಆ ವಾಲಿಖಿಲ್ಯರನ್ನು ಕುರಿತು 'ಎಲೈ ವಟುಗಳಿರಾ! ತೆರಳಿರಿ, ತೆರಳಿರಿ, ನೀವಿಲ್ಲಿ ನಿಲ್ಲುವುದರಿಂದ ಏನು ಪ್ರಯೋಜನವು? ನೀವು ಈಗಲೇ ಗಂಧಮಾದನ ಪರ್ವತವನ್ನು ಕುರಿತು ಹೋಗುವವರಾಗಿ' ಎಂದನು. ಬಳಿಕ ವಾಲಿಖಿಲ್ಯರೆಲ್ಲರೂ ಗಂಧಮಾದನ ಪರ್ವತವನ್ನು ಕುರಿತು ಹೊರಟರು.

ಇತ್ತಲಾ ನಾರದನಾದರೋ ಅತಿ ಲಜ್ಜಾನ್ವಿತನಾದ ಬ್ರಹ್ಮನನ್ನು ಅನೇಕ ವಿಧವಾಗಿ ಸಮಾಧಾನಗೊಳಿಸಿದನು. ಎಲೈ ಋಷಿಗಳಿರಾ ! ಇಷ್ಟರಲ್ಲಿಯೇ ಮಹಾತ್ಮನಾದ ಪರಶಿವನ ಹವನಹೋಮಾದಿಗಳು ಮುಗಿದವು. ಬಳಿಕ ಲೋಕೈಕ ಶಂಕರನಾದ ಶಂಕರನು ಶಾಂತಿಪೀಠವನ್ನಲಂಕರಿಸಿದನು. ಆಗ ತ್ರಿಭುವನಗಳು ಮಹತ್ತರವಾದ ಬ್ರಹ್ಮಘೋಷದಿಂದ ವ್ಯಾಪಿಸಲ್ಪಟ್ಟವು. ಬಳಿಕ ದೇವಪತ್ನಿಯರೆಲ್ಲರೂ ಪರಶಿವನಿಗೆ ಆರತಿಯನ್ನೆತ್ತಿದರು. ಅನಂತರದಲ್ಲಿ ಋಷಿಪತ್ನಿ

ಯರೆಲ್ಲರೂ ಪರಶಿವನನ್ನರ್ಚಿಸಿ ಅತಿ ಸಂಭ್ರಮದಿಂದ ಆರತಿಯನ್ನೆತ್ತಿದರು. ಬಳಿಕ ಮನೋಹರವಾಗಿಯೂ ಮಂಗಳಕರರಾಗಿಯೂ, ಅನೇಕ ಗೀತಗಳನ್ನು ಹಾಡುವುದರಲ್ಲಿ ವಿಶಾರದರಾಗಿಯೂ ಇರುವ ಸ್ತ್ರೀಯರು, ಋಷಿಗಳ ಸ್ತುತಿಗಳಿಂದ ಕೂಡಿದವರಾಗಿ ಹಿಮವಂತನಿಗೆ ನೀರಾಜನವನ್ನೆತ್ತಿದರು. ಆಗ ಹಿಮವಂತನು ಸಂತುಷ್ಟನಾಗಿ ಅವರೆಲ್ಲರಿಗೂ ಮಹಾರ್ಹಗಳಾದ ರತ್ನಗಳನ್ನು ಕೊಟ್ಟು ಸಂತಸಗೊಳಿಸಿದನು. ಪರಶಿವನು ಸತಿಯಾದ ಗಿರಿಜೆಯೊಂದಿಗೆ ವಿವಾಹಪೀಠದಲ್ಲಿ ಕುಳಿತು, ದೇವತೆಗಳಿಂದಲೂ, ಸಿದ್ಧಪಾರ್ಷದಗಣಗಳಿಂದಲೂ ಕೂಡಿ ಜಗದೇಕ ಸುಂದರನಾಗಿ ಪ್ರಕಾಶಿಸಿದನು. ಈ ಮಧ್ಯದಲ್ಲಿ ಹಿಮವಂತನು, ವಿವಾಹಕ್ಕಾಗಿ ಬಂದಿದ್ದ ಬ್ರಹ್ಮ, ವಿಷ್ಣು, ಗಂಧರ್ವರೇ ಮೊದಲಾದ ದೇವತೆಗಳನ್ನೂ ಋಷಿಗಳನ್ನೂ ಪೂಜಿಸಿ, ಗಂಧ ತಾಂಬೂಲಗಳನ್ನು ಕೊಟ್ಟು ಅಮೋಘವಾದ ರತ್ನಗಳನ್ನೂ, ವಸ್ತ್ರಗಳನ್ನೂ ಕೊಟ್ಟನು. ಬಳಿಕ ದೇವತೆಗಳೆಲ್ಲರೂ ಅತಿ ಸಂತೋಷಗೊಂಡು ಶಿವನನ್ನು ಮುಂದು ಮಾಡಿಕೊಂಡು ಹೊರಟರು. ಬಳಿಕ ಅವರೆಲ್ಲರೂ ಸಜ್ಜಿತ್ತಿಯಾಗಿ ಕುಳಿತುಕೊಂಡು, ಶೃಂಗಿಯಿಂದಲೂ, ಲಿಂಗಿಯಿಂದಲೂ ಕೂಡಿ ಊಟಮಾಡಿದನಂತರದಲ್ಲಿ ಹಿಂದೆ ಬೇರೆಬೇರೆಯಾಗಿದ್ದ ಶಿವಗಣಗಳೂ, ನಾರದಾದಿಗಳೂ, ಪ್ರಭುವಾದ ಶಂಕರನನ್ನು ಅನೇಕವಿಧಗಳಾದ ಹಾಸ್ಯಗಳಿಂದ ಸಂತೋಷಪಡಿಸಿದರು. ಹಾಗೆಯೇ ಚಂಡಿಯೇ ಮೊದಲಾದ ಗಣಗಳು, ಕೃತಭಾಜನಗಳಾಗಿ ತಮ್ಮ ಪುಣ್ಯವಿಶೇಷದಿಂದ ಊಟಮಾಡಿದವು. ಅನಂತರದಲ್ಲಿ, ವೈತಾಳಿಕರೂ, ಕ್ಷೇತ್ರಪಾಲಕರೂ, ಶಾಕಿನೀ, ಢಾಕಿನೀ, ಯಕ್ಷಿಣೀ, ಮತ್ತು ಮಾತೃಕಗಳೇ ಮೊದಲಾದವರೂ, ಸಂತೋಷವಾಗಿ ಊಟಮಾಡಿದರು. ಇಷ್ಟೇ ಅಲ್ಲದೆ ನಾಲ್ವತ್ತೆಂಟು ಯೋಗಿನೀ ಚಕ್ರಗಳೂ, ಹತ್ತುಕೋಟಿ ಶಿವಗಣಗಳೂ, ಒಂದುಕೋಟಿ ಯೋಗಿಗಳೂ, ಋಷಿಗಳೂ, ದೇವತೆಗಳೂ ತೃಪ್ತಿಯಾಗಿ ಊಟಮಾಡಿದರು. ಅಯ್ಯಾ ಋಷಿಗಳಿರಾ! ನಾನು ಹಿಂದೆ ಯೋಗಿನಿಗಳ ವಿಷಯವನ್ನು ಹೇಳಿದ್ದೆನಷ್ಟೆ! ಈಗ ಅವರ ಭಕ್ಷ್ಯವನ್ನು ಹೇಳುವೆನು ಕೇಳಿರಿ! ಈ ಯೋಗಿನೀ ಚಕ್ರಗಳಲ್ಲಿ

ಕೆಲ ಯೋಗಿನಿಗಳು ಗೇಂಡಾಮೃಗಗಳನ್ನು ತಂದು, ಪವಿತ್ರವಾದ ಕ್ರವ್ಯವನ್ನು ಮಾಡಿ, ಅಸ್ಥಿಗಳಿಂದಲೂ, ನರಗಳಿಂದಲೂ, ಕೂಡಿದ ಆ ಕ್ರವ್ಯವನ್ನು ತಿನ್ನುತ್ತಲಿದ್ದರು. ಮತ್ತೆ ಕೆಲವರು ಕೊಬ್ಬಿದ ಕೋಣಗಳ ತಲೆಗಳನ್ನು ತೆಗೆದುಕೊಂಡು ಬಂದು ತಿನ್ನುತ್ತಲಿದ್ದರು. ಆಗ ಕೆಲವರು ಕುಣಿಯುತ್ತಲಿದ್ದರು. ಮತ್ತೆ ಕೆಲವರು ರುದ್ರರೂಪಿಗಳಾಗಿ ನೋಡುತ್ತಾ ಸುಮ್ಮನೇ ಕುಳಿತಿದ್ದರು. ಯೋಗಿನೀಚಕ್ರ ಮಧ್ಯಸ್ಥನಾದ ಮಹಾ ಭೈರವನೂ ಕುಣಿಯುತ್ತಲಿದ್ದನು. ಇನ್ನು ಕೆಲವು ಭೂತಪ್ರೇತಗಳು ತಮಗಾಹಾರವನ್ನು ಕೊಡದಿರುವುದರಿಂದ ನಮಗೆ, ತಮಗೆಂದು ಪ್ರಲಾಪಿಸುತ್ತಿದ್ದವು. ಈ ಪ್ರಕಾರವಾದ ಪ್ರಮಥಗಣಗಳ ಉತ್ಸವವನ್ನು ಕಂಡ ಮಹಾ ವಿಷ್ಣುವು ಲೋಕೈಕ ಶಂಕರನಾದ ಪರಶಿವನನ್ನು ಕುರಿತು 'ಎಲೈ ಶಂಭುವೆ! ಈಗ ಅತಿ ಮತ್ತರಾದೀ ಪ್ರಮಥ ಗಣಗಳನ್ನು ನಿವಾರಿಸುವವನಾಗು. ಎಲೈ ಶಂಕರನೇ! ಈ ಸಮಯದಲ್ಲಿ ಯಥೋಚಿತವಾದ ಕಾರ್ಯಗಳನ್ನು ತಮ್ಮ ಪಾಂಡಿತ್ಯದಿಂದ ಮಾಡಲೇಬೇಕು. ಆದುದರಿಂದೆಲೈ ದೇವಾ! ಈ ಗಣಗಳನ್ನು ನಿವಾರಿಸುವವನಾಗು' ಎಂದು ನುಡಿದನು. ಮಧುಸೂದನನ ಮಾತುಗಳನ್ನು ಕೇಳಿದ ಮಹಾದೇವನು ವೀರಭದ್ರನನ್ನು ಕುರಿತು 'ಎಲೈ ವೀರಭದ್ರನೇ ಪ್ರಮತ್ತರಾಗಿರುವ ಈ ಪ್ರಮಥರನ್ನು ನಿವಾರಿಸುವವನಾಗು' ಎಂದಾಜ್ಞಾಪಿಸಿದನು. ಪರಶಿವನ ಮಾತುಗಳನ್ನು ಕೇಳಿ ವೀರಭದ್ರನು ಪ್ರಮತ್ತರಾಗಿರುವ ಪ್ರಮಥಗಣಗಳನ್ನು ನಿವಾರಿಸಿದನು. ಆ ಬಳಿಕ ವೀರಭದ್ರನಿಂದ ನಿವಾರಿಸಲ್ಪಟ್ಟ ಪ್ರಮಥರೆಲ್ಲರೂ ಸುಮ್ಮನಾದರು. ಯೋಗಿನೀಮಧ್ಯದಲ್ಲಿಯಾದರೋ ಭೂತಪ್ರೇತ ಪ್ರಮಥಗುಹ್ಯಕರು ಶಾಕಿನೀಢಾಕಿನಿಗಳೂ ರಾಕ್ಷಸರೂ ಕರ್ಪಟರೂ ಇನ್ನೂ ಅನೇಕ ಪ್ರಮತ್ತರೆಲ್ಲರೂ ಶಾಂತರಾದರು. ಅಯ್ಯ ಋಷಿಗಳಿರಾ! ಈ ಪ್ರಕಾರವಾಗಿ ಹಿಮವಂತನು ಅತಿ ವಿಸ್ತಾರವಾಗಿ ಗಿರಿಜಾಕಲ್ಯಾಣವನ್ನು ಮಾಡಿದನು. ಇಂತು ಹಿಮಾದ್ರಿಯಿಂದ ಪರಶಿವನ ಪರಮ ಮಂಗಳಕರವಾಗಿಯೂ ಶುಶೋಭನವಾಗಿಯೂ ಇರುವ ವಿವಾಹ ಮಹೋತ್ಸವವು, ನಾಲ್ಕುದಿನಗಳಲ್ಲಿ

ಪರಿಪೂರ್ಣವಾಗಿ ಮಾಡಲ್ಪಟ್ಟಿತು. ಆಬಳಿಕ ಗಿರಿರಾಜನು ಪರಶಿವ ನನ್ನು ವಸ್ತ್ರಾಭರಣಗಳಿಂದಲೂ ರತ್ನಗಳಿಂದಲೂ ಸ್ತೋತ್ರಗಳಿಂದಲೂ ಪೂಜಿಸಿದನು. ಬಳಿಕ, ಮಹಾ ವಿಷ್ಣುವನ್ನು ಲಕ್ಷ್ಮೀ ಸಮೇತನ ನ್ನಾಗಿ ಅನೇಕರತ್ನಾಭರಣಗಳಿಂದಲೂ ವಸ್ತ್ರಗಂಳಿದಲೂ ಪೂಜಿಸಿದನು. ಹೀಗೆಯೇ ಬ್ರಹ್ಮನನ್ನೂ ಸತ್ಕರಿಸಿದನು. ಅನಂತರದಲ್ಲಿ ಬೃಹಸ್ಪತಿ ಯಿಂದ ಸಮೇತನಾದ ಇಂದ್ರನನ್ನು ಶಚೀದೇವಿಯೊಂದಿಗೆ ಸತ್ಕರಿಸಿ ದನು. ಆ ಬಳಿಕ ಪ್ರತಿಯೊಬ್ಬ ಅಷ್ಟದಿಕ್ಪಾಲಕನನ್ನೂ ಬೇರೆಬೇರೆ ಯಾಗಿ ಸತ್ಕರಿಸಿದನು.

# ಅಧ್ಯಾಯ ೨೭

## ಷಣ್ಮುಖ ಜನನ

ಸೂತನು ಹೇಳುತ್ತಾನೆ:—ಕೇಳಿರೈ! ಆ ಬಳಿಕ ವಿಷ್ಣುವೂ, ಸಹ್ಯಾಚಲ, ವಿಂಧ್ಯಾಚಲ, ಮೈನಾಕ, ಗಂಧಮಾದನ, ಮಾಲ್ಯವಂತ ಮಲಯಮಹೇಂದ್ರ ಮಂದರ, ಮೇರು ಪರ್ವತಗಳನ್ನು ಯಥೋಚಿ ತವಾಗಿ ಸತ್ಕರಿಸಿದನು. ಆಗ ಶ್ವೇತ ಪರ್ವತವು, ವಿಷ್ಣುವಿನಿಂದ, ಶ್ವೇತವಾಗಿಯೂ, ನೀಲಾದ್ರಿಯು ನೀಲವಾಗಿಯೂ ಮಾಡಲ್ಪಟ್ಟವು. ಅನಂತರದಲ್ಲಿ ಉದಯಾಚಲ ಅಸ್ತಾಚಲ, ಮಾನಸಾದ್ರಿ, ಸಾಕ್ಷಾತ್ಕೈ ಲಾಸಪರ್ವತವೂ ಮಹಾ ವಿಷ್ಣುವಿನಿಂದ ಸತ್ಕರಿಸಲ್ಪಟ್ಟವು. ಆಬಳಿಕ ಬ್ರಹ್ಮನೂ ವಿಷ್ಣುವೂ, ಸಕಲ ಪರ್ವತವಾಸಿಗಳನ್ನೂ ಸಕಲ ಪರ್ವತ ರಾಜರನ್ನೂ ಯಥೋಚಿತವಾಗಿ ಸತ್ಕಾರವಮಾಡಿದರು. ಮಾರನೆಯ ದಿನ ಮಹಾತ್ಮನಾದ ಹಿಮವಂತನು ಬಂಧುಗಳಿಂದ ಕೂಡಿ ಗಂಧಮಾ ದನಪರ್ವತನೊಡನೆ ಪರಶಿವನ ವರಯಾತ್ರಾ ಮಹೋತ್ಸವವನ್ನು

ಮಾಡಿದನು. ಆಗ ಸಕಲ ದೇವಗಣಗಳೂ, ಶಿವಗಣಗಳೂ, ಅನೇಕ ಪ್ರಮಥಗಣಗಳೂ, ಇನ್ನೂ ಅನೇಕರೆಲ್ಲರೂ ಹಿಮವತ್ಪರ್ವತಕ್ಕೆ ಬಂದವರಾದರು. ಅಯ್ಯಾ ಋಷಿಗಳಿರಾ! ಇವರು ಪರಶಿವನ ವಿವಾಹ ಮಹೋತ್ಸವವನ್ನು ಪರಮಮಂಗಳಕರವಾಗಿ ಮಾಡಿ ದಂಪತಿಗಳಾದ ಪಾರ್ವತೀಪರಮೇಶ್ವರರನ್ನು ಕಂಡು ಪರಮಾಹ್ಲಾದ ಭರಿತರಾದರು. ದಂಪತಿಗಳೂ ಪ್ರಕೃತಿ ಪುರುಷರೂ ಆದ ಪಾರ್ವತೀ ಪರಮೇಶ್ವರರು ಗಜಾರೂಢರಾಗಿ, ಪುಷ್ಪದೊಂದಿಗಿರುವ ಗಂಧದಂತೆಯೂ, ಮಾತಿನಲ್ಲಿರುವ ಅರ್ಥದಂತೆಯೂ, ಏಕಭಾವದಿಂದ ಮಹಾ ಪ್ರಭಾಶಾಲಿಗಳಾಗಿ ಶೋಭಿಸುತ್ತಿದ್ದರು. ಅನಂತರದಲ್ಲಿ ಬ್ರಹ್ಮನು ವಿಮಾನಾರೂಢನಾಗಿಯೂ, ವಿಷ್ಣುವು ಗರುಡ ವಾಹನನಾಗಿಯೂ, ವರುಣನು ಮಕರಾರೂಢನಾಗಿಯೂ, ನಿರ್‍ಋತಿಯು ಪ್ರೇತಾರೂಢನಾಗಿಯೂ, ಯಮನು ಮಹಿಷಾರೂಢನಾಗಿಯೂ ಅಗ್ನಿಯು ಮೇಷಾರೂಢನಾಗಿಯೂ, ವಾಯುದೇವನು ಮೃಗಾರೂಢನಾಗಿಯೂ, ಈಶಾನನನು ವೃಷಭಾರೂಢನಾಗಿಯೂ, ಇಂದ್ರನು ಗಜಾರೂಢನಾಗಿಯೂ ಹೀಗೆಯೇ ಸಕಲ ಲೋಕಪಾಲಕರೂ, ಗ್ರಹಗಳೂ, ತಮ್ಮ ತಮ್ಮ ವಾಹನಗಳಿಂದ ಕೂಡಿ ಇನ್ನೂ ಅನೇಕ ಪ್ರಮಥಾದಿಗಳೂ ಮತ್ತು ಮಹಾಶೈಲನಾದ ಹಿಮವಂತನೂ, ಋಷಭ ಗಂಧಮಾದನರೂ, ನೀಲ, ಮಂದರ, ಮಲಯಾಚಲಗಳೂ, ಕೈಲಾಸಪರ್ವತರೇ ಮೊದಲಾದ ಅನೇಕ ಶ್ರೀಮಂತರಾಗಿಯೂ, ಮಹಾತೇಜಸ್ವಿಗಳಾಗಿಯೂ ಇರುವ ಪರ್ವತರಾಜರೂ ತಮ್ಮತಮ್ಮ ಪತ್ನೀ ಪುತ್ರಾದಿಗಳಿಂದ ಕೂಡಿ ಶಿವನ ವರಯಾತ್ರಾ ಪ್ರಸಂಗದಿಂದ ಶಿವಾರ್ಚನೆಯನ್ನು ಗೈದವರಾದರು.

ಆಬಳಿಕ ಹಿಮವಂತನು ಬಂಧುಜನಗಳಿಂದೊಡಗೂಡಿ ಶಿವನ ವರಯಾತ್ರಾ ಮಹೋತ್ಸವವನ್ನು ಗೈದು, ಮರಳಿಯೂ ಪುನರಾಗಮನವನ್ನು ಮಾಡಿಸಿದನು. ಅನಂತರದಲ್ಲಿ ತನ್ನ ಮನೆಯನ್ನು ಸೇರಿ ಶಿವನ ಸಂಪರ್ಕದಿಂದುಂಟಾದ ಮಹತ್ತರವಾದ ತೇಜಸ್ಸಿನಿಂದ ಪ್ರಕಾ

ಶಿಸಿದನು. ಎಲೈ ಋಷಿಗಳಿರಾ ! ಕೇಳಿರಿ. ಆ ಹಿಮವಂತನು ಪರಶಿವನಿಗೆ ತನ್ನ ಮಗಳಾದ ಗಿರಿಜೆಯನ್ನು ಕೊಟ್ಟು ವಿವಾಹಮಾಡಿ ಸಂತೋಷಪಡಿಸಿದುದರಿಂದ ಮೂರು ಲೋಕಗಳಲ್ಲಿಯೂ ಪ್ರಸಿದ್ಧನಾದನು. ಯಾರು 'ಶಿವ' ಎಂಬೆರಡಕ್ಷರಗಳನ್ನು ಸದಾಕಾಲದಲ್ಲಿಯೂ, ಹೇಳುತ್ತಿರುವರೋ ಅವರೇ ಧನ್ಯರು. ಅಂತಹ ನರರು, ಈ ಪ್ರಪಂಚದಲ್ಲಿ ಮನುಷ್ಯರೂಪದಿಂದ ರುದ್ರರಾಗಿರುವುದರಲ್ಲಿ ಸಂಶಯವಿಲ್ಲವು. ಪರಶಿವನು ಸ್ವಲ್ಪದಲ್ಲಿಯೇ ತೃಪ್ತನಾಗುವನು. ಒಂದು ಬಿಲ್ವದಳದಿಂದಲೇ ಆಗಲಿ ಒಂದು ಪುಷ್ಪದಿಂದಲೇ ಆಗಲಿ, ಇಲ್ಲದಿದ್ದರೆ ಸ್ವಲ್ಪ ನೀರಿನಿಂದಲೇ ಆಗಲಿ ನರನು ಪರಶಿವನನ್ನರ್ಚಿಸಿದರೆ, ಪರಶಿವನು ನಿರಂತರವೂ ಸಂತುಷ್ಟನಾಗುವನು. ಆದುದರಿಂದೆಲೈ ಋಷಿಗಳಿರಾ ! ಇಂತಹ ಪರಶಿವನನ್ನು ನರರು ಪ್ರಯತ್ನಪೂರ್ವಕವಾಗಿ ಪೂಜಿಸಬೇಕು. ಆಬಳಿಕ ದೇವತೆಗಳೆಲ್ಲರೂ, ಏಕರೂಪನಾಗಿಯೂ, ಏಕ ಜ್ಯೋತಿಯಾಗಿಯೂ, ಪರಬ್ರಹ್ಮ ಸ್ವರೂಪನಾಗಿಯೂ, ಪರೇಶನಾಗಿಯೂ, ಮಹಾತ್ಮನಾಗಿಯೂ, ನಿತ್ಯನಾಗಿಯೂ, ವಿಕಾರ ಶೂನ್ಯನಾಗಿಯೂ, ಗಿರೀಶನಾಗಿಯೂ, ಬಾಧೆಯಿಂದ ರಹಿತನಾಗಿಯೂ, ನಿರ್ವಿಕಲ್ಪನಾಗಿಯೂ, ನಿರೀಹನಾಗಿಯೂ, ನಿರಂಜನನಾಗಿಯೂ, ನಿತ್ಯರೂಪನಾಗಿಯೂ, ನಿರೋಧನಾಗಿಯೂ, ನಿತ್ಯಾನಂದನಾಗಿಯೂ ನಿತ್ಯಮುಕ್ತನಾಗಿಯೂ, ಇರುವ ದೇವದೇವನಾದ, ವಿಶ್ವೇಶನಾದ, ವಿಶ್ವವೇತ್ತೃವಾದ, ಪರಮಪುರುಷನಾದ, ಪರಶಿವನನ್ನು ಮನದಲ್ಲಿ ಚಿಂತಿಸುತ್ತಾ, ಧ್ಯಾನಿಸುತ್ತಾ, ವಾಚಾಸ್ತೋತ್ರ ಮಾಡುತ್ತಾ ಪೂಜಿಸಿದರು. ಆಗ ಹಿಮವಂತನು ತನ್ನ ಸತಿಯಾದ ಮೇನೆಯೊಡನೆ ಸ್ವಗೃಹಕ್ಕೆ ಬಂದು ವಿವಾಹಕ್ಕೆ ಬಂದಿದ್ದ ಸಕಲರನ್ನೂ, ಸತ್ಕರಿಸಿ ಕಳುಹಿಸಿದನು. ಇಂತು ಗಿರಿಜಾಕಲ್ಯಾಣಕ್ಕೆ ಬಂದಿದ್ದವರೆಲ್ಲರೂ ತೆರಳಿದ ನಂತರ ಹಿಮವಂತನು ಲೋಕೈಕನಾಥನಾದ ಪರಶಿವನ ಪ್ರಸಾದದಿಂದ, ಪುತ್ರ, ಪೌತ್ರ, ಪ್ರಪೌತ್ರಾದಿಗಳನ್ನು ಪಡೆದನು. ಇತ್ತಲಾ ಪರಶಿವನಾದರೋ, ನಿಜಸತಿಯಾದ ಪಾರ್ವತಿಯೊಡನೆ, ಗಂಧಮಾದನ ಪರ್ವತದಲ್ಲಿ ರತಿಸುಖವನ್ನನುಭವಿಸಲಿಷ್ಟವುಳ್ಳವನಾದನು. ಆಬಳಿಕ

ಗಂಧಮಾದನ ಪರ್ವತದಲ್ಲಿ ಪರಶಿವ ಪಾರ್ವತಿಯರ ರತಿಕ್ರೀಡೆಯು ಉಪಕ್ರಮವಾಯಿತು. ಲೋಕಕ್ಕೆಲ್ಲಾ ಅನಿಷ್ಟವಾಗಿಯೂ, ಮಹದಾಶ್ಚರ್ಯವಾಗಿಯೂ, ಪ್ರಳಯೋಪಮವಾಗಿಯೂ, ಅತ್ಯುಗ್ರವಾಗಿಯೂ ಇರುವ ಪಾರ್ವತೀ ಪರಮೇಶ್ವರರ ಸುರತ ಸಮಾರಂಭವನ್ನು ನೋಡಿ ಬ್ರಹ್ಮನೇ ಮೊದಲಾದ ದೇವತೆಗಳೆಲ್ಲರೂ ಅತಿಚಿಂತಾನ್ವಿತರಾದರು. ಆಗ ಅವರೆಲ್ಲರೂ ಅತಿಚಿಂತಾಮಗ್ನರಾಗಿ ಯಾವ ಕಾರ್ಯವನ್ನು ಮಾಡಬೇಕೆಂಬುದನ್ನು ಯೋಚಿಸಿದರು. ಆಗಲಾ ಶಿವಪಾರ್ವತಿಯರ ಸುರತ ಸುಖದಿಂದುಂಟಾದ ರೇತಸ್ಸಿನಿಂದ ಚರಾಚರಾತ್ಮಕವಾದ ಪ್ರಪಂಚವೆಲ್ಲವೂ ನಾಶವಾಯಿತು. ಆ ಸಮಯದಲ್ಲಿ ಅಧ್ಯಾತ್ಮದಾಯಕನಾದ ವಿಷ್ಣುವೂ, ಬ್ರಹ್ಮನೂ, ಅಗ್ನಿದೇವನನ್ನು ಸ್ಮರಿಸಿದರು. ಇಂತಿವರು ಸ್ಮರಿಸಿದಮಾತ್ರವೇ ಅಗ್ನಿಯು ಬಂದನು. ಆ ಬಳಿಕ ಅಗ್ನಿಯು ವಿಷ್ಣು ಬ್ರಹ್ಮಾದಿಗಳಿಂದ ಪ್ರೇರಿತನಾಗಿ ಶಿವಮಂದಿರವನ್ನು ಕುರಿತು ಬಂದು ಬಾಗಿಲಲ್ಲಿ ನಿಂತಿದ್ದ ಮಹಾ ಪ್ರಭಾಶಾಲಿಯಾದ ನಂದಿಯನ್ನು ಕಂಡನು. ಆಗ ಅಗ್ನಿಯು ಹ್ರಸ್ವರೂಪವನ್ನು ತಾಳಿ, ನಾನಾಶ್ಚರ್ಯಗಳಿಂದ ಕೂಡಿದುದಾಗಿಯೂ, ಅನೇಕ ರತ್ನಗಳಿಂದ ಚಿತ್ರಿತವಾಗಿಯೂ, ಪ್ರಾಸಾದಗಳಿಂದಲಂಕೃತವಾಗಿಯೂ ಇರುವ ಪರಶಿವನಂತಃಪುರವನ್ನು ಹೊಂದಿ ಆ ಅಂತಃಪುರದ ಅಂಗಣದಲ್ಲಿ ಕುಳಿತುಕೊಂಡು 'ಎಲೌ ತಾಯೇ! ಈ ಪಾಣಿಪಾತ್ರನಿಗೆ ಭಿಕ್ಷೆಯನ್ನು ನೀಡುವವಳಾಗು' ಎಂದು ಕೂಗಿದನು. ಇಂತೆಂದು ನುಡಿದ ಪಾಣಿಪಾತ್ರರೂಪನಾದ ಅಗ್ನಿಯ ಮಾತುಗಳನ್ನು ಕೇಳಿ ಬಾಲಿಕೆಯಾದ ಗಿರಿಜೆಯು, ಅಗ್ನಿದೇವನಿಗೆ ತಾನಾಗಿಯೇ ಎದ್ದು ಸುರತಕ್ರೀಡೆಯನ್ನು ಬಿಟ್ಟು, ಭಿಕ್ಷೆಯನ್ನು ನೀಡಲು ಆರಂಭಿಸಿದೊಡನೆಯೇ ಪರಶಿವನು ಸುರತಕ್ರೀಡಾ ರಹಿತನಾಗಿ ಅತಿಯಾಗಿ ಕೋಪಗೊಂಡು ತನ್ನ ತ್ರಿಶೂಲವನ್ನು ಎತ್ತಿ ಕಾಲಭೈರವನಾಗಿ ಆ ಭಿಕ್ಷುಕರೂಪಿಯಾದ ಅಗ್ನಿಯನ್ನು ಸಂಹಾರಮಾಡಲಿಷ್ಟವುಳ್ಳವನಾಗಿ ಗಿರಿಜೆಯಿಂದ ತಡೆಯಲ್ಪಟ್ಟನು. ಆಬಳಿಕ ಗಿರಿಜೆಯು ತಾನಾಗಿಯೇ ಅಗ್ನಿದೇವನಿಗೆ, ಪಾಚಾಭಿಕ್ಷೆಯನ್ನು ನೀಡಿದಳು. ಆಗ ಅಗ್ನಿದೇವನು

ಕೈಯಲ್ಲಿ ಪಾತ್ರೆಯನ್ನು ಹಿಡಿದುಕೊಂಡು ಪರಶಿವನ ರೇತಸ್ಸನ್ನು ಕೇಳಿದನು. ಇಂತು ಶಿವನ ವೀರ್ಯವನ್ನು ಬೇಡುತ್ತಲಿರುವ ಅಗ್ನಿಯನ್ನು ನೋಡಿ ಗಿರಿಜೆಯು ಅತಿಯಾಗಿ ಕೋಪಗೊಂಡು 'ಎಲೆವೋ ಭಿಕ್ಷುಕನೇ! ಈಗ ನನ್ನ ಶಾಪದಿಂದ ನೀನು ಸರ್ವಭಕ್ಷಕನಾಗು. ಈಗಲಾದರೋ ನೀನು ಈ ರೇತಸ್ಸಿನಿಂದ ಎಲ್ಲೆಲ್ಲಿಯೂ ಪೀಡಿಸಲ್ಪಡುವೆ' ಎಂದು ಶಪಿಸಿದಳು. ಬಳಿಕ ಅಗ್ನಿಯು ಶಿವನ ವೀರ್ಯವನ್ನು ಪಾನಮಾಡಿ ಬ್ರಹ್ಮಾದಿ ದೇವತೆಗಳಿದ್ದ ಸ್ಥಳಕ್ಕೆ ಬಂದು, ತಾನು ವೀರ್ಯವನ್ನು ಪಾನಮಾಡಿದುದೆಲ್ಲವನ್ನೂ ಹೇಳಿದನು. ಆಗ ದೇವತೆಗಳು, ಅಗ್ನಿದೇವನ ಮುಖದಿಂದ ಎಲ್ಲರಲ್ಲೂ ಹವಿಸ್ಸು ಹೇಗೆ ಪ್ರತಿಷ್ಠಿತವಾಗುತ್ತದೆಯೋ, ಆರೀತಿಯಲ್ಲಿಯೇ ಅವನ ಮುಖದಿಂದ ಹೊರಟ ರೇತಸ್ಸಿನಿಂದ ಗರ್ಭವನ್ನು ತಾಳಿದರು. ಇಂತವರೆಲ್ಲರೂ ಶಿವನ ವೀರ್ಯದಿಂದ ಗರ್ಭವಂತರಾಗಿ, ಬಹಳವಾಗಿ ಚಿಂತಿಸುತ್ತಾ, ದೇವದೇವನಾದ ವಿಷ್ಣುವನ್ನು ಮೊರೆಹೊಕ್ಕು ಸ್ತುತಿಸಿದರಂದೆಂತೆನೆ: 'ಎಲೈ ಪ್ರಭುವಾದ ವಿಷ್ಣುವೇ! ನೀನೇ ಅಲ್ಲವೆ ಪ್ರಪಂಚವನ್ನು ಕಾಪಾಡುವವನು! ಆದುದರಿಂದ ಎಲೈ ದೇವಾ! ಶರಣಾಗತ ವತ್ಸಲನಾದ ನೀನು ನಮ್ಮನ್ನು ಕಾಪಾಡು! ಎಲೈ ದೇವಾ! ಇದಿಗೋ, ಈ ಶಿವನ ವೀರ್ಯದ ಬಾಧೆಯಿಂದಲೂ, ಅಸುರರಿಂದ ಪೀಡಿಸಲ್ಪಟ್ಟವರಾಗಿಯೂ, ಸಾಯುಲಿಷ್ಟವುಳ್ಳವರಾಗಿಯೂ ಇರುವೆವು. ಕಾಪಾಡು! ಕಾಪಾಡು!! ಎಲೈ ವಿಷ್ಣುವೇ! 'ಶಿವನಿಗೆ ಯಾವಾಗ ಕುಮಾರೋತ್ಪತ್ತಿ ಆಗುವುದೋ, ಆಗ ನಾವು ಈ ಸ್ವರ್ಗದಲ್ಲಿ ಸುಖವಾಗಿರುವೆವು!' ಈ ಪ್ರಕಾರವಾಗಿ ಯೋಚಿಸುತ್ತಲಿದ್ದ ನಮಗೆ ಈ ವಿಧವಾದ ಪರಶಿವನ ರೇತಸ್ಸಿನಿಂದ ಭಯವುಂಟಾಯಿತು! ಆದುದರಿಂದ ಎಲೈ ದೇವಾ! ಕಾಪಾಡು' ಎಂಬೀ ಪ್ರಕಾರವಾಗಿ ಅಳುತ್ತಲಿರುವ ದೇವತೆಗಳನ್ನು ಕುರಿತು ಮಹಾವಿಷ್ಣುವು 'ಎಲೈ ದೇವತೆಗಳಿರಾ! ಪರಶಿವನನ್ನು ಸ್ತೋತ್ರಮಾಡಿರಿ' ಎಂದನು.

ಈ ಪ್ರಕಾರವಾಗಿ ನುಡಿದ ಮಹಾವಿಷ್ಣುವಿನ ಮಾತುಗಳನ್ನು ಕೇಳಿ ಇಂದ್ರನೇ ಮೊದಲಾದ ದೇವತೆಗಳೂ, ಬ್ರಹ್ಮಾದಿಗಳೂ, ಋಷಿ

ಗಣಗಳೂ ಹಾಗೆಯೇ ಆಗಲೆಂದುಕೊಂಡು ದೇವದೇವನಾದ ಪರಶಿವ ಮೂರ್ತಿಯನ್ನು ಸ್ತುತಿಸಿದರದೆಂತೆನೆ: 'ಎಲೈ ಪರಶಿವನೆ ಭರ್ಗನಾಗಿಯೂ, ನೀಲಕಂಠನಾಗಿಯೂ, ಮುಕ್ಕಣ್ಣನಾಗಿಯೂ, ಋಗ್ಯಜುಸ್ಸಾಮ ವೇದರೂಪನಾಗಿಯೂ, ತ್ರಿಲೋಕಗಳನ್ನು ಧರಿಸಿಕೊಂಡಿರುವವನಾಗಿಯೂ ಇರುವ ಜಗದೇಕ ಬಂಧುವಾದ ನಿನಗೆ ನಮಸ್ಕಾರವು! ಎಲೈ ಸ್ವಾಮಿಯೇ! ತ್ರಿಸ್ವರನಾಗಿಯೂ, ತ್ರಿಮಾತ್ರನಾಗಿಯೂ, ಬ್ರಹ್ಮಾವಿಷ್ಣುಮಹೇಶಾತ್ಮಕನಾಗಿಯೂ, ತ್ರಿವರ್ಗನಾಗಿಯೂ, ತ್ರಿಧಾಮನಾಗಿಯೂ, ತ್ರಿಶೂಲಿಯಾಗಿಯೂ, ಪ್ರಪಂಚಕ್ಕೆಲ್ಲ ಒಡೆಯನಾಗಿಯೂ ಇರುವ, ನಿನಗೆ ಅನಂತ ನಮಸ್ಕಾರಗಳು! ಎಲೈ ದೇವಾ! ಈ ನಿನ್ನ ರೇತಸ್ಸಿನಿಂದ ಪೀಡಿಸಲ್ಪಟ್ಟ ನಮ್ಮನ್ನು ಕಾಪಾಡು' ಎಂಬದಾಗಿ ದೇವತೆಗಳೆಲ್ಲರೂ ಸ್ತುತಿಸಿದರು. ಆಗ ಲೋಕೈಕನಾಥನಾದ ವೃಷಭಧ್ವಜನಾದ ಪರಶಿವನು ದೇವತೆಗಳ ಕಾರ್ಯಸಿದ್ಧಿಗಾಗಿ ಅವತರಿಸಿದನು. ಆಗ ದೇವತೆಗಳೂ, ಋಷಿಗಳೂ, ಜಗದೇಕ ಬಂಧುವಾದ ಪರಮೇಶ್ವರನನ್ನು ನೋಡಿ, ಶ್ರುತಿಸಮ್ಮತಗಳಾದ ಅನೇಕ ವಚನಗಳಿಂದಲೂ, ಅನೇಕ ಸ್ತೋತ್ರಗಳಿಂದಲೂ, ಸ್ತುತಿಸಿದರು. ಆ ಬಳಿಕ ಮಹಾ ದಯಾಶಾಲಿಯಾದ ಪರಮೇಶ್ವರನು ಸ್ತುತಿಸುತ್ತಲಿರುವ ದೇವತೆಗಳನ್ನು ಕಂಡು, 'ಎಲೈ ದೇವತೆಗಳಿರಾ! ಈ ರೇತಸ್ಸಿನಿಂದ ಪೀಡಿಸಲ್ಪಟ್ಟು ಭಯಪಡಬೇಡಿರಿ. ನೀವೆಲ್ಲರೂ ಈಗಲೇ ವಮನ ಮಾಡಿರಿ' ಎಂದನು. ಈಶ್ವರನ ಮಾತುಗಳನ್ನು ಕೇಳಿ, ದೇವತೆಗಳೆಲ್ಲರೂ ಹಾಗೆಯೇ ಆಗಲೆಂದು ಒಪ್ಪಿಕೊಂಡು ಎಲ್ಲರೂ ಒಂದೇ ಸಲ ಆ ಪರಶಿವನ ಅತ್ಯುಗ್ರವಾದ ರೇತಸ್ಸನ್ನು ವಮನಮಾಡಿದರು. ಎಲೈ ಋಷಿಗಳಿರಾ! ಇಂತು ದೇವತೆಗಳೆಲ್ಲರೂ ಆ ಪರಶಿವನ ರೇತಸ್ಸನ್ನು ವಮನಮಾಡಿದೊಡನೆಯೇ ಅದು ಮಹಾ ಪರ್ವತದಂತೆ ಪರಿಣಮಿಸಿ ಪರಮಾದ್ಭುತವಾಯಿತು. ಆಗ ದೇವತೆಗಳೆಲ್ಲರೂ ಪರಮ ಸುಖಿಗಳಾಗಿ ಸಂತೋಷವನ್ನು ಹೊಂದಿದರು. ಅಗ್ನಿದೇವನು ಮಾತ್ರ ಆ ಪರಶಿವನ ವೀರ್ಯದಿಂದ ಪೀಡಿತನಾಗಿದ್ದನು. ಆ ಬಳಿಕ ಅಗ್ನಿಯೂ ಲೋಕೈಕ ಶಂಕರನಾದ, ಪರಶಿವನನ್ನು ಕುರಿತು,

'ಎಲೈ ದೇವಾ! ನಾನು ಈಗೇನು ಮಾಡಲಿ? ಯಾವುದರಿಂದ ನಾನು ಸುಖಿಯಾಗುವೆನೋ, ಮತ್ತ್ಯಾವುದರಿಂದ ಈ ದೇವತೆಗಳೆಲ್ಲರಿಗೂ ಹವಿರ್ಭಾಗವನ್ನೀಯಲು ಅರ್ಹನಾಗುವೆನೋ ಅದನ್ನು ಹೇಳುವವನಾಗು' ಎಂದು ಕೇಳಿದನು. ಈ ಪ್ರಕಾರವಾಗಿ ಕೇಳಿದ ಅಗ್ನಿಯನ್ನು ಕುರಿತು, ಮಹಾದೇವನು ದೇವತೆಗಳೆಲ್ಲರಿಗೂ ಕೇಳಿಸುವಂತೆ 'ಎಲೈ ಅಗ್ನಿಯೇ! ನೀನು ಈ ರೇತಸ್ಸನ್ನು ಯೋನಿಯಲ್ಲಿ ಬಿಡುವವನಾಗು' ಎಂದನು. ಆಗ ಅಗ್ನಿಯು ನಸುನಗುತ್ತಾ, 'ಎಲೈ ಸ್ವಾಮಿಯೇ! ಇದು ನಿನ್ನ ಸಂಬಂಧವಾದ ರೇತಸ್ಸು. ಅತ್ಯುಗ್ರವಾದುದು. ಈ ರೇತಸ್ಸನ್ನು ಪ್ರಾಕೃತರಾದ ದೇಹಿಗಳು ಧರಿಸಲು ಹೇಗೆ ಸಾಧ್ಯವಾದೀತು?' ಎಂದು ಕೇಳಿದನು. ಬಳಿಕ ಪರಶಿವನು ಅಗ್ನಿಯನ್ನು ಕುರಿತು, ಎಲೈ ಅಗ್ನಿಯೇ! ಪ್ರತಿ ಮಾಸದಲ್ಲಿಯೂ ಪ್ರತಪ್ತರಾಗುವ ದೇಹಿಗಳಲ್ಲಿ ಈ ರೇತಸ್ಸನ್ನು ಬಿಡುವವನಾಗು' ಎಂದನು. ಆಗ ಅಗ್ನಿಯು ಹಾಗೆಯೇ ಆಗಲೆಂದು ಹೇಳಿ ಬ್ರಹ್ಮಮುಹೂರ್ತದಲ್ಲಿ ನದಿಯ ಬಳಿ ಕುಳಿತನು. ಬಳಿಕ ಪ್ರಾತಃಕಾಲದಲ್ಲಿ ಸ್ನಾನಾರ್ಥವಾಗಿ ಬರುತ್ತಲಿರುವ ಋಷಿಪತ್ನಿಯರು ಅಗ್ನಿಯಲ್ಲಿಗೆ ಬಂದರು. ಇಂತು ಬಂದ ಋಷಿಪತ್ನಿಯರೆಲ್ಲರೂ ಛಳಿಯಿಂದ ಬಾಧಿತರಾಗಿ, ಪ್ರಕಾಶಮಾನವಾಗಿ ಉರಿಯುತ್ತಲಿದ್ದ ಅಗ್ನಿಯಲ್ಲಿ ಕಾಸಿಕೊಳ್ಳಲು ಇಷ್ಟವುಳ್ಳವರಾದರು. ಆಗಲಾ ವಶಿಷ್ಟ ಪತ್ನಿಯಾದ ಅರುಂಧತಿಯು ತಡೆದರೂ ಕೃತ್ತಿಕೆಯರು ಅಗ್ನಿಯಲ್ಲಿ ಕಾಸಿಕೊಂಡರು. ಹೀಗೆ ಕಾಸಿಕೊಂಡೊಡನೆಯೇ ಪರಶಿವನ ಅತ್ಯುಗ್ರವಾದ ರೇತಸ್ಸು ಅತಿ ಉಗ್ರವಾಗಿ ಅವರ ರೋಮಕೂಪಗಳಲ್ಲಿ, ಪರಮಾಣುಗಳಾಗಿ ಪ್ರವೇಶಿಸಿದವು. ಆಗಲಾ ಅಗ್ನಿಯು ರೇತಸ್ಸಿನಿಂದ ವಿಮುಕ್ತನಾಗಿ ವಿಶ್ರಾಂತನಾದನು. ಬಳಿಕ ಋಷಿಪತ್ನಿಯರಾದ ಕೃತ್ತಿಕೆಯರು ತಮ್ಮತಮ್ಮ ಭವನಗಳಿಗೆ ಬಂದರು. ಅನಂತರದಲ್ಲಿ ಅವರ ಪತಿಗಳಿಂದ ಶಪಿಸಲ್ಪಟ್ಟು ಖೇಚರಿಯರಾದರು. ಆಗಲಾ ಋಷಿಪತ್ನಿಯರು ವ್ಯಭಿಚಾರದಿಂದ ಅತಿಯಾಗಿ ದುಃಖಿಸುತ್ತಾ ಪರಮಾಣುಗಳ ರೂಪವಾಗಿ ರೋಮಕೂಪಗಳಲ್ಲಿ ಪ್ರವೇಶಿಸಿದ್ದ ಪರ

ಶಿವನ ವೀರ್ಯವನ್ನು ಏಕಪದ್ಯದಿಂದ ಹಿಮವತ್ಪರ್ವತದ ತಪ್ಪಲಿನಲ್ಲಿ ತ್ಯಜಿಸಿದರು.

ಇಂತು ಆ ಪರಶಿವನ ವೀರ್ಯವು ಋಷಿಪತ್ನಿಯರಿಂದಲೂ ತ್ಯಜಿಸಲ್ಪಟ್ಟು ಹಿಮವತ್ಪರ್ವತದ ತಪ್ಪಲಿನಲ್ಲಿ ಬಿದ್ದು ಅಲ್ಲಿಯೂ ಗಂಗೆಯಲ್ಲಿ ಕೀಚಕಗಳಿಂದ ಸಮಾವೃತವಾಗಿ ಬಾಲಕ ರೂಪದಿಂದ ಅತಿ ಪ್ರಕಾಶಮಾನವಾಗಿ ಬೆಳಗುತ್ತಲಿದ್ದಿತು. ಆಗ ದೇವತೆಗಳೆಲ್ಲರೂ ಆ ಬಾಲಕನನ್ನು ಶಿವಪುತ್ರನಾದ ಷಣ್ಮುಖನೆಂದು ತಿಳಿದುಕೊಂಡು ಪರಮಾನಂದ ಭರಿತರಾದರು. ಅನಂತರದಲ್ಲಿ ಗರ್ಗಾಚಾರ್ಯನು, 'ಎಲೈ ದೇವತೆಗಳಿರಾ! ಸುಖವಾಗಿರಿ; ಈಶ್ವರನ ಪುತ್ರನಾದ ಷಣ್ಮುಖನ ಪ್ರಸಾದಬಲದಿಂದ ಎಲ್ಲವೂ ಶಾಶ್ವತವಾಗುವುದು' ಎಂದು ಹೇಳಿದನು. ಇಂತು ಷಣ್ಮುಖನ ಜನನವಾದೊಡನೆಯೇ ಕೈಲಾಸದಲ್ಲಿ ಶಿವ ಸತಿಯಾದ ಪಾರ್ವತಿಯು ಸ್ತನಗಳಲ್ಲಿ ಸ್ತನ್ಯವು ಸ್ರವಿಸಿತು. ಆಗ ಗಿರಿಜೆಯು ಶಂಕರನನ್ನು ನಿರೀಕ್ಷಿಸಿ, 'ಎಲೈ ಶಂಭುವೇ! ನನಗಿಂದು ಮಹತ್ತರವಾದ ಸ್ತನ್ಯವುಂಟಾಗಿರುವುದು. ಇದರ ಕಾರಣವನ್ನು ಹೇಳುವವನಾಗು' ಎಂದು ಕೇಳಿದಳು. ಆಗ ಮಹಾದೇವನು ಸಕಲವನ್ನು ಅರಿತಿದ್ದರೂ ಏನೂ ತಿಳಿಯದವನಂತೆ ಉತ್ತರವನ್ನಿತ್ತನು. ಆ ಸಮಯದಲ್ಲಿ ದೇವಮುನಿಯಾದ ನಾರದನು ಕೈಲಾಸಕ್ಕೆ ಬಂದು, ಶಿವಪಾರ್ವತಿಯರಿಗೆ ಪುತ್ರೋತ್ಸವವಾಯಿತೆಂದು ಹೇಳಿದನು. ಇಂತು ಮಹಾದೇವನ ಪುತ್ರೋತ್ಸವ ಸಮಾಚಾರವನ್ನು ಕೇಳಿ, ಪ್ರಮಥಗಣಗಳೆಲ್ಲವೂ ಪರಮಾನಂದಭರಿತವಾದವು. ಗಂಧರ್ವರೆಲ್ಲರೂ ಗಾನತತ್ಪರರಾದರು. ಇತ್ತ ಹಿಮವಂತನಾದರೋ ಮಹಾನುಭಾವನಾದ ಶಂಕರನಿಗೆ ಪುತ್ರೋತ್ಸವವು ಆಯಿತೆಂಬ ಆನಂದದಿಂದ, ಅನೇಕ ಪತಾಕೆಗಳಿಂದಲೂ, ಚಿಗುರಿನ ತೋರಣಗಳಿಂದಲೂ, ಅನೇಕ ವಿಮಾನಗಳಿಂದಲೂ, ತನ್ನ ಪಟ್ಟಣವನ್ನಲಂಕರಿಸಿದನು. ಆಬಳಿಕ ಋಷಿಗಳೂ, ದೇವ ಗಂಧರ್ವ ಯಕ್ಷ ಚಾರಣ ಕಿನ್ನರ ಕಿಂಪುರುಷರೇ ಮೊದಲಾದವರೆಲ್ಲರೂ, ಅಪ್ಸರೋಗಣಗಳಿಂದ ಪರಿವಾರಿತರಾಗಿ,

ಲೋಕೈಕ ಶಂಕರನಾದ ಪರಶಿವನೊಂದಿಗೆ, ಷಣ್ಮುಖನನ್ನು ನೋಡ ಲೋಸುಗ ಗಂಗಾತೀರವನ್ನು ಕುರಿತು ಹೊರಟರು. ಆಗ ವೃಷಭ ಧ್ವಜನಾದ ಪರಶಿವನು ಗಿರಿಜೆಯೊಂದಿಗೆ ವೃಷಭಾರೂಢನಾಗಿ, ಇಂ ದ್ರಾದಿ ದೇವತೆಗಳಿಂದ ಹೊರಟನು. ಆಗ ಅನೇಕ ಶಂಖ, ಭೇರಿ, ತುತ್ತೂರಿ ಇವೇ ಮೊದಲಾದವು ಬಾರಿಸಲ್ಪಟ್ಟವು. ಅನಂತರದಲ್ಲಿ ವೀರಭದ್ರಾದಿಗಳೆಲ್ಲರೂ, ಅನೇಕ ವಿಧಗಳಾದ ಕೇಳಿಗಳಲ್ಲಿ ನಿರತರಾಗಿ ಶಂಕರನನ್ನನುಸರಿಸಿ ಹೊರಟರು. ಈ ಶಿವಗಣಗಳಲ್ಲಿ ಅನೇಕವಾದಿತ್ರ ಗಳು ಬಾರಿಸಲ್ಪಟ್ಟವು. ಮತ್ತೆ ಕೆಲವರು ಕುಣಿಯುವುದರಲ್ಲಿ ನಿರುತ ರಾದರು. ಮತ್ತೆ ಕೆಲವರು ಗಾನಮಾಡಲಾರಂಭಿಸಿದರು. ಇನ್ನು ಕೆಲ ಸ್ತೋತ್ರ ಪಾಠಕರು ಪರಶಿವನ ಗುಣಕೀರ್ತನಗಳನ್ನು ಹೇಳುತ್ತಾ ಲಿದ್ದರು. ಈ ವಿಧವಾಗಿ ಸಕಲ ಸುರಸಿದ್ಧ, ಚಾರಣರೂ, ಅಪ್ಸರ ಪ್ರಮಥಗಣಗಳೂ, ವಿದ್ಯಾಧರ ಪನ್ನಗರೂ, ಅತಿ ಸಂತೋಷ ಭರಿತ ರಾಗಿ, ವಿಧವಿಧವಾಗಿ ಹಾಡುತ್ತಲೂ, ಕುಣಿಯುತ್ತಲೂ, ಭಜನೆ ಯನ್ನು ಮಾಡುತ್ತಲೂ, ಶಿವನೊಂದಿಗೆ ಬರುತ್ತಾ ಪರಮಾನಂದರಾಗಿ ವರಪ್ರದಾಯಕನಾದ ಕುಮಾರ ಸ್ವಾಮಿಯನ್ನು ನೋಡಿದರು. ಬಳಿಕ ಅಮೋಘವಾದ ತೇಜಸ್ಸಿನಿಂದ ಆವೃತನಾಗಿಯೂ, ಪ್ರಸನ್ನ ಕರವಾದ ಮುಖವುಳ್ಳವನಾಗಿಯೂ, ಸಂಪದ್ಯುಕ್ತನಾಗಿಯೂ, ಮನೋಹರವಾದ ನಾಸಿಕದಿಂದ ಒಪ್ಪುತ್ತಿರುವವನಾಗಿಯೂ, ನಸು ನಗೆಯಿಂದ ಕೂಡಿರುವ ಮನೋಹರವಾದ ಕಂಗಳಿಂದೊಪ್ಪುತ್ತಿರುವ ವನಾಗಿಯೂ, ಸರ್ವಾಂಗ ಸುಂದರನಾಗಿಯೂ, ಮಹದಾಶ್ಚರ್ಯವ ನ್ನುಂಟುಮಾಡುವವನಾಗಿಯೂ, ಪ್ರಥಿತಾತ್ಮನಾಗಿಯೂ, ಸೂರ್ಯನ ವರ್ಚಸ್ಸಿನಿಂದ ಕೂಡಿದವನಾಗಿಯೂ, ಇರುವ ಶಂಕರಕುಮಾರನನ್ನು ನೋಡಿ, ಪ್ರಮಥಗಣಗಳೂ, ಬ್ರಹ್ಮಾವಿಷ್ಣುವೇ ಮೊದಲಾದ ದೇವ ತೆಗಳೂ ಅನನ್ಯ ನಮಸ್ಕಾರವನ್ನು ಗೈದರು. ಆಬಳಿಕ ಋಷಿಗಳೂ, ಗಂಧರ್ವ ಯಕ್ಷರೂ ಕುಮಾರನಿಗೆ ಸಾಷ್ಟಾಂಗ ಪ್ರಣಾಮವನ್ನು ಗೈದರು. ಋಷಿಗಳೆಲ್ಲರೂ ಶಂಕರ ಕುಮಾರನ ಅಭ್ಯುದಯದಲ್ಲಿ ಶಾಂತಿ ಪಾಠವನ್ನು ಹೇಳಿದರು. ಈ ಮಧ್ಯದಲ್ಲಿ ಪರಶಿವನು ಸತಿಯಾದ

ಗಿರಿಜೆಯೊಡನೆ ವೃಷಭದಿಂದ ಇಳಿದನು. ಇಂತು ಜಗದೇಕ ಬಂಧುವಾದ ಪರಶಿವನು ಕುಮಾರನನ್ನು ನೋಡಿ ಪರಮಾನಂದ ಭರಿತನಾದನು. ಆಗ ಗಿರಿಜೆಯು ಅತಿಯಾದ ಪುತ್ರವಾತ್ಸಲ್ಯದಿಂದ ಕೂಡಿ, ಸ್ರವಿಸುತ್ತಲಿದ್ದ ಸ್ತನ್ಯವನ್ನು ಆ ಕುಮಾರನಿಗೆ ಇತ್ತಳು. ಆಗ ದೇವತೆಗಳು ತಮ್ಮ ತಮ್ಮ ಕಳತ್ರಗಳಿಂದ ಕೂಡಿ, ಕುಮಾರನಿಗೆ ಆರತಿಯನ್ನೆತ್ತಿದರು. ಆಬಳಿಕ ತ್ರಿಭುವನಗಳೂ ಜಯ ಜಯಶಬ್ದದಿಂದ ತುಂಬಿದವು. ಋಷಿಗಳು ವೇದಘೋಷವನ್ನು ಮಾಡಿದರು. ಗೀತಗಳೂ, ವಾದ್ಯಗಳೂ, ಬಾರಿಸಲ್ಪಟ್ಟವು. ಬಳಿಕ ಶಂಕರನು ಕುಮಾರನನ್ನು ತನ್ನ ತೊಡೆಯ ಮೇಲೆ ಕುಳ್ಳಿರಿಸಿಕೊಂಡು ಅತಿಯಾಗಿ ಸಂತೋಷಪಟ್ಟನು. ಆಗ ಕುಮಾರನು ಶಂಕರನ ಕೊರಳಿನಲ್ಲಿದ್ದ ವಾಸುಕಿಯನ್ನು ಹಿಡಿಸುತ್ತಾ ಆನಂದವಾಗಿ ಆಟವಾಡುತ್ತಿದ್ದನು. ಇಂತು ಕ್ರೀಡಿಸುತ್ತಲಿದ್ದ ಕುಮಾರನನ್ನು ನೋಡಿ ಶಂಕರನು ಅತಿಯಾಗಿ ಸಂತೋಷಪಟ್ಟು ಗಿರಿಜೆಯನ್ನು ಕುರಿತು ಹೇಳಲು ಹೋದನು. ಆದರೆ ಅತಿಯಾದ ಸಂತೋಷದಿಂದ ಗದ್ಗದಸ್ವರ ಭರಿತನಾಗಿ ಏನೂ ಹೇಳಲಿಲ್ಲವು. ಇಂತು ಕುಮಾರೋಭ್ಯುದಯದಿಂದ ಪಾರ್ವತೀಪರಮೇಶ್ವರರು ಅತಿಯಾಗಿ ಸಂತೋಷಪಟ್ಟರು.

## ಅಧ್ಯಾಯ ೨೮

### ದೇವಾಸುರರ ಯುದ್ಧ

ಸೂತನು ಹೇಳುತ್ತಾನೆ:—ಕೇಳಿರೈ ಋಷಿಗಳಿರಾ! ಆ ಬಳಿಕ, ಪರಶಿವನು ತನ್ನ ಕುಮಾರನಾದ ಷಣ್ಮುಖನನ್ನು ತೊಡೆಯಮೇಲೆ ಕುಳ್ಳಿರಿಸಿಕೊಂಡು ಇಂದ್ರಾದಿ ದೇವತೆಗಳನ್ನು ಕುರಿತು 'ಎಲೈ ದೇವತೆಗಳಿರಾ! ಈಗ ಕುಮಾರನಿಂದ ನಿಮಗಾಗಬೇಕಾದ ಕಾರ್ಯವಾ

ವುದು?' ಎಂದನು. ಆಗ ದೇವತೆಗಳು, ಪಶುಪತಿಯಾದ ಪರಶಿವನನ್ನು ಕುರಿತು 'ಎಲೈ ದೇವಾ ! ಈ ತಾರಕಾಸುರನಿಂದ ಸಕಲರಿಗೂ ಮಹತ್ತರವಾದ ಭಯವುಂಟಾಗಿರುವುದು. ಎಲೈ ದೇವನೇ ! ನೀನೆಯಲ್ಲವೆ ಮೂರು ಲೋಕಗಳಿಗೂ ಸ್ವಾಮಿಯು ? ಎಲೈ ಪರಶಿವನೆ ! ನಿನ್ನ ಕುಮಾರನಾದ ಷಣ್ಮುಖನಿಂದ ಈ ತಾರಕಾಸುರನು ಸಾಯುವನಲ್ಲದೆ ಮತ್ತೆ ಬೇರೆಯಲ್ಲವು. ದೇವಾ! ನಾವೀಗ ಈ ತಾರಕನನ್ನು ಕೊಲ್ಲಲು ಇಷ್ಟವುಳ್ಳವರಾಗಿರುವೆವು' ಎಂದರು. ದೇವತೆಗಳ ಮಾತುಗಳನ್ನು ಕೇಳಿ ಜಗದೇಕಬಂಧುವಾದ ಪರಶಿವನು ಹಾಗೆಯೇ ಮಾಡಿರೆಂದಪ್ಪಣೆಯನ್ನು ಕೊಟ್ಟನು. ಆಬಳಿಕ ದೇವತೆಗಳೆಲ್ಲರೂ ಶಿವನಾಜ್ಞೆಯನ್ನು ಶಿರಸಾವಹಿಸಿ ಕಾರ್ತಿಕೇಯನನ್ನು ಮುಂದುಮಾಡಿಕೊಂಡು ಹೊರಟರು. ಆಗ ಬ್ರಹ್ಮ ವಿಷ್ಣುವೇ ಮೊದಲಾದ ದೇವತೆಗಳೆಲ್ಲರೂ ಯುದ್ಧಸನ್ನದ್ಧರಾಗುತ್ತಲಿರುವುದನ್ನು ನೋಡಿ ತಾರಕಾಸುರನು ಮಹತ್ತರವಾದ ಸೈನ್ಯಸಮೇತನಾಗಿ ಅವರೊಡನೆ ಯುದ್ಧಮಾಡಲು ಹೊರಟನು.

ಇಂತು ಮಹತ್ತರವಾದ ತಾರಕಾಸುರನ ಸೈನ್ಯವು ಬರುತ್ತಿರುರುವುದನ್ನು ದೇವತೆಗಳೆಲ್ಲರೂ ನೋಡಿದರು. ಆಬಳಿಕ ಪೂಜ್ಯಳಾದ ಆಕಾಶವಾಣಿಯು ದೇವತೆಗಳನ್ನು ಕುರಿತು ಸಮಾಧಾನಮಾಡುತ್ತಾ 'ಅಯ್ಯಾ ದೇವತೆಗಳಿರಾ ! ನೀವು ಪರಶಿವಕುಮಾರನಾದ ಷಣ್ಮುಖಸ್ವಾಮಿಯಿಂದ ಕೂಡಿ ಹೊರಟಿರುವಿರಿ. ಆದುದರಿಂದ ನೀವು ರಣರಂಗದಲ್ಲಿ ದುರಾತ್ಮನಾದ ತಾರಕಾಸುರನನ್ನು ಕೊಂದು ಜಯಶಾಲಿಗಳಾಗುವಿರಿ' ಎಂದು ನುಡಿದಳು. ಆಕಾಶವಾಣಿಯ ಮಾತನ್ನು ಕೇಳಿ ದೇವತೆಗಳೆಲ್ಲರೂ ಔತ್ಸುಕ್ಯಭರಿತರಾಗಿ ಕುಮಾರಸ್ವಾಮಿಯನ್ನು ಮುಂದು ಮಾಡಿಕೊಂಡು ಭಯಹೀನರಾಗಿ ತಾರಕಾಸುರನಮೇಲೆ ಯುದ್ಧಮಾಡಲು ಹೊರಡುವಷ್ಟರಲ್ಲಿಯೇ ಮೃತ್ಯು ಸುತೆಯು (ಕಾಲಕನ್ಯೆ) ಕುಮಾರ ಸ್ವಾಮಿಯನ್ನು ಪೂರ್ವದಲ್ಲಿಯೇ ಬ್ರಹ್ಮನಿಂದ ಬೋಧಿತಳಾಗಿ ವರಿಸಲೋಸುಗ ಬಂದಳು. ಈ ಮೃತ್ಯು ಕನ್ಯೆಯು

ಹೆಸರು ಸೇನೆ. ಅವಳು ಬಹಳ ಉಗ್ರವಾದ ತಪವನ್ನಾಚರಿಸಿದಳು. ಆಗ ಬ್ರಹ್ಮನು ಸೇನೆಗೆ ಷಣ್ಮುಖನನ್ನು ಮದುವೆಯಾಗೆಂದು ಹೇಳಿದ್ದನು. ತ್ರಿಭುವನೈಕ ಸುಂದರಿಯಾದ ಸೇನೆಯು ಈಗ ಕುಮಾರ ಸ್ವಾಮಿಯನ್ನು ವರಿಸಲು ಬಂದಳು. ಇಂತು ಬಂದ ಅತಿ ಸುಂದರಿಯಾದ ಸೇನೆಯನ್ನು ನೋಡಿ ದೇವತೆಗಳೆಲ್ಲರೂ ದೇವದೇವನಾದ ಷಣ್ಮುಖನನ್ನು ಕುರಿತು 'ಎಲೈ ಷಣ್ಮುಖನೇ ಈ ಸುಂದರಿಯಾದ ಸೇನೆಯು ನಿನ್ನನ್ನು ವರಿಸಲೋಸುಗ ಬಂದಿರುವಳು' ಎಂದರು. ಇಂತು ನುಡಿದ ಬ್ರಹ್ಮನ ಮಾತುಗಳನ್ನು ಕೇಳಿ ಷಣ್ಮುಖನು ಆ ಸೇನೆಯನ್ನು ವರಿಸಿದನು. ಅಂದಿನಿಂದ ಕುಮಾರಸ್ವಾಮಿಯು ಸೇನಾಪತಿಯಾದನು. ಆ ಸಮಯದಲ್ಲಿ ಶಂಖ, ಪಟಹ, ಆನಕ, ಗೋಮುಖ, ಭೇರಿಗಳು ಬಾರಿಸಲ್ಪಟ್ಟವು. ಗಂಭೀರವಾದ ಧ್ವನಿಯುಳ್ಳ ಮೃದಂಗಗಳು ದುಂದುಭಿಗಳು ಬಾರಿಸಲ್ಪಟ್ಟವು. ಈ ನಾದದಿಂದ ಭುವನತ್ರಯಗಳು ಪ್ರತಿನಾದಿಸಲ್ಪಟ್ಟವು. ನಭಸ್ಥಳವೆಲ್ಲವೂ ಅತ್ಯುತ್ತಮವಾದೀ ನಾದದಿಂದ ತುಂಬಿತು. ಆ ಸಮಯದಲ್ಲಿ ಗೌರಿಯೂ ಗಂಗೆಯೂ ಕೃತ್ತಿಕೆಯರೂ ಕುಮಾರಸ್ವಾಮಿಯು ನನ್ನ ಮಗನು ತನ್ನ ಮಗನೆಂಬುದಾಗಿ ಚರ್ಚಿಸುತ್ತಿದ್ದರು. ಈ ಪ್ರಕಾರವಾಗಿ ಅತಿ ಮೌಢ್ಯದಿಂದ ಚರ್ಚಿಸುತ್ತಲಿರುವ ಕೃತ್ತಿಕಾದಿಗಳನ್ನು ನೋಡಿ ನಾರದನು 'ಎಲೌ ಸತಿಯರಿರಾ! ಏತಕ್ಕಾಗಿ ಮೌಢ್ಯದಿಂದ ಚರ್ಚಿಸುತ್ತಲಿರುವಿರಿ? ಈ ಷಣ್ಮುಖನಾದರೋ ದೇವತೆಗಳ ಕಾರ್ಯಸಿದ್ಧಿಗಾಗಿ ಈಶ್ವರನಿರದ ಪಾರ್ವತಿಯಲ್ಲಿ ಜನಿಸಿದನು' ಎಂದನು. ಇಂತು ನುಡಿದ ನಾರದನ ಮಾತುಗಳನ್ನು ಕೇಳಿ ಸಕಲರೂ ಸುಮ್ಮನಾದರು. ಅನಂತರದಲ್ಲಿ ಕುಮಾರಸ್ವಾಮಿಯು, ಋಷಿಪತ್ನಿಯರಾದ ಕೃತ್ತಿಕೆಯರನ್ನು ಕರೆದು 'ಎಲೌ ಕೃತ್ತಿಕೆಯರಿರಾ! ನೀವು ನಕ್ಷತ್ರ ರೂಪಿಗಳಾಗಿ ಚಿರಕಾಲ ನಭಸ್ಥಳದಲ್ಲಿ ಇರುವವರಾಗಿ' ಎಂದನು. ಇಂತೆಂದು ನುಡಿದ ಷಣ್ಮುಖನು ಆ ಕೃತ್ತಿಕೆಯರನ್ನು ಸ್ವರ್ಗಲೋಕದಲ್ಲಿರಿಸಿದನು. ಆ ಬಳಿಕ ಮೃತ್ಯುಕನ್ಯೆಯಾದ ಸೇನೆಯೊಡಗೂಡಿ ಅತಿತ್ವರಾನ್ವಿತನಾಗಿ ಇಂದ್ರನನ್ನು ಕುರಿತು 'ಎಲೈ ಇಂದ್ರನೇ! ಸ್ವರ್ಗಲೋಕಕ್ಕೆ ಹೋಗು. ಅಲ್ಲಿಯಾದರೋ ಸುಖ

ದಿಂದ ಚಿರಕಾಲ ರಾಜ್ಯವನ್ನಾಳು' ಎಂದನು. ಕುಮಾರಸ್ವಾಮಿಯ ಮಾತುಗಳನ್ನು ಕೇಳಿ ಇಂದ್ರನು 'ಎಲೈ ದೇವಾ! ತಾರಕಾಸುರನಿಂದ ಪೀಡಿತರಾದ ನಾವು ದಿಕ್ಕೆಟ್ಟು ದಶದಿಕ್ಕುಗಳಿಗೂ ಚದರಿರುವೆವು. ಅಮರಾವತಿ ಎಲ್ಲಿ? ನಾವೆಲ್ಲಿ? ನಮ್ಮನ್ನೇಕೆ ಹೀಗೆ ಪ್ರಶ್ನಿಸುವೆ? ಪದ ಚ್ಯುತರಾದ ನಮ್ಮನ್ನು ನೀನೇ ಕಾಪಾಡಬೇಕು' ಎಂದನು. ಇಂದ್ರನ ಮಾತುಗಳನ್ನು ಕೇಳಿ, ಕುಮಾರನು 'ಎಲೈ ದೇವತೆಗಳಿರಾ! ಹೆದರಬೇಡಿರಿ.' ಎಂದಭಯವನ್ನಿತ್ತನು. ಇತ್ತಲಾ ಪರಶಿವನಾದರೊ ಷಣ್ಮುಖನು ಹೇಳುತ್ತಿರುವಾಗಲೇ ಪಾರ್ವತಿಯಿಂದಲೂ, ಪ್ರಮಥ ಗಣಗಳಿಂದಲೂ ಕೂಡಿ ಕೈಲಾಸವನ್ನು ಕುರಿತು ಹೊರಟುಹೋದನು. ಆ ಬಳಿಕ ತಾರಕಾಸುರನು ಮಹದದ್ಭುತವಾದ ಸೈನ್ಯ ಸಾಗರದಿಂದೊಡಗೂಡಿ ಬಂದನು. ಆಗ ಸೈನ್ಯದಲ್ಲಿ ರಣದುಂದುಭಿಗಳೂ, ಪ್ರಳಯ ಕಾಲದ ಭಯವನ್ನುಂಟುಮಾಡುವುದಾಗಿಯೂ ಅತಿ ಕರ್ಕಶಗಳಾಗಿಯೂ ಇರುವ ತುತ್ತೂರಿಗಳೂ, ಡಿಂಡಿಮಗಳೂ, ಅನೇಕವಾಗಿ ಬಾರಿಸಲ್ಪಟ್ಟವು. ಆ ಸಮಯದಲ್ಲಿ ಅತಿ ವೀರಾಗ್ರಣಿಗಳಾಗಿ ತಾರಕಾಸುರನಂತೆಯೇ ಇದ್ದ ದಾನವರು ಗರ್ಜಿಸಿದರು. ಆಗ ದೇವಮುನಿಯಾದ ನಾರದನು ತಾರಕಾಸುರನಬಳಿಗೆ ಬಂದು 'ಎಲೈ ತಾರಕಾಸುರನೆ ಕೇಳು. ನಿಜವಾಗಿಯೂ ಹೇಳುತ್ತಲಿರುವೆನು. ಈ ದೇವತೆಗಳು ನಿನ್ನನ್ನು ಕೊಲ್ಲಲು ಹಿಂದೆಯೇ ಬಂದು ಸಲ ಪ್ರಯತ್ನಿಸಿದರು. ಇದರಲ್ಲಿ ಸಂಶಯವಿಲ್ಲವಷ್ಟೆ? ನೋಡು; ಈಗಲಾದರೋ ಈ ಕುಮಾರನು ನಿನ್ನ ವಧಾರ್ಥವಾಗಿಯೇ ಶಂಕರನಿಂದುತ್ಪನ್ನವಾಗಿರುವನು. ಇಂದ್ರನಾದರೋ ಈಗೀ ಕುಮಾರಸ್ವಾಮಿಯ ಸಹಾಯದಿಂದ ನಿನ್ನನ್ನು ಕೊಲ್ಲುವನು. ಆದುದರಿಂದ ನೀನೀವಿಷಯವನ್ನು ಚೆನ್ನಾಗಿ ತಿಳಿದುಕೊಂಡು ಇಂದ್ರನನ್ನು ಬಹಳ ಜಾಗ್ರತೆಯಿಂದ ಎದುರಿಸುವವನಾಗು' ಎಂದನು. ಇಂತೆಂದು ನುಡಿದ ದೇವಮುನಿಯಾದ ನಾರದನ ಮಾತುಗಳನ್ನು ಕೇಳಿ, ಮಹಾ ಬುದ್ಧಿಶಾಲಿಯಾದ ತಾರಕಾಸುರನು ನಾರದನನ್ನು ಕುರಿತು 'ಎಲೈ ದೇವಮುನಿಯಾದ ನಾರದನೇ! ನೀನಾ ಇಂದ್ರನೆಲ್ಲಿಗೆ ಹೋಗಿ 'ಎಲೈ ಇಂದ್ರನೇ! ನೀನೀಕುಮಾರನನ್ನು

ಮುಂದುಮಾಡಿಕೊಂಡು ನನ್ನೊಡನೆ ಯುದ್ಧಮಾಡಲು, ಇಷ್ಟವುಳ್ಳ ವನಾಗಿರುವೆ. ನೀನೀಕಾರ್ಯವನ್ನು ಮಾಡುವುದು ಮೂಢಭಾವ ದಿಂದಲ್ಲದೆ ಮತ್ತೆ ಬೇರೆಯಲ್ಲವು. ಇದಲ್ಲದೆ ನರಮನುಷ್ಯನಾದ ಮುಚುಕುಂದನನ್ನು ಮುಂದುಮಾಡಿಕೊಂಡು ನನ್ನ ಮುಂದೆ ನಿಲ್ಲ ಬೇಕೆಂದಿರುವೆಯಲ್ಲವೇ? ಅಯ್ಯೋ ಮೂಢಾ! ಇಂತಹ ಪ್ರಭಾವ ವುಳ್ಳ ನೀನು ಅಮರಾವತೀ ರಾಜ್ಯವನ್ನು ಆಳುತ್ತಿರುವೆಯಲ್ಲವೆ? ಇದಿಗೋ ನೋಡು ನಿನ್ನನ್ನೂ, ಅಷ್ಟದಿಕ್ಪಾಲಕರನ್ನೂ ಈಗಲೇ ಕೊಲ್ಲುವೆನು' ಎಂದು ಹೇಳು. ಎಲೈ ಮುನಿಯೇ! ನೀನು ಇಂದ್ರ ನಲ್ಲಿ ಹೀಗೆಯೇ ಹೇಳು' ಎಂದನು. ತಾರಕಾಸುರನ ಮಾತುಗಳನ್ನು ಕೇಳಿದ ನಾರದನು ಹಾಗೆಯೇ ಆಗಲೆಂದುಹೇಳಿ ಇಂದ್ರಾದಿ ದೇವತೆಗ ಳಲ್ಲಿಗೆಬಂದು ತಾರಕಾಸುರನು ಹೇಳಿದ ಮಾತುಗಳೆಲ್ಲವನ್ನೂ ಉಪಹಾ ಸಪೂರ್ವಕವಾಗಿ ಹೇಳಿದನದೆಂದನೆ: 'ಎಲೈ ದೇವತೆಗಳಿರಾ! ಕೇಳಿರಿ. ನಾನು ಸುಳ್ಳನ್ನು ಹೇಳುವವನಲ್ಲ. ತಾರಕಾಸುರನು ಹೇಳಿದ ಮಾತು ಗಳನ್ನು ವಿಸ್ತಾರವಾಗಿ ಹೇಳುವೆನು ಕೇಳಿರಿ. 'ಎಲೆವೋ ಇಂದ್ರನೇ! ಮೂಢನಾದ ನಿನ್ನನ್ನು ಕೊಲ್ಲುತ್ತೇನೆಂಬುದರಲ್ಲಿ ಸಂಶಯವಿಲ್ಲವು. ದೇವೇಂದ್ರನಾದ ನೀನು ಲೋಕಪಾಲಕರಿಂದ ಪೂಜಿಸಲ್ಪಟ್ಟು ನರಮ ನುಷ್ಯನಾದ ಮುಚುಕುಂದನನ್ನಾಶ್ರಯಿಸಿರುವೆಯಲ್ಲವೆ? ಇದು ನಿನ್ನಂತಹ ವೀರಾಗ್ರಣಿಗಳಿಗೆ ಸರಿಯಲ್ಲವು.' ಎಲೈ ಇಂದ್ರನೇ! ತಾರ ಕಾಸುರನು ಇಂತೆಂದು ನುಡಿದನು. ಎಂದು ಹೇಳಿದನು. ಆಗ ಇಂದ್ರಾದಿ ದೇವತೆಗಳೆಲ್ಲರೂ ನಾರದನ ಮಾತುಗಳನ್ನು ಕೇಳಿ ಷಣ್ಮು ಖನನ್ನು ಮುಂದುಮಾಡಿಕೊಂಡು 'ಎಲೈ ಮುನಿಶ್ರೇಷ್ಠನಾದ ನಾರ ದನೆ! ಈ ಶಿವಪುತ್ರನಾದ ಷಣ್ಮುಖನ ಬಲಾಬಲಗಳನ್ನು ಅರಿತವನಾ ದರೂ, ಅಜ್ಞನಾಗಿ ನೀನು ಆತಾರಕಾಸುರನು ಹೇಳಿದ ಕುತ್ಸಿತವಾದ ಮಾತುಗಳನ್ನು ನನ್ನಲ್ಲಿ ಹೇಗೆ ಹೇಳಿದೆ?' ಎಂದನು. ಇಂದ್ರನ ನುಡಿ ಯನ್ನು ಕೇಳಿ ನಾರದನು 'ಎಲೈ ಇಂದ್ರನೇ! ಕೇಳು. ತಾರಕಾ ಸುರನೇನೋ ಹಾಗೆ ಹೇಳಿದನಲ್ಲವೆ? ನಾನು ಸುಮ್ಮನಿರಲಿಲ್ಲ. ನಾನೂ ಹಾಸ್ಯಕರವಾದ ಮಾತುಗಳನ್ನು ಹೇಳಿ ಬಂದಿರುವೆನು. ತಿಳಿದೆಯಾ?

ಎಲೈ ದೇವತೆಗಳಿರಾ! ಕೇಳಿರಿ: ಖಂಡಿತವಾಗಿಯೂ ಷಣ್ಮುಖನು ಜಯಪ್ರದನೆಂಬುದರಲ್ಲಿ ಸಂಶಯವಿಲ್ಲ!' ಎಂದನು. ನಾರದನ ಮಾತುಗಳನ್ನು ಕೇಳಿ ದೇವತೆಗಳು ಸಂತೋಷ ಭರಿತರಾಗಿ, ತಾರಕಾಸುರನೊಡನೆ ಯುದ್ಧಮಾಡಲು ಎದ್ದುನಿಂತರು. ಆಬಳಿಕ ಇಂದ್ರನು ಶಿವಕುಮಾರನಾದ ಷಣ್ಮುಖನನ್ನು ಗಜದಮೇಲೆ ಕುಳ್ಳಿರಿಸಿ ತಾನೂ ಮುಂಗಡೆಯಲ್ಲಿ ಸುರಸೈನ್ಯದಿಂದಲೂ, ಲೋಕಪಾಲಕರಿಂದಲೂ ಸಮೇತನಾಗಿ ಹೊರಟನು. ಆಗ ಅನೇಕ ದುಂದುಭಿಗಳೂ, ಬೇರಿ, ತುತ್ತೂರಿ, ವೀಣೆ ಮೃದಂಗಗಳೂ ಬಾರಿಸಲ್ಪಟ್ಟವು. ಈ ಬಳಿಕ ಕುಮಾರನು ತಾನು ಹತ್ತಿದ್ದ ಗಜವನ್ನು ಇಂದ್ರನಿಗೆ ಕೊಟ್ಟು ವಿಮಾನವನ್ನೇರಿದನು. ಕೇಳಿರೈ ಋಷಿಪುಂಗವರಿರಾ ! ಇಂತು ಷಣ್ಮುಖನು ಮಹಾ ಪ್ರಭವಾದ ವಿಮಾನವನ್ನೇರಿ, ಅನೇಕ ಶಿವಗಣಗಳಿಂದ ಪರಿವಾರಿತನಾಗಿಯೂ, ಜಯಲಕ್ಷ್ಮಿಯಿಂದ ಸಮೇತನಾಗಿಯೂ, ಚಾಮರಗಳಿಂದ ವೀಜಿತನಾಗಿಯೂ, ಅನೇಕ ರತ್ನಗಳಿಂದ ವಿರಾಜಿತವಾದ, ಮಹಾ ಮಣಿಪ್ರಭವಾದ, ಪ್ರಾಚೇತಸನೆಂಬ ಛತ್ರವನ್ನು ತನ್ನ ತಲೆಯಮೇಲೆ ಧರಿಸಿದವನಾಗಿಯೂ ಚಂದ್ರ ಕಿರಣಗಳಿಂದ ಕೂಡಿದವನಾಗಿ ಅತಿಯಾಗಿ ಪ್ರಕಾಶಿಸಿದನು. ಇಂತು ದೇವತೆಗಳು, ತಮ್ಮತಮ್ಮ ಸೈನ್ಯಗಳಿಂದ ಕೂಡಿದವರಾಗಿ, ಆ ತಾರಕಾಸುರನೊಡನೆ ಯುದ್ಧಮಾಡಲು ಸಿದ್ಧರಾದರು. ಸೇನಾಪತಿಯಾಗಿಯೂ, ವಿಶ್ವವಂದ್ಯನಾಗಿಯೂ, ಆತ್ಮವೇತೃಗಳಲ್ಲಿ ಶ್ರೇಷ್ಠನಾಗಿಯೂ ಇರುವ ಶಂಕರಪುತ್ರನಾದ ಕುಮಾರಸ್ವಾಮಿಯನ್ನು ಮುಂದುಮಾಡಿಕೊಂಡವರಾದರು. ಆಬಳಿಕ ಅವರೆಲ್ಲರೂ ಯುದ್ಧಸನ್ನದ್ಧರಾಗಿ ಗಂಗಾ ಯಮುನಾ ನದಿಗಳ ಮಧ್ಯದಲ್ಲಿರುವ ಅಂತರ್ವೇದಿಯೆಂಬ ಸ್ಥಳಕ್ಕೆ ಬಂದರು. ಆಗ ಪಾತಾಳ ನಿವಾಸಿಗಳಾದ ತಾರಕಾಸುರನ ಉಪಜೀವಿಗಳೆಲ್ಲರೂ ಅಂತರ್ವೇದಿಗೆ ಬಂದು, ಸೈನ್ಯ ಸಮೇತರಾಗಿ, ಸುರರನ್ನು ಯುದ್ಧದಲ್ಲಿ ಕೊಲ್ಲಲಿಷ್ಟಪಟ್ಟು ರಣಗರ್ಜನೆಯನ್ನು ಗೈದರು. ಇತ್ತಲಾ ತಾರಕಾಸುರನು ವಿಮಾನಾರೂಢನಾಗಿ, ಛತ್ರ ಚಾಮರಗಳಿಂದ ಪರಿವೃತನಾಗಿ ಆ ಸ್ಥಳಕ್ಕೆ ಬಂದನು.

# ಅಧ್ಯಾಯ ೨೯

## ಷಣ್ಮುಖನು ಯುದ್ಧ ಸನ್ನದ್ಧನಾದುದು

ಸೂತನು ಹೇಳುತ್ತಾನೆ:— ಕೇಳಿರೈ ಋಷಿಗಳಿರಾ! ಆಬಳಿಕ ಉಭಯಸೇನೆಗಳೂ ಅನೇಕಾಶ್ಚರ್ಯಗಳಿಂದ ಕೂಡಿದ ಚತುರಂಗಬಲ ಸಮೇತವಾಗಿ, ಗರ್ಜಿಸುತ್ತಾ ವಿರಾಜಿಸುತ್ತಲಿದ್ದುವು. ಅನಂತರದಲ್ಲಿ ದೇವಾಸುರರು ಒಬ್ಬರೊಡನೊಬ್ಬರು ಯುದ್ಧಮಾಡಲಾರಂಭಿಸಿದರು. ಈ ದೇವ ದಾನವರ ಯುದ್ಧವು ಅತಿ ಭಯಂಕರವಾಯಿತು. ಒಂದು ಕ್ಷಣಕಾಲದಲ್ಲಿಯೇ ಉಭಯಪಕ್ಷದವರಲ್ಲಿಯೂ ಅನೇಕಸಾವಿರ ಯೋಧರುರುಂಡಮುಂಡಾಂಕಿತರಾಗಿ ಭೂಮಿಗೆಬಿದ್ದರು. ತ್ರೈಲೋಕ್ಯ ವೀರನಾದ ಮಹಾ ಬಲಪರಾಕ್ರಮಶಾಲಿಯಾದ ನರವೀರನಾದಮುಚು ಕುಂದನು ತಾರಕನನ್ನೆದುರಿಸಿ ತನ್ನ ಖಡ್ಗವನ್ನೆತ್ತಿ ಎದೆಗೆ ಹೊಡೆದನು. ಇಂತು ಹೊಡೆದ ಮುಚುಕುಂದನ ಖಡ್ಗಘಾತವನ್ನು ಸಹಿಸಿಕೊಂಡು ನಸುನಗುತ್ತಾ ತಾರಕಾಸುರನವನನ್ನು ಕುರಿತು 'ಎಲೆವೋ! ಮೂಢ ನಾದ ಮುಚುಕುಂದನೆ! ನೀನಾವ ಬಲವತ್ತರವಾದ ಕಾರ್ಯವನ್ನು ಮಾಡಿರುವೆ? ನರಮನುಷ್ಯನಾದ ನಿನ್ನೊಡನೆ ಯುದ್ಧಮಾಡಲು ನಾಚುತ್ತಿರುವೆನು ಎಂದನು. ತಾರಕಾಸುರನ ಮಾತುಗಳನ್ನು ಕೇಳಿ ಮುಚುಕುಂದನು' ಅವನನ್ನು ಕುರಿತು 'ಎಲೆವೋ ದೈತ್ಯನಾದ ತಾರಕನೇ! ನನ್ನಿಂದೀಗ ಹೊಡೆಯಲ್ಪಟ್ಟಿರುವೆಯಲ್ಲದೆ ಮತ್ತೆ ಬೇರೆ ಯಲ್ಲ. ನನ್ನ ಖಡ್ಗದ ಪೆಟ್ಟನ್ನು ನೋಡಿ ನನ್ನ ಮುಂದೆ ನಿಲ್ಲಲು ಅಂಜುತ್ತಿರುವೆ. ಸ್ಥಿರವಾಗಿ ನಿಲ್ಲು. ಆಗ ನನ್ನ ಶೌರ್ಯವನ್ನು ನೋಡು. ಸುಮ್ಮನೆ ಆತ್ಮ ಶ್ಲಾಘನೆಯನ್ನು ಮಾಡಿಕೊಳ್ಳಬೇಡ' ವೆಂದುಹೇಳಿ ಮರಳಿಯೂ ಆ ತಾರಕಾಸುರನನ್ನು ತನ್ನ ಖಡ್ಗದಿಂದ ಹೊಡೆಯು ಹೋಗುವಷ್ಟರಲ್ಲಿಯೇ ಆ ತಾರಕಾಸುರನ ಶಕ್ತ್ಯಾಯು ಧದ ಮಹತ್ತರವಾದ ಪೆಟ್ಟಿನಿಂದ ಹೊಡೆಯಲ್ಪಟ್ಟು ರಣಭೂಮಿಯಲ್ಲಿ

ಬಿದ್ದನು. ಇಂತು ತಾರಕಾಸುರನ ಶಕ್ತ್ಯಾಯುಧದಿಂದ ಭೂಮಿಗೆ ಬಿದ್ದ ಮುಚುಕುಂದನು ತಕ್ಷಣದಲ್ಲಿಯೇ ಎದ್ದು ಅತಿಯಾಗಿ ರೋಷಗೊಂಡು ತಾರಕಾಸುರನನ್ನು ಕೊಲ್ಲಲು ತೀಕ್ಷ್ಣವಾದ ಬ್ರಹ್ಮಾಸ್ತ್ರವನ್ನು ಸಜ್ಜೀಕರಿಸಿದನು. ಆಗ ನಾರದನು ಮಾಂಧಾತ ಪುತ್ರನಾದ ಮುಚುಕುಂದನನ್ನು ಕುರಿತು 'ಎಲೈ ವೀರನಾದ ಮುಚುಕುಂದನೇ! ಈ ತಾರಕಾಸುರನು ನರಮನುಷ್ಯನಿಂದ ಸಾಯುವುದಿಲ್ಲ. ಆದುದರಿಂದ ನಿಷ್ಪ್ರಯೋಜನವಾಗಿ ಮಹಾಸ್ತ್ರವನ್ನು ಪ್ರಯೋಗಿಸಬೇಡ' ಎಂದನು. ಇಂತು ನುಡಿದ ದೇವಮುನಿಯಾದ ನಾರದನ ಮಾತುಗಳನ್ನು ಕೇಳಿ ಮಾಂಧಾತ ಪುತ್ರನಾದ ಮುಚುಕುಂದನು ಅವನನ್ನು ಕುರಿತು 'ಎಲೈ ಮುನಿಪುಂಗವನಾದ ನಾರದನೇ! ಈ ತಾರಕಾಸುರನು ಯಾರಿಂದ ಕೊಲ್ಲಲ್ಪಡುವನೆಂಬುದನ್ನು ಹೇಳುವವನಾಗು' ಎಂದು ಕೇಳಲು ದಿವ್ಯದರ್ಶನನಾಗಿಯೂ, ಮಹಾಮುನಿಯಾಗಿಯೂ ಇರುವ ನಾರದನು ಮುಚುಕುಂದನನ್ನು ಕುರಿತು 'ಕೇಳೈ ಮುಚುಕುಂದನೇ! ಈ ತಾರಕಾಸುರನು ಶಿವಪುತ್ರನಾದ ಕುಮಾರಸ್ವಾಮಿಯಿಂದ ಕೊಲ್ಲಲ್ಪಡುವನೇ ಹೊರತು ಮತ್ತಾರಿಂದಲೂ ಸಾಯುವುದಿಲ್ಲ' ಎಂದನು. ನಾರದನ, ಮನೋಹರವಾಗಿಯೂ ಮಂಗಳಕರವಾಗಿಯೂ ಇರುವ ಮಾತುಗಳನ್ನು ಕೇಳಿ, ದೇವತೆಗಳೆಲ್ಲರೂ, ಮುಚುಕುಂದನ ಪ್ರಯತ್ನವನ್ನು ನಿಲ್ಲಿಸಿ ಶಾಂತರಾದರು.

ಆಬಳಿಕ ದೇವದುಂದುಭಿಗಳೂ, ಶಂಖಗಳೂ, ಇನ್ನೂ ಅನೇಕ ವಾದ್ಯಗಳೂ ಬಾರಿಸಲ್ಪಟ್ಟವು. ಆಗ ಅಸುರರೆಲ್ಲರೂ, ದೇವತೆಗಳೊಡನೆ ಯುದ್ಧಮಾಡಲು ಆಸಕ್ತಿಯುಳ್ಳವರಾಗಿ ಗರ್ಜಿಸಿದರು. ಬಳಿಕ ಶಿವಕೋಪಸಂಭೂತನಾದ ವೀರಭದ್ರನು ಬಹಳ ರೋಷಗೊಂಡು, ಅನೇಕ ಶಿವಗಣಗಳಿಂದ ಪರಿವಾರಿತನಾಗಿ, ಮುಚುಕುಂದನನ್ನೂ ದೇವತೆಗಳನ್ನೂ ಹಿಂದುಮಾಡಿಕೊಂಡು ತಾರಕಾಸುರನೊಡನೆ ಯುದ್ಧಮಾಡಲುದ್ಯುಕ್ತನಾದನು. ಅನಂತರದಲ್ಲಿ ಪ್ರಮಥಗಣಗಳೆಲ್ಲವೂ ಶಿವಕುಮಾರನಾದ ಷಣ್ಮುಖನನ್ನು ಮುಂದುಮಾಡಿಕೊಂಡು

ಯುದ್ಧಮಾಡಿದವು. ಈ ಸುರಾಸುರ ವಿಮರ್ದನಕರವಾದ ಯುದ್ಧದಲ್ಲಿ ಪ್ರಮಥಗಣಗಳೂ, ದಾನವರೂ, ಅನ್ಯೋನ್ಯವಾಗಿ ಒಬ್ಬರನ್ನೊಬ್ಬರು, ಶೂಲಗಳಿಂದಲೂ, ಖಡ್ಗಗಳಿಂದಲೂ, ಕೊಡಲಿಗಳಿಂದಲೂ, ಘಟ್ಟಿಯು ಗಳಿಂದಲೂ ಘೋರವಾಗಿ ಹೊಡೆದರು. ಆಗ ವೀರಭದ್ರನಾದರೋ, ತನ್ನ ತ್ರಿಶೂಲದಿಂದ ತಾರಕಾಸುರನನ್ನು ಅತಿಘೋರವಾಗಿ ಹೊಡೆ ದನು. ಇಂತು ಹೊಡೆಯಲು ಮಹಾವೀರನಾದ ತಾರಕಾಸುರನು ಒಂದು ಕ್ಷಣಕಾಲ ಮೂರ್ಛೆಯನ್ನು ಹೊಂದಿದನು. ಇಂತು ತಾರ ಕಾಸುರನು ಒಂದು ಕ್ಷಣಮಾತ್ರ ಮೂರ್ಛಿತನಾಗಿ ಮರಳಿಯೂ ಎದ್ದು ಅತಿ ಬಲಾನ್ವಿತನಾಗಿ ವೀರಭದ್ರನನ್ನು ಶಕ್ತ್ಯಾಯುಧದಿಂದ ಹೊಡೆದನು. ಆಗ ವೀರಭದ್ರನೂ ತಾರಕಾಸುರನನ್ನು ತ್ರಿಶೂಲದಿಂದ ಅತಿ ಘೋರವಾಗಿ ಹೊಡೆದನು. ಈ ಪ್ರಕಾರವಾಗಿ ವೀರಭದ್ರನೂ, ತಾರಕಾಸುರನೂ ಪರಸ್ಪರವಾಗಿ ಯುದ್ಧಮಾಡುತ್ತಾ ಗರ್ಜಿಸುತ್ತಿ ದ್ದರು. ಆಗ ದೇವತೆಗಳೆಲ್ಲರೂ ದಾನವರೊಡನೆ ಯುದ್ಧಮಾಡುವು ದನ್ನು ತ್ಯಜಿಸಿ ತಾರಕ, ವೀರಭದ್ರರ ದ್ವಂದ್ವಯುದ್ಧವನ್ನು ನೋಡು ತ್ತಿದ್ದರು. ಆಬಳಿಕ ದೇವತೆಗಳೆಲ್ಲರೂ, ಭೇರಿ, ಮೃದಂಗ ,ಆನಕ, ಗೋ ಮುಖೇತ್ಯಾದಿ ವಾದ್ಯಗಳನ್ನು ಬಾರಿಸಿದರು. ಅನಂತರದಲ್ಲಿ ಡಮರುಕ ನಾದದಿಂದ ಭುವನತ್ರಯಗಳೂ ವ್ಯಾಪಿಸಲ್ಪಟ್ಟವು. ಈಪ್ರಕಾರ ವಾದ ರಣಘೋಷದಿಂದ ವೀರಭದ್ರನೂ, ತಾರಕಾಸುರನೂ ಅನ್ಯೋ ನ್ಯವಾಗಿ ಧಿಕ್ಕರಿಸುತ್ತಾ, ಆಯುಧಗಳಿಂದ ಹೊಡೆಯುತ್ತಾ ಜರ್ಝ ರೀಕೃತವಾದ ದೇಹವುಳ್ಳವರಾಗಿ, ಬುಧಾಂಗಾರಕರು ಕಾದಾಡುವಂತೆ ಅತಿಘೋರವಾದ ಯುದ್ಧವನ್ನು ಮಾಡುತ್ತಾ ಶೋಭಿಸಿದರು. ಆ ಸಮಯದಲ್ಲಿ ಮಹಾತ್ಮರೆಲ್ಲರಿಗೂ ವರಿಷ್ಟನಾದ, ನಾರದನು ಅನೇಕ ವಾಕ್ಯಗಳಿಂದ ವೀರಭದ್ರನನ್ನು ಸಮಾಧಾನ ಪಡಿಸಿದನು. ಇಂತು ಸಮಾಧಾನ ಗೊಳಿಸಿದ ನಾರದಮುನಿಯನ್ನು ಕುರಿತು ಆ ವೀರ ಭದ್ರನು, 'ಎಲೈ ನಾರದನೇ! ಈ ತಾರಕಾಸುರನನ್ನು ಕೊಂದೇ ಕೊಲ್ಲುತ್ತೇನೆ! ನನ್ನ ಪರಾಕ್ರಮವನ್ನಾದರೂ ನೋಡುವವ ನಾಗು. ಯಾವನು ರಣರಂಗದಲ್ಲಿ ತನ್ನ ಸ್ವಾಮಿಯನ್ನು ಕರೆತರುತ್ತಾ

ನೆಯೋ, ಅಂತಹನು ಪಾಪಿಯೆಂದೂ, ಅಧರ್ಮಿಷ್ಠನೆಂದೂ ಎನು ಕಿಸಲ್ಪಡುತ್ತಾನೆ. ಅಂತಹನು ಭೀರುವೆಂದು ತಿಳಿಯಲ್ಪಡಬೇಕು. ನೀನಾದರೋ ಯೋಧರ ಪ್ರತಿಕ್ರಿಯೆಗಳನ್ನು ತಿಳಿದಿಲ್ಲವು. ಈ ಯೋಧರು ತಮ್ಮ ಮೃತ್ಯುವನ್ನು ಮುಂದಿಟ್ಟುಕೊಂಡು, ಏನೇನೂ ವ್ಯಥೆಯಿಲ್ಲದೇಯೇ ರಣರಂಗವನ್ನು ಪ್ರವೇಶಿಸುತ್ತಾರೆಯಲ್ಲದೆ ಮತ್ತೆ ಬೇರೆಯಲ್ಲವು. ಇವರು ರಣರಂಗದಲ್ಲಿ ಶಸ್ತ್ರಾಸ್ತ್ರಗಳಿಂದ ಛಿನ್ನವಾದ ಶರೀರವುಳ್ಳವರಾದಾಗ್ಯೂ ಪ್ರಶಸ್ತರೆಂಬುದರಲ್ಲಿ ಸಂಶಯವಿಲ್ಲವು' ಎಂದನು. ಇಂತು ನುಡಿದು ಶಿವಕೋಪಸಂಭವನಾದ, ವೀರಭದ್ರನು, ಅನೇಕ ವೃಷಭಾರೂಢರಿಂದಲೂ, ತ್ರಿಶೂಲ, ಶರಧಾರಿಗಳಿಂದಲೂ ಪರಿವಾರಿತನಾಗಿ ಆ ಮಹಾತ್ಮನಾದ ತಾರಕಾಸುರನೊಂದಿಗೆ ಮರಳಿಯೂ ಯುದ್ಧಮಾಡಿದನು. ಆಬಳಿಕ, ತ್ರಿಶೂಲಧಾರಿಗಳಾಗಿಯೂ, ನಾಗಭೂಷಣರಾಗಿಯೂ, ಐದು ಮುಖಗಳನ್ನುಳ್ಳವರಾಗಿಯೂ, ಅರ್ಧಚಂದ್ರಧಾರಿಗಳಾಗಿಯೂ, ಜಟೆಗಳನ್ನು ಬಿಟ್ಟುಕೊಂಡಿರುವವರಾಗಿಯೂ, ಮುಕ್ಕಣ್ಣರಾಗಿಯೂ, ನಾನಾಯುಧಗಳಿಂದ ಕೂಡಿದವರಾಗಿಯೂ, ವೀರಭದ್ರನಂತೆಯೇ ಪರಾಕ್ರಮಶಾಲಿಗಳಾಗಿಯೂ, ಇರುವ ಶಿವಕಿಂಕರರೆಲ್ಲರೂ ವೀರಭದ್ರನನ್ನು ಮುಂದು ಮಾಡಿಕೊಂಡು ಅಸುರರೊಡನೆ ಯುದ್ಧಮಾಡಿದರು.

ಇಂತತಿಘೋರವಾದ ದೇವ ದಾನವರ ಯುದ್ಧದಲ್ಲಿ ದಾನವರು ಶಿವಗಣಗಳಿಂದ ಪುನಃಪುನಃ ಗೆಲ್ಲಲ್ಪಟ್ಟರು. ಇನ್ನು ಕೆಲ ದೈತ್ಯರಿಗೂ ದೇವತೆಗಳಿಗೂ, ಮಹಾ ಭಯಂಕರವಾದ ಯುದ್ಧವು ನಡೆಯಿತು. ಆಬಳಿಕ ಶಿವಗಣಗಳಿಂದ ಪರಾಜಿತರಾದ ದಾನವರೆಲ್ಲರೂ ಅತಿ ದುಃಖಿತರಾಗಿ ತಮ್ಮೊಡೆಯನಾದ ತಾರಕಾಸುರನಲ್ಲಿಗೆ ಬಂದು ತಮ್ಮ ಪರಾಜಯವನ್ನು ಹೇಳಿಕೊಂಡರು. ಆಗ ಮಹಾತ್ಮನಾದ ತಾರಕಾಸುರನು ಅತಿಯಾಗಿ ರೋಷಗೊಂಡು ದೇವಸೇನೆಯೊಡನೆ ಯುದ್ಧಮಾಡಲಾಸಕ್ತನಾಗಿ ಸಮುದ್ರವನ್ನು ಝಷವು ಪ್ರವೇಶಿಸುವಂತೆ ಆ ಸೈನ್ಯಸಾಗರವನ್ನು ಪ್ರವೇಶಿಸಿದನು. ಅನಂತರದಲ್ಲಿ ಶಿವಕೋಪ ಸಂಭವ

ನಾದ ವೀರಭದ್ರನು, ಶಿವಗಣಗಳಿಂದಲೂ, ದೇವತೆಗಳಿಂದಲೂ, ಯಕ್ಷ ಪಿಶಾಚ ಗುಹ್ಯಕಗಣಗಳಿಂದಲೂ ಪರಿವಾರಿತನಾಗಿ ಅತಿಯಾಗಿ ರೋಷಗೊಂಡು ದಾನವರನ್ನು ಮರ್ದನಮಾಡಲಾರಂಭಿಸಿದನು. ಆಬಳಿಕ ದೇವದಾನವರ ವಿನಾಶಕರವಾದ ಅತ್ಯದ್ಭುತವಾದ ಯುದ್ಧವು ಉಪಕ್ರಮವಾಯಿತು. ಆಗ ವೃಷಭಾರೂಢರಾದ ಶಿವಗಣಗಳು ಅತಿಯಾಗಿ ರೋಷಗೊಂಡು ದಾನವರ ಸೇನೆಯಲ್ಲಿದ್ದ ಸವಾರರಿಂದ ಕೂಡಿದ್ದ ಅಶ್ವಗಳನ್ನೂ, ಸಾರಥಿಗಳಿಂದ ಕೂಡಿದ್ದ ರಥಗಳನ್ನೂ, ಮಾವುತರಿಂದ ಕೂಡಿದ್ದ ಗಜಗಳನ್ನೂ ಘಾತಿಸಿ ಕೆಡವಿದರು. ಇಂತು ಶಿವಕಿಂಕರರಿಂದ ಪರಾಜಯವನ್ನು ಹೊಂದಿದ ಅನೇಕ ದಾನವರು ಭೂತಲದಲ್ಲಿ ಬಿದ್ದು ನಾಶವಾದರು. ಮತ್ತೆ ಕೆಲವರು ರಸಾತಲವನ್ನು ಪ್ರವೇಶಿಸಿದರು. ಇನ್ನು ಕೆಲವರು ದಿಕ್ಕೆಟ್ಟು ಪಲಾಯನ ಪರಾಯಣರಾದರು. ಮತ್ತೂ ಕೆಲವರು ಶಿವಕಿಂಕರರನ್ನು ಮೊರೆ ಹೊಕ್ಕರು. ಈ ಪ್ರಕಾರವಾಗಿ ದಾನವರ ಸೈನ್ಯವೆಲ್ಲವೂ ನಾಶವಾದುದನ್ನು ನೋಡಿ ಮಹಾ ಬಲಶಾಲಿಯಾದ ತಾರಕಾಸುರನು, ಸಿಂಹವನ್ನೇರಿಕೊಂಡು, ಅನೇಕ ಭುಜಗಳನ್ನುಳ್ಳವನಾಗಿ ಆ ಶಿವಗಣಗಳನ್ನೂ ದೇವತೆಗಳನ್ನೂ ಘಾತಿಸಲಾರಂಭಿಸಿದನು. ಆಗ ಸಿಂಹವು ಶಿವಗಣಗಳ ವೃಷಭಗಳನೇಕವನ್ನು ಕಡಿದುಹಾಕಿತು. ಇನ್ನು ಕೆಲವನ್ನು ಸೀಳಿಬಿಟ್ಟಿತು. ಶಿವಗಣಗಳೆಲ್ಲವೂ ರಣರಂಗದಲ್ಲಿ ದಾನವರಿಂದ ಕೊಲ್ಲಲ್ಪಡುತ್ತಲಿರಲು, ಮಹಾ ವಿಷ್ಣುವು ಶಂಕರ ಕುಮಾರನಾದ ಷಣ್ಮುಖನನ್ನು ಕುರಿತು 'ಎಲೈ ಕುಮಾರಸ್ವಾಮಿಯೇ! ಈ ಪಾಪಿಯಾದ ತಾರಕನು, ನಿನ್ನಿಂದಲ್ಲದೆ ಮತ್ತಾರಿಂದಲೂ ಕೊಲ್ಲಲ್ಪಡುವುದಿಲ್ಲವು; ಎಲೈ ಮಹಾ ಭುಜನೇ! ಆದುದರಿಂದ ನೀನೇ ತಾರಕಾಸುರನನ್ನು ಸಂಹಾರಮಾಡುವವನಾಗು. ಎಲೈ ಶಂಕರ ಕುಮಾರನೇ! ನೀನೇ ತಾರಕನ ವಧೆಗೋಸುಗವೇ ಜನಿಸಿರುವೆಯಾದುದರಿಂದ ಪಾಪಿಯಾದ ತಾರಕನನ್ನು ಕೊಲ್ಲುವವನಾಗು' ಎಂದು ನುಡಿದನು. ನಾರಾಯಣನ ಮಾತುಗಳನ್ನು ಕೇಳಿ ಕುಮಾರಸ್ವಾಮಿಯು ವಿಷ್ಣುವನ್ನು ಕುರಿತು 'ಎಲೈ ವಿಷ್ಣುವೇ! ಈ ಮಹಾತ್ಮರು ಮಾಡುತ್ತಲಿರುವ

ಯುದ್ಧವನ್ನು ನೋಡುತ್ತಲಿರುವೆನು. ಈ ಕಾರ್ಯದಲ್ಲಿ ನಾನೇನು ಮಾಡಬೇಕೆಂಬುದನ್ನೇ ಅರಿಯೆನು. ಪ್ರಕೃತ ಯುದ್ಧಮಾಡುತ್ತಿರುವವರಲ್ಲಿ, ಯಾರು ನಮ್ಮವರು, ಯಾರು ನಮ್ಮ ಶತೃಗಳು, ಎಂಬುದನ್ನೇ ಅರಿಯದಿರುವೆನು. ಇಷ್ಟೆಯಲ್ಲದೆ, ಇವರೇತಕ್ಕಾಗಿ ಯುದ್ಧಮಾಡುತ್ತಾ ಒಬ್ಬರನ್ನೊಬ್ಬರು ಕೊಲ್ಲಬೇಕೆಂದಿರುವುದನ್ನೂ, ಅದರ ಕಾರಣವನ್ನೂ ನಾನರಿಯೆನು' ಎಂದನು. ಇಂತು ನುಡಿದ ಶಿವಕುಮಾರನ ನುಡಿಯನ್ನು ಕೇಳಿ ದೇವಮುನಿಯಾದ ನಾರದನುವನನ್ನು ಕುರಿತು 'ಎಲೈ ದೇವಾ! ನೀನು ಪರಶಿವನ ಅಂಶದಿಂದ ಕುಮಾರಸ್ವಾಮಿಯಾಗಿ ಜನಿಸಿರುವೆ. ನೀನೇ ಮೂರು ಲೋಕಗಳನ್ನೂ ಕಾಪಾಡುವವನು. ದೇವತೆಗಳೆಲ್ಲರಿಗೂ ನೀನೇ ಪರಮಗತಿಯು. ಎಲೈ ಸೇನಾಗ್ರಣಿಯೇ! ಕೇಳು. ಈ ಪಾಪಿಯಾದ ತಾರಕಾಸುರನು ಹಿಂದೆ ಮಹತ್ತರವಾದ ತಪವನ್ನಾಚರಿಸಿದನು. ಈ ಅಮೋಘವಾದ ತಪಸ್ಸಿನಿಂದಲೇ ಇಂದ್ರನನ್ನೂ, ಸ್ವರ್ಗಲೋಕವನ್ನೂ ಗೆದ್ದನು. ಮತ್ತೀ ತಪಸ್ಸಿನಿಂದಲೇ ತಾರಕನು ಲೋಕಪಾಲಕರೇ ಮೊದಲಾದ ದೇವತೆಗಳನ್ನೂ, ತ್ರಿಲೋಕಗಳನ್ನೂ ಜಯಿಸಿದನು. ಈ ತಾರಕನು ಪಾಪಿಯೂ ದುರಾತ್ಮನೂ ಆಗಿರುವನು. ಆದುದರಿಂದೆಲೈ ಸ್ವಾಮಿಯೇ! ಈ ಪಾಪಪುರುಷನಾದ ತಾರಕನನ್ನೀಗಲೇ ನೀನು ಕೊಲ್ಲಬೇಕು. ತಾರಕನನ್ನು ಸಂಹರಿಸಿ, ಸಕಲರಿಗೂ ಶಾಂತಿಯನ್ನುಂಟುಮಾಡುವವನಾಗು' ಎಂದನು. ನಾರದನ ಮಾತುಗಳನ್ನು ಕೇಳಿ ಮಹಾತ್ಮನಾದ ಶಿವಕುಮಾರನು ನಸುನಗುತ್ತಾ ವಿಮಾನದಿಂದಿಳಿದು, ಪದಾತಿಯಾದನು. ಆಗ ಬಲಿಷ್ಠನಾದ ತಾರಕಾಸುರನೂ ದೇವತೆಗಳನ್ನು ಕೊಲ್ಲಲು ಉದ್ಯುಕ್ತನಾದನು.

# ಅಧ್ಯಾಯ ೩೦

---

## ತಾರಕಾಸುರನ ವಧೆ

ಸೂತನು ಹೇಳುತ್ತಾನೆ:— ಅಯ್ಯಾ ಋಷಿಗಳಿರಾ! ಕೇಳಿರಿ! ಆಗ ತಾರಕನು ಅದ್ಭುತವಾಗಿ ಗರ್ಜಿಸುತ್ತಾ ರಣಾಂಗಣಕ್ಕೆ ಬಂದನು. ಇಂತು ಬರುತ್ತಲಿರುವ ತಾರಕಾಸುರನನ್ನು ಇಂದ್ರನು ತನ್ನ ವಜ್ರಾಯುಧದಿಂದ ಹೊಡೆದನು. ಆ ತಾರಕಾಸುರನು ಇಂದ್ರನ ವಜ್ರಾಯುಧದ ಪೆಟ್ಟಿನಿಂದ ವಿಹ್ವಲನಾಗಿ ಭೂಮಿಯಲ್ಲಿ ಮೂರ್ಛಿತನಾಗಿ ಬಿದ್ದನು. ತಕ್ಷಣದಲ್ಲಿಯೇ ಚೇತರಿಸಿಕೊಂಡು ಎದ್ದು ಐರಾವತಾರೂಢನಾದ ಇಂದ್ರನನ್ನು ಶಕ್ತ್ಯಾಯುಧದಿಂದ ಹೊಡೆದು ಭೂಮಿಯಲ್ಲಿ ಕೆಡಹಿದನು. ಇಂತು ಸುರರಾಜನಾದ ಇಂದ್ರನು ತಾರಕನ ಶಕ್ತ್ಯಾಯುಧದಿಂದ ಬಿದ್ದೊಡನೆಯೇ ದೇವತೆಗಳೆಲ್ಲರೂ ಮಹತ್ತರವಾದ ಹಾ! ಹಾ! ಕಾರವನ್ನು ಮಾಡಿದರು. ಬಳಿಕ ಕ್ರೂರನಾದ ತಾರಕನು ನೆಲದಲ್ಲಿ ಬಿದ್ದಿದ್ದ ಇಂದ್ರನ ಕೈಯೊಳಗಿದ್ದ ವಜ್ರಾಯುಧವನ್ನು ಕಸೆದುಕೊಂಡು ಅದೇ ವಜ್ರಾಯುಧದಿಂದ ಆ ಇಂದ್ರನನ್ನು ಬಲವಾಗಿ ಹೊಡೆದನು. ಆಗ ಪರಾಕ್ರಮಶಾಲಿಯಾದ, ಶಿವಕೋಪಸಂಭವನಾದ ವೀರಭದ್ರನು ದೇವೇಂದ್ರನನ್ನು ಸಂರಕ್ಷಣೆ ಮಾಡಲೋಸುಗ ಅತಿಯಾಗಿ ಕೋಪಗೊಂಡು, ಮಹಾ ತೀಕ್ಷ್ಣವಾದ ತ್ರಿಶೂಲವನ್ನು ತೆಗೆದುಕೊಂಡು ಪಾಪಿಯಾದಾತಾರಕಾಸುರನನ್ನು ಹೊಡೆದನು. ಇಂತು ಹೊಡೆದೊಡನೆಯೇ ತಾರಕಾಸುರನು ಭೂಮಿಯಲ್ಲಿ ಮೂರ್ಛಾಕ್ರಾಂತನಾಗಿ ಬಿದ್ದನು. ಹೀಗಿದ್ದರೂ ಮಹಾ ಬಲಶಾಲಿಯಾದ ತಾರಕನು ತಕ್ಷಣದಲ್ಲಿಯೇ ಎದ್ದು ಮಹಾ ಕೋಪದಿಂದ ಶಕ್ತ್ಯಾಯುಧವನ್ನು ತೆಗೆದುಕೊಂಡು ಆ ವೀರಭದ್ರನನ್ನು ಬಲವಾಗಿ ಹೊಡೆದನು. ಇಂತು ಹೊಡೆದೊಡನೆಯೇ ವೀರಭದ್ರನೂ ನೆಲಕ್ಕುರುಳಿದನು. ಈ ಪ್ರಕಾರವಾಗಿ ಶಿವಕೋಪಸಂಭವನಾದ ವೀರಭದ್ರನೂ

ತಾರಕಾಸುರನ ಶಕ್ತ್ಯಾಯುಧದ ಹೊಡೆತದಿಂದ ಭೂಮಿಯಲ್ಲಿ ಬೀಳಲು ದೇವ, ಗಂಧರ್ವ, ಪನ್ನಗ, ರಾಕ್ಷಸರೂ, ಶಿವಗಣಗಳೂ ಅತಿ ಘೋರವಾದ ಹಾಹಾಕಾರವನ್ನು ಮಾಡಿದರು. ಆಗ ವೀರಭದ್ರನು ತಕ್ಷಣದಲ್ಲಿಯೇ ಎದ್ದು ಮಿಂಚಿನಂತೆ ಪ್ರಕಾಶಮಾನವಾಗಿಯೂ, ಅಮೋಘವಾದ ತೇಜಸ್ಸಿನಿಂದ ನಿರಂತರವೂ ಪ್ರಕಾಶಿಸುತ್ತಲಿರುವ ತ್ರಿಶೂಲವನ್ನು ತೆಗೆದುಕೊಂಡು ಆ ತಾರಕಾಸುರನನ್ನು ಹೊಡೆಯ ಹೋದನು. ಅಷ್ಟರಲ್ಲಿಯೇ ಶಿವಪುತ್ರನಾದ ಕುಮಾರಸ್ವಾಮಿಯು ಆ ವೀರಭದ್ರನನ್ನು ಕುರಿತು 'ಎಲೈ ಮಹಾ ಬುದ್ಧಿಶಾಲಿಯಾದ ವೀರ ಭದ್ರನೇ ! ನೀನೀಪಾಪಿಯನ್ನು ಕೊಲ್ಲಬೇಡ' ಎಂದು ತಡೆದು, ಭಯಂಕರವಾದ ರಣಗರ್ಜನೆಯನ್ನು ಗೈಯ್ಯುತ್ತಾ, ಆಕಾಶಗಾಮಿ ಗಳಾದ ದೇವತೆಗಳೆಲ್ಲರೂ ಜಯಜಯ ಶಬ್ದವನ್ನು ಮಾಡುತ್ತಲಿರಲು ಪಾಪಿಷ್ಠನಾದ ತಾರಕಾಸುರನನ್ನು ಶಕ್ತ್ಯಾಯುಧದಿಂದ ಹೊಡೆಯ ಹೋದನು. ಆ ಸಮಯದಲ್ಲಿ ತಾರಕಾಸುರನಿಗೂ, ಶಿವಕುಮಾರ ನಾದ ಷಣ್ಮುಖನಿಗೂ, ಸರ್ವಲೋಕ ಭಯಂಕರವಾದ ಯುದ್ಧವು ನಡೆಯಿತು.

ಆಬಳಿಕ ಶೂರರಾದ ತಾರಕ ಷಣ್ಮುಖರು, ಶಕ್ತ್ಯಸ್ತ್ರಿತರಾಗಿ, ಮಹಾ ಸಾಹಸದಿಂದೊಬ್ಬರನ್ನೊಬ್ಬರು ವಂಚಿಸುತ್ತಾ, ಇಬ್ಬರೂ ಶಕ್ತ್ಯಾಯುಧಗಳಿಂದ ಭಗ್ನವಾದ ಕರಗಳುಳ್ಳವರಾಗಿ ಆಕಾಶಮಾರ್ಗ ವನ್ನು ಹಿಡಿದು ಅತ್ಯುತ್ತಮವಾದ ಯುದ್ಧವನ್ನು ಮಾಡಿದರು. ಆಗ ಅವರಿಬ್ಬರೂ ಯುದ್ಧಮಾಡುತ್ತಾ ಕಟಿಪ್ರದೇಶದಲ್ಲಿಯೂ, ಬಾಹು ಪ್ರದೇಶಗಳಲ್ಲಿಯೂ, ಎದೆಯಲ್ಲಿಯೂ, ಉರಸ್ಸಿನಲ್ಲಿಯೂ, ಜಾನು, ಮೂರ್ಧ್ನಿ, ಕಂಠ, ಪೃಷ್ಠ ಪ್ರದೇಶಗಳಲ್ಲಿಯೂ ಒಬ್ಬರನ್ನೊಬ್ಬರು ಹೊಡೆಯಲಾರಂಭಿಸಿದರು. ಇಂತು ತಾರಕಷಣ್ಮುಖರ ಘೋರವಾದ ಯುದ್ಧವು ನಡೆಯುತ್ತಿರಲು ದೇವ ಗಂಧರ್ವ ಗುಹ್ಯಕರೆಲ್ಲರೂ, ಯುದ್ಧ ಮಾಡುವುದನ್ನು ತ್ಯಜಿಸಿ ಆಶ್ಚರ್ಯ ಭರಿತರಾಗಿ ಅವರ ಯುದ್ಧ ವನ್ನು ನೋಡುತ್ತಲಿದ್ದರು. ಆ ಬಳಿಕ ದೇವತೆಗಳೆಲ್ಲರೂ, ತಮ್ಮಲ್ಲಿ

ತ್ರಾವೇ ಈ ಘೋರವಾದ ಯುದ್ಧದಲ್ಲಾರು ಗೆಲ್ಲುವರೋ! ಎಂದು ಚಿಂತಿಸುತ್ತಿದ್ದರು. ಆಗ ಆಕಾಶವಾಣಿಯು ದೇವತೆಗಳನ್ನು ಸಮಾಧಾನಗೊಳಿಸುತ್ತಾ 'ಎಲೈ ದೇವತೆಗಳಿರಾ! ನೀವೀರೀತಿಯಾಗಿ ಚಿಂತಿಸಬೇಡಿರಿ. ಶಿವ ಕುಮಾರನಾದ ಷಣ್ಮುಖನು ಈ ಪಾಪಿಯಾದ ತಾರಕನನ್ನು ಖಂಡಿತವಾಗಿಯೂ ಕೊಲ್ಲುವನು. ಆದುದರಿಂದ ನೀವುಗಳೆಲ್ಲರೂ ಸ್ವರ್ಗದಲ್ಲಿ ಸುಖವಾಗಿರಿ' ಎಂದು ನುಡಿಯಿತು. ಆಕಾಶವಾಣಿಯ ಮಾತುಗಳನ್ನು ಕೇಳಿ ಶಿವಕುಮಾರನು ಅತಿಯಾಗಿ ಉತ್ಸಾಹಗೊಂಡು, ದೈತ್ಯರಾಜನಾದ, ಪಾಪಿಯಾದ ತಾರಕಾಸುರನನ್ನು ಅಮೋಘವಾದ ಶಕ್ತ್ಯಾಯುಧದಿಂದ ಸ್ತನಪ್ರದೇಶದಲ್ಲಿ ಹೊಡೆದನು. ಆಬಳಿಕ ದೈತ್ಯಪುಂಗವನಾದ ತಾರಕಾಸುರನು, ಶಿವಕುಮಾರನ ಪೆಟ್ಟನ್ನು ಅಸಡ್ಡೆಮಾಡಿ, ಅತಿಕ್ರುದ್ಧನಾಗಿ ಮರಳಿಯೂ ತನ್ನ ಶಕ್ತ್ಯಾಯುಧದಿಂದ ಕುಮಾರಸ್ವಾಮಿಯನ್ನು ಬಲವಾಗಿ ಹೊಡೆದನು. ಇಂತು ತಾರಕಾಸುರನ ಶಕ್ತ್ಯಾಯುಧದಿಂದ ಹೊಡೆಯಲ್ಪಟ್ಟ ಕುಮಾರಸ್ವಾಮಿಯು ಒಂದು ಕ್ಷಣಕಾಲ ನಿಶ್ಚೇಷ್ಟಿತನಾಗಿದ್ದು ಮರಳಿಯೂ ಎದ್ದನು. ಆಗ ಋಷಿಗಣಗಳೆಲ್ಲವೂ ಶಿವಕುಮಾರನನ್ನು ಸ್ತೋತ್ರ ಮಾಡಿದವು. ಬಳಿಕ ಕುಮಾರನು, ಮದೋನ್ಮತ್ತವಾದ ಸಿಂಹನಂತೆ ಕೆರಳಿ ಆ ತಾರಕಾಸುರನನ್ನು ತನ್ನ ಶಕ್ತ್ಯಾಯುಧದಿಂದ ಹೊಡೆದನು.

ಅಯ್ಯಾ ಋಷಿಗಳಿರಾ! ಈ ಪ್ರಕಾರವಾಗಿ, ಶಕ್ತ್ಯಾಯುಧಪರಾಯಣರಾದ ತಾರಕಾಸುರನೂ, ಕುಮಾರಸ್ವಾಮಿಯೂ ಪರಸ್ಪರವಾಗಿ ಒಬ್ಬರನ್ನೊಬ್ಬರು ಗೆಲ್ಲಬೇಕೆಂದತಿಘೋರವಾಗಿ ಯುದ್ಧಮಾಡುತ್ತಲಿದ್ದರು. ಆಗ ದೇವತೆಗಳೆಲ್ಲರೂ ವಿಸ್ಮಿತಚಿತ್ತರಾಗಿ ನೋಡುತ್ತಾ ನಿಂತುಬಿಟ್ಟರು. ತಾರಕ ಮತ್ತು ಷಣ್ಮುಖರು, ಖಡ್ಗಗಳಿಂದಲೂ, ತೋಮರಗಳಿಂದಲೂ ಒಬ್ಬರನ್ನೊಬ್ಬರು ಅತಿ ಘೋರವಾಗಿ ಹೊಡೆದಾಡುತ್ತಿದ್ದರು. ಇಂತು ಕುಮಾರಸ್ವಾಮಿಗೂ ತಾರಕಾಸುರನಿಗೂ ಯುದ್ಧವು ನಡೆಯುತ್ತಿರಲು, ಗಾಳಿಯು ಸಹ ಬೀಸಲಿಲ್ಲ. ಸೂರ್ಯನು ಪ್ರಭಾಹೀನನಾದನು. ಅನಂತರದಲ್ಲಿ ಹಿಮಾಲಯನೂ, ಮೇರುವೂ

ಶ್ವೇತಾದ್ರಿಯೂ, ಮಾಲ್ಯವಂತನೂ, ಗಂಧಮಾದನನೂ, ಉದಯಾ ದ್ರಿಯೂ, ಮಹೇಂದ್ರ, ಮಲಯ, ಅಸ್ತಾಚಲಗಳೇ ಮೊದಲಾದ ಪರ್ವತರಾಜರೆಲ್ಲರೂ, ಸ್ನೇಹಪೂರ್ಣವಾದ ಮನವುಳ್ಳವರಾಗಿ ಕುಮಾ ರನನ್ನು ನೋಡಲು ಬಂದರು. ಆಗ ಷಣ್ಮುಖನು ಅತಿ ಚಿಂತಾನ್ವಿತ ರಾಗಿರುವ ಪರ್ವತರನ್ನು ನೋಡಿ ಅವರನ್ನು ಸಮಾಧಾನಗೊಳಿಸುತ್ತಾ 'ಎಲೈ ಪರ್ವತಗಳಿರಾ! ಯೋಚಿಸಬೇಡಿರಿ! ಇದಿಗೋ ಈ ಪಾಪಿಷ್ಠ ನಾದ ತಾರಕಾಸುರನನ್ನೀಗಲೇ ಯಮಾಲಯಕ್ಕೆ ಕಳುಹಿಸುವೆನು. ನೀವು ಸ್ವಲ್ಪವೂ ಯೋಚಿಸಬೇಕಾದುದಿಲ್ಲವು' ಎಂದು ಹೇಳುತ್ತಾ ತಂದೆಯಾದ ಪರಶಿವನನ್ನೂ, ತಾಯಿಯಾದ ಪಾರ್ವತಿಯನ್ನೂ ಸ್ತೋ ತ್ರಮಾಡಿನಮಸ್ಕರಿಸಿ ಅತಿಘೋರವಾದ ಶಕ್ತ್ಯಾಯುಧವನ್ನು ತೆಗೆದು ಕೊಂಡು ಮಹಾಪಾಪಿಷ್ಟನಾದ ತಾರಕಾಸುರನ ತಲೆಯನ್ನು ಒಂದು ಕ್ಷಣಮಾತ್ರದಲ್ಲಿಯೇ ಕತ್ತರಿಸಿದನು. ಇಂತು ದೇವಶತ್ರುವಾದ ತಾರಕನು ಮಡಿದುದನ್ನು ಕಂಡು, ದೇವತೆಗಳೂ, ಋಷಿಗಳೂ, ಗುಹ್ಯಕರೂ, ಕಿನ್ನರಚಾರಣರೂ, ಅಪ್ಸರೋಗಣಗಳೂ ಆನಂದಸಾಗ ರದಲ್ಲಿ ಮುಳುಗಿ ಶಿವಕುಮಾರನಾದ ಷಣ್ಮುಖನನ್ನು ಸ್ತೋತ್ರಮಾಡಿ ದರು. ಈ ಪ್ರಕಾರವಾಗಿ ಕುಮಾರಸ್ವಾಮಿಯು ಜಯಶೀಲನಾ ದನು. ಆಗ ವಿದ್ಯಾಧರಿಯರು ಸಂತೋಷದಿಂದ ನರ್ತನಮಾಡಿದರು. ದೇವ ಗಾಯಕರೂ ಸಂತಸದಿಂದ ಗಾನಮಾಡಿದರು. ಇಂತು ಜಯಶೀಲನಾದ ಕುಮಾರಸ್ವಾಮಿಯನ್ನು ಕಂಡು ಪಾರ್ವತಿಯು ತನ್ನ ತೊಡೆಯಮೇಲೆ ಕುಳ್ಳಿರಿಸಿಕೊಂಡು ಮುದ್ದಾಡಿ ಆಲಿಂಗಿಸಿ ತೊಡೆಯೊಳಲ್ಲಿ ಎತ್ತಿಕೊಂಡು ಲಾಲಿಸಿದಳು. ಆಬಳಿಕ ಗಿರಿಜೆಯು ಶಂಭುವಿನ ಅರ್ಧಾಸನೋಪವಿಷ್ಟಳಾಗಿ ಕುಮಾರನೊಡನೆ ಋಷಿಗ ಳಿಂದಲೂ, ದೇವತೆಗಳಿಂದಲೂ, ಸ್ತೋತ್ರಗೈಯಲ್ಪಟ್ಟಳು. ಆಗ ಸಿದ್ಧ ಚಾರಣ ಕಿನ್ನರ ಕಿಂಪುರುಷರೇ ಮೊದಲಾದ ದೇವತೆಗಳೆಲ್ಲರೂ, ಶಿವನೊಂದ ಕೂಡಿದ ಪಾರ್ವತಿಯನ್ನೂ, ಕುಮಾರನನ್ನೂ ಸ್ತೋತ್ರ ಮಾಡಿ, ಆರತಿಯನ್ನೆತ್ತಿದರು. ಬಳಿಕ ಹಿಮವಂತನು ತನ್ನ ಪುತ್ರರಿಂ ದಲೂ ಮೇರುವೇ ಮೊದಲಾದ ಪರ್ವತರಾಜರಿಂದಲೂ ಕೂಡಿ ಷಣ್ಮುಖ

ನನ್ನು ಸ್ತೋತ್ರಮಾಡಿದನು. ಅನಂತರದಲ್ಲಿ ದೇವತೆಗಳೂ ಋಷಿಗಳೂ ಪಾರ್ವತೀ ಪರಮೇಶ್ವರರ ಮತ್ತು ಕುಮಾರಸ್ವಾಮಿಯರ ಮೇಲೆ ಪುಷ್ಪವೃಷ್ಟಿಯನ್ನು ಸುರಿಸಿದರು. ಆ ಸಮಯದಲ್ಲಿ ವೇದಘೋಷಗಳಿಂದಲೂ ಗೀತವಾದಿತ್ರಘೋಷದಿಂದಲೂ ಶಿವಪಾರ್ವತಿಯರೂ, ಕುಮಾರನೂ ನೀರಾಜಿತರಾದರು. ಅಯ್ಯಾ ಋಷಿಗಳಿರಾ! ಈ ಕುಮಾರಸ್ವಾಮಿಯ ವಿಜಯವೆಂಬ ಈ ಚರಿತ್ರೆಯು ಸರ್ವಪಾಪಪ್ರಣಾಶಕರವಾದುದು. ಸಕಲ ಪುರುಷಾರ್ಥಗಳೂ ಈ ಚರಿತ್ರೆಯನ್ನೋದುವುದರಿಂದ ಲಭ್ಯವಾಗುವುದು. ಈ ಚರಿತ್ರೆಯನ್ನು ಮನುಷ್ಯರು ಪ್ರತಿನಿತ್ಯವೂ ಪಠಿಸಿದರೆ, ಸರ್ವಪಾಪಪ್ರಣಾಶವಾಗಿ ಸಕಲ ಸೌಭಾಗ್ಯಪ್ರದವಾಗುವುದು.

## ಅಧ್ಯಾಯ ೩೧

### ಷಣ್ಮುಖನ ಮಹಿಮೆ

ಶೌನಕಾದಿಮಹರ್ಷಿಗಳು ಸೂತಪುರಾಣಿಕನನ್ನು ಕುರಿತು 'ಎಲೈ ಸೂತನೇ! ಮಹಾತ್ಮನಾದ ಷಣ್ಮುಖನು ಯುದ್ಧದಲ್ಲಿ ಪಾಪಿಯಾದ ತಾರಕನನ್ನು ಸಂಹಾರಮಾಡಿದನಂತರ ಯಾವ ಅದ್ಭುತ ಕಾರ್ಯವನ್ನು ಮಾಡಿದನು ? ಯಾವ ಪರಮೇಶ್ವರನಿಂದೀ ಪ್ರಪಂಚವೋ ಮತ್ತಾವನು ಶ್ರೇಷ್ಠವಾದ ತಪಸ್ಸಿನಿಂದ ಸಂತುಷ್ಟನಾಗಿ ಪರಮಪದವಿಯನ್ನು ಕೊಡುವನೋ, ಅಂತಹ ಲಿಂಗಸ್ವರೂಪಿಯಾದ ಪರಶಿವನ ಅಪರಾವತಾರನೇ ಈ ಕುಮಾರ ಸ್ವಾಮಿಯು. ಅಯ್ಯಾ ಸೂತನೇ! ಮಹಾತ್ಮನಾದ ಈ ಶಿವಕುಮಾರನ ದರ್ಶನದಿಂದ ಮನುಜರು ಸಮಸ್ತ ಇಷ್ಟಾರ್ಥಗಳನ್ನೂ ಹೊಂದುವರು. ಇಷ್ಟೆಯಲ್ಲದೆ, ಕುಮಾರಸ್ವಾಮಿಯ ದರ್ಶನ ಮಾಡಿದವನು, ಪಾಪಿಯೇ ಆಗಲಿ,

ಅಧರ್ಮಿಷ್ಠನೇ ಆಗಲಿ, ಶ್ವಪಚನೇ ಆಗಲಿ, ಪಾಪರಾಶಿಗಳಿಂದ ಬಿಡಲ್ಪಡುವನು. ಮಹಾತ್ಮಾ! ಕುಮಾರಸ್ವಾಮಿಯು ತಾರಕಾಸುರನನ್ನು ರಣರಂಗದಲ್ಲಿ ವಧಿಸಿದ ತರುವಾಯ ಏನೇನು ಮಾಡಿದನೆಂಬುದನ್ನು ವಿಸ್ತಾರವಾಗಿ ಹೇಳುವವನಾಗು' ಎಂಬ ಶೌನಕಾದಿ ಋಷಿಗಳ ಮಾತನ್ನು ಕೇಳಿ ಮಹಾ ಪ್ರಾಜ್ಞನಾಗಿಯೂ ವ್ಯಾಸ ಶಿಷ್ಯನಾಗಿಯೂ ಇರುವ ಸೂತನು ಕುಮಾರಸ್ವಾಮಿಯ ಚರಿತ್ರೆಯನ್ನು ಹೇಳಲುಪಕ್ರಮಿಸಿದನು.

ಅಯ್ಯಾ ಋಷಿಗಳಿರಾ! ಕೇಳಿರಿ. ಶಿವಪುತ್ರನಾದ ಕುಮಾರಸ್ವಾಮಿಯು ರಣರಂಗದಲ್ಲಿ ದೇವತೆಗಳಿಗೂ ಅಜೇಯನಾದ ಮಹಾ ಪಾಪಿಯಾದ ತಾರಕಾಸುರನನ್ನು ಗೆದ್ದು ಜಯಶಾಲಿಯಾದನು. ಈ ಕುಮಾರಸ್ವಾಮಿಯ ಮಹಿಮೆಯು ಚತುಶ್ಶಾಸ್ತ್ರಗಳಲ್ಲಿಯೂ, ಚತುರ್ವೇದಗಳಲ್ಲಿಯೂ, ಅಷ್ಟಾದಶಪುರಾಣಗಳಲ್ಲಿಯೂ, ಉಪನಿಷತ್ತುಗಳಲ್ಲಿಯೂ, ಎರಡು ಮೀಮಾಂಸಗಳಲ್ಲಿಯೂ ಬಣ್ಣಿಸಲ್ಪಟ್ಟಿರುವುದು. ಇಂತು ಮಹಿಮಾಸ್ಪದನಾದ ಕುಮಾರಸ್ವಾಮಿಯ ಮಹಿಮೆಯನ್ನು ವರ್ಣಿಸಲಾರಿಂದಲೂ ಸಾಧ್ಯವಲ್ಲವು. ಅಯ್ಯಾ ಋಷಿಗಳಿರಾ! ಯಾವ ಕುಮಾರಸ್ವಾಮಿಯ ದರ್ಶನ ಮಾತ್ರದಿಂದಲೇ ಸಕಲವಾದೀಪ್ರಪಂಚವೆಲ್ಲವೂ ಪುನೀತವಾಗುವುದೋ, ಆ ಶಿವಕುವರನ ಮಹಿಮೆಯನ್ನು ಬಣ್ಣಿಸಲಾರಿಂದಲೂ ಸಾಧ್ಯವಲ್ಲವು. ಇಂತು ಮಹಿಮಾಸ್ಪದನಾದ ಷಣ್ಮುಖನ ಮಹಿಮೆಯನ್ನು ಕೇಳಿ ಯಮಧರ್ಮನು ಚಿಂತಾನ್ವಿತನಾಗಿ ಪರಶಿವನಲ್ಲಿಗೆ ಬಂದು, ನಮಸ್ಕಾರಪೂರ್ವಕವಾಗಿ ಸಂತೋಷಪಡಿಸಿದನದೆಂತೆನೆ:— 'ಎಲೈ ಸ್ವಾಮಿಯಾದ ಪರಶಿವನೇ! ಭರ್ಗನಾಗಿಯೂ, ದೇವದೇವನಾಗಿಯೂ, ದೇವತೆಗಳ ಒಡೆಯನಾಗಿಯೂ ಇರುವ ನಿನಗೆ ನಮಸ್ಕಾರವು! ಎಲೈ ದೇವಾ! ಮೃತ್ಯುಂಜಯನಾಗಿಯೂ, ರುದ್ರನಾಗಿಯೂ, ಕಾಲನಾಗಿಯೂ, ಕಾಲನಾಥನಾಗಿಯೂ, ಕಪರ್ದಿಯಾಗಿಯೂ ಇರುವ ನಿನಗೆ ಅನನ್ಯ ನಮಸ್ಕಾರವು! ಎಲೈ ಶಂಕರನೇ! ನೀಲಕಂಠನಾಗಿಯೂ, ಶರ್ವನಾಗಿಯೂ, ವ್ಯೋ

ಮಹೇ ಶಿವಮಯವಾಗಿ ಉಳ್ಳ ತ್ರಿಭುವನೈಕನಾಥನಾದ ನಿನಗೆ ನಮಸ್ಕಾರವು' ಇಂತು ಪ್ರಾರ್ಥಿಸಿದ ಯಮನನ್ನು ಕುರಿತು ಕೈಲಾಸ ವಾಸಿಯಾದ ಗೌರೀಶನು 'ಎಲೈ ಏತಕ್ಕಾಗಿ ಬಂದಿರುವೆ? ಜಾಗ್ರತೆ ಯಾಗಿ ತಿಳಿಸುವವನಾಗು' ಎಂದು ನುಡಿದನು. ಆಗ ಯಮನು ನುಡಿದನದೆಂತೆನೆ:—

ಎಲೈ ದೇವೇಶನಾದ ಶಂಕರನೇ! ಕೇಳು. ನೀನಾದರೋ ಶ್ರೇಷ್ಠ ವಾದ ತಪಸ್ಸಿನಿಂದ ಸಂತಸಹೊಂದಿ ಸಕಲರನ್ನೂ ಕಾಪಾಡುವೆ. ಈ ಬ್ರಹ್ಮನಾದರೋ ಕೇವಲ ಕರ್ಮದಿಂದ ಸಂತಸಗೊಂಡು ವರಗ ಳನ್ನು ಸಲ್ಲಿಸುವನು. ದೇವ ಲಾಲಿಸು! ವೇದವೇದ್ಯನಾದ, ಸನಾತ ನನಾದೀ ವಿಷ್ಣುವಾದರೋ ಅನೇಕ ಯಜ್ಞಗಳಿಂದ ಸಂತಸಗೊಂಡು ತನ್ನ ಪದವಿಯನ್ನೇ ಕೊಡುವನು. ಮನುಷ್ಯರೆಲ್ಲರೂ ನಾನು ಹೇಳಿ ದಂತೆಯೇ ನುಡಿಯುವರು. ನನ್ನ ಮಾತು ಬೇರೆಯಲ್ಲ. ಕೇವಲಸ್ತೋ ತ್ರಗಳಿಂದ ಇಂದ್ರನು ಸಂತುಷ್ಟನಾಗಿ ಸ್ವರ್ಗಭೋಗಗಳನ್ನು ಕೊಡು ವನು. ಸೂರ್ಯನಾದರೋ ಕೇವಲ ನಮಸ್ಕಾರಗಳಿಂದ ಸಂತುಷ್ಟ ನಾಗಿ ಆರೋಗ್ಯ ಭಾಗ್ಯವನ್ನೀಯುವನು. ನಿನ್ನ ಮಗನಾದ ಗಣ ಪತಿಯಾದರೋ ಅರ್ಘ್ಯವೇನು, ಪಾದ್ಯವೇನು, ಚಂದನ, ಮಂತ್ರಗಳೇ ಮೊದಲಾದವುಗಳಿಂದ ಸಂತುಷ್ಟನಾಗಿ ಸಕಲವಿಘ್ನಗಳನ್ನೂ ನಿರ್ವಿಘ್ನ ದಳನ್ನಾಗಿ ಮಾಡುವನು. ದೇವಾ! ಉಳಿದ ಅಷ್ಟದಿಕ್ಪಾಲಕರೆಲ್ಲರೂ ಯಜ್ಞಗಳೇನು, ದಾನಗಳೇನು, ಇವುಗಳಿಂದ ಸಂತುಷ್ಟರಾಗಿ ತಮ್ಮ ತಮ್ಮ ಶಕ್ತ್ಯಾನುಸಾರ ವರಗಳನ್ನು ಕೊಡುವರು. ಆದರೆಲೈ ಶಂಕ ರನೇ! ನಿನ್ನೀ ಕುಮಾರನಾದ ಷಣ್ಮುಖನು ಸಕಲ ಪ್ರಾಣಿಗಳಿಗೂ ಸ್ವರ್ಗದ ಬಾಗಿಲುಗಳನ್ನು ತೆಗೆದುಹಾಕಿರುವನು. ಇದೆಂತಹ ಮಹ ದಾಶ್ಚರ್ಯಕರವಾದ ಕಾರ್ಯವಾಗಿರುವುದು. ಎಲೈ ಮಹಾದೇವನೆ! ಈ ನಿನ್ನ ಮಗನಾದ ಷಣ್ಮುಖನ ದರ್ಶನಮಾತ್ರದಿಂದಲೇ, ಸಕಲರೂ ಪಾಪಿಷ್ಠರಾದವರೂ ಸ್ವರ್ಗಭೋಗಗಳನ್ನು ಹೊಂದುವವರಾಗುತ್ತಾರೆ. ಇದರಲ್ಲಿ ಸ್ವಲ್ಪವೂ ಸಂದೇಹವಿಲ್ಲವು. ಆದುದರಿಂದೆಲೈ ದೇವಾ!

ಪಾಪಿಗಳನ್ನು ಶಿಕ್ಷಿಸುವುದರಲ್ಲಿಯೂ ಪುಣ್ಯವಂತರನ್ನು ಪುಣ್ಯಾತ್ಮರು ಪಡೆವ ಲೋಕಗಳಿಗೆ ಕಳುಹಿಸುವುದರಲ್ಲಿಯೂ, ನಾನಾವ ಕಾರ್ಯವನ್ನು ಮಾಡಬೇಕು ? ಎಲೈ ಮಹಾದೇವನೇ! ಆದದರಿಂದಾಲಿಸು. ಸತ್ಯಶೀಲರಾಗಿಯೂ, ಶಾಂತರಾಗಿಯೂ, ನಿರವಗ್ರಹರಾಗಿಯೂ, ಜಿತೇಂದ್ರಿಯರಾಗಿಯೂ ಉದಾರಿಗಳಾಗಿಯೂ, ಕಾಮಕ್ರೋಧಾದಿಗಳನ್ನು ಜಯಿಸಿದವರಾಗಿಯೂ, ಯಜ್ಞಯಾಗಾದಿಗಳನ್ನು ಮಾಡಿದ್ದವರಾಗಿಯೂ, ಧರ್ಮನಿಷ್ಠರಾಗಿಯೂ, ವೇದವೇದಾಂಗ ಪಾರಂಗತರಾಗಿಯೂ ಇರುವ ಮನುಷ್ಯರು ಯಾವ ಪುಣ್ಯ ಲೋಕಗಳಿಗೆ ಹೋಗುತ್ತಲಿದ್ದರೋ, ಅಲ್ಲಿಗೇ ಕುಮಾರಸ್ವಾಮಿಯ ದರ್ಶನಗೈದವರು ಶ್ವಪಚರೇ ಆಗಲಿ, ಪಾಪಿಷ್ಠರೇ ಆಗಲಿ, ಅಧಮರೇ ಆಗಲಿ ಹೋಗುತ್ತಲಿರುವರು. ಎಲೈ ಶಂಕರನೇ! ನಿನ್ನ ಮಗನಾದ ಕುಮಾರಸ್ವಾಮಿಯ ಕಾರ್ಯವನ್ನೇನೆಂದು ಹೇಳಲಿ! ಕಾರ್ತೀಕ ಮಾಸದಲ್ಲಿ ಕೃತ್ತಿಕಾನಕ್ಷತ್ರ ಯೋಗದಲ್ಲಿ ನಿನ್ನೊಡನೆ ಇರುವ ಕುಮಾರಸ್ವಾಮಿಯನ್ನು ದರ್ಶನಗೈದು, ಅನೇಕರು ಕೋಟ್ಯಾನು ಕುಲಗಳೊಂದಿಗೆ ಕ್ರೂರಿ ನನ್ನ ಸ್ಥಾನಕ್ಕೆ ಬರುವುದನ್ನು ತ್ಯಜಿಸಿ ಸ್ವರ್ಗಲೋಕವನ್ನು ಸೇರುವರು. ಎಲೈ ಪ್ರಭುವೇ! ಕುಮಾರಸ್ವಾಮಿಯನ್ನು ದರ್ಶನಮಾಡಿದ್ದ ಶ್ವಪಚನೂ ಶೀಘ್ರವಾಗಿ ಸ್ವರ್ಗವನ್ನು ಸೇರುವನು. ಈಗ ನಾನೇನು ಮಾಡಲಿ? ಎಂದು ನುಡಿದ ಯಮಧರ್ಮರಾಜನ ಮಾತುಗಳನ್ನು ಕೇಳಿ ಪರಶಿವನು ಹೇಳುತ್ತಾನೆ.

'ಎಲೈ ಧರ್ಮರಾಯನೇ! ಕೇಳು. ಪುಣ್ಯ ಕರ್ಮಿಗಳಾದ ನರರಿಗೆ ಅಂತ್ಯಕಾಲದಲ್ಲಿ ಪಾಪವು ಅವರಿಗಿರುವ ಕಳಂಕ ಮನಸ್ಸಿನಿಂದುಂಟಾಗುವುದು. ಅಂತಹರಿಗೆ ಶ್ರೇಷ್ಠವಾದ ತೀರ್ಥಯಾತ್ರೆಯನ್ನು ಮಾಡಿ, ಮಹಾತ್ಮರ ಸಂದರ್ಶನವನ್ನು ಮಾಡಬೇಕೆಂಬಭಿಲಾಷೆಯು ಪೂರ್ವಜನ್ಮ ಸಂಸ್ಕಾರಾನುಸಾರವಾಗಿ ಹುಟ್ಟುವುದು. ಆದ್ದರಿಂದ ಸಕಲ ಪ್ರಾಣಿಗಳೂ ಅನೇಕ ಜನ್ಮಗಳನ್ನೆತ್ತಿ ಅಂತ್ಯದಲ್ಲಿ ನನ್ನ ಭಾವವನ್ನು ಹೊಂದುತ್ತವೆ. ಎಲೈ ಯಮನೇ! ಕೇಳು. ಪ್ರಾಣಿಗಳೆಲ್ಲವೂ

ಕೇವಲ ಜನ್ಮಾಭ್ಯಾಸದಿಂದಲೇ ನನ್ನ ಭಾವವನ್ನು ಹೊಂದಬೇಕೇ ಹೊರ್ತು ಮತ್ತೆ ಬೇರೆಯುಲ್ಲವು. ಆದುದರಿಂದೆಲೈ ಯುಮುನೇ! ಯಾರಯಾರ ಬುದ್ಧಿಯು ಅವರವರ ಜನ್ಮಾನುವೃತ್ಯಾನುಸಾರ ವಾಗಿ ಅನುವೃತ್ತಿಯಾಗುತ್ತವೆಯೋ, ಅವರೆಲ್ಲರೂ ಪುಣ್ಯಶಾಲಿಗಳೇ ಸರಿ. ಅಯ್ಯಾ ಯುಮುನೇ! ಸ್ತ್ರೀ ಬಾಲಶೂದ್ರರೂ, ಶ್ವಪಚರೂ, ಮತ್ತು ಅಧಮರೂ ಪೂರ್ವಜನ್ಮ ಸಂಸ್ಕಾರಾನುಸಾರವಾಗಿ ಪಾಪ ಯೋನಿಗಳಲ್ಲಿ ಬಿದ್ದು ಜನಿಸಿದ್ದರೂ ಪುನರ್ೋನುವೃತ್ತಿಯಿಂದ ಶುದ್ಧ ರಾಗುತ್ತಾರೆ. ಹಾಗೆಯೇ ಎಲ್ಲರೂ, ಸಕಲ ವಿಷಯುಗಳಲ್ಲಿಯೂ ಸಂಸ್ಕಾರಬಲದಿಂದಲೇ ವಿಕಸಿತ ಮನಸ್ಕರಾಗಿ ಇದನ್ನು ತಿಳಿಯು ತ್ತಾರೆ. ಇದರಲ್ಲಿ ನೀನು ಆಶ್ಚರ್ಯಪಡಬೇಕಾದುದಿಲ್ಲವು. ಕೇಳು! ಸಕಲರೂ ಪ್ರಾಕ್ತನ ಜನ್ಮ ಸಂಸ್ಕಾರಬಲದಿಂದ ದೇವತೆಗಳಾಗಿಯೂ, ದೇವೇಂದ್ರರಾಗಿಯೂ, ಲೋಕಪಾಲಕರಾಗಿಯೂ ಆಗುತ್ತಾರೆ. ನೋಡು! ಈ ಋಷಿಗಳೂ, ಈ ದೇವತೆಗಳೂ, ಈ ಭೂತಗಣಗಳೂ, ಇವೆಲ್ಲವೂ ಪ್ರಾಕ್ತನ ಜನ್ಮ ಸಂಸ್ಕಾರಬಲದಿಂದಲೇ ಹುಟ್ಟಿರುವರು. ಇಂತಹುದರಲ್ಲಿ ನನ್ನ ಮಗನಾದ ಷಣ್ಮುಖನ ದರ್ಶನದಿಂದುಂಟಾಗಿ ರುವ ಆಶ್ಚರ್ಯವನ್ನು ನನ್ನಲ್ಲಿ ಹೇಳಬೇಡ. ಈ ವಿಷಯದಲ್ಲಿ ನೀನಾ ಶ್ಚರ್ಯ ಪಡಬೇಕಾದುದೂ ಇಲ್ಲವು. ಕರ್ಮಬದ್ಧವಾಗಿರುವ ಮಾತು ಸಕಲರಿಗೂ ಫಲದಾಯಕವಾದದ್ದು. ಎಲೈ ಕಾಲನೇ! ಕೇಳು ಸಕ ಲರೂ ತಮ್ಮ ತಮ್ಮ ಮನಶ್ಶುದ್ಧಿಗೋಸುಗ ತೀರ್ಥಯಾತ್ರೆಗಳನ್ನೂ, ಯಜ್ಞಗಳನ್ನೂ, ವಿವಿಧಗಳಾದ ದಾನಗಳನ್ನೂ ಮಾಡಲೇಬೆಕು. ಇದರಲ್ಲಿ ವಿಚಾರಮಾಡಬೇಕಾದುದಿಲ್ಲವು. ಮನಸ್ಸಿನಲ್ಲ ಭಾವಿಸಲ್ಪಟ್ಟ ಆತ್ಮನು ನಾನಲ್ಲ. ನಾನಾದರೊ ಸಕಲ ಪ್ರಾಣಿಗಳಲ್ಲಿಯೂ ನೆಲಸಿ ರುವ ಆತ್ಮನು. ಕೇಳು! ನಾನು ಯಾವಾಗಲೂ ಚರಾಚರ ಪ್ರಾಣಿ ಗಳಲ್ಲಿ ಭಾವಯುಕ್ತನಾಗಿಯೂ, ಆತ್ಮಸಂಸ್ಥನಾಗಿಯೂ, ನಿರಂತರ ನಾಗಿಯೂ ಇರುವೆನು. ಸತ್ಯವಾಗಿಯೂ ಹೇಳುತ್ತಲಿರುವೆನು. ಅಯ್ಯಾ ಯುಮುನೇ! ದ್ವಂದ್ವಾತೀತನಾಗಿಯೂ, ವಿಕಲ್ಪಶೂನ್ಯನಾ ಗಿಯೂ, ಸ್ವಸ್ಥನಾಗಿಯೂ, ಶಾಶ್ವತನಾಗಿಯೂ, ನಿತ್ಯಮುಕ್ತನಾ

ಗಿಯೂ, ನಿರೀಹನಾಗಿಯೂ, ಕೂಟಸ್ಥನಾಗಿಯೂ, ವಿಕಲ್ಪಭೇದ ದಿಂದ ಬಹಿಷ್ಕೃತನಾಗಿಯೂ, ಬೋಧ ಬೋಧ್ಯನಾಗಿಯೂ, ಅನಂತ ನಾಗಿಯೂ, ಕೇವಲ ಬೋಧಲಕ್ಷಣನಾಗಿಯೂ ಇರುವ ನನ್ನ ಸ್ವರೂಪವಾದ ತಮ್ಮ ಆತ್ಮವನ್ನೇ, ಈ ಜೀವರಾಶಿಗಳು, ಸಂಸಾರಸ್ಥರೂ ಮರೆತುಬಿಟ್ಟಿರುವಂತೆ ತೋರುವುದು. ಕೇಳೈ ಯಮುನೆ! ಈ ಸತ್ವರಜಸ್ತಮೋಗುಣಯುತರಾದ ಬ್ರಹ್ಮ ವಿಷ್ಣು ಮಹೇಶ್ವರರೂ ನಾನೇ ಯೆಂದು ತಿಳಿ. ಸೃಷ್ಟಿ ಸ್ಥಿತಿ ಲಯವೆಂಬ ಮೂರು ಕಾರ್ಯಗಳೂ ನನ್ನದೇ ಎಂದರಿಯುವವನಾಗು. ಬ್ರಹ್ಮವಿಷ್ಣು ಮಹೇಶ್ವರರೂ, ದೇವತೆಗಳೂ, ಮನುಷ್ಯ ಪಕ್ಷಿಗಳೂ, ಅಹಂಕಾರಾವೃತವಾದ ಕರ್ಮದಿಂದಲೇ ಮಾಡಲ್ಪಟ್ಟಿರುವವು. ಪಶುಗಳೇ ಮೊದಲಾದ ಬೇರೆ ಬೇರೆಯಾಗಿರುವ ಇನ್ನೂ ಅನೇಕವು ಬೇರೆಬೇರೆಯಾಗಿರುವ ಗುಣವನ್ನೊಳಗೊಂಡಿರುವವು. ಇವುಗಳೆಲ್ಲವೂ ಹಸಿವು ಬಾಯಾರಿಕೆಗಳಿಗೆ ಸಿಕ್ಕಿ ಮಾಯೆಯಿಂದ ವಶೀಕೃತಗಳಾಗಿರುವುವು. ದೇವತೆಗಳೆಲ್ಲರೂ, ಪ್ರಾಜ್ಞರು; ಪಂಡಿತಮಾನಿನಿಗಳು; ಪರಸ್ಪರವಾಗಿ ದೂಷಿಸುತ್ತಲೂ, ಸುಳ್ಳುವಾದಗಳನ್ನಾಡುವುದರಲ್ಲಿ ನಿರುತರಾಗಿಯೂ, ಖಳರಾಗಿಯೂ, ಸತ್ವ ರಜಸ್ತಮೋಗುಣ ಭರಿತರಾಗಿಯೂ, ತತ್ವಹೀನರಾಗಿಯೂ, ಕಾಮ,ಕ್ರೋಧ, ಲೋಭ, ಮೋಹ, ಮದಮಾತ್ಸರ್ಯಗಳೆಂಬ ಅರಿಷಡ್ವರ್ಗಗಳಿಂದ ಕೂಡಿದವರಾಗಿಯೂ, ಬಹಿರ್ಮುಖರಾಗಿಯೂ ಇರುವರು. ಆದುದರಿಂದೀಪ್ರಕಾರವಾಗಿರುವ ಗುಣಧಾಮದಿಂದ, ಗುಣಾತೀತವಾಗಿರುವ ಯಾವ ವಸ್ತುವಿನಲ್ಲಿ ಪರಮಾರ್ಥವೊಂದೇ ದರ್ಶನವುಳ್ಳದ್ದಾಗಿಯೂ, ಯಾವುದರಲ್ಲಿ ಭೇದವೆಂಬುದು ಅಭೇದವಾಗಿಯೂ ಯಾವುದರಲ್ಲಿ ಅನುರಾಗವೆಂಬುದು ರಾಗ ರಹಿತವಾಗುವುದೋ, ಯಾವುದರಲ್ಲಿ ಕ್ರೋಧವು, ನಾಶವಾಗುವುದೋ ಆ ಸ್ಥಾನವೇ ಪರಮ ಪದವಿಯೆಂಬುದು.

ಕೇಳೈ ಯಮುನೇ! ಆ ಸ್ಥಾನದಲ್ಲಿ ಪೂರ್ಣಘಟದಲ್ಲಿ ಹೇಗೆ ಶಬ್ದವು ಭಾಸಮಾನವಾಗುವುದಿಲ್ಲವೋ ಹಾಗೆಯೇ ಶಬ್ದವು ಭಾಸ

ಮಾನವಾಗುವುದಿಲ್ಲ. ಅಯ್ಯಾ ಯಮುನೇ! ಶಬ್ದವು ಮಹತ್ತರವಾದ ಪ್ರವೃತ್ತಿಯಿಂದ ಹುಟ್ಟುವುದು. ಕೇಳು! ಪ್ರವೃತ್ತಿಯೂ ನಿವೃತ್ತಿಯೂ, ಹಾಗೆಯೇ ಎಲ್ಲೆಲ್ಲಿಯೂ ಇರುವ ದ್ವಂದ್ವಗಳು ಈಸ್ಥಾನದಲ್ಲಿ ಲಯವನ್ನು ಹೊಂದುತ್ತವೆ. ಈ ಸ್ಥಾನವೇ ಶಾಶ್ವತವಾದುದು. ನಿರಂತರವಾಗಿಯೂ ಗುಣರಹಿತವಾಗಿಯೂ, ನಿರಂಜನವಾಗಿಯೂ, ನಿರ್ವಿಕಾರವಾಗಿಯೂ, ನಿರೀಹವಾಗಿಯೂ, ಸತ್ಪಾತ್ರವಾಗಿಯೂ ಜ್ಞಾನಗಮ್ಯವಾಗಿಯೂ, ಸ್ವತಸ್ಸಿದ್ಧವಾಗಿಯೂ, ಸ್ವಯಂ ಪ್ರಕಾಶವಾಗಿಯೂ, ಅಮೋಘವಾದ ಪ್ರಭೆಯಿಂದ ಕೂಡಿರುವುದಾಗಿಯೂ, ಬೋಧಗಮ್ಯವಾಗಿಯೂ ಇರುವ ಈ ಜ್ಞಾನವನ್ನು ಜ್ಞಾನಿಗಳು ತಿಳಿಯುತ್ತಾರೆ. ಇಂತು ತಿಳಿದುಕೊಂಡು ಸರ್ವಾತ್ಮನಾದ ನನ್ನನ್ನು ನಿರೀಕ್ಷಿಸುತ್ತಾರೆ. ಇದರಿಂದ ಜ್ಞಾನಿಗಳೆಲ್ಲರೂ ಸ್ವಸ್ಥಮಾನಸಚಿತ್ತರಾಗಿ ಸಮಬುದ್ಧಿಯುಳ್ಳವರಾಗಿ ಚರಿಸುತ್ತಾರೆ. ಕೇಳೈ ಯಮುನೇ ! ಜ್ಞಾನಿಗಳು ಅನಾದಿಮೂಲವಾಗಿಯೂ, ಮಾಯಾಮಯವಾಗಿಯೂ ಮಾಯೆಯಿಂದ ದುರ್ವಿಚಾರ್ಯವಾಗಿಯೂ ಇರುವ ಸಂಸಾರ ಸಾಗರವನ್ನು ದಾಟಿ, ಮಾಯೆಯನ್ನು ತ್ಯಜಿಸಿ, ಅಹಂಕಾರ ಶೂನ್ಯರಾಗಿ, ರಾಗದ್ವೇಷಾದಿಗಳನ್ನೊದರಿ, ನಿರ್ವಿಕಲ್ಪವಾದ ನನ್ನ ಪದವಿಯನ್ನು ಹೊಂದುತ್ತಾರೆ. ಅಯ್ಯಾ ಯಮುನೇ ! ಈ ಸಂಸೃತಿಯೆಂಬುದು ಕಲ್ಪನೆಯ ಮೂಲವು. ಅಯ್ಯಾ, ಯಮಧರ್ಮರಾಯನೇ ! ಕೇಳು. ಮುತ್ತಿನಚಿಪ್ಪನ್ನು ಬೆಳ್ಳಿಯೆಂತಲೂ, ಹಗ್ಗವನ್ನು ಹಾವೆಂತಲೂ, ಬಿಸಿಲಿನ ದೊರೆಯನ್ನು ನೀರೆಂದು, ಅರಿಯುವುದೂ, ಸುಳ್ಳನ್ನು ನಿಜವೆಂದೂ, ಸ್ವೇಚ್ಛಾ ಗಮನದಿಂದ ಸಿದ್ಧಿಯಾಗುವುದೆಂದರಿಯುವುದೂ, ಸೇವಾವೃತ್ತಿಯು ಸುಳ್ಳೆಂದೂ, ಪರಾನುವೃತ್ತನಾಗಿದ್ದರೂ, ಸ್ವತಂತ್ರನೆಂದು ಭಾವನೆಯನ್ನು ಮಾಡಿಕೊಂಡಿರುವುದೂ ಇವೇ ಮೊದಲಾದವುಗಳನ್ನು ದೂರೀಕರಿಸಿ ಪರಮಾತ್ಮನೊಬ್ಬನಿರುವನೆಂದರಿತು, ಅಹಂಕಾರ ಶೂನ್ಯರಾಗಿಯೂ, ನಿರಪಗ್ರಹರಾಗಿಯೂ ಇರುವ ನರರಿಗೆ ಇಹಸಂಸಾರ ಬಂಧಗಳೆಲ್ಲಿಂದ ಬರುವವು? ಕೇಳೈ ಯಮುನೆ ! ಈ ಪ್ರಕಾರವಾಗಿ ಮಮಕಾರವನ್ನು ತ್ಯಜಿಸಿ ಪರಮಪದವಿಯನ್ನು

ಹೊಂದಬೇಕೆಂದಿರುವವರೇ, ರಾಗದ್ವೇಷಾದಿಗಳನ್ನೂ ಇಂದ್ರಿಯಗ್ರಾಮಗಳನ್ನೂ ಗೆದ್ದಿರುವ ಜ್ಞಾನಿಗಳು. ಮತ್ತು ವಿದ್ವಾಂಸರು. ಕೇಳು ಯಾರು ರಾಗದ್ವೇಷಾದಿಗಳನ್ನೂ, ಲೋಭ ಮೋಹಗಳನ್ನೂ, ಮಮತೆಯನ್ನೂ ತ್ಯಜಿಸುತ್ತಾರೆಯೋ, ಅವರೆಲ್ಲರೂ, ಕಾಮಕ್ರೋಧಾದಿಗಳಿಂದ ಬಹಿಷ್ಕೃತರಾಗಿ ಪರಮಪದವಿಯನ್ನೈದುವರು. ಯದುವರೆವಿಗೂ, ನರನಿಗೆ ಕಾಮಕ್ರೋಧಾದಿ ಅರಿಷಡ್ವರ್ಗಗಳಿರುವುವೋ ಅದುವರೆವಿಗೂ ಅವನು ಸಿದ್ಧಿಯನ್ನೈದುವುದಿಲ್ಲ. ಅಂತಹರೆಲ್ಲರೂ ಕೇವಲ ಶಬ್ದಬೋಧಕರಾಗಿರುತ್ತಾರೆ.'

ಇಂತು ನುಡಿದ ಪರಶಿವನ ಮಾತುಗಳನ್ನು ಕೇಳಿ ಯಮನು 'ಎಲೈ ಪ್ರಭುವಾದ ಶಂಕರನೆ! ಶಬ್ದಗಳಿಂದ ಶಬ್ದಗಳುಂಟಾಗುವುದು. ನಿಶ್ಶಬ್ದವೇ ಜ್ಞಾನವು. ಇಂತಿರುವಲ್ಲಿ ಶಬ್ದನೇ ಅನಿತ್ಯವೆಂದು ಹೇಗೆ ಹೇಳಿದೆ? ಇದನ್ನು ತಿಳಿಸುವವನಾಗು. ಅಕ್ಷರವು ಕೇವಲ ಬ್ರಹ್ಮ ಪದಾರ್ಥವು. ಶಬ್ದವಾದರೋ ಅಕ್ಷರಗಳಿಂದ ಕೂಡಿರುವುದು. ಆದುದರಿಂದ ನೀನು ಹೇಳಿದಂತೆ ಶಬ್ದವು ನಿರೀಕ್ಷಕವೆಂದು ಸ್ಮೃತಿಯಾಯಿತು' ಶಬ್ದವನ್ನು ಬಿಟ್ಟು ಪ್ರತಿಪಾದ್ಯವು ಹೇಗೆತಾನೇ ಆಗುವುದು. ಎಲೈ ದೇವಾ! ಅದನ್ನೆಲ್ಲವನ್ನೂ ವಿಶದವಾಗಿ ಹೇಳುವವನಾಗು' ಎಂದು ಕೇಳಿದನು. ಯಮನ ಮಾತುಗಳನ್ನು ಕೇಳಿ ಲೋಕೈಕ ಶಂಕರನಾದ ಶಿವನು ಅವನನ್ನು ಕುರಿತು ಹೇಳುತ್ತಾನೆ. 'ಕೇಳೈ ಯಮನೇ! ಸಾವಧಾನಚಿತ್ತನಾಗಿಯೂ, ಶ್ರದ್ಧೆಯುಳ್ಳವನಾಗಿಯೂ ಕೇಳುವವನಾಗು. ಯಾವ ನನ್ನ ಮಾತುಗಳನ್ನು ಕೇಳಿದ ಮಾತ್ರದಿಂದಲೇ ತಿಳಿದುಕೊಳ್ಳಬೇಕಾದ ವಿಷಯವು ಸ್ವಲ್ಪವೂ ಉಳಿದಿರುವುದಿಲ್ಲವೋ ಅಂತಹ ನನ್ನ ಮಾತುಗಳನ್ನು ಕೇಳುವವನಾಗು. ಅಯ್ಯಾ ಯಮನೇ! ಜ್ಞಾನವಾದಿಗಳಾದ ಋಷಿಗಳೆಲ್ಲರೂ ಜ್ಞಾನಾಭ್ಯಾಸದಿಂದ ಜ್ಞಾನವನ್ನು ತಿಳಿದವರಾಗುತ್ತಾರೆ. ಜ್ಞಾನವೆಂದರೇನು ? ಜ್ಞೇಯವೆಂದರೇನು ? ಜ್ಞಾನವನ್ನು ತಿಳಿದುಕೊಂಡು ಹೇಳುವುದು ಹೇಗೆ? ಯಾರು ಅದನ್ನು ತಿಳಿದುಕೊಳ್ಳಬೇಕು? ಅದನ್ನು ಹೇಳುವು

ದರಿಂದೇನು ದೊರೆಯುವುದು ? ಎಂಬಿವೇ ಮೊದಲಾದವುಗಳನ್ನು ವಿವರವಾಗಿ ತಿಳಿಸುತ್ತೇನೆ ಕೇಳು ! ಆಯ್ಯಾ ಯಮಧರ್ಮನೇ ! ಭೇದ ಭಾವನೆಯಿಂದ ಒಂದು ಪದಾರ್ಥವು ಅನೇಕ ರೂಪಗಳಾಗಿ ಕಾಣುತ್ತದೆ. ದುಂಬಿಯು ಹೇಗೆ ಭೂಮಂಡಲವನ್ನೆಲ್ಲವನ್ನೂ ಸುತ್ತುತ್ತದೆಯೋ ಹಾಗೆಯೇ ನಿರಂಜನನಾದ ಆತ್ಮನೂ, ಜನಗಳಿಗಿರುವ ಭೇದಬುದ್ಧಿಯಿಂದ ಅನೇಕ ವಿಧಗಳಾಗಿ ಕಾಣಿಸುತ್ತಾನೆ. ಆದುದರಿಂದ ಸ್ವರೂಪ ಏಕನಾದ ಆತ್ಮನನ್ನು ಶ್ರವಣದಿಂದಲೂ, ಮನನದಿಂದಲೂ, ಸುಪ್ರಯೋಗದಿಂದಲೂ, ತಿಳಿದು ನಿರ್ಧರಿಸಿಕೊಂಡು ಆತ್ಮನನ್ನು ಸುಖದುಃಖಗಳಿಂದ ಬಿಡಿಸಬೇಕು. ಕೇಳು! ಈ ಚರಾಚರಾತ್ಮಕವಾದ ಪ್ರಪಂಚವು ಮಾಯಾಜಾಲವೆಂದು ತಿಳಿ. ಈ ಸಂಸಾರವು, ಮಾಯಾಮಯವಾಗಿಯೂ, ಅಹಂಕಾರವೇ ಲಕ್ಷಣವುಳ್ಳದ್ದಾಗಿಯೂ, ಇರುವುದು. ಈ ಸಂಸಾರದಲ್ಲಿಯೂ, ಪ್ರಪಂಚದಲ್ಲಿಯೂ, ಇರುವ ಅಹಂಕಾರವನ್ನು ದೂರೀಕರಿಸಿ ಸುಖದುಃಖಗಳಿಂದ ಪಾರಾಗಬೇಕು. ಮಹತ್ತರವಾದ ಮಾಯಾವಲಂಬಿಯಾದ ನಾನು ಯಾರು ? ನೀನು ಯಾರು ? ಉಳಿದವರು ಯಾರು ? ಎಲೈ ಯಮನೇ ! ಈ ಪ್ರಪಂಚವೆಲ್ಲವೂ ಅಜಾಗಲಸ್ತನದಂತೆ ನಿಷ್ಫಲವಾದುದು. ಇಷ್ಟೇ ಅಲ್ಲ; ಈ ಪ್ರಪಂಚವು ನಿಷ್ಫಲವಾಗಿಯೂ, ಸಾರರಹಿತವಾಗಿಯೂ, ಧೂಮಾಡಂಬರವಾಗಿಯೂ ಇರುವುದು. ಆದುದರಿಂದ ಸರ್ವ ಪ್ರಯತ್ನದಿಂದಲೂ ನಿನ್ನ ಆತ್ಮನನ್ನು ಸ್ಮರಿಸುವವನಾಗು. ಇಂತು ಆತ್ಮಜ್ಞಾನಿಯಾಗಿ ಸುಖವಾಗಿರು' ಎಂದು ಹೇಳಿದನು.

ಸೂತನು ಹೇಳುತ್ತಾನೆ. 'ಕೇಳಿರೈ ಋಷಿಗಳಿರಾ ! ಈ ಪ್ರಕಾರವಾಗಿ ಯಮನು ಪರಶಿವನಿಂದ ಜ್ಞಾನೋಪದೇಶವನ್ನು ಹೊಂದಿ ದಿವ್ಯಜ್ಞಾನಿಯೂ ಆತ್ಮಜ್ಞಾನಿಯೂ ಆದನು.' ಇಂತೆಂದ ಸೂತಮಹರ್ಷಿಯನ್ನು ಕುರಿತು ಶೌನಕಾದಿಗಳು 'ಎಲೈ ಸೂತಪುರಾಣಿಕನೇ ! ಇದಂತಿರಲಿ. ಪಾಪಿಷ್ಠನಾದ ತಾರಕಾಸುರನನ್ನು ಕೊಂದು ಕುಮಾರಸ್ವಾಮಿಯು ಯಾವ ಅದ್ಭುತವಾದ ಕಾರ್ಯವನ್ನು ಮಾಡಿದನು?

ಅದನ್ನೆಲ್ಲವನ್ನೂ ವಿಸ್ತಾರವಾಗಿ ಹೇಳುವವನಾಗು' ಎಂದರು. ಶೌನಕಾದಿ ಮಹರ್ಷಿಗಳ ಮಾತುಗಳನ್ನು ಕೇಳಿ ಸೂತಪುರಾಣಿಕನು ಹೇಳುತ್ತಾನೆ. ಕೇಳಿರೈ ಋಷಿಗಳಿರಾ! ತಾರಕಾಸುರನು ಕುಮಾರಸ್ವಾಮಿಯಿಂದ ಕೊಲ್ಲಲ್ಪಡಲಾಗಿ ಹಿಮವಂತನೇ ಮೊದಲಾದ ಪರ್ವತರಾಜರೆಲ್ಲರೂ ಕಾರ್ತಿಕೇಯ (ಷಣ್ಮುಖ) ಸ್ವಾಮಿಯ ಸನ್ನಿಧಿಗೆ ಬಂದು ಅಮೋಘವಾದ ಸ್ತೋತ್ರಗಳಿಂದ ಸ್ತುತಿಸಿದರದೆಂತೆನೆ:— ಎಲೈ ವಿಶ್ವಮಂಗಳನಾದ ಸ್ವಾಮಿಯೇ! ನಿನಗೆ ಅನನ್ಯ ನಮಸ್ಕಾರಗಳು. ದೇವಾ! ವಿಶ್ವಬಂಧುವಾಗಿಯೂ, ವಿಶ್ವಭಾವನನಾಗಿಯೂ ಇರುವ ನಿನಗೆ ಅನಂತ ನಮಸ್ಕಾರಗಳು! ಎಲೈ ಸ್ವಾಮಿಯೇ! ಯಾವ ನಿನ್ನ ದರ್ಶನ ಮಾತ್ರದಿಂದಲೇ ಶ್ವಪಚರೂ, ಪರಿಸ್ಮರೂ ಕೃತಾರ್ಥರಾಗುತ್ತಾರೆಯೋ ಅಂತಹ ನಿನ್ನ ಪಾದಕಮಲಗಳಿಗೆ ನಮಸ್ಕಾರವು! ದೇವಾ! ಶಂಕರಾತ್ಮಜನಾಗಿಯೂ, ಪಾರ್ವತೀ ನಂದನನಾಗಿಯೂ, ದೇವಶ್ರೇಷ್ಠರಿಂದ ಪೂಜಿತನಾಗಿಯೂ, ಕೃತ್ತಿಕಾ ಸುತನಾಗಿಯೂ ಇರುವ ನಿನಗೆ ನಮಸ್ಕಾರಗಳು! ಎಲೈ ಕುಮಾರಸ್ವಾಮಿಯೇ! ಶರಣಾಗತರ ಕಷ್ಟಗಳನ್ನು ನಿವಾರಿಸುವವನಾಗಿಯೂ, ಜ್ಞಾನಿಗಳಿಗೆಲ್ಲ ವರಿಷ್ಠನಾಗಿಯೂ ಇರುವ ನಿನಗೆ ನಮಸ್ಕಾರವು! ಎಲೈ ದೇವಾ! ದೀನರಾಗಿ ಪ್ರಾರ್ಥಿಸುತ್ತಲಿರುವ ನಮಗೆ ಪ್ರಸನ್ನನಾಗು!'

ಇಂತು ಪ್ರಾರ್ಥಿಸಿದ ಹಿಮವಂತನೇ ಮೊದಲಾದ ಪರ್ವತರಾಜರನ್ನು ಕುರಿತು ಷಣ್ಮುಖನು ಹೇಳುತ್ತಾನದೆಂತೆನೆ:— 'ಎಲೈ ಗಿರಿಗಳಿರಾ! ನನ್ನ ಮಾತುಗಳನ್ನು ಕೇಳಿರಿ! ನೀವೆಲ್ಲರೂ, ಕರ್ಮಿಷ್ಠರಿಂದಲೂ, ಜ್ಞಾನಿಗಳಿಂದಲೂ ಸೇವಿಸಲ್ಪಡುವವರಾಗುವಿರಿ. ನೀವೆಲ್ಲರೂ ಋಷಿಗಳಿಂದ ಸೇವಿಸಲ್ಪಟ್ಟವರಾಗಿ ಭೂಮಂಡಲವನ್ನೆಲ್ಲವನ್ನೂ ಪಾವನಮಾಡುವವರಾಗುವಿರಿ. ಇದರಲ್ಲಿ ಸಂಶಯವಿಲ್ಲವು. ಪರ್ವತಗಳಲ್ಲಿರುವ ತೀರ್ಥಗಳು ಪಾವನಗಳಾಗುವುದರಲ್ಲಿ ಸಂದೇಹವೇ ಇಲ್ಲವು. ಮತ್ತಿಷ್ಟೆಯಲ್ಲದೆ ಪರ್ವತಗಳಲ್ಲಿರುವ ಶಿವದೇವಾಲಯಗಳು ಶ್ರೇಷ್ಠವಾದವುಗಳಾಗಲಿ. ಪರ್ವತಗಳಲ್ಲಿ ಆಯತನಗಳು ಶೋಭನಗಳಾಗಿಯೂ, ಶ್ರೇಷ್ಠವಾದವುಗಳೂ ಆಗಲಿ. ಇಂತಾಗುವುದರಲ್ಲಿ ಸಂಶಯವೇ

ಇಲ್ಲವು. ನನ್ನ ಮಾತಾಮಹನಾಗಿರುವ ಹಿಮವಂತನಾದರೋ ತಪಸ್ವಿಗಳೆಲ್ಲರಿಗೂ, ಫಲಪ್ರದನಾಗುತ್ತಾನೆ. ಮೇರುಪರ್ವತನೂ, ಲೋಕಾಲೋಕನೂ, ಮಹಾ ಯಶಸ್ವಿಯಾದ ಉದಯಪರ್ವತನೂ, ಶ್ರೀಶೈಲನೂ, ಮಹೇಂದ್ರನೂ, ಸಹ್ಯಾಚಲ, ಮಾಲ್ಯವಂತ, ಮಲಯ, ವಿಂಧ್ಯ ಗಂಧಮಾದನನೂ, ಶ್ವೇತಕೂಟ, ಚಿತ್ರಕೂಟ, ದುರ್ಧರರೇ ಮೊದಲಾದ ಪರ್ವತರಾಜರೆಲ್ಲರೂ ನನ್ನನುಗ್ರಹದಿಂದ ಲಿಂಗರೂಪಿಗಳಾಗಿಯೂ ಋಷಿಗಳಿಗೆ ಆಶ್ರಯಭೂತರಾಗಿಯೂ ಪಾಪಗಳನ್ನು ನಾಶಗೊಳಿಸುವವರಾಗಿಯೂ ಆಗಲಿ'.

ಸೂತನು ಹೇಳುತ್ತಾನೆ:—'ಅಯ್ಯಾ ಋಷಿಗಳಿರಾ ! ಇಂತು ಕುಮಾರಸ್ವಾಮಿಯು ಪರ್ವತರಾಜರೆಲ್ಲರಿಗೂ ವರವನ್ನಿತ್ತನು. ಆ ಬಳಿಕ ಶಿವಕಿಂಕರನಾದ ನಂದಿಯು ಷಣ್ಮುಖಸ್ವಾಮಿಯನ್ನು ಕುರಿತು 'ಎಲೈ ಪ್ರಭುವೇ ! ನೀನಾದರೋ ಈ ಪರ್ವತರೆಲ್ಲರಿಗೂ ಲಿಂಗರೂಪಗಳನ್ನು ಕೊಟ್ಟಿಯಷ್ಟೆ? ಈಗ ಶಿವಾಲಯಗಳನ್ನು ಪೂಜೆಮಾಡುವುದು ಹೇಗೆ?' ಎಂದನು. ಆಗ ಷಣ್ಮುಖನು, ನಂದಿಯನ್ನು ಕುರಿತು 'ಎಲೈ ನಂದಿಯೇ ! ಕೇಳು. ದೇವದೇವನಾದ ತ್ರಿಶೂಲಿಯು ದೇವಾಲಯವು ಲಿಂಗವೆಂಬುದನ್ನು, ನೀನೂ, ಬ್ರಹ್ಮಾದಿಗಳೂ ತಿಳಿದುಕೊಳ್ಳತಕ್ಕದ್ದು. ನೀಲಲಿಂಗವೂ, ಮುಕ್ತಾಫಲಲಿಂಗವೂ, ವೈಢೂರ್ಯ, ಚಂದ್ರ, ಗೋಮೇಧಿಕ, ಪದ್ಮರಾಗ, ಮರಕತ, ಕಾಂಚನ, ರಾಜಿತ, ತಾಮ್ರ, ನಾಗಮಯ ರತ್ನವೇ ಮೊದಲಾದ ಲಿಂಗಗಳು ನಿನಗೆ ಹೇಳಲ್ಪಟ್ಟವು. ಇವುಗಳೆಲ್ಲವೂ ಪವಿತ್ರಗಳಾದವುಗಳು. ಸಕಲ ಇಷ್ಟಾರ್ಥಗಳನ್ನೂ ಕೊಡತಕ್ಕವುಗಳು. ಪೂಜಿಸಲ್ಪಡತಕ್ಕವುಗಳು. ಇವುಗಳಲ್ಲೆಲ್ಲಾ ಕಾಶ್ಮೀರಲಿಂಗವು ಅತಿ ಶ್ರೇಷ್ಠವಾದದ್ದೆಂದು ತಿಳಿ. ಇದು ಪೂಜೆಮಾಡಿದವನಿಗೆ ಇಹಪರ ಸಾಧನೆಯನ್ನು ಕಲ್ಪಿಸಿಕೊಡುವುದು' ಎಂದನು. ಕುಮಾರಸ್ವಾಮಿಯ ನುಡಿಯನ್ನು ಕೇಳಿ ನಂದಿಯು 'ಸ್ವಾಮೀ! ಲಿಂಗಗಳನ್ನು ಪೂಜಿಸುವುದರಲ್ಲಿ ಬಾಣಲಿಂಗದ ಪೂಜೆಯು ಅತಿಶಯವಾಗಿ ನಿನ್ನಿಂದ ಹೇಗೆ ಹೇಳಲ್ಪಟ್ಟಿತು? ಅದನ್ನೆಲ್ಲವನ್ನೂ

ಸಮಗ್ರವಾಗಿ ತಿಳಿಸುವನಾಗು' ಎಂದು ಕೇಳಿದನು. ಇಂತು ಕೇಳಲು ಕುಮಾರಸ್ವಾಮಿಯು ಆ ನಂದಿಯನ್ನು ಕುರಿತು 'ಅಯ್ಯಾ ನಂದಿಯೇ! ಈ ಬಾಣಲಿಂಗಗಳು ರೇವಾ ನದಿಯ ನೀರಿನ ಮಧ್ಯದಲ್ಲಿ ಕಾಣುತ್ತವೆ. ಶಿವಪ್ರಸಾದದಿಂದ ಇವು ಲಿಂಗರೂಪಗಳಾಗಿರುತ್ತವೆಯಲ್ಲದೆ ಮತ್ತೆಬೇರೆಯಲ್ಲವು. ಶ್ರೇಷ್ಠವಾಗಿಯೂ ಬಾಣಪಟ್ಟದ ಮಧ್ಯಸ್ಥವಾಗಿಯೂ ಇರುವ ಈ ಲಿಂಗಗಳನ್ನು ಶಿವದೀಕ್ಷಾಪರರು ಸರ್ವ ಪ್ರಯತ್ನದಿಂದಲೂ ಪೂಜಿಸಬೇಕು. ಯಾವನಾದರೆ ಶಾಸ್ತ್ರೋಕ್ತ ವಿಧಿಯಿಂದ ಪಿಂಡಿಕದಮೇಲಿರುವ ಲಿಂಗವನ್ನು ಪೂಜಿಸುವನೋ ಅಂತಹವನಿಗೆ ಜಗನ್ನಾಥನಾದ ಪರಶಿವನು ಪ್ರಸನ್ನನಾಗುವನು. ಯಾವ ಶಿವಪೂಜಕರಲ್ಲಿ ಪಂಚಾಕ್ಷರೀಮಂತ್ರವಿರುವುದೋ, ಯಾವ ಶಿವಪೂಜಕನ ಮನಸ್ಸು ಶಿವಚಿಂತನದಲ್ಲಿಯೇ ಆಸಕ್ತವಾಗಿರುವುದೋ, ಮತ್ತಾವ ಶಿವಪೂಜಕನು ಸಕಲ ಭೂತಗಳಲ್ಲಿಯೂ ಸಮಭಾವದಿಂದಿರುವನೋ, ಮತ್ತದಾವನು ಪರಸ್ತ್ರೀಯರಲ್ಲಿ ಷಂಡತ್ವವನ್ನು ತೋರುವನೋ ಅಂತಹನು ಶಿವನ ಕೃಪಾಕಟಾಕ್ಷಕ್ಕೆ ಪಾತ್ರನಾಗಿ ಸಾಕ್ಷಾತ್ಕೈಲಾಸ ಸುಖವನ್ನು ಪಡೆಯುತ್ತಾನೆ.

## ಅಧ್ಯಾಯ ೩೨

### ಮಹಾಕಾಳನ ಸಂಹಾರ ಮತ್ತು ಪುನರುಜ್ಜೀವನ.

ಸೂತನು ಹೇಳುತ್ತಾನೆ :— 'ಕೇಳಿರೈ ಋಷಿಪುಂಗವರಿರಾ! ಈ ಪ್ರಕಾರವಾಗಿ ಕುಮಾರಸ್ವಾಮಿಯು ಮಹಾಶಿವಭಕ್ತನಾಗಿಯೂ, ಶಿವಕಿಂಕರನಾಗಿಯೂ, ಇರುವ ನಂದೀಶ್ವರನಿಗೆ ಅನೇಕ ಶಿವಧರ್ಮಗಳನ್ನು ಪರಶಿವನ ಪ್ರಸಾದಬಲದಿಂದ ವಿಸ್ತಾರವಾಗಿ ಹೇಳಿದನು.

ಅಯ್ಯಾ ಋಷಿಗಳಿರಾ! ನಾನೂ ವ್ಯಾಸಮಹರ್ಷಿಯ ಪ್ರಸಾದದಿಂದ ಅನೇಕ ಆಗಮಗಳಿಂದ ಕೂಡಿದ ಶಿವತತ್ವಗಳನ್ನೂ ಕಾಪಾಲಿಕರ ಭೇದಗಳನ್ನೂ ತಿಳಿಸಿರುವೆನು. ಇಂತು ನಾನಾವಿಧಗಳಾದ ಶಿವಧರ್ಮಗಳು ನಂದೀಶ್ವರನಿಗೆ ಕುಮಾರಸ್ವಾಮಿಯಿಂದ ಆದರಪೂರ್ವಕವಾಗಿ ತಿಳಿಸಲ್ಪಟ್ಟಿತು.' ಎಂದು ನುಡಿದ ಸೂತಪುರಾಣಿಕನನ್ನು ಕುರಿತು, ಶೌನಕಾದಿ ಮಹರ್ಷಿಗಳು ಹೇಳುತ್ತಾರೆ. 'ಕೇಳೈ ಸೂತನೇ! ಮಂಗಳಕರವಾದ ಕುಮಾರಸ್ವಾಮಿಯ ಚರಿತ್ರೆಯನ್ನು ನಿನ್ನ ಮುಖದಿಂದ ವಿಸ್ತಾರವಾಗಿ ಕೇಳಿದೆವು. ಆದರೂ ಮತ್ತೂ ಕೇಳುವೆವು. ಎಲೈ ಸೂತನೇ! ಯಾನನಿಂದ ಸಾಕ್ಷಾತ್ ಪರಶಿವನು ಸಂತೋಷಪಟ್ಟನೋ ಯಾವನಿಗೆ ಪರಶಿವನಲ್ಲಿ ಅತ್ಯನೋಘವಾದ ಅನಿರ್ವಚನೀಯವಾದ ಭಕ್ತಿಯಿರುವುದೋ ಅಂತಹ ಶಿವಭಕ್ತಿಪರಾಯಣನಾದ ಶ್ವೇತಮಹಾರಾಜನ ಪರಮಾದ್ಭುತವಾದ ಚರಿತ್ರೆಯನ್ನು ಕೇಳಲು, ಅತಿ ಕುತೂಹಲವುಳ್ಳವರಾಗಿರುವೆವು. ದಯವಿಟ್ಟು ಹೇಳುವವನಾಗು. ಯಾರಾದರೆ ಸದಾಶಿವನನ್ನು ಅನನ್ಯವಾದ ಭಕ್ತಿಯಿಂದ ಅರ್ಚಿಸುವರೋ ಅವರೇ ಧನ್ಯರು! ಅವರೇ ಜ್ಞಾನಿಗಳು! ಅವರೇ ಮಹಾತ್ಮರು ಮತ್ತು ಅವರೇ ಮುಕ್ತರು! ಇಷ್ಟೇ ಅಲ್ಲದೆ ಅವರೇ ನಿತ್ಯಕರ್ಮಾನುಷ್ಠಾನಪರರು. ಆದುದರಿಂದಲೇ ಪರಶಿವ ಸಂಬಂಧವಾದ ಚರಿತ್ರೆಯನ್ನು ಕೇಳಲು ನಾವಿಷ್ಟು ಕುತೂಹಲವುಳ್ಳವರಾಗಿರುವುದು. ವ್ಯಾಸಮಹರ್ಷಿಯ ಪ್ರಸಾದದಿಂದ ಸಕಲ ಶಿವಧರ್ಮಗಳನ್ನೂ ತಿಳಿದವರಲ್ಲಿ ನೀನೇ ಅಗ್ರಗಣ್ಯನು. ಆದುದರಿಂದ ಎಲೈ ಸೂತನೇ! ಶಿವಭಕ್ತಿಪರಾಯಣನಾದ ಶ್ವೇತಮಹಾರಾಜನ ದಿವ್ಯ ಚರಿತ್ರೆಯನ್ನು ಹೇಳುವವನಾಗು.' ಎಂಬೀಪ್ರಕಾರವಾಗಿ ಕೇಳುತ್ತಿರುವ ಶೌನಕಾದಿ ಋಷಿಗಳನ್ನು ಕುರಿತು ಸೂತಪುರಾಣಿಕನು ಹೇಳತೊಡಗಿದನು.

ಅಯ್ಯಾ ಋಷಿಗಳಿರಾ! ಕೇಳಿರಿ; ಪರಮಾದ್ಭುತವಾದ ಶ್ವೇತಮಹಾರಾಜನ ಚರಿತ್ರೆಯನ್ನು ಸಾವಧಾನಚಿತ್ತರಾಗಿ ಕೇಳಿರಿ. ಈ

ಶ್ವೇತಮಹಾರಾಜನು ಸಮಸ್ತ ವಿಷಯಗಳಲ್ಲಿಯೂ ರಾಜಭೋಗ ಗಳನ್ನು ಅನುಭವಿಸುತ್ತಿದನು. ಇಂತು ಭೋಗಪರಾಯಣನಾದ ಶ್ವೇತನಿಗೆ ಒಮ್ಮೆ ಧರ್ಮದಲ್ಲಿ ಬುದ್ಧಿಯು ಹುಟ್ಟಿತು. ಈ ಶ್ವೇತಮ ಹಾರಾಜನು ತನ್ನ ರಾಜ್ಯವನ್ನು ಧರ್ಮದಿಂದಲೂ ಪ್ರಜೆಗಳನ್ನು ಕರು ಣದಿಂದಲೂ, ಪಾಲಿಸುತ್ತಿದ್ದನು. ಈತನಾದರೋ ಬ್ರಾಹ್ಮಣ ಪ್ರಿಯನು. ಸತ್ಯವಂತನು; ಶೂರನೂ, ಧೀರನೂ ಸದಾಕಾಲದಲ್ಲಿಯೂ ಶಿವಭಕ್ತಿಪರಾಯಣನೂ ಆಗಿ, ರಾಜ್ಯವನ್ನಾಳುತ್ತಾ ಸದಾ ಕಾಲ ದಲ್ಲಿಯೂ ಪರಾತ್ಪರನಾಗಿಯೂ, ಪುರಾಣಪುರುಷನಾಗಿಯೂ, ಪರ ಮಾತ್ಮನಾಗಿಯೂ, ಶಾಂತನಾಗಿಯೂ, ಪರೇಶನಾಗಿಯೂ ಇರುವ, ಉಮಾರಮಣನಾದ ಪರಶಿವನನ್ನು ಪೂಜಿಸುತ್ತಿದ್ದನು. ಈ ಪ್ರಕಾರ ವಾಗಿ ಶಿವಪೂಜಾರತನಾದ ಶ್ವೇತಮಹಾರಾಜನು ಸದಾಕಾಲದ ಲ್ಲಿಯೂಶಿವಪೂಜೆಯನ್ನು ಮಾಡುತ್ತಿದ್ದ ಹಾಗೆಯೇ ಆತನಆಯುಸ್ಸು ಕ್ಷೀಣವಾಯಿತು. ಈ ಶ್ವೇತಮಹಾರಾಜನ ಮಾತುಗಳೂ ಪರಮಾ ಶ್ಚರ್ಯಕರವಾದ ಶಿವಕಥೆಗಳಿಂದ ಮನೋಹರವಾಗಿದ್ದುವು. ವ್ಯಾಧಿ ಗಳೂ ಈ ರಾಜನಿಗೆ ಆಧಿಯುಗಳಾಗಿ ಪರಿಣಮಿಸಿದವು. ಇಷ್ಟೇಯ ಲ್ಲದೆ ರೋಗರುಜನಾದಿಗಳೂ ಈ ರಾಜನನ್ನು ಬಾಧಿಸುತ್ತಿರಲಿಲ್ಲವು. ಅಲ್ಲದೆ ಶ್ವೇತರಾಜನ ಪ್ರಜೆಗಳೆಲ್ಲರೂ ಈತಿಬಾಧೆಗಳಿಂದಲೂ ರೋಗ ರುಜನಗಳಿಂದಲೂ ಪೀಡಿತರಾಗಿರಲಿಲ್ಲವು. ಈತನ ರಾಜ್ಯದಲ್ಲಿ ಸಾಕ ಸಲಕರಣಗಳೂ ಅಮೋಘವಾಗಿದ್ದವು. ತಪಸ್ವಿಗಳಾದ ಬ್ರಾಹ್ಮ ಣರು ಮತ್ತು ಇತರರು ತಮ್ಮತಮ್ಮ ವರ್ಣಾಶ್ರಮ ಧರ್ಮಗಳಿಗನು ಸಾರವಾಗಿ ನಡೆಯುತ್ತಿದ್ದರು. ಈ ಮಹಾನುಭಾವನ ಪಟ್ಟಣದಲ್ಲಿ ಯಾವಾಗಲೂ ಪ್ರಜೆಗಳು ಮಕ್ಕಳಸಾಯುವಿಕೆಯಿಂದ ದುಃಖವನ್ನಾ ಗಲಿ, ಅಪಮಾನವನ್ನಾಗಲಿ, ಕೊಲೆಗಳನ್ನಾಗಲಿ ಹೊಂದುತ್ತಿರಲಿಲ್ಲ. ಇಷ್ಟೇ ಅಲ್ಲದೆ ಪ್ರಜೆಗಳು ಸದಾಕಾಲದಲ್ಲಿಯೂ, ಸಂಪದ್ಯುಕ್ತರಾಗಿ ದ್ದರೇ ಹೊರತು ದಾರಿದ್ರ್ಯ ಲಕ್ಷ್ಮಿಯು ಕರವನ್ನು ಹಿಡಿದಿರಲಿಲ್ಲ.

ಎಲೈ ಋಷಿಗಳಿರಾ! ಸಾವಧಾನಚಿತ್ತರಾಗಿ ಕೇಳಿರಿ. ಈ ಪ್ರಕಾ ರವಾಗಿ ಮಹಾ ಶಿವಧರ್ಮಪರಾಯಣನಾದ ಶ್ವೇತನಿಗೆ ಅನೇಕ ಸಂವ

ತ್ಸರಗಳು ಸಫಲವಾಗಿಯೇ ಕಳೆಯುತ್ತಾ ಬಂದವು. ಇಂತಿರಲು ಒಂದಾನೊಂದು ದಿವಸ ಯಮಧರ್ಮ ರಾಜನು ಚಿತ್ರಗುಪ್ತನಿಂದ ಶ್ವೇತರಾಜನ ಅಂತ್ಯ ಕಾಲವನ್ನು ತಿಳಿದು ಪರಮಾರ್ಥಗಳನ್ನೀಯುವ ಪರಶಿವ ಪೂಜಾನಿರುತನಾದ ಶ್ವೇತಮಹಾರಾಜನನ್ನು ಕರೆದುಕೊಂಡು ಬನ್ನಿರೆಂದು ತನ್ನ ದೂತರಿಗೆ ಅಪ್ಪಣೆಯನ್ನು ಕೊಟ್ಟನು. ಆಬಳಿಕ ಯಮದೂತರೆಲ್ಲರೂ ಹಾಗೆಯೇ ಆಗಲೆಂದು ಯಮನ ಆಜ್ಞೆಯನ್ನು ಶಿರಸಾವಹಿಸಿ ಮಹಾ ಶಿವಭಕ್ತನಾದ ಶ್ವೇತನನ್ನು ಕರೆದುಕೊಂಡು ಹೋಗಲು ಪಾಶಹಸ್ತರಾಗಿ ಶಿವಮಂದಿರವನ್ನು ಪ್ರವೇಶಿಸಿದರು. ಇಂತು ಪ್ರವೇಶಿಸಿದೊಡನೆಯೇ ಆ ಯಮದೂತರು ಶಿವಧ್ಯಾನಾಸಕ್ತ ನಾದ ಶ್ವೇತ ಮಹಾರಾಜನನ್ನು ಕಂಡು ಭಯದಿಂದ ಯಮನ ಆಜ್ಞೆ ಯನ್ನು ನೆರವೇರಿಸಲು, ಶಕ್ತಿಸಾಲದೆ ಸುಮ್ಮನಾದರು. ಇದೆಲ್ಲ ವನ್ನೂ ತಿಳಿದ ಯಮನು ತಾನಾಗಿಯೇ ಯಮದಂಡವನ್ನು ತೆಗೆದು ಕೊಂಡು ಶ್ವೇತ ಮಹಾರಾಜನನ್ನು ಎಳದುಕೊಂಡುಹೋಗಲು ಬಂದನು. ಆಬಳಿಕ ಶಿವಧ್ಯಾನಪರಾಯಣನಾಗಿಯೂ ಶಿವಭಕ್ತಿ ಯುತನಾಗಿಯೂ ಶಾಂತನಾಗಿಯೂ ಕೇವಲ ಜ್ಞಾನದಿಂದ ಕೂಡಿದ ವನಾಗಿಯೂ ಇರುವ ಶಿವಪೂಜಾನಿರುತನಾದ ಶ್ವೇತಮಹಾರಾಜ ನನ್ನು ಮಹಾಬಾಹುವಾದ ಯಮನು ಕಂಡು ನಡುಕಹತ್ತಿದ ಶರೀರವುಳ್ಳವನಾಗಿ ತಕ್ಷಣದಲ್ಲಿಯೇ ಚಿತ್ರದಲ್ಲಿರುವ ಗೊಂಬೆಯಂತೆ ಸ್ತಬ್ಧನಾದನು. ಯಾವನು ಕಾಲರೂಪದಿಂದ ಪ್ರಜೆಗಳಿಗೆ ಕ್ಷಯಕಾ ರಕನಾಗಿರುವನೋ ಅಂತಹ ಮಹಾ ಕಾಳನು ತಕ್ಷಣದಲ್ಲಿಯೇ ಶ್ವೇತರಾಜನಲ್ಲಿ ಅತಿಯಾಗಿ ರೋಷಗೊಂಡು ಅತಿ ತೀಕ್ಷ್ಣವಾದ ಖಡ್ಗ ದಿಂದ ಬಂದೊಡನೆಯೇ ಶಿವಮಂದಿರದ ಬಾಗಿಲಲ್ಲಿ ನಿಂತಿದ್ದ ಯಮ ಧರ್ಮರಾಯನನ್ನು ಕಂಡನು. ಆಬಳಿಕ ಕಾಳನು ಯಮನನ್ನು ಕುರಿತಿಂತೆಂದನು. 'ಎಲೈ ಯಮನೇ! ಏತಕ್ಕಾಗಿ ರಾಜನನ್ನು ಎಳ ದುಕೊಂಡು ಹೋಗಲಿಲ್ಲ? ಯಮದೂತರ ಸಹಾಯದಿಂದ ಕೂಡಿ ದ್ದರೂ ಭಯದಿಂದಾವೃತನಾಗಿದ್ದಂತೆ ಕಾಣುವೆಯಲ್ಲಾ! ಎಲೈ ಯಮನೇ! ನನ್ನ ಮಾತಿನಪ್ರಕಾರ ಕಾಲವನ್ನು ಕಳೆಯದೆ ಜಾಗ್ರತೆ

ಯಾಗಿ ಈ ಶ್ವೇತನನ್ನು ಕರೆದುಕೊಂಡು ಹೋಗುವವನಾಗು' ಎಂದನು. ಕಾಳನ ಮಾತುಗಳನ್ನು ಕೇಳಿ ಯಮಧರ್ಮನು ಪ್ರಸ್ತುತವಾದ ಮಾತುಗಳನ್ನು ನುಡಿದನು. ಅದೆಂತೆನೆ 'ಎಲೈ ಕಾಳನೇ! ನಿನ್ನ ಆಜ್ಞೆಯನ್ನು ನೆರವೇರಿಸಲು ಸಿದ್ಧನಾಗಿರುವೆನು. ಇದರಲ್ಲಿ ಸ್ವಲ್ಪವೂ ಸಂದೇಹವಿಲ್ಲವು. ಆದರೆ ಈ ಶಿವಭಕ್ತನಾದ ಶ್ವೇತನು ಸದಾಕಾಲದಲ್ಲಿಯೂ ನನಗೆ ದುರತಿಕ್ರಮನಾಗಿರುವನು. ಆದುದರಿಂದಲೇ ಈಗ ನಾನು ಪರಶಿವನ ಭಯದಿಂದ ಚಿತ್ರದಲ್ಲಿರುವ ಪ್ರತಿಮೆಯಂತೆ ತಟಸ್ಥನಾಗಿರುವೆನು.' ಇಂತೆಂದು ನುಡಿದ ಯಮನ ಮಾತುಗಳನ್ನು ಕೇಳಿ ಕಾಲನು ಕೋಪಾಟೋಪದಿಂದ ಕೂಡಿ ರಾಜನನ್ನು ಕೊಲ್ಲಲು ಅತಿ ಪ್ರಕಾಶಮಾನವಾಗಿರುವ ಖಡ್ಗವನ್ನು ಹಿಡಿದುಕೊಂಡು ಶ್ವೇತರಾಜನಿರುವ ಶಿವಾಲಯವನ್ನು ಪ್ರವೇಶಿಸಿದೊಡನೆಯೇ ಶಂಕರನು ತನ್ನ ಭಕ್ತನಾಗಿಯೂ, ಧ್ಯಾನಾಸಕ್ತನಾಗಿಯೂ, ಆತ್ಮದಲ್ಲಿ ಶುದ್ಧವಾದ ಜ್ಞಾನದೀಪದಿಂದ ಶೋಧಿಸಲ್ಪಟ್ಟ ಚಿತ್ತವುಳ್ಳವನಾಗಿಯೂ, ಸದಾಕಾಲದಲ್ಲಿಯೂ ತನ್ನನ್ನು ಆತ್ಮನಂತೆಯೇ ಆತ್ಮಭಾವದಿಂದ ತಿಳಿದವನಾಗಿಯೂ ಸ್ವಯಂಪ್ರಕಾಶವಾದ ಸ್ವೇಷ್ಟವಾದ ತನ್ನ ಮೂರ್ತಿಯನ್ನೇ ಪೂಜಿಸುತ್ತಲಿರುವ ಶ್ವೇತ ಮಹಾರಾಜನನ್ನು ಕೊಲ್ಲಲಪೇಕ್ಷೆಯುಳ್ಳವನಾಗಿರುವ ಕಾಲನನ್ನು ಕಂಡನು. ಇಂತು ಸ್ವಾಭಾವಿಕವಾಗಿ ಪರಶಿವನು ಕೈಲಾಸ ಶಿಖರದಲ್ಲಿ ಯೋಚಿಸುತ್ತಾ ಪರಮಾರ್ಥರೂಪವಾದ ಕೈವಲ್ಯ ಸಾಯುಜ್ಯಗಳನ್ನು ಕೊಡುವವನಾಗಿ ತನ್ನಲ್ಲಿಗೇ ಬರುತ್ತಿರುವ ಕಾಲನನ್ನು ಕಂಡನು. ಆಗ ಸದಾಶಿವನು ತನ್ನ ಭಕ್ತನಾದ ಶ್ವೇತ ಮಹಾರಾಜನನ್ನು ಕಾಪಾಡಲೋಸುಗ, ಅನೇಕ ವರ್ಣನಾಗಿಯೂ, ಕರಾಳರೂಪನಾಗಿಯೂ, ಇರುವ ಕಾಳನನ್ನು ತನ್ನ ಮೂರನೆಯ ಕಣ್ಣಿನಿಂದ ಅತ್ಯುಗ್ರವಾಗಿ ನಿರೀಕ್ಷಿಸಿ ಸುಟ್ಟುಬಿಟ್ಟನು. ಇಂತು ಜ್ವಾಲೆಗಳಿಂದ ಆವೃತನಾದ ಮಹಾಭೀಕರಸ್ವರೂಪನಾದ ಪ್ರಪಂಚವನ್ನೇ ಭಕ್ಷಣಗೈಯುವ ಕಾಲನನ್ನು ದೇವ ಗಣಗಳಿಂದ ಕೂಡಿದ ಯಕ್ಷ ಗಂಧರ್ವ ಪಿಶಾಚ ಗುಹ್ಯಕರೂ, ಸಿದ್ಧರೂ, ಅಪ್ಸರರೂ, ಅಷ್ಟದಿಕ್ಪಾಲಕರೂ ಕಂಡರು. ಅಯ್ಯಾ ಋಷಿ

ಗಳಿರಾ! ಆಬಳಿಕ ಶ್ವೇತ ಮಹಾರಾಜನು, ತನ್ನನ್ನು ಕೊಲ್ಲಲು ಬಂದ ಕಾಲನು ಪರಶಿವನ ಮುಂಗಡೆಯಲ್ಲಿ ಸುಟ್ಟುಹೋಗುತ್ತಲಿರು ವುದನ್ನು ಕಂಡು ಪ್ರಳಯಕಾಲದ ಅಗ್ನಿಗೆ ಸಮಾನನಾದ ಪರಶಿವನನ್ನು ಪ್ರಾರ್ಥಿಸಲಾರಂಭಿಸಿದನು. 'ಎಲೈ ದೇವಾ! ಶಾಂತನಾಗಿಯೂ, ರುದ್ರಸ್ವರೂಪನಾಗಿಯೂ ಸ್ವಜ್ಯೋತಿಯಿಂದಲೇ ಆತ್ಮವೇಧನನಾ ಗಿಯೂ, ಶಾಶ್ವತನಾಗಿಯೂ, ಇರುವ ನಿನಗೆ ನಮಸ್ಕಾರವು! ಎಲೈ ಶಂಕರನೆ! ಅತಿ ಸೂಕ್ಷ್ಮನಾಗಿಯೂ ಜ್ಯೋತಿಗಳಿಗೆಲ್ಲ ಪತಿಯಾಗಿಯೂ ಇರುವ ನಿನಗೆ ಅನನ್ತ ನಮಸ್ಕಾರಗಳು! ಎಲೈ ದೇವಾ! ಜಗ ನ್ನಾಥಾ! ನೀನೇ ಅಲ್ಲವೆ ಪ್ರಪಂಚವನ್ನು ಪಾಲಿಸುವವನು? ಪ್ರಪಂ ಚಕ್ಕೆ ತಾಯಿಯೂ, ತಂದೆಯೂ, ಬಂಧುವೂ ಬಳಗವೂ ನೀನೇ ಅಲ್ಲವೇ? ಎಲೈ ಸ್ವಾಮಿಯೇ! ಸಕಲ ಲೋಕಗಳಿಗೂ ಪ್ರಭುವಾ ಗಿಯೂ ಈಶ್ವರನಾಗಿಯೂ ಇರತಕ್ಕವನು ನೀನೇ ಅಲ್ಲವೆ? ಎಲೈ ಶಿವನೆ ನನ್ನ ಮುಂದೆ ಸುಟ್ಟುಹೋದವನು ಯಾರು? ಆತನು ಯಾವ ಮಹ ತ್ತರವಾದ ತಪ್ಪನ್ನು ಮಾಡಿರುವನು? ನೀನೇನು ಮಾಡಿದೆ? ಇವನನ್ನು ಯಾರು ಸುಟ್ಟವರು?' ಎಂಬೀಪ್ರಕಾರವಾಗಿ ಪ್ರಾರ್ಥಿಸುತ್ತಲಿರುವ, ಅಳುತ್ತಲಿರುವ ಮಹಾ ಭಕ್ತನಾದ ಶ್ವೇತರಾಜನ, ಮಾತುಗಳನ್ನು ಕೇಳಿ ಲೋಕೈಕ ಶಂಕರನಾದ ಸಾಂಬಮೂರ್ತಿಯು ಶ್ವೇತರಾಜ ನನ್ನು ಸಂತಸಗೊಳಿಸುತ್ತಾ ಉಪದೇಶಮಾಡುವಂತೆ ಅವನನ್ನು ಕುರಿತು, 'ಎಲೈ ಭಕ್ತಾಗ್ರೇಸರನಾದ ಶ್ವೇತನೇ! ಕೇಳು, ನಾನು ಈ ಕಾಲನನ್ನು ನಿನಗಾಗಿ ನಿನ್ನ ಮುಂದೆಯೇ ಸುಟ್ಟುಬಿಟ್ಟೆನು. ಇವನು ಮಹತ್ತರವಾದ ಅಗ್ನಿಜ್ವಾಲೆಗಳಿಂದ ಸುಡಲ್ಪಡುತ್ತಿರುವ ದನ್ನು ನೋಡಿದೆಯಷ್ಟೆ?' ಎಂದನು. ಮಹಾದೇವನ ನುಡಿಯನ್ನು ಕೇಳಿ ಶ್ವೇತನು 'ಎಲೈ ದೇವಾ ಈ ಕಾಲನು ಮಾಡಬಾರದ ಕಾರ್ಯ ವನ್ನು ಏನುತಾನೇ ಮಾಡಿರುವನು? ಪ್ರಾಣಕ್ಕಿಂತಲೂ ಅಧಿಕವಾದ ಈ ಅವಸ್ಥೆಯನ್ನು ಏತಕ್ಕಾಗಿ ಹೊಂದಿದನು? ಇವುಗಳೆಲ್ಲವನ್ನು ವಿಸ್ತಾರವಾಗಿ ಹೇಳು' ಎಂದನು. ಆಗ ಪರಮೇಶ್ವರನು 'ಎಲೈ ಮಹಾರಾಜನೇ! ಕ್ರೂರನಾಗಿರುವ ಈ ಕಾಳನು ಸಕಲ ಪ್ರಾಣಿಗಳ

ಪ್ರಾಣಗಳನ್ನೂ ತಿನ್ನತಕ್ಕವನು. ಇವನು ನನ್ನ ಭಕ್ತನಾದ ನಿನ್ನನ್ನೂ ನನ್ನ ಮುಂದೆಯೇ ಕೊಲ್ಲಲು ಬಂದನು. ಅದಕ್ಕಾಗಿಯೇ ಇವನನ್ನು ನಾನು ಸುಟ್ಟುಬಿಟ್ಟೆನು. ಅನೇಕರ ಕ್ಷೇಮಕ್ಕಾಗಿಯೂ ಮುಖ್ಯವಾಗಿ ನಿನ್ನ ರಕ್ಷಣೆಗಾಗಿಯೂ ಇವನನ್ನು ಕೊಂದೆನೇ ಹೊರ್ತು ಮತ್ತೆ ಬೇರೆಯಲ್ಲವು. ಅಯ್ಯಾ ರಾಜನೇ ! ಯಾರು ಮಹಾಪಾಪಿಗಳಾಗಿಯೂ, ಧರ್ಮ ಬಾಹಿರರಾಗಿಯೂ, ಪಾಷಂಡವಾದಿಗಳಾಗಿಯೂ ಇರುವರೋ, ಅವರೆಲ್ಲರೂ ನನ್ನಿಂದ ಕೊಲ್ಲಲ್ಪಡತಕ್ಕವರೇ ಸರಿ' ಎಂದನು. ಪರಶಿವನ ಮಾತುಗಳನ್ನು ಕೇಳಿ ಶ್ವೇತಮಹಾರಾಜನು 'ಎಲೈ ಶಂಕರನೇ! ಲೋಕದಲ್ಲಿ ಈ ಕಾಲನಿಂದಲೇ ಅಲ್ಲವೆ ಪ್ರಜೆಗಳು ಪುಣ್ಯವನ್ನಾಚರಿಸುವದು? ಮತ್ತೆ ಕೆಲವರು ಧರ್ಮನಿಷ್ಠರಾಗಿರುವದೂ ಈತನಿಂದಲೇ ಅಲ್ಲವೆ? ಕೆಲವರು ಅತಿಶಯವಾದ ಭಕ್ತಿಯಿಂದ ನಿನ್ನ ಉಪಾಸನೆಯಲ್ಲಿ ನಿರತರಾಗಿಯೂ, ಕೆಲವರು ಜ್ಞಾನಿಗಳಾಗಿಯೂ, ಇನ್ನು ಕೆಲವರು, ಅಧ್ಯಾತ್ಮವಿದ್ಯೆಯಿಂದ ಕೂಡಿದವರೂ, ಅನೇಕರು ಮುಕ್ತರಾಗಿರುವದೂ ಈ ಕಾಲನಿಂದಲೇ ಅಲ್ಲವೆ? ಎಲೈ ದೇವಾ ! ಕಾಲನೇ ಅಲ್ಲವೆ ಸಕಲ ಚರಾಚರ ಪ್ರಾಣಿಗಳ ಸಂಹಾರಕಾರಕನು ಮತ್ತು ಸೃಷ್ಟಿಕರ್ತನು? ಅದ್ವಿತೀಯನಾದ ಪಾಲನಕರ್ತನೂ ಇವನೇ ಅಲ್ಲವೆ? ಆದುದರಿಂದೆಲೈ ಮಹಾದೇವನೆ! ಪ್ರಪಂಚದ ಸೃಷ್ಟಿಕರ್ತನಾದ ಕಾಲನನ್ನು ಬದುಕಿಸುವವನಾಗು. ನೀನೇ ಸೃಷ್ಟಿಕರ್ತನಿಗಿಂತ ಅಧಿಕನಾಗಿಯೂ, ಸಕಲ ಪ್ರಾಣಿಗಳ ಸಂಹಾರಕಾರಕನಾಗಿಯೂ, ಇರುವವನೇ ಆದರೆ ಈ ಕಾಲನನ್ನು ಬದುಕಿಸುವವನಾಗು. ಈ ಕಾಲನಿಲ್ಲದಿದ್ದಲ್ಲಿ ಪ್ರಪಂಚದ ಕಾರ್ಯವು ಸ್ವಲ್ಪವೂ ನಡೆಯುವದಿಲ್ಲವು' ಎಂದನು. ಶ್ವೇತರಾಜನ ಬಿನ್ನಪವನ್ನು ಕೇಳಿ ಪರಶಿವನು ತಕ್ಷಣದಲ್ಲಿಯೇ ತನ್ನ ಭಕ್ತನ ಮಾತಿನಂತೆಯೇ ನಸುನಗುತ್ತಾ ಹಿಂದೆ ಕಾಲನು ಯಾವರೀತಿಯಲ್ಲಿ ಯಮದೂತರ ಮಧ್ಯಸ್ಥನಾಗಿದ್ದನೋ ಆದೇರೀತಿಯಲ್ಲಿ ಬದುಕಿಸಿದನು.

ಆಬಳಿಕ ಕಾಲನು ಲಜ್ಜಾನ್ವಿತನಾಗಿ ಎದ್ದುನಿಂತು ವೃಷಭವಾಹನನಾಗಿಯೂ ಅಗ್ನಿಮಯನಾಗಿಯೂ, ಇರುವ ಪರಮೇಶ್ವರ

ನನ್ನು ನಮಸ್ಕರಿಸಿ ಸಂತೋಷಗೊಳಿಸಿ 'ಪ್ರಭೋ ! ಜಗದೀಶ್ವರನೆ ! ಕಾಲಾಂತಕನಾಗಿಯೂ ತ್ರಿಪುರಾಧಿಪತಿಯಾಗಿಯೂ, ತ್ರಿಪುರಾಸುರರನ್ನು ಸಂಹರಿಸಿದವನಾಗಿಯೂ ಇರುವ ನಿನಗೆ ನಮಸ್ಕಾರವು ! ಎಲೈ ಶಂಭುವೇ ! ಮದನನನ್ನು ಸಂಹರಿಸಿ ಅನಂಗನನ್ನಾಗಿ ಮಾಡಿದೆಯಲ್ಲವೆ? ಎಲೈ ಜಗತ್ಪತಿಯೇ ! ಮಹಾ ಪಾಪಿಯಾದ ದಕ್ಷನ ಅದ್ಭುತವಾದ ಯಜ್ಞವನ್ನು ನಾಶಮಾಡಿದೆಯಲ್ಲವೆ? ಯಾರಿಂದಲೂ ಸಹಿಸಲಸಾಧ್ಯವಾದ ಮಹಾ ಕಾಲಕೂಟ ವಿಷವನ್ನು ಪಾನಮಾಡಿದೆಯಲ್ಲವೆ? ಎಲೈ ದೇವಾ ! ಲಿಂಗರೂಪದಿಂದ ಸ್ವರ್ಗ ಮರ್ತ್ಯ ಪಾತಾಳಗಳೆಂಬ ಮೂರು ಲೋಕಗಳನ್ನೂ ವ್ಯಾಪಿಸಿದೆಯಲ್ಲವೆ? ಪ್ರಭೋ ! ಆದೇ ಲಿಂಗವನ್ನು ಲಯಕಾರ್ಯವನ್ನು ಮಾಡುವುದರಿಂದ ಲಿಂಗವೆಂದ ದೇವತೆಗಳೂ ರಾಕ್ಷಸರೂ ಕರೆಯುಲಿಲ್ಲವೇ ! ಎಲೈ ಸ್ವಾಮಿಯೇ ! ಯಾವ ಲಿಂಗಸ್ವರೂಪಿಯಾದ ನಿನ್ನ ಅಂತ್ಯವನ್ನು ಬ್ರಹ್ಮ ವಿಷ್ಣುವೇ ಮೊದಲಾದ ದೇವತೆಗಳು ತಿಳಿಯುಲಿಲ್ಲವೊ, ಅಂತಹ ದೇವದೇವನಾದ ಅದ್ಭುತವಾದ ಮಹಿಮೆಯುಳ್ಳ ನಿನಗೆ ನಮಸ್ಕಾರವು ! ಎಲೈ ಶಿವನೇ! ಪರಮೇಶ್ವರನಾಗಿಯೂ ಪ್ರಪಂಚಕ್ಕೆಲ್ಲ ಮಂಗಳವನ್ನು ಕೊಡತಕ್ಕವನಾಗಿಯೂ, ಇರುವ ನಿನಗೆ ಅನನ್ಯ ನಮಸ್ಕಾರಗಳು. ಎಲೈ ದೇವಾ! ವಿಷಕಂಠನಾಗಿಯೂ, ಕಪರ್ದಿಯಾಗಿಯೂ ಇರುವ ನಿನಗೆ ಶರಣು ! ಎಲೈ ಸ್ವಾಮಿಯೇ ಕಾರಣಗಳಿಗೂ ಕಾರಣಕರ್ತನಾಗಿಯೂ, ಮಂಗಳಗಳಿಗೂ ಮಂಗಳಾತ್ಮಕನಾಗಿಯೂ, ಜ್ಞಾನವನ್ನು ತಿಳಿದವರಿಗೂ ಜ್ಞಾನಾತ್ಮಕನಾಗಿಯೂ, ಪಂಡಿತರಿಗೆ ಆದಿದೇವನಾಗಿಯೂ, ಪುರಾಣ ಪುರುಷನಾಗಿಯೂ, ಇರುವವನೂ ನೀನೇ ! ಜಗದೇಕ ಬಂಧುವೂ ವೇದಾಂತ ವೇದ್ಯನೂ ಮಹಾನುಭಾವರಿಂದ ಕೀರ್ತಿಸಲ್ಪಟ್ಟವನೂ, ವಿಶ್ವೇಶ್ವರನೂ ಚರಾಚರ ಪ್ರಾಣಿಗಳಿಂದ ಪೂಜಿಸಲ್ಪಟ್ಟವನೂ ನೀನೇ! ನೀನೇ ಮೂರು ಲೋಕಗಳನ್ನೂ ಪಾಲಿಸುವೆ! ಪ್ರಪಂಚವನ್ನು ಸೃಷ್ಟಿಸಿದವನೂ ನೀನೇ ! ಭೂತಪತಿಯಾದ ನಿನ್ನನ್ನು ಬಿಟ್ಟರೆ ಮತ್ತಾರೂ ಇಲ್ಲವು' ಎಂದು ಸ್ತುತಿಸಿದನು. ಬಳಿಕ ಮಹಾಕಾಲನು ಶ್ವೇತ ಮಹಾರಾಜನನ್ನು ಕುರಿತು 'ಅಯ್ಯಾ ಶ್ವೇತ ಮಹಾರಾಜನೇ ! ಈ

ಸಮಸ್ತ ಮನುಷ್ಯಲೋಕದಲ್ಲಿ ನಿನ್ನಂತಹ ಶಿವಭಕ್ತನು ಮತ್ತಾರೂ ಇಲ್ಲವು. ಎಲೈ ರಾಜಶ್ರೇಷ್ಠನೇ ! ಮೂರು ಲೋಕಗಳಲ್ಲಿಯೂ ಗೆಲ್ಲಲಸಾಧ್ಯನಾದ ಪರಶಿವನನ್ನೂ ಗೆದ್ದಿರುವೆಯಲ್ಲನೆ ? ನಾನಾದರೊ ಚರಾಚರಾತ್ಮಕವಾದೀ ಸಮಸ್ತ ಪ್ರಪಂಚವನ್ನೂ ನಾಶಮಾಡುವವನು. ದೇವಾಸುದೇವತೆಗಳನ್ನು ಗೆಲ್ಲತಕ್ಕವನೂ ನಾನೇ. ನಾನು ಎಲ್ಲರಿಗೂ ಗೆಲ್ಲಲು ಅಸಾಧ್ಯನು. ನೀನಾದರೋ ನನ್ನನ್ನೂ ಜಯಿಸಿರುವೆ. ಎಲೈ ಶ್ವೇತನೇ ! ಈಗ ನೀನು ನನ್ನನ್ನು ನಿನ್ನ ಅನುಯಾಯಿಯನ್ನಾಗಿ ಮಾಡಿಕೊಂಡು ಪರಮೇಶ್ವರನಿಂದಭಯವನ್ನು ಕೊಡಿಸು.' ಇಂತು ನುಡಿದ ಕಾಲನ ಮಾತುಗಳನ್ನು ಕೇಳಿ ಶ್ವೇತ ಮಹಾರಾಜನು 'ಎಲೈ ಕಾಲನೇ ! ಪರಶಿವನ ಶ್ರೇಷ್ಠವಾದ ರೂಪವು ನೀನೆಯಲ್ಲದೆ ಮತ್ತೆ ಬೇರೆಯಲ್ಲವು. ಇದರಲ್ಲಿ ಸ್ವಲ್ಪವೂ ಸಂಶಯವಿಲ್ಲವು. ಸಕಲ ಭೂತಗಳ ಸ್ಥಿತಿಸಂಹಾರಕಾರಕನಾದ ಕಾಲರೂಪನೇ ನೀನು. ಆದುದರಿಂದೆಲೈ ಕಾಲನೇ ! ನೀನೇ ಪರಮ ಪೂಜ್ಯನೂ ಎಲ್ಲರಿಗೂ ನಿಯಾಮಕನೂ ಆಗಿರುವೆ. ನಿನ್ನ ಭಯದಿಂದಲೇ ಲೋಕದಲ್ಲಿ ಜನರು ನಾನಾ ವಿಧಗಳಿಂದ ಆತ್ಮಲಕ್ಷಣರಾಗಿ ಪರಮೇಶ್ವರನನ್ನು ಶರಣು ಹೋಗುವರು ' ಎಂದನು.

ಅಯ್ಯಾ ಋಷಿಗಳಿರಾ ! ಕೇಳಿರಿ. ಕಾಲನು ಮಹಾಧರ್ಮಿಷ್ಠನಾದ ಶ್ವೇತಮಹಾರಾಜನಿಂದಲೇ ರಕ್ಷಿಸಲ್ಪಟ್ಟನು. ಇಷ್ಟೆಯಲ್ಲದೆ ಜ್ಞಾನಿಯಾದ, ಶ್ವೇತಭೂಪನು ಸಾಕ್ಷಾತ್ಪರಶಿವನ ಪ್ರಸಾದದಿಂದ ಮಹಾ ಜ್ಞಾನವನ್ನು ಪಡೆದನು. ಬಳಿಕ ಯಮಧರ್ಮನು ತನ್ನ ದೂತರಿಂದ ಕೂಡಿ, ಶಂಕರನನ್ನು ಮೊದಲು ಸ್ತುತಿಸಿ ಬಳಿಕ ಮಹಾಮಹಿಮನಾದ ಶ್ವೇತ ಮಹೀಪಾಲನನ್ನು ನಮಸ್ಕರಿಸಿ ತನ್ನ ಸ್ವಸ್ಥಾನವಾದ ಯಮಲೋಕಕ್ಕೆ ತೆರಳಿದನು. ಆಗ ಯಮನು ತನ್ನ ಸತಿಯಾದ ಮಾಯೆಯೊಡನೆ ಪರಶಿವನ ಮಹದದ್ಭುತವಾದ ಚರಿತ್ರೆಯನ್ನು ಅಡಿಗಡಿಗೆ ಸ್ಮರಿಸಿಕೊಂಡು ತಾನಾಗಿಯೇ, ತನ್ನ ದೂತರಿಗೆಲ್ಲರಿಗೂ ಪರಶಿವನ ಅತ್ಯದ್ಭುತವಾದ ಮಹಿಮೆಗಳನ್ನು ಪೇಳುತ್ತ 'ಎಲೈ!

ಸೇವಕರಿರಾ! ಆದರದಿಂದ ಕೇಳಿರಿ. ಯಾರು ತ್ರಿಪುಂಡ್ರಧಾರಿಗಳಾಗಿಯೂ, ಜಟಾ ಕಲಾಪಿಗಳಾಗಿಯೂ, ಅತಿ ಶ್ರೇಷ್ಠತರವಾದ ರುದ್ರಾಕ್ಷಿಗಳನ್ನು ಧರಿಸಿದವರಾಗಿಯೂ, ಶಿವನಾಮಾಂಕಿತರಾಗಿಯೂ ಇರುವರೋ ಅಂತಹರು, ತಮ್ಮ ಹೊಟ್ಟೆಯಪಾಡಿಗಾಗಿ, ಪಾಪಿಗಳಾಗಿಯೂ, ದುರಾಚಾರಿಗಳಾಗಿಯೂ, ಇದ್ದರೂ ಶಿವವೇಷಧಾರಿಗಳಾಗಿದ್ದಲ್ಲಿ ಅವರನ್ನು ಸರ್ವಥಾ ನನ್ನಲ್ಲಿಗೆ ಕರೆತರಬಾರದು. ಅಂತಹರು ಸದಾಕಾಲದಲ್ಲಿಯೂ ನಿಮ್ಮಿಂದ ಈಕ್ಷಿಸಲ್ಪಡತಕ್ಕವರಲ್ಲವು. ಅಯ್ಯಾ! ದೂತರಿರಾ! ಇಂತಹ ಪಾಪಿಗಳು ಶಿವರೂಪವನ್ನು ಧರಿಸಿದ ಮಾತ್ರವೇ ಪುಣ್ಯಶಾಲಿಗಳೆಂದಮೇಲೆ, ಸತ್ಯವಾಗಿಯೂ, ನಿತ್ಯ ಕರ್ಮಾನುಷ್ಠಾನಿಗಳಾಗಿ ಶಿವನಾಮವನ್ನು ಸದಾಕಾಲದಲ್ಲಿಯೂ ಭಜಿಸುವವರಾಗಿಯೂ ಇರುವವರಲ್ಲಿ ನೀವು ವರ್ತಿಸಬೇಕಾದ ಕ್ರಮವನ್ನು ಹೇಳಬೇಕಾದುದೇನಿರುವುದು? ಅಯ್ಯಾ ಸೇವಕರಿರಾ! ಕೇಳಿರಿ. ಯಾರು ನಿರತಿಶಯವಾದ ಭಕ್ತಿಯಿಂದ ಸದಾಶಿವನನ್ನು ಪೂಜಿಸುವರೋ ಅವರೇ ಪರಮೇಶ್ವರನ ಸ್ವರೂಪರು. ಕೇಳಿರಿ. ಯಾರು ಪಂಚಾಕ್ಷರೀ ಮಂತ್ರವನ್ನು ಜಪಿಸುತ್ತಲಿರುವರೋ, ಯಾರು ಸದಾಕಾಲದಲ್ಲಿಯೂ ರುದ್ರಾಕ್ಷಮಾಲೆಗಳನ್ನು ಧರಿಸುತ್ತಾರೆಯೋ, ಯಾರು, ವಿಭೂತಿ ತ್ರಿಪುಂಡ್ರಗಳನ್ನು ಧರಿಸಿರುವರೋ, ಅವರೆಲ್ಲರೂ ನಿಮಗೆ ಪರಮಪೂಜ್ಯರೇಹೊರತು ಮತ್ತೇಬೇರೆಯಲ್ಲವು. ಕೇಳಿರೈ! ಯಾವ ದೇಶದಲ್ಲಿ ಅಥವ ರಾಷ್ಟ್ರದಲ್ಲಿ, ಅಲ್ಲದೆ ಹಳ್ಳಿಯಲ್ಲಿ, ಶಿವಭಕ್ತಿ ಸಮನ್ವಿತರಾದವರಿಲ್ಲದೇಇರುವರೋ, ಅಂತಹ ರಾಷ್ಟ್ರವು ಶ್ಮಶಾನಕ್ಕಿಂತಲೂ, ದುರ್ಗಮವಾದುದು. ಯಾವ ದೇಶದಲ್ಲಿ ಶಿವಭಕ್ತರಿರುವುದಿಲ್ಲವೋ ಅಂತಹ ದೇಶವು, ಪಾಷಂಡಮಯವಾದುದು.' ಎಲೈ ಮಹರ್ಷಿಗಳಿರಾ! ಯಮನಿಂತು ತನ್ನ ದೂತರಿಗೆಲ್ಲರಿಗೂ, ಆಜ್ಞಾಪಿಸಿದನು. ಯಮದೂತರಾದರೋ, ತನ್ನೊಡೆಯನಾದ ಯಮನ ಆಜ್ಞಾನುಸಾರವಾಗಿ ನಡೆದುಕೊಳ್ಳುವವರಾದರು. ಕೇಳಿರೈ ಋಷಿಪುಂಗವರಿರಾ! ಸದಾಶಿವನಾಗಿಯೂ, ಜಗದೇಕ ರಕ್ಷಕನಾಗಿಯೂ, ಪ್ರಪಂಚಕ್ಕೆ ಏಕದೇವನಾಗಿಯೂ, ಸೃಷ್ಟಿಕರ್ತನಾಗಿಯೂ, ಲಯಕರ್ತನಾಗಿಯೂ ಇರುವ

ಪರಮೇಶ್ವರನ ದಿವ್ಯ ಮಹಿಮೆಯು ಈ ರೀತಿಯಾಗಿರುವದು. ಇದರಲ್ಲಿ ಸಂಶಯವಿಲ್ಲವು. ಈ ಪ್ರಕಾರವಾಗಿ ಶಂಭುವು, ಮಹಾಕಾಲನನ್ನು ಸಂಹರಿಸಿ, ಅವನಿಂದ ಲೋಕಕ್ಕಾಗುವ ಭಯವನ್ನು ನಿರ್ಮೂಲಮಾಡಿದನು. ಇಷ್ಟೆಯಲ್ಲದೆ ಮಹಾತ್ಮನಾಗಿಯೂ ಶ್ರೇಷ್ಠನಾಗಿಯೂ ಇರುವ ಶ್ವೇತಭೂಪಾಲನನ್ನು ಮಹಾಕಾಲನ ಭಯದಿಂದ ಸಂರಕ್ಷಿಸಿದನು. ಅಂದಿನಿಂದ ಶ್ವೇತಮಹಾರಾಜನು, ಪರಮಭಕ್ತಿಯುತನಾಗಿ, ದೃಢಚಿತ್ತವನ್ನು ಹೊಂದಿದನು. ಬಳಿಕ, ದೇವತೆಗಳಿಂದಲೂ ದೇವರ್ಷಿಗಳಿಂದಲೂ, ಪನ್ನಗರಿಂದಲೂ ಪೂಜಿಸಲ್ಪಟ್ಟು, ತನ್ನ ಧ್ಯೇಯವಾದ ಶಿವಸಾಯುಜ್ಯವನ್ನು ಹೊಂದಿದನು. ಅಯ್ಯಾ! ಭಕ್ತಿಪರಾಯಣಚಿತ್ತರಾದ ಶೌನಕಾದಿಮುನಿಪುಂಗವರಿರಾ! ಕೇಳಿರಿ. ಯಾರಿಗಾದರೆ ಶಿವಭಕ್ತಿಯು ನಿರತಿಶಯವಾಗಿರುವುದೋ ಅಂತಹರಿಗೆ ಸಿದ್ಧಿರೂಪವಾದ ಮುಕ್ತಿಯು ಕರತಲಾಮಲಕ ಪ್ರಾಯವಾಗಿರುತ್ತದೆ ಎಂಬುದರಲ್ಲಿ ಲೇಶಮಾತ್ರವೂ ಸಂಶಯವಿಲ್ಲವು. ಸತ್ಯವಾಗಿಯೂ ಹೇಳುತ್ತಲಿರುವೆನು. ಕೇಳಿರಿ! ಈಶ್ವರನಲ್ಲಿ ಕಿಂಚಿತ್ತಾದರೂ ಭಕ್ತಿಯುಳ್ಳ ಶ್ವಪಚನೂ, ಪರಮೇಶ್ವನ ಪ್ರಸಾದದಿಂದ ವರಿಷ್ಠನೆಂದೆನಿಸಿಕೊಳ್ಳುವನು. ಆದುದರಿಂದ ಸರ್ವ ಪ್ರಯತ್ನದಿಂದಲೂ ಈಶ್ವರನನ್ನು ಸೇವಿಸಿರಿ. ಅನೇಕ ಜನ್ಮಗಳ ಪರಿವರ್ತನೆಯಾದನಂತರ, ಶಿವಭಕ್ತಿಯೆಂಬುದು ಮನುಷ್ಯನಿಗೆ ಜನಿಸುವುದು. ಹೆಚ್ಚಾಗಿ ಹೇಳುವುದರಿಂದ ಪ್ರಯೋಜನವೇನು? ಅಂತು, ಪರಮಪಾವನಮೂರ್ತಿಯಾದ ಪರಶಿವನು ಪೂಜನೀಯನಾದವನು. ಈ ಶಿವಭಕ್ತಿಯನ್ನು ವಿವರಿಸಬೇಕಾದರೆ, ಒಂದು ಪುರಾತನವಾದ ಕಿರಾತ ಭಕ್ತನ ಚರಿತ್ರೆಯನ್ನು ಹೇಳುವೆನು. ಆ ಕಿರಾತನಾದರೋ ಚರಾಚರಾತ್ಮಕವಾದ ಪ್ರಪಂಚವನ್ನು ಕಾಪಾಡಿದನು.

# ಅಧ್ಯಾಯ ೩೩

## ಶಿವರಾತ್ರಿಯ ಮಹಿಮೆ

ಋಷಿಗಳು ಕೇಳುತ್ತಾರೆ:— 'ಅಯ್ಯಾ ಸೂತಪುರಾಣಿಕನೇ! ನೀನು ಕಿರಾತಭಕ್ತನ ಇತಿಹಾಸ ಒಂದುಂಟೆಂದು ಹೇಳಿದೆಯಲ್ಲವೆ? ಆ ಕಿರಾತನಾರು? ಯಾವ ವ್ರತವನ್ನಾಚರಿಸಿ ಶಂಕರನನ್ನು ಸಂತಸಗೊಳಿಸಿದನು? ಈ ವಿಷಯಗಳನ್ನು ಕೇಳಲು ಅತಿ ಕುತೂಹಲ ಉಳ್ಳವರಾಗಿರುವೆವು. ದಯವಿಟ್ಟು ತಿಳಿಸುವವನಾಗು' ಇಂತು ನುಡಿದ ಶೌನಕಾದಿಗಳನ್ನು ಕುರಿತು ಸೂತಪುರಾಣಿಕನು ಹೇಳತೊಡಗಿದನು. ಕೇಳಿರೈ! ಒಂದಾನೊಂದು ಕಾಲದಲ್ಲಿ ದುಷ್ಟ ಸ್ವಭಾವವುಳ್ಳ ಒಬ್ಬ ಕಿರಾತನಿದ್ದನು. ಇವನು ಭೀಕರ ಸ್ವರೂಪನಾಗಿಯೂ, ಸುವರ್ಣ ತಸ್ಕರನಾಗಿಯೂ ಕೃತಘ್ನನಾಗಿಯೂ, ಚತುರ್ವಿಧ ಭೂತಗಳಿಗೂ ಭಯವನ್ನುಂಟುಮಾಡುವವನೂ ಆಗಿದ್ದನು. ಈ ಕಿರಾತನು ಮೀನುಗಳನ್ನು ಹಿಡಿಯಲು ಪ್ರತಿನಿತ್ಯವೂ ನದೀತೀರಕ್ಕೆ ಬರುತ್ತಿದ್ದನು. ದುರಾತ್ಮನಾದ ಈ ಕಿರಾತನು ಜಿಂಕೆಗಳೇ ಮೊದಲಾದ ಅನೇಕ ಮೃಗಗಳನ್ನು ಘಾತಿಸುತ್ತಿದ್ದನು. ಹೀಗೆಯೇ ವಿಹರಿಸುತ್ತಿರಲು ಬಹಳ ಕಾಲ ಕಳೆಯಿತು. ಹೀಗಿರಲೊಂದು ದಿನ ಈ ದುಷ್ಟನು ಹಂದಿಯನ್ನು ನಿರೀಕ್ಷಿಸಲು ಒಂದು ಬಿಲ್ವ ವೃಕ್ಷದಮೇಲೆ ಕುಳಿತು ರಾತ್ರಿಯನ್ನು ಕಳೆಯುತ್ತಿದ್ದನು. ಅಂದಿನದಿನವು ಮಾಘಮಾಸದ ಕೃಷ್ಣಪಕ್ಷದ ಚತುರ್ದಶಿಯಾಗಿದ್ದಿತು. ಹಂದಿಯನ್ನು ನಿರೀಕ್ಷಿಸುತ್ತಾ ಕುಳಿತಿದ್ದ ಈ ಕಿರಾತನು ವ್ಯಾಜಾಂತರದಿಂದ ಬಿಲ್ವಪತ್ರಗಳನ್ನುದುರಿಸಿದನು. ಆ ಬಿಲ್ವಪತ್ರೆಯ ಮರದ ಕೆಳಗೆ ಉದ್ಭವಲಿಂಗ ಒಂದಿದ್ದಿತು. ಕಿರಾತನಿಂದುದುರಿಸಲ್ಪಟ್ಟ ಬಿಲ್ವದಳಗಳು ಅಖಂಡವಾಗಿ ಆ ಲಿಂಗದಮೇಲೆ ಬಿದ್ದು ಶ್ರೇಷ್ಠವಾದ ಪೂಜೆಯಾಯಿತು. ಕಿರಾತನು ಆಗಾಗ್ಗೆ ಉಗುಳುತ್ತಿದ್ದನು. ಈ ಎಂಜಲನೀರು ಆ ಶಿವಲಿಂಗದಮೇಲೆ ಬಿದ್ದು ಪಂಚಾಮೃತ ಸ್ನಾನಕ್ಕಿಂತಲೂ ಅಧಿಕವಾದ ಸ್ನಾನವಾಗುತ್ತಿದ್ದಿತು.

ಬಳಿಕ ದುರಾತ್ಮನಾದ ಕಿರಾತನು ಮೃಗವನ್ನು ನಿರೀಕ್ಷಿಸಿ ಸಿಕ್ಕದೆ ಮತ್ಸ್ಯಗಳನ್ನಾದರೂ ಸಂಪಾದಿಸಬೇಕೆಂದು ಯೋಚಿಸಿ ಸಮೀಪದಲ್ಲಿಯೇ ಇದ್ದ ನದೀ ತೀರಕ್ಕೆ ಬಂದನು. ಕೇಳಿರೈ! ಈ ಪಾಪಿಷ್ಠನಿಗೆ ತಕ್ಕ ಹೆಂಡತಿಯೊಬ್ಬಳಿದ್ದಳು. ಇವಳ ಹೆಸರು ಘನೋದರಿ. ಇವಳು ಯಾವಾಗಲೂ ಪಾಪಿಷ್ಠಳೂ ದುರಾಚಾರಳೂ, ಪರದ್ರವ್ಯವನ್ನು ಅಪಹರಿಸುವವಳೂ, ಕ್ರೂರಿಯೂ ಆಗಿದ್ದಳು. ಘನೋದರಿಯು ಈ ಗುಣಗಳಿಂದ ಶೋಭಿಸುತ್ತಿದ್ದರೂ ಪತಿಪರಾಯಣಳಾಗಿದ್ದಳು. ಹೀಗಿರುವಾಗ ತನ್ನ ಗಂಡನು ರಾತ್ರಿಯಾದರೂ ಬಾರದಿರುವುದರಿಂದ ಪಟ್ಟಣ ದ್ವಾರದಲ್ಲಿ ಅವನನ್ನು ನಿರೀಕ್ಷಿಸುತ್ತಿದ್ದಳು. ತನ್ನ ಗಂಡನು ಎಷ್ಟು ಹೊತ್ತಾದರೂ ಬಾರದಿರುವುದನ್ನು ನೋಡಿ ಘನೋದರಿಯು ಬಹಳವಾಗಿ ಖತಿಗೊಂಡು ಯೋಚಿಸಲಾರಂಭಿಸಿದಳದೆಂತೆನೆ:—'ಸಂಧ್ಯಾಕಾಲದಲ್ಲಿಯೇ ನಗರದ ಎಲ್ಲ ಕಿರಾತರೂ ಹಿಂತಿರುಗಿದರು. ರಾತ್ರಿಯಲ್ಲಿ ಎರಡು ಯಾಮಗಳಾದರೂ ನನ್ನ ಪತಿದೇವನೇಕೆ ಬರಲಿಲ್ಲವು? ಕೇಸರ ಲೋಭದಿಂದ ಸಿಂಹವನ್ನು ಕೊಲ್ಲಲು ಹೋಗಿ ಸಿಂಹನಿಂದ ಹತನಾದನೆ? ಸರ್ಪಮಣಿಯನ್ನು ಹೊಂದಲು ಹೋಗಿ ಸರ್ಪದಷ್ಟನಾಗಿ ಸತ್ತನೇ? ಹಂದಿಯ ಬೇಟೆಯಲ್ಲೇನಾದರೂ ಮೃತಿಯನ್ನೈದಿದನೇ? ಒಂದೂ ತಿಳಿಯದಾಗಿರುವುದಲ್ಲ! ಎಲ್ಲಿ ಹೋಗಿ ಹುಡುಕಲಿ! ಯಾರನ್ನು ಕೇಳಲಿ! ಆತನ ವಿಚಾರವನ್ನು ಯಾರು ಹೇಳುವರು' ಈರೀತಿ ಯೋಚಿಸುತ್ತಾ ಏನೂ ಬಗೆಹರಿಯದೆ ಸ್ವಗೃಹವನ್ನು ಕುರಿತು ತೆರಳಿದಳು. ಅಲ್ಲಿಯಾದರೊ ತನ್ನ ಗಂಡನು ಹಿಂತಿರುಗಿ ಬಾರದೆ ಏನಾಗಿರುವನೋ ಎಂಬ ಚಿಂತೆಯಿಂದ ಪತಿವ್ರತೆಯಾದ ಆ ಘನೋದರಿಯು ಆಹಾರವನ್ನೂ ತೆಗೆದುಕೊಳ್ಳಲಿಲ್ಲವು. ಆ ಬಳಿಕ ಪ್ರಾತಃಕಾಲದಲ್ಲಿ ಘನೋದರಿಯು ತನ್ನ ಗಂಡನನ್ನು ಹುಡುಕಲೋಸುಗ, ಅನ್ನವನ್ನು ತೆಗೆದುಕೊಂಡು ಕಾಡಿಗೆಬಂದಳು. ಕಾಡಿನಲ್ಲಿಬಹಳ ಸುತ್ತಿ ಅಲ್ಲಿಯೇ ಕಾಣುತ್ತಿದ್ದ ನದೀತೀರದಲ್ಲಿ ಮೀನುಗಳನ್ನು ಹಿಡಿಯುತ್ತಿದ್ದ ತನ್ನ ಗಂಡನನ್ನು ನೋಡಿ ಅತಿಯಾಗಿ ಸಂತಸಗೊಂಡಳು. ಆಗ ಮಹಾ ಪತಿವ್ರತೆಯಾದ ಘನೋದರಿಯು ತಾನು ತಂದಿದ್ದ ಅನ್ನ

ವನ್ನು ತೀರದಲ್ಲಿಟ್ಟು, ಚಂಡನಾಮಕನಾದ ತನ್ನ ಪತಿಯು ಬಳಿಗೆ ಹೋಗಿ 'ಪ್ರಿಯನೇ! ನೀನೇತಕ್ಕಾಗಿ ನಿನ್ನೆಯರಾತ್ರಿ ಮನೆಗೆ ಬರಲಿಲ್ಲ? ನಾನುನಿನಗಾಗಿ ಉಪೋಷ್ಯವಾಡಿದೆನು. ಏಳು, ಈಗಲಾದರೂ, ನಾನು ನಿನಗಾಗಿ ತಂದಿರುವ ಅನ್ನವನ್ನು ತಿನ್ನು' ಎಂದಳು. ಆಗ ಚಂಡನು ತಾನು ಹಿಡಿದಿದ್ದ ಪುತ್ರ್ಯಗಳೆಲ್ಲವನ್ನೂ ತೆಗೆದುಕೊಂಡು ಅನ್ನವಿದ್ದ ಸ್ಥಳಕ್ಕೆ ಬಂದನು. ಅಷ್ಟರಲ್ಲಿಯೇ ಬಂದು ನಾಯಿಯು, ಘನೋದರಿಯು ತಂದಿದ್ದ ಅನ್ನವನ್ನು ತಿಂದಿತು. ಆಗ ಘನೋದರಿಯು ತನ್ನ ಪತಿಗಾಗಿಯೂ, ತನಗಾಗಿಯೂ ತಂದ ಅನ್ನವನ್ನು ತಿಂದ ನಾಯಿಯನ್ನು ಕೊಲ್ಲಲು ಹೋಗಿ ಚಂಡನಿಂದ ನಿವಾರಿತಳಾದಳು. ಆಗ ಚಂಡನಿಗೆ ಬಹಳವಾದ ವೈರಾಗ್ಯವು ಹುಟ್ಟಿತು. ಬಳಿಕ ಘನೋದರಿಯು ತನ್ನ ಪತಿಯಾದ ಚಂಡನನ್ನು ಕುರಿತು 'ಈ ನಾಯಿಯು ನಿನಗಾಗಿ ತಂದಿದ್ದ ಅನ್ನವನ್ನು ತಿಂದಿರುವುದಲ್ಲ! ಈಗ ನೀನೇನನ್ನು ತಿನ್ನುವೆ?' ಎಂದಳು. ಹೆಂಡತಿಯ ಮಾತುಗಳನ್ನು ಕೇಳಿ ಚಂಡನು 'ಪ್ರಿಯೆ! ಅತಿಥಿ ರೂಪವಾದ ಈ ಶ್ವಾನವು, ನನಗಾಗಿ ನೀನು ತಂದಿದ್ದ ಅನ್ನವನ್ನು ಭಕ್ಷಿಸುವದರಿಂದ ನಾನು ತೃಪ್ತನಾಗಿರುವೆನು. ಕೇಳು ಪತಿವ್ರತೆಯೇ! ನಶ್ವರವಾಗಿರುವ ಈ ಶರೀರದಿಂದ ಏನುತಾನೇ ಪ್ರಯೋಜನವು? ಲೋಕದಲ್ಲಿ ಶರೀರವೆ ದುರ್ಲಭವೆಂದರಿತು ಕ್ಷಣ ಭಂಗುರವಾದ ದೇಹವನ್ನು ಕೊಬ್ಬಿಸುವ ಮನುಜರು ಮೂಢರು' ಲೋಕದ್ವಯ ಬಹಿಷ್ಕೃತರು, ಪಾಪಿಗಳು ಮತ್ತು ಪಾಷಂಡಿಗಳು. ಸತೀಮಣಿ! ಕೇಳು ತತ್ವಬುದ್ಧಿಯಿಂದ ಶರೀರಪೋಷಣೆಯು ಅತಿ ಹೇಯವಾದುದೆಂದು ತಿಳಿ. ಅಹಂಕಾರ ಮಮಕಾರಗಳನ್ನು ತೊರೆದು ಆತ್ಮಜ್ಞಾನವನ್ನು ಹೊಂದಿ ದೃಢಚಿತ್ತಳಾಗು' ಎಂದನು. ಪತಿಯ ನುಡಿಗಳನ್ನು ಕೇಳಿ ಮಹಾಸತಿಯಾದ ಘನೋದರಿಯು ಶಾಂತಿಭಾವವನ್ನು ತಾಳಿದಳು.

ಕೇಳಿರೈ ಋಷಿಪುಂಗವರಿರಾ! ಪಾಪಿಷ್ಠನಾದ ಕಿರಾತನು ಏನೋ ಬಂದು ವ್ಯಾಜದಿಂದ ಮಾಡಿದ ಕಾರ್ಯಗಳೆಲ್ಲವೂ ಪುಣ್ಯಪ್ರದ

ವು. ಈರೀತಿಯಾಗಿ ಎರಡು ಯಾಮಗಳು ಕಳೆಯಲು ಶಿವನಿಂದ
ತರಾದ ಅನೇಕ ಶಿವಗಣಗಳು ದುರಾತ್ಮನಾಗಿದ್ದ ಚಂಡನ
ಪಕ್ಕೆ ವಿಮಾನಗಳೊಂದಿಗೆ ಬಂದರು. ಬಳಿಕ ರುದ್ರಸ್ವರೂಪಿ
ಗಿಯೂ, ವೃಷಭಾರೂಢರಾಗಿಯೂ, ಅರ್ಧಚಂದ್ರಧಾರಿಗಳಾ
ೂ, ಇರುವ ಶಿವಗಣಗಳು ಆ ಚಂಡನನ್ನು ಕುರಿತು 'ಅಯ್ಯಾ
ಗ್ರಣಿಯೇ! ನಾವೆಲ್ಲರೂ ಮಹಾತಪಸ್ವಿಯಾದ ನಿನ್ನನ್ನು ಕೈಲಾ
ಕ್ಕಯ್ಯಲು ಶಿವಾಜ್ಞೆಯಿಂದ ಇಲ್ಲಿಗೆ ಬಂದಿರುವೆವು. ಶಿವರಾತ್ರಿ
ಶಿವಸನ್ನಿಧಿಯಲ್ಲಿ ನೀನು ಮಾಡಿದ ಪೂಜೆಪುರಸ್ಕಾರಗಳಿಂದ
ರನು ಸಂತುಷ್ಟನಾಗಿರುವನು. ಶಂಕರನ ಸಂತೋಷಕ್ಕೆ ಪಾತ್ರ
ನೀನು ಕೈಲಾಸದಲ್ಲಿ ಆತನ ಸಾರೂಪ್ಯ, ಸಾಲೋಕ್ಯ, ಸಾಯು
ತನ್ನು ಅನುಭವಿಸಲು ಬರುವವನಾಗು' ಎಂದರು. ಆಗ
ನು ನಮ್ರತೆಯಿಂದ ಕೈಮುಗಿದು 'ಮಹಾತ್ಮರೇ! ಮೃಗಯಾ
ನಾಗಿಯೂ, ಚತುರ್ವಿಧ ಭೂತಗಳ ಹಿಂಸಕನಾಗಿಯೂ, ಪಾಪಿ
ಾಗಿಯೂ, ಇರುವ ನಾನು ಶಿವಪೂಜೆಯನ್ನು ಮಾಡಿದೆನೆಂದರೆ
ರ್ಯವಾಗುತ್ತಿರುವುದು. ಪಾಪಿಯಾದ ನಾನು ಲಿಂಗಾರ್ಚನೆ
ನ್ನು ಹೇಗೆ ಮಾಡಿದೆನು? ಸದಾಶಿವನು ಸಂತೋಷಗೊಂಡಿದುದು
? ಇವೆಲ್ಲವನ್ನೂ ದಯವಿಟ್ಟು ಹೇಳುವವರಾಗಿ' ಎಂದು ಬೇಡಿ
. ಆಗ ಶಿವಕಿಂಕರರೆಲ್ಲರೂ ಆತನಿಂದ ಮಾಡಲ್ಪಟ್ಟ ಶಿವಪೂಜಾ
ನವನ್ನು ಸಮಗ್ರವಾಗಿ ಹೇಳಿ ಸ್ತುತಿಗೈದರು. ಬಳಿಕ ಪಾಪಿಷ್ಠ
ದ್ದ ಚಂಡನು ಪುಣ್ಯಾತ್ಮನಾಗಿ ಸತಿಯೊಡನೆ ವಿಮಾನದಲ್ಲಿ
ತು ಶಿವಸನ್ನಿಧಿಗೆ ಹೊರಟನು.

## ಅಧ್ಯಾಯ ೩೪

### ಶಿವಪಾರ್ವತಿಯರ ಕಲಹ, (ಶಬರಿಶಂಕರವಿಲಾಸ)

ಸೂತನು ಹೇಳುತ್ತಾನೆ:— ಕೇಳಿರೈ ಋಷಿಗಳಿರಾ! ಒಂದಾ
ನು ಕಾಲದಲ್ಲಿ ಪಾರ್ವತೀಸಮೇತನಾದ ಶಂಕರನು ಕೈಲಾಸಗಿರಿಯ ...

ವಾಗಿ ಕುಳಿತಿರಲು ಅವರ ದರ್ಶನಾರ್ಥಿಯಾಗಿ ತ್ರಿಲೋಕ ಸಂಚಾರಿ ಯಾದ ನಾರದಮುನಿಯು ಬಂದನು. ಶಂಕರನು ನಾರದನಿಂದ ನಮಸ್ಕೃತನಾಗಿ ಆತನಿಗೆ ತಕ್ಕ ಮರ್ಯಾದೆಯನ್ನು ಮಾಡಿ, ಬಂದ ಕಾರಣವೇನೆಂದು ಕೇಳಿದನು. ಆಗ ನಾರದನು ಪಾರ್ವತೀಪರಮೇಶ್ವರರನ್ನು ಸ್ತುತಿಸಿ, 'ದೇವಾ! ನೀವಾವಾಗಲೂ ಆಟವಾಡಿದುದನ್ನೇ ಕಾಣಲಿಲ್ಲವು. ನೀವಿಬ್ಬರೂ ಆಡುವುದನ್ನು ನೋಡಲು ನಾನು ಬಂದಿರುವೆನು' ಎಂದನು. ನಾರದನ ನುಡಿಗಳನ್ನು ಕೇಳಿ ಪಾರ್ವತಿಯು 'ಯಾವ ಆಟವನ್ನು ನೋಡಲು ಬಂದಿರುವೆ?' ಎಂದಳು. ನಾರದನು 'ತಾಯೇ! ನೋಡಬೇಕಾದ ಆಟವು ದ್ಯೂತವಲ್ಲವೆ?' ಎಂದನು. ನಾರದನ ನುಡಿಗಳನ್ನು ಕೇಳಿ ಪಾರ್ವತೀಪರಮೇಶ್ವರರು ಆತನನ್ನು ಸಂತಸಗೊಳಿಸಲು ದ್ಯೂತವನ್ನಾಡಲು ಉಪಕ್ರಮಿಸಿದರು. ದ್ಯೂತದಲ್ಲಿ ಮೊದಲು ಶಂಕರನು ಗೆದ್ದು ಪಾರ್ವತಿಯನ್ನು ಅಲ್ಲೆಗಳೆದನು. ಬಳಿಕ ಪಾರ್ವತಿಯು ಶಿವನನ್ನು ಗೆದ್ದಳು. ಆಗ ಶಂಕರನು ಪಾರ್ವತಿಯಾಡಿದ ಆಟವು ಸರಿಯಲ್ಲವೆಂದು ಹೇಳಿದನು. ಪೂರನೆಯ ಸಲವೂ ಪಾರ್ವತಿಯೇ ಶಿವನನ್ನು ಸೋಲಿಸಿದಳು. ಆಗ ಶಂಕರನು ಪಣಕ್ಕಾಗಿ ಇಟ್ಟಿದ್ದ ನಾಗಾಭರಣವನ್ನೂ, ಗಜಚರ್ಮಾಂಬರವನ್ನೂ ಪಾರ್ವತಿಯು ಗೆದ್ದಳು. ಬಳಿಕ ಶಂಕರನು ದಿಗಂಬರನಾದನು. ಈ ವಿಚಿತ್ರವನ್ನು ನೋಡಿದ ಶಿವಗಣಗಳೆಲ್ಲವೂ ಕಿಲಕಿಲನೆ ನಕ್ಕರು. ಆಗ ಶಂಕರನು ನಾಚಿ ಪಾರ್ವತಿಯನ್ನು ಕುರಿತು 'ಪ್ರಿಯೇ! ದಿಗಂಬರನಾಗಿರಲು ನನ್ನಿಂದಾಗದು. ಕೌಪೀನವನ್ನಾದರೂ ಕೊಡುವವಳಾಗು' ಎಂದನು. ಶಂಕರನ ನುಡಿಗಳನ್ನು ಕೇಳಿ ಪಾರ್ವತಿಯು 'ಏನು ದಿಗಂಬನಾಗಿರಲು ನಿನ್ನಿಂದಾಗದೆ? ನಿನ್ನ ಧರ್ಮವೇ ದಿಗಂಬರನಾಗಿರುವುದಲ್ಲವೆ? ಅಂದು ನೀನು ದಾರುಕಾವನದಲ್ಲಿ ದಿಗಂಬರನಾಗಿ ಸ್ತ್ರೀಯರನ್ನು ಮೋಹಗೊಳಿಸಲಿಲ್ಲವೆ? ಇಂತಹ ನಿನಗೆ ಕೌಪೀನವೇತಕ್ಕೆ?' ಎಂದಳು. ಪಾರ್ವತಿಯ ನುಡಿಗಳನ್ನು ಕೇಳಿ, ಶಂಕರನು ಅತಿಯಾಗಿ ಕೋಪಗೊಂಡು, ಕೈಲಾಸವನ್ನು ಬಿಟ್ಟು, ಕಾನನವನ್ನು ಸೇರಿ ಉಗ್ರವಾದ ತಪವನ್ನಾಚರಿಸಲು ಹೊರ

ಟನು. ಅತ್ತ ಶಂಕರನು ತಪವನ್ನಾಚರಿಸುತ್ತಿರಲು ಇತ್ತ ಗಿರಿಜೆಯು 'ಅಯ್ಯೋ ಇದೆಂತಹ ಹಣೆಯ ಬರಹ! ಆ ಕಲಹಪ್ರಿಯನಾದ ನಾರದನ ಹೇಳಿಕೆಗೆ ಮರುಳಾಗಿ ನನ್ನ ಪತಿಯನ್ನು ಓಡಿಸಿದೆನಲ್ಲಾ! ನನ್ನ ಪ್ರಿಯನು ಎಲ್ಲಿಗೆ ಹೋದನೋ? ಎಲ್ಲಿರುವನೋ ಕಾಣೆನಲ್ಲ! ಶಂಕರನನ್ನು ಹೊಂದಲು ನಿದ್ರಾಹಾರಾದಿಗಳನ್ನು ಬಿಟ್ಟು, ಶೀತೋಷ್ಣಗಳನ್ನು ತೊರೆದು ಎಷ್ಟೋ ಕಾಲ ಪ್ರಯಾಸಪಟ್ಟು ಆತನನ್ನು ಹೊಂದಿದ್ದೆನಲ್ಲ! ನಿಷ್ಕಾರಣವಾಗಿ ನನ್ನ ಪ್ರಾಣಪ್ರಿಯನ ಸಂಗವು ದೊರೆಯದೇ ಹೋಯಿತಲ್ಲ! ಅಯ್ಯೋ ! ಈರೀತಿ ದುಃಖಿಸುವುದರಿಂದೇನು ಫಲವು? ಮಾಯೋಪಾಯಗಳಿಂದಾದರೂ ನನ್ನ ಸ್ವಾಮಿಯನ್ನು ಪ್ರಸನ್ನನಾಗಿ ಮಾಡಿಕೊಳ್ಳುವೆನು.' ಎಂದು ಚಿಂತಿಸಿ ಶಂಕರನು ಬೆರಗಾಗುವ ಶಬರಿಯ ರೂಪವನ್ನು ಧರಿಸಿದಳು. ಗಿರಿಜೆಯು ಇಂತು ಶಬರಿಯ ರೂಪವನ್ನು ತಾಳಿ ಶಂಕರನು ತಪವನ್ನಾಚರಿಸುತ್ತಿದ್ದ ವನಕ್ಕೆ ಬಂದು ಅಲ್ಲಲ್ಲಿ ಪುಷ್ಪಗಳನ್ನು ಬಿಡಿಸುತ್ತಾ, ಅಲ್ಲಲ್ಲಿ ಮನೋಹರವಾದ ಸಂಗೀತವನ್ನು ಹಾಡುತ್ತಾ, ಶಂಕರನಿದ್ದೆಡೆಗೆ ಬಂದಳು. ಆಗ ಶಂಕರನು ಮನೋಹರವಾದ ಶಬರಿಯ ರೂಪವನ್ನು ತಾಳಿದ್ದ ಗಿರಿಜೆಯ ಸೌಂದರ್ಯಲಾವಣ್ಯಗಳಿಗೆ ಬೆರಗಾಗಿ ಆಕೆಯನ್ನು ಕುರಿತು 'ಸುಂದರಿ! ನೀನು ಮನೋಹರಾಂಗಿಯು. ರೂಪವತಿಯೂ ಆಗಿರುವೆ. ನನ್ನನ್ನು ವರಿಸಿ ಸುಖವಾಗಿರು' ಎಂದನು. ಪರಶಿವನ ನುಡಿಗಳನ್ನು ಕೇಳಿ ಶಬರಿಯು 'ನೀನು ಪರಶಿವನಲ್ಲವೆ? ನೀನು ಚಪಲಚಿತ್ತನು. ಅಂದು ನಿನ್ನ ಪತ್ನಿಯಾದ ಸತೀದೇವಿಯನ್ನು ತಾಯಿಯಂತೆ ಭಾವಿಸಿ ತೊರೆದೆಯಲ್ಲವೆ? ಆದುದರಿಂದಲೇ ಅಲ್ಲವೆ, ಆಕೆಯು ದಕ್ಷಬ್ರಹ್ಮನ ಯಜ್ಞಕುಂಡದಲ್ಲಿ ಬಿದ್ದು ಭಸ್ಮವಾದುದು? ನೀನು ಸರ್ವಲೋಕ ಮನೋಹರನಾದ ಮನ್ಮಥನನ್ನ ಸುಟ್ಟು ಭಸ್ಮಮಾಡಿದಿಯಲ್ಲವೆ? ಇಂತಿರುವ ನಿನ್ನೊಡನೆ ಅಬಲೆಯಾದ ನಾನು ಅದೆಂತು ಸಂಸಾರವನ್ನು ಮಾಡುವೆನು?' ಎಂದಳು. ಶಬರೀ ರೂಪಳಾದ ಗಿರಿಜೆಯ ನುಡಿಗಳನ್ನು ಕೇಳಿ ಶಂಕರನು ಆಕೆಯ ಮನಸ್ಸು ಕರಗುವಂತೆ ವಿನಯ ಪೂರ್ವಕವಾಗಿ ಬೇಡಿದನು. ಬಳಿಕ ಶಬರಿಯು ಶಂಕರನನ್ನು

ಕುರಿತು 'ದೇವಾ! ನಾನು ಅಬಲೆಯು; ಸ್ವತಂತ್ರಳಲ್ಲವು, ಆದುದರಿಂದ ನಮ್ಮ ತಂದೆತಾಯಿಗಳ ಅನುಮತಿಯಿಂದ ನನ್ನನ್ನು ವರಿಸುವವನಾಗು' ಎಂದಳು. ಆಗ ಶಂಕರನು 'ನಿಮ್ಮ ಮನೆಯೆಲ್ಲಿ?' ಎಂದನು. ಆಗ ಗಿರಿಜೆಯು ಶಂಕರನನ್ನು ಕೈಲಾಸಕ್ಕೆ ಕರೆದೊಯ್ದು ತನ್ನ ನಿಜ ರೂಪವನ್ನು ತೋರಿದಳು. ಶಂಕರನು ಗಿರಿಜೆಯ ನಿಜರೂಪವನ್ನು ನೋಡಿ, ಮೋಸಹೋದೆನೆಂದು, ನಾಚಿಕೊಂಡು ಸತಿಯೊಂದಿಗೆ ಸುಖದಿಂದಿದ್ದನು.

## ಅಧ್ಯಾಯ ೩೫

## ಶಿವ ಪಟ್ಟಾಭಿಷೇಕ ಮಹೋತ್ಸವ.

ಈ ವೃತ್ತಾಂತವನ್ನು ಸನಕಾದಿಗಳೂ, ವಸಿಷ್ಠ, ಗೌತಮ, ಅತ್ರಿ, ಭರದ್ವಾಜ, ದಧೀಚಿಯೇ ಮೊದಲಾದ ಋಷಿಗಳೂ, ಬ್ರಹ್ಮವಿಷ್ಣ್ವಾದಿ ದೇವತೆಗಳೂ ನಾರದನಿಂದರಿತು ಕೈಲಾಸಕ್ಕೆ ಬಂದರು. ಇಂತು ಬಂದ ಪಾರ್ವತೀಪರಮೇಶ್ವರರನ್ನು ಸಿಂಹಾಸನದಲ್ಲಿ ಕುಳ್ಳಿರಿಸಿ, ಅಮೋಘವಾದ ಪಟ್ಟಾಭಿಷೇಕ ಮಹೋತ್ಸವವನ್ನು ನಡೆಸಿದರು. ಆ ಸಮಯದಲ್ಲಿ ದೇವತೆಗಳು ದುಂದುಭಿಗಳನ್ನೂ, ತುತ್ತೂರಿಗಳನ್ನೂ ಬಾರಿಸಿದರು. ಪಾರ್ವತೀಪರಮೇಶ್ವರರು ಸಿಂಹಾಸನದಲ್ಲಿ ಬ್ರಹ್ಮಾನಂದದಿಂದ ಕುಳಿತಿರಲು ಶಿವಗಣಗಳು ವಿಧವಿಧವಾಗಿ ನಲಿದಾಡಿದರು. ಪಟ್ಟಾಭಿಷೇಕಾನಂತರದಲ್ಲಿ ಶಂಕರನು ಅಲ್ಲಿ ಬಂದಿದ್ದವರೆಲ್ಲರನ್ನು ಸತ್ಕರಿಸಿದನು. ಇಂತು ನುಡಿದ ಸೂತಪುರಾಣಿಕನನ್ನು ಶೌನಕಾದಿ ಋಷಿಗಳು ಬಹಳವಾಗಿ ಸತ್ಕರಿಸಿ ಸಂತಸಗೊಂಡರು.

**ಇಂತಿದು ಶ್ರೀರಾಜರಾಜೇಶ್ವರೀ ವರಪ್ರಸಾದಾಸಾಧಿತ ದಿಗಂತ ಯಶಶ್ಶ್ರೀಯುಕ್ತ ಅಭಿನವ ಕಾಳಿದಾಸ ವಂಶೋದ್ಭವ, ಮೋಟಗಾನಪುರೀ ಸರಸಕವಿ, ಶಂಕರ ಸುತ ಸುಬ್ರಹ್ಮಣ್ಯ ವಿರಚಿತ ಶ್ರೀಸ್ಕಾಂದಮಹಾಪುರಾಣದ ವಚನಕಾವ್ಯದಲ್ಲಿ ಮಾಹೇಶ್ವರಖಂಡದ ಕೇದಾರಖಂಡವು ಸಮಾಪ್ತವಾದುದು.**